ಸೋಮವಾರ, ಫೆಬ್ರುವರಿ 7, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯೋಜನೆ ಮಂಜೂರಾತಿ ಅರ್ಜಿ ಬಾಕಿ ಪ್ರಕರಣ

ರಸ್ತೆ ವಿಸ್ತರಣೆಗೆ ಆಸ್ತಿ ಒಪ್ಪಿಸುವ ಅಗತ್ಯವಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ಯೋಜನೆ ಮಂಜೂರಾತಿಗೆ ಕೋರಿದ ಅರ್ಜಿ ಬಾಕಿ ಇರುವಾಗ ಭೂ ಮಾಲೀಕರು ತಮ್ಮ ಆಸ್ತಿಯನ್ನು ರಸ್ತೆ ವಿಸ್ತರಣೆಗೆ ಉಚಿತವಾಗಿ ಒಪ್ಪಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೊರಡಿಸಿದ ಸುತ್ತೋಲೆಯು, ಸಂವಿಧಾನದ 300ಎ ವಿಧಿಯನ್ನು ಉಲ್ಲಂಘಿಸುತ್ತದೆ' ಎಂದು ಹೈಕೋರ್ಟ್ ಸಾರಿದೆ.

ರಸ್ತೆ ವಿಸ್ತರಣೆಗೆ ಜಮೀನು ಒಪ್ಪಿಸುವ ಅಗತ್ಯತೆಯ ಸುತ್ತೋಲೆಗಳನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ಕಾನೂನು ಅಧಿಕಾರವಿಲ್ಲದೆ ಭೂಮಾಲೀಕರ ಆಸ್ತಿಯನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದೆ.

ಈ ಸಂಬಂಧ 2016ರ ಫೆಬ್ರವರಿ 29ರಂದು ಬಿಬಿಎಂಪಿ ವ್ಯಾಪ್ತಿಯಲ್ಲಿನ ಐವರು ಆಸ್ತಿ ಮಾಲೀಕರು ಆಸ್ಪತ್ರೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯೋಜನೆ ಮಂಜೂರಾತಿ ಕೋರಿದ್ದರು. ಈ ಅರ್ಜಿಗೆ ಪ್ರತಿಯಾಗಿ ಬಿಬಿಎಂಪಿ ಹೊರಡಿಸಿದ್ದ ಸುತ್ತೋಲೆ

ಮತ್ತು ಅನುಮೋದನೆಗಳನ್ನು ನ್ಯಾಯಪೀಠ ಇದೀಗ ರದ್ದುಗೊಳಿಸಿದೆ.

'ಈ ಪ್ರಕರಣದಲ್ಲಿ ವಸತಿ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಅಭಿವೃದ್ಧಿಪಡಿಸಲು ಬಯಸಿದ ಭೂಮಿಯ ಪ್ರಮಾಣವು ಅಭಿವೃದ್ಧಿ ಯೋಜನೆಯ ವ್ಯಾಖ್ಯಾನದಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಪ್ರಮಾಣಕ್ಕಿಂತ ತುಂಬಾ ಕಡಿಮೆಯಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ಬಿಬಿಎಂಪಿ ಹೊರಡಿಸಿರುವ ಆಕ್ಷೇಪಾರ್ಹ ಅನುಮೋದನೆಗಳು ಮತ್ತು ಸುತ್ತೋಲೆಗಳು ಅನಿಯಂತ್ರಿತ ಮತ್ತು ತಾರತಮ್ಯದಿಂದ ಕೂಡಿವೆ. ಮಾಸ್ಟರ್ ಪ್ಲಾನ್-2015 ರಲ್ಲಿ 'ರಸ್ತೆ' ಎಂದು ನಿಗದಿಪಡಿಸಲಾದ ಆಸ್ತಿ ವ್ಯಾಪ್ತಿಯಲ್ಲಿನ ವಾರಸುದಾರರು ಮತ್ತು ಯಾರು ತಮ್ಮ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಕಟ್ಟಡ ಯೋಜನೆ ಮಂಜೂರಾತಿಗೆ ಅರ್ಜಿ ಸಲ್ಲಿಸಿಲ್ಲವೋ, ಅಂತಹವರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 71 ರ ಅಡಿಯಲ್ಲಿ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಇಂತಹ ಸ್ಥಿರಾಸ್ತಿಯನ್ನು ಮಾಸ್ಟರ್ ಪ್ಲಾನ್ ಅನುಷ್ಠಾನಕ್ಕಾಗಿ ಸ್ವಾಧೀನಪಡಿಸಿಕೊಂಡರೆ, ಅರ್ಜಿದಾರರು ಕೇವಲ ಮಂಜೂರಾದ ಕಟ್ಟಡ ಯೋಜನೆಯನ್ನು ಪಡೆಯುವ ಮೂಲಕ ತಮ್ಮ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಕಾರಣಕ್ಕಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್-2015 ರಲ್ಲಿ ರಸ್ತೆಗಳಿಗಾಗಿ ಮೀಸಲಿಟ್ಟ ಅವರ ಆಸ್ತಿಗಳಿಂದ ವಂಚಿತರಾಗಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಕೆಟಿ ಪ್ಲಾಂಟೇಶನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಸ್ಥಿರಾಸ್ತಿಯ ಮಾಲೀಕರು ನಿರ್ದಿಷ್ಟ ಕಾನೂನು ಅಧಿಕಾರ ಅಥವಾ ಸಮರ್ಥ ಶಾಸನವಿಲ್ಲದೆ ಕೇವಲ ಕಾರ್ಯನಿರ್ವಾಹಕ ಆದೇಶದ ಮೂಲಕ ಸ್ಥಿರ ಆಸ್ತಿಯ ಮಾಲೀಕತ್ವವನ್ನು ವಂಚಿತಗೊಳಿಸಲಾಗುವುದಿಲ್ಲ' ಎಂದು ತಿಳಿಸಿದೆ.

4 ನಿವೇಶನಗಳಿಗೆ ಅಕ್ರಮವಾಗಿ ಶುದ್ಧ ಕ್ರಯಪತ್ರ ನೋಂದಣಿ

ನಕಲಿ ದಾಖಲೆ ಸೃಷ್ಟಿಸಿದ ಉಪಕಾರ್ಯದರ್ಶಿ– 4 ವಿಭಾಗದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪಕಾರ್ಯದರ್ಶಿ–4 ಹಾಗೂ ಅವರ ಕಚೇರಿಯ ಇಬ್ಬರು ಸಿಬ್ಬಂದಿ ಸೇರಿಕೊಂಡು ಎಚ್.ಬಿ.ಆರ್ ಒಂದನೇ ಹಂತ, 5ನೇ ಬ್ಲಾಕ್‌ನ ನಾಲ್ಕು ನಿವೇಶನಗಳಿಗೆ ನಕಲಿ ದಾಖಲೆಗಳ ಆಧಾರದಲ್ಲಿ ಶುದ್ಧ ಕ್ರಯಪತ್ರ ಮಾಡಿಕೊಟ್ಟಿರುವುದು ಕಂಡು ಬಂದಿದೆ.

ಇದರಿಂದ ಬಿಡಿಎಗೆ ಕೋಟ್ಯಂತರ (ಅಂದಾಜು ₹ 3.70 ಕೋಟಿ) ರೂಪಾಯಿ ಆರ್ಥಿಕ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಈ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ:1003, 1008, 1113 ಮತ್ತು 1102ಕ್ಕೆ ಸಂಬಂಧಿಸಿ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ (ಎಲ್‌ಸಿಎಸ್‌ಎ), ಹಂಚಿಕೆ ಪತ್ರ, ಖಚಿತ ಅಳತೆ (ಸಿ.ಡಿ) ವರದಿ, ಹಣ ಪಾವತಿಯ ಚಲನ್, ಸ್ವಾಧೀನ ಪತ್ರಗಳು ಮುಂತಾದ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಲಾಗಿದೆ. ಈ ಕೃತ್ಯದಲ್ಲಿ ಉಪಕಾರ್ಯದರ್ಶಿ-4 ಆಗಿ ಕಾರ್ಯನಿರ್ವಹಿಸಿದ್ದ ಕೆಎಎಸ್ ಅಧಿಕಾರಿ ಮಂಗಳಾ, ಅವರ ಕಚೇರಿಯ ವಿಷಯ ನಿರ್ವಾಹಕಿ ಎಚ್.ಬಿ.ಕಮಲಮ್ಮ, ಮೇಲ್ವಿಚಾರಕಿ ಕಮಲಮ್ಮ ಅವರು ಕರ್ತವ್ಯ ಲೋಪವೆಸಗಿರುವುದು ಪ್ರಾಧಿಕಾರದ ವಿಶೇಷ ಕಾರ್ಯಪಡೆ ಮತ್ತು ಜಾಗೃತ ದಳದಿಂದ ನಡೆಸಿರುವ ಆಂತರಿಕ ತನಿಖೆಯಲ್ಲಿ ದೃಢಪಟ್ಟಿದೆ. ಈ ನಾಲ್ಕೂ ಅಕ್ರಮಗಳಲ್ಲಿ ಆರ್ಥಿಕ ವಿಭಾಗದ ಅಧಿಕಾರಿಗಳೂ ಶಾಮೀಲಾಗಿರುವ ಶಂಕೆ ವ್ಯಕ್ತವಾಗಿದೆ.

ಪ್ರಜಾವಾಣಿ ವಿಶೇಷ

ನಾಲ್ಕು ಅಕ್ರಮ: ₹3.70 ಕೋಟಿ ನಷ್ಟ

ಅಕ್ರಮ 1: ಎಚ್.ಬಿ.ಆರ್ ಒಂದನೇ ಹಂತದ 5ನೇ ಬ್ಲಾಕ್‌ನ 30X40 ಅಡಿ ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 1003) 2016ರ ಮಾರ್ಚ್ 23ರಂದು ಹಂಚಿಕೆದಾರರಾದ ಶಾಂತ ಕುಮಾರಿ ಅವರಿಗೆ ಪ್ರಾಧಿಕಾರದ ಉಪಕಾರ್ಯದರ್ಶಿ-4 ಮಂಗಳಾ, ಅವರ ಕಚೇರಿಯ ವಿಷಯ ನಿರ್ವಾಹಕಿ ಎಚ್.ಬಿ.ಕಮಲಮ್ಮ, ಮೇಲ್ವಿಚಾರಕಿ ಕಮಲಮ್ಮ ಸೇರಿ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಟ್ಟಿದ್ದಾರೆ. ಬೆಂಗಳೂರು ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಯವರಿಂದ ಪಡೆದಿರುವ ಧೃಢೀಕೃತ ದಾಖಲೆಗಳ ಪ್ರಕಾರ ಈ ಶುದ್ಧಕ್ರಯಪತ್ರಕ್ಕೆ ಸಂಬಂಧಿಸಿದ ನಿವೇಶನದ ಎಲ್‌ಸಿಎಸ್‌ಎಯನ್ನು (ದಸ್ತಾವೇಜು ಸಂಖ್ಯೆ 5794/1988-89) 1988ರ ನ.17ರಂದು ಬೆಂಗಳೂರು ದಕ್ಷಿಣದ ಉಪನೋಂದಣಾಧಿಕಾರಿಯವರ ಕಚೇರಿಯಲ್ಲಿ ನಾರಾಯಣ ರೆಡ್ಡಿ ಅವರಿಗೆ ನೋಂದಣಿ ಮಾಡಲಾಗಿತ್ತು.

ಹಂಚಿಕೆದಾರರು ಒದಗಿಸಿರುವ ಋಣಭಾರ-ರಾಹಿತ್ಯ ಪ್ರಮಾಣಪತ್ರದಲ್ಲಿ (ಇ.ಸಿ) 2016 ಜೂನ್ 26 ರಂದು ತೋರಿಸಿರುವ ವ್ಯವಹಾರಗಳು ಧೃಢೀಕೃತ ಇ.ಸಿಯಲ್ಲಿ ಇಲ್ಲ. ನಿವೇಶನ ಹಂಚಿಕೆಯ ನೋಂದಣಿ ಕಡತಗಳನ್ನು ಪರಿಶೀಲಿಸಿದಾಗ ಈ ಹಂಚಿಕೆದಾರರಿಗೆ ನಿವೇಶನ ಹಂಚಿಕೆಯಾದ ಕುರಿತು ನಕಲಿ ದಾಖಲೆ ಸೃಷ್ಟಿಸಿರುವುದು ಕಂಡುಬಂದಿದೆ. ನಕಲಿ ಎಲ್‌ಸಿಎಸ್‌ಎ ಆಧಾರದಲ್ಲಿ ಉಪಕಾರ್ಯದರ್ಶಿ 4 ಮಂಗಳಾ ಹಾಗೂ ಅವರ ಕಚೇರಿಯವರು ಅಕ್ರಮವಾಗಿ ಶುದ್ಧ ಕ್ರಯಪತ್ರವನ್ನು ನೋಂದಾಯಿಸುವ ಮೂಲಕ ಪ್ರಾಧಿಕಾರಕ್ಕೆ ₹ 73.86 ಲಕ್ಷಕ್ಕೂ ಅಧಿಕ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ. ಆರ್ಥಿಕ ವಿಭಾಗದ ಸಿ.ಎ ಕಡತಗಳ ಧೃಢೀಕೃತ ಪ್ರತಿಯಲ್ಲಿ ಈ ನಿವೇಶನದ ಮೌಲ್ಯವನ್ನು ತಿದ್ದುಪಡಿ ಮಾಡಿರುವುದು ಅಕೌಂಟೆಂಟ್ ಜನರಲ್ ಅವರ ಲೆಕ್ಕ ಪರಿಶೋಧನೆಯ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ.

ಅಕ್ರಮ 2: ಇದೇ ಬಡಾವಣೆಯ ಒಂದನೇ ಹಂತ, 5ನೇ ಬ್ಲಾಕ್ 30x40 ಅಡಿ ವಿಸ್ತೀರ್ಣದ ನಿವೇಶನದ (ಸಂಖ್ಯೆ 1013) ಶುದ್ಧ ಕ್ರಯಪತ್ರವನ್ನು 2016ರ ಜೂನ್ 23ರಂದು ಎ.ಡಿ.ವಿಲಿಯಂ ಕುಮಾರ್ ಅವರಿಗೆ ನೋಂದಾಯಿಸಿಕೊಟ್ಟಿದ್ದಾರೆ. ಇದರಲ್ಲಿ ಉಲ್ಲೇಖಿಸಿದಂತೆ 1988ರ ಫೆ. 12ರಂದು ಬೆಂಗಳೂರು ದಕ್ಷಿಣದ ಉಪನೋಂದಣಾಧಿಕಾರಿ ಕಚೇರಿಯಿಂದ ಪಡೆದ ದಸ್ತಾವೇಜಿನಲ್ಲಿ (ಸಂಖ್ಯೆ 8991/1988-89) ಈ ಎಲ್‌ಎಸ್‌ಡಿಎ ಶಾಂತಾಬಾಯಿ ನೇಮಿಚಂದ್ರ ಹೆಸರಿನಲ್ಲಿರುವುದು ಕಂಡುಬಂದಿದೆ. ಇದರ ಇ.ಸಿಯ ದೃಢೀಕೃತ ಮಾಹಿತಿಯ ಪ್ರಕಾರ ಈ ಯಾವುದೇ ವ್ಯವಹಾರಗಳು ನಡೆದಿಲ್ಲ. ನಕಲಿ ಎಲ್‌ಸಿಎಸ್‌ಎ ಆಧಾರದ ಮೇಲೆ, ಉಪಕಾರ್ಯದರ್ಶಿ-4 ವಿಭಾಗದ ಈ ಮೂವರು ನೌಕರರು ಸೇರಿ ಅಕ್ರಮವಾಗಿ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಟ್ಟಿದ್ದು ಕಂಡುಬಂದಿದೆ. ಇದರಿಂದ ಪ್ರಾಧಿಕಾರಕ್ಕೆ ₹ 73.86 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ.

ಅಕ್ರಮ 3: ಇದೇ ಬಡಾವಣೆಯ ಒಂದನೇ ಹಂತದ 5ನೇ ಬ್ಲಾಕ್‌ನಲ್ಲಿ 40x60 ಅಡಿ ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 1102) 2016ರ ಸೆ. 27ರಂದು ರಾಜೇಂದ್ರ ಕುಮಾರ್ ಅವರಿಗೆ ಉಪಕಾರ್ಯದರ್ಶಿ– 4 ವಿಭಾಗದ ಅಧಿಕಾರಿಗಳು ಶುದ್ಧ ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಜಿಲ್ಲಾ ಹೆಚ್ಚುವರಿ ನೋಂದಣಾಧಿಕಾರಿಗಳ ಕಚೇರಿಯ ದಾಖಲೆಗಳ ಪ್ರಕಾರ ಈ ನಿವೇಶನವ ಎಚ್.ಸಿ.ಕೃಷ್ಣಪ್ಪ ಅವರ ಹೆಸರಿಗೆ ನೋಂದಣಿಯಾಗಿದೆ. ಈ ಅಕ್ರಮದಿಂದಾಗಿ ಪ್ರಾಧಿಕಾರಕ್ಕೆ ₹ 147.72 ಲಕ್ಷಕ್ಕೂ ಅಧಿಕ ಆರ್ಥಿಕ ನಷ್ಟ ಉಂಟಾಗಿದೆ.

ಅಕ್ರಮ 4: ಇದೇ ಬಡಾವಣೆಯ ಒಂದನೇ ಹಂತದ 5ನೇ ಬ್ಲಾಕ್ 30x40 ಅಡಿ ವಿಸ್ತೀರ್ಣದ ನಿವೇಶನಕ್ಕೆ (ಸಂಖ್ಯೆ 1008) ಸಂಬಂಧಿಸಿ 2016ರ ಜುಲೈ 26ರಂದು ಶ್ರೀನಿವಾಸ ರೆಡ್ಡಿ ಅವರಿಗೆ ಶುದ್ಧ ಕ್ರಯಪತ್ರ ನೋಂದಣಿ ಮಾಡಿಕೊಡಲಾಗಿದ್ದು, ಇದರಲ್ಲೂ ಅಕ್ರಮ ನಡೆದಿರುವುದು ಪತ್ತೆಯಾಗಿದೆ. ಈ ನಿವೇಶನದ ಮೂಲ ದಾಖಲೆಗಳಲ್ಲಿ ಇದು ಗುರುಮೂರ್ತಿ ಅವರಿಗೆ ಹಂಚಿಕೆಯಾಗಿರುವುದು ಕಂಡುಬಂದಿದೆ. ಈ ಅಕ್ರಮದಿಂದ ಪ್ರಾಧಿಕಾರಕ್ಕೆ ₹ 73.86 ಲಕ್ಷಕ್ಕೂ ಅಧೀಕ ಮೊತ್ತ ನಷ್ಟವಾಗಿದೆ ಎಂದು ಬಿಡಿಎ ಆಂತರಿಕ ತನಿಖೆಯಲ್ಲಿ ದೃಢಪಟ್ಟಿದೆ.

ಕೆಎಎಸ್ ಅಧಿಕಾರಿ ಮಂಗಳಾ ಹಾಗೂ ಇನ್ನಿಬ್ಬರು ನೌಕರರನ್ನು ಭ್ರಷ್ಟಾಚಾರ ತಡೆ ಕಾಯ್ದೆ 1988ರ ನಿಯಮ 17(ಎ) ರನ್ವಯ ವಿಸ್ತೃತ ವಿಚಾರಣೆ ನಡೆಸಲು ಅನುಮತಿ ನೀಡಬಹುದು ಎಂದು ಬಿಡಿಎ ಆಯುಕ್ತರು ಎಸಿಬಿಗೆ 2022ರ ಜ.17ರಂದು ನಗರಾಭಿವೃದ್ಧಿ ಇಲಾಖೆಗೆ ಬರೆದಿರುವ ಪತ್ರದಲ್ಲಿ ಶಿಫಾರಸು ಮಾಡಿದ್ದಾರೆ.

ಓಬವ್ವ ಆತ್ಮರಕ್ಷಣಾ ಕಲೆ ತರಬೇತಿ ಕಾರ್ಯಕ್ರಮ ಉದ್ಘಾಟನೆ

'ತರಬೇತಿಗೆ 12 ಪೊಲೀಸ್ ಶಾಲೆ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳಾ ಆತ್ಮರಕ್ಷಣಾ ತರಬೇತಿಗೆ 12 ಪೊಲೀಸ್ ತರಬೇತಿ ಶಾಲೆಗಳನ್ನು ಬಳಕೆ ಮಾಡುವಂತೆ ಗೃಹ ಇಲಾಖೆಗೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಗಳ ಆಶ್ರಯದಲ್ಲಿ ವಿಧಾನಸೌಧದ ಮುಂಭಾಗದಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಮತ್ತು ಕ್ರೈಸ್ ವಸತಿ ಶಾಲೆಗಳ ವಿದ್ಯಾರ್ಥಿನಿಯರಿಗೆ 'ಓಬವ್ವ ಆತ್ಮರಕ್ಷಣಾ ಕಲೆ ತರಬೇತಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಹಿಂದುಳಿದ ವರ್ಗ ಮತ್ತು ಸಮಾಜ ಕಲ್ಯಾಣ ಇಲಾಖೆಯ 50 ಸಾವಿರ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣಾ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಕಾನೂನು, ಶಿಕ್ಷಣ, ಗೃಹ ಇಲಾಖೆಗಳು, ಸಮಾಜ, ಸರ್ಕಾರ ಒಗ್ಗಟ್ಟಾಗಿ ನಿಂತು ಮಹಿಳೆಯರ ಆತ್ಮರಕ್ಷಣೆಯ ಜೊತೆಗೆ ಗೌರವ ರಕ್ಷಣೆ ಮಾಡಬೇಕಿದೆ. ಈ ಉದ್ದೇಶದಿಂದ ಮಹಿಳೆಯರ ರಕ್ಷಣೆಗೆ ಪ್ರಾಮುಖ್ಯತೆ ನೀಡಿ, ಕರ್ನಾಟಕ ವಸತಿ ಶಾಲೆಗಳ

ಬಾಲಕಿಯರ ವಿದ್ಯಾರ್ಥಿ ನಿಲಯಗಳು ಮತ್ತು ಕ್ರೈಸ್ ವಸತಿ ಶಾಲೆಗಳ ವಿದ್ಯಾರ್ಥಿನಿಯರಿಗೆ 'ಓಬವ್ವ ಆತ್ಮರಕ್ಷಣಾ ಕಲೆ ತರಬೇತಿ' ಕಾರ್ಯಕ್ರಮ ಉದ್ಘಾಟನೆ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿದ್ಯಾರ್ಥಿನಿಯರ ಜತೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿನಿಯೊಬ್ಬಳು ಕಿಕ್ ಮಾಡಿದ ದೃಶ್ಯ –ಪ್ರಜಾವಾಣಿ ಚಿತ್ರ

ಮೂಲಕ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ' ಎಂದರು.

'ನೀವು ಪಡೆಯುವ ತರಬೇತಿ ಆತ್ಮವಿಶ್ವಾಸ ಎಂಬ ಮೂಲ ಗುಣಧರ್ಮ ಇಟ್ಟುಕೊಂಡು ಆತ್ಮರಕ್ಷಣೆಗೆ ಒಂದು ರೀತಿಯಲ್ಲಿ ಟಾನಿಕ್ ಇದ್ದಂತೆ. ಎದುರಾಳಿಯನ್ನು ಸಮರ್ಥವಾಗಿ ಎದುರಿಸಬಲ್ಲೆ ಎನ್ನುವ ಶಕ್ತಿ ತುಂಬುವ ಟಾನಿಕ್ ಇದ್ದಂತೆ. ಸಮಾಜ ಕಲ್ಯಾಣ ಸಚಿವರು ಹಾಗೂ ಅಧಿಕಾರಿಗಳು ನಿಮಗೆ ಈ ಟಾನಿಕ್ ನೀಡುತ್ತಿದ್ದಾರೆ. ಈ ಕಾರ್ಯಕ್ರಮಕ್ಕೆ ಹೆಸರಿನಲ್ಲಿಯೇ ಶಕ್ತಿ ತುಂಬಲು ಒನಕೆ ಓಬವ್ವನ ಹೆಸರಿಡಲಾಗಿದೆ' ಎಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮುಖ್ಯಮಂತ್ರಿ ಹೇಳಿದರು.

ಕರ್ನಾಟಕಕ್ಕೆ ಅಗ್ರಸ್ಥಾನ: 'ನಮ್ಮ ರಾಜ್ಯ 75ನೇ ರಾಜ್ಯೋತ್ಸವ ಆಚರಿಸುವಾಗ ದೇಶದಲ್ಲಿ ರಾಜ್ಯಕ್ಕೆ ಅಗ್ರಸ್ಥಾನವಿರಬೇಕು. ಅದಕ್ಕೆ ಸರ್ಕಾರದ ಕಾರ್ಯಕ್ರಮಗಳನ್ನು ಯಶಸ್ವಿ ಮಾಡಿದರೆ ಸಾಲದು. ನಾಡಿನ ಪ್ರತಿಯೊಬ್ಬ ನಾಗರಿಕನಿಗೂ ವಿದ್ಯೆ, ಕೈಯಲ್ಲಿ ಕೆಲಸ, ಪ್ರೇರಣೆ ನೀಡುವ ಕೆಲಸ ಮಾಡಲು ಅವಕಾಶಗಳನ್ನು ಸರ್ಕಾರ ಮಾಡಿಕೊಡಲಿದೆ' ಎಂದರು.

'2023ನೇ ಸಾಲಿನಲ್ಲಿ ಒಟ್ಟು 50 ಸಾವಿರಕ್ಕಿಂತ ಹೆಚ್ಚು ಕೆಡೆಟ್‌ಗಳನ್ನುಎನ್‌ಸಿಸಿಗೆಸೇರ್ಪಡೆಮಾಡಲಾಗುವುದು. ಮಿಲಿಟರಿಗೆ ಸಮಾನವಾದ ತರಬೇತಿಯ ಜೊತೆಗೆ ಮಹಿಳೆಯರ ರಕ್ಷಣೆಗಾಗಿ ವಿಶೇಷ ಕಾರ್ಯಕ್ರಮ ರೂಪಿಸಲಾಗುತ್ತಿದೆ' ಎಂದರು.

ಆತ್ಮರಕ್ಷಣೆಗೆ ಕಲಿತ ವಿದ್ಯೆಯನ್ನು ವಿದ್ಯಾರ್ಥಿನಿಯರು ಪ್ರದರ್ಶಿಸಿದರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್, ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಮುನಿರಾಜುಗೌಡ ಇದ್ದರು.

ಕೋವಿಡ್: ರಾಜ್ಯದಲ್ಲಿ 24 ಗಂಟೆಗಳಲ್ಲಿ 8,425 ಮಂದಿಗೆ ಸೋಂಕು

ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯ ಇಳಿಕೆಯಾಗಿದೆ. 24 ಗಂಟೆಗಳ ಅವಧಿಯಲ್ಲಿ 8,425 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.29 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 6.51 ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 38.96 ಲಕ್ಷಕ್ಕೆ ಏರಿಕೆಯಾಗಿದೆ.

18 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, 11 ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 3,822 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 582 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 9,893 ಮಂದಿ ಸೇರಿದಂತೆ ರಾಜ್ಯದಲ್ಲಿ 19,800 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 37.58 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 97 ಸಾವಿರಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 39 ಸಾವಿರ ಸಕ್ರಿಯ ಪ್ರಕರಣಗಳಿವೆ.

ಕೊರೊನಾ ಸೋಂಕಿತರಲ್ಲಿ 47 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 17 ಮಂದಿ, ಬಳ್ಳಾರಿಯಲ್ಲಿ ಏಳು, ದಕ್ಷಿಣ ಕನ್ನಡದಲ್ಲಿ ಐದು, ಮೈಸೂರಿನಲ್ಲಿ ಮೂರು, ಉಡುಪಿ, ಕಲಬುರಗಿ, ಬೆಳಗಾವಿ ಹಾಗೂ ಬಾಗಲಕೋಟೆಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.55 ಏರಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,347ಕ್ಕೆ ತಲುಪಿದೆ.







ಸಪ್ತಕ ಸಂಸ್ಥೆಯು ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಸ್ವರ ಸಂಧ್ಯಾ' ಸಂಗೀತ ಕಾರ್ಯಕ್ರಮದಲ್ಲಿ ಪಂಡಿತ್ ಪ್ರಫುಲ್ಲ ಅಥಲ್ಯೆ ಅವರು ತಬಲಾ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

'ಬಿಎಂಎಲ್‌ಟಿಎ ಮಸೂದೆ ಮಂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ವಿಧಾನಸಭೆ ಅಧಿವೇಶನದಲ್ಲಿ ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರದ (ಬಿಎಂಎಲ್‌ಟಿಎ) ಮಸೂದೆ ಮಂಡಿಸಿ ಅಂಗೀಕರಿಸಬೇಕು' ಎಂದು ಬೆಂಗಳೂರು ನವನಿರ್ಮಾಣ ಪಕ್ಷ ಒತ್ತಾಯಿಸಿದೆ.

ಈ ಕುರಿತು ಪಕ್ಷವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದೆ.

'ಸಾರಿಗೆ ಯೋಜನೆ ಹಾಗೂ ನಿರ್ವಹಣೆಯನ್ನು ಸರ್ಕಾರಿ ಪ್ರಾಧಿಕಾರದ ನೆರವಿನೊಂದಿಗೆ ಸಂಘಟಿಸುವುದು ಅಗತ್ಯ. ಬಿಎಂಎಲ್‌ಟಿಎ ನಗರ ಸಂಚಾರ ಆಡಳಿತ ಸುಧಾರಣಾ ಸಂಸ್ಥೆಯಾಗಿದೆ. ಸಮಗ್ರ ಭೂ ಬಳಕೆ, ಸಾರಿಗೆ ಯೋಜನೆ ಮತ್ತು ಮೇಲ್ವಿಚಾರಣೆಯ ಹೊಣೆ ಹೊತ್ತಿದೆ. ಹದಿನಾಲ್ಕು ವರ್ಷಗಳ ಸುದೀರ್ಘ ಚರ್ಚೆಯೊಂದಿಗೆ ಮಸೂದೆ ಸಿದ್ಧಪಡಿಸಲಾಗಿದೆ. ಹೀಗಿದ್ದರೂ ಬೆಳಗಾವಿ ಅಧಿವೇಶನದಲ್ಲಿ ಇದನ್ನು ಮಂಡಿಸುವ ಕೆಲಸ ಆಗಲಿಲ್ಲ. ಮುಂಬರುವ ಅಧಿವೇಶನದಲ್ಲಾದರೂ ಮಸೂದೆ ಮಂಡಿಸಿ ಅಂಗೀಕರಿಸಬೇಕು' ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

'ಏಜೆನ್ಸಿಗಳ ನಡುವಣ ಸಮನ್ವಯತೆಯ ಕೊರತೆಯಿಂದಾಗಿ ನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಉಲ್ಬಣವಾಗುತ್ತಿದೆ. ನಾಗರಿಕರು ದಟ್ಟಣೆಯಲ್ಲಿ ಸಿಲುಕಿ ಸಂಕಷ್ಟ ಅನುಭವಿಸುವಂತಾಗಿದೆ. ಸಾರ್ವಜನಿಕ ಸಾರಿಗೆ ಬಳಕೆದಾರರ ಸಂಖ್ಯೆ ಕ್ಷೀಣಿಸುತ್ತಿದೆ. ಸಮಸ್ಯೆ ಮತ್ತಷ್ಟು ಬಿಗಡಾಯಿಸುವ ಮುನ್ನ ಎಚ್ಚೆತ್ತುಕೊಳ್ಳಬೇಕು. ಬಿಎಂಎಲ್‌ಟಿಎ ಮಸೂದೆ ಮಂಡನೆಗೆ ಇಚ್ಛಾಶಕ್ತಿ ತೋರಬೇಕು' ಎಂದು ತಿಳಿಸಲಾಗಿದೆ.

'ಹಿಜಾಬ್ ಬಹಿಷ್ಕರಿಸಲು ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ತ್ರೀ ವಿರೋಧಿ ಬಣ್ಣ ನೀಡಿ ಹಿಜಾಬ್ ವ್ಯವಸ್ಥೆ ಬಹಿಷ್ಕರಿಸುವ ಹುನ್ನಾರ ನಡೆಯುತ್ತಿದೆ. ಆ ಮೂಲಕ ಹಿಂದೂ–ಮುಸ್ಲಿಂ ವಿದ್ಯಾರ್ಥಿಗಳ ನಡುವಣ ಸೌಹಾರ್ದ ಕದಡಲು ಕೆಲ ಶಕ್ತಿಗಳು ಪ್ರಯತ್ನಿಸುತ್ತಿವೆ' ಎಂದು ಸಿಪಿಐ (ಎಂಎಲ್) ಲಿಬರೇಷನ್ ರಾಜ್ಯ ಸಮಿತಿ ಆರೋಪಿಸಿದೆ.

'ಧರ್ಮವನ್ನು ಆತ್ಮಸಾಕ್ಷಿಗೆ ಅನುಗುಣವಾಗಿ ವ್ಯಾಖ್ಯಾನಿಸಲು ಹಾಗೂ ಆಚರಿಸಲು ಪ್ರತಿಯೊಬ್ಬರಿಗೂ ಸಾಂವಿಧಾನಿಕ ಸ್ವಾತಂತ್ರ್ಯವಿದೆ. ಕರಾವಳಿ ಭಾಗದಲ್ಲಿ ಸಂಘಪರಿವಾರದ ಗುಂಪುಗಳ ಅಪರಾಧ ಕೃತ್ಯಗಳು ಮೇರೆ ಮೀರಿವೆ. ಆ ಭಾಗದಲ್ಲೇ ಹಿಜಾಬ್‌ಗೆ ವಿರೋಧ ವ್ಯಕ್ತವಾಗುತ್ತಿದೆ. ಅದನ್ನು ಬಹಿಷ್ಕರಿಸಲು ವ್ಯವಸ್ಥಿತ ಸಂಚು ರೂಪಿಸಲಾಗುತ್ತಿದೆ. ಮುಸ್ಲಿಂ ಯುವತಿಯರ ಮನೆಗೆ ಭೇಟಿ ನೀಡುವ ಹಿಂದೂ ಯುವತಿಯರನ್ನು ಬೆದರಿಸುವುದು, ಕಾಲೇಜು ಬಸ್ಸಿನಿಂದ ಮುಸ್ಲಿಂ ಯುವಕ ಹಾಗೂ ಯುವತಿಯರನ್ನು ಬಲವಂತವಾಗಿ ಕೆಳಗಿಳಿಸುವ ಕೃತ್ಯಗಳು ನಡೆಯುತ್ತಲೇ ಇವೆ' ಎಂದು ಟೀಕಿಸಿದೆ.

'ಹಿಜಾಬ್ ಧರಿಸಲು ಇಚ್ಛಿಸುವವರು ಮುಸ್ಲಿಂ ಸಮುದಾಯದ ಸಂಘ ಸಂಸ್ಥೆಗಳು ನಡೆಸುತ್ತಿರುವ ಶಾಲೆ–ಕಾಲೇಜುಗಳಲ್ಲೇ ವ್ಯಾಸಂಗ ಮಾಡುವಂತೆ ಒತ್ತಡ ಹೇರಲಾಗುತ್ತಿದೆ. ಮುಸ್ಲಿಮರನ್ನು ಪ್ರತ್ಯೇಕಿಸುವ ದೊಡ್ಡ ಹುನ್ನಾರ ಇದರ ಹಿಂದೆ ಅಡಗಿದೆ. ಸರ್ಕಾರಿ ಕಾಲೇಜುಗಳಲ್ಲಿ ದಮನಿತ ಸಮುದಾಯದವರೇ ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರಲ್ಲಿ ಕೋಮುವಾದದ ವಿಷಬೀಜ ಬಿತ್ತಲು ಸಂಘ ಪರಿವಾರ ಮುಂದಾಗಿದೆ' ಎಂದು ದೂರಿದೆ.

'ರಾಜ್ಯ ಸರ್ಕಾರ ಹಾಗೂ ಹೈಕೋರ್ಟ್ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮುಸ್ಲಿಂ ಮಹಿಳೆಯರ ಖಾಸಗಿತನ, ಸ್ವಾಯತ್ತತೆ, ಘನತೆ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಬೇಕು. ಹಿಜಾಬ್ ಧರಿಸುವ ಹಕ್ಕನ್ನು ಎತ್ತಿಹಿಡಿಯಬೇಕು' ಎಂದು ಒತ್ತಾಯಿಸಿದೆ.

ನಗರದಲ್ಲಿ ಇಂದು

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಾಲಿಬಾಲ್ ಕ್ರೀಡಾಂಗಣ ಉದ್ಘಾಟನೆ: ಎಸ್. ಮಹದೇವಯ್ಯ, ಸಮವಸ್ತ್ರ ವಿತರಣೆ–ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಪಾಲನೇತ್ರ, ಶಾಂತರಾಜು, ಸಿದ್ಧಲಿಂಗಸ್ವಾಮಿ, ಆಯೋಜನೆ–ಕನ್ನಲ್ಲಿ ಸಿದ್ದಬಸಮ್ಮ ಪಟೇಲ್ ಸಾವಂದಯ್ಯ ದೊಡ್ಡಮನೆ ರುದ್ರಮ್ಮ ವಿರೂಪಾಕ್ಷಯ್ಯ ಟ್ರಸ್ಟ್, ಸ್ಥಳ–ಅಲ್ಲಮ ಕಲಾ ಶಾಲೆ, ಸೀಗೆಹಳ್ಳಿ ರಸ್ತೆ, ಕನ್ನಲ್ಲಿ, ಬೆಳಿಗ್ಗೆ 11.

'ದೌರ್ಜನ್ಯದ ದೇವದಾಸಿ ಪದ್ಧತಿ ಮತ್ತು ಸರ್ಕಾರಗಳು' ವಿಚಾರ ಸಂಕಿರಣ: ಉದ್ಘಾಟನೆ– ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ವಿಷಯ ಮಂಡನೆ–ಯು.ಬಸವರಾಜ, ಅಧ್ಯಕ್ಷತೆ– ಟಿ.ವಿ ರೇಣುಕಾ, ಆಯೋಜನೆ–ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಬೆಳಿಗ್ಗೆ 11.

ಸಣ್ಣ ಕಥಾ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಲೇಖಿಕಾ ಸಾಹಿತ್ಯ ವೇದಿಕೆಯು ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯಮಟ್ಟದ ಸಣ್ಣ ಕಥಾ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಕಥೆಯು ಒಂದು ಪುಟ ಮೀರಬಾರದು. ಎಲ್ಲ ವಯೋಮಾನದವರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಐವರು ವಿಜೇತರಿಗೆ ₹ 100 ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಲಾಗುವುದು. ಆಯ್ಕೆಯಾದ ಕಥೆಗಳನ್ನು ಲೇಖಿಕಾ ಪತ್ರಿಕೆಯಲ್ಲಿ ಪ್ರಕಟಣೆ ಮಾಡಲಾಗುತ್ತದೆ. ಆಸಕ್ತರು ಫೆ.28ರೊಳಗೆ shylajaasuresh@gmail.comಗೆ ಕಥೆಗಳನ್ನು ಕಳುಹಿಸಬೇಕು ಎಂದು ವೇದಿಕೆಯ ಸಂಚಾಲಕಿ ಶೈಲಜಾ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9916378955

ದೂರ ಶಿಕ್ಷಣ ಪೂರಕ ಪರೀಕ್ಷೆ: ಶುಲ್ಕ ಪಾವತಿಗೆ ಫೆ.14 ಕಡೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯವು ಈ ವರ್ಷದ ಮಾರ್ಚ್–ಏಪ್ರಿಲ್‌ನಲ್ಲಿ ಪೂರಕ ಪರೀಕ್ಷೆ ನಡೆಸಲು ಉದ್ದೇಶಿಸಿದೆ. ಪರೀಕ್ಷೆ ಬರೆಯಲು ಇಚ್ಛಿಸುವ ಪದವಿ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಇದೇ 14 ಕೊನೆಯ ದಿನವಾಗಿದೆ.

'ದೂರ ಶಿಕ್ಷಣ ನಿರ್ದೇಶನಾಲಯದ ಕಚೇರಿಯಲ್ಲಿ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಅರ್ಜಿಗಳು ಲಭ್ಯವಿದ್ದು, ₹21 ಶುಲ್ಕ ಪಾವತಿಸಿ ಅವುಗಳನ್ನು ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಇದೇ 14ರೊಳಗೆ ಸಲ್ಲಿಸಬೇಕು. ₹200 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಇದೇ 19 ಅಂತಿಮ ದಿನ' ಎಂದು ಪ್ರಕಟಣೆ ತಿಳಿಸಿದೆ.

'ಮೊದಲ, ಎರಡನೇ ಹಾಗೂ ಮೂರನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಬಿಎ ವಿದ್ಯಾರ್ಥಿಗಳಿಗೆ ₹626 ಪರೀಕ್ಷಾ ಶುಲ್ಕ ನಿಗದಿ ಮಾಡಲಾಗಿದೆ. ಬಿಎ ಪೂರಕ ಪರೀಕ್ಷೆ ಬರೆಯುವವರು ವಿಷಯವೊಂದಕ್ಕೆ ₹146 ಶುಲ್ಕ ಭರಿಸಬೇಕು. ಬಿ.ಕಾಂ.ವಿದ್ಯಾರ್ಥಿಗಳು ₹697 ಶುಲ್ಕ ಕಟ್ಟಬೇಕು. ಪೂರಕ ಪರೀಕ್ಷೆಗೆ ಹಾಜರಾಗುವವರು ವಿಷಯವೊಂದಕ್ಕೆ ₹252 ಶುಲ್ಕ ನೀಡಬೇಕಾಗುತ್ತದೆ. ಬಿಬಿಎಂ/ಬಿಬಿಎ ವಿದ್ಯಾರ್ಥಿಗಳಿಗೆ ಒಟ್ಟು ₹2,151 ಶುಲ್ಕ ನಿಗದಿಪಡಿಸಲಾಗಿದೆ. ಪೂರಕ ಪರೀಕ್ಷೆ ಬರೆಯುವವರು ವಿಷಯವೊಂದಕ್ಕೆ ₹420 ಶುಲ್ಕ ಕಟ್ಟಬೇಕು. ಎಲ್ಲರೂ ನಿಗದಿತ ದಿನದೊಳಗೆ ಆನ್‌ಲೈನ್ ಮೂಲಕವೇ ಶುಲ್ಕಗಳನ್ನು ಪಾವತಿಸಬೇಕು' ಎಂದು ಸೂಚಿಸಲಾಗಿದೆ.

'ಪ್ರಾಯೋಗಿಕ ಪರೀಕ್ಷೆ ಎದುರಿಸುವವರು ವಿಷಯವೊಂದಕ್ಕೆ ₹61 ಶುಲ್ಕ ಪಾವತಿಸಬೇಕು. ವೈವಾ, ಯೋಜನಾ ಮೌಲ್ಯಮಾಪನ ಹಾಗೂ ಪ್ರಬಂಧ ಮಂಡನೆಗೆ ತಲಾ ₹182 ಶುಲ್ಕ ನಿಗದಿ ಮಾಡಲಾಗಿದೆ. ಅಂಕಪಟ್ಟಿ, ಪರೀಕ್ಷಾ ಪ್ರಕ್ರಿಯೆ ಸೇರಿದಂತೆ ಒಟ್ಟು ₹274 ಹೆಚ್ಚುವರಿ ಶುಲ್ಕವನ್ನೂ ವಿದ್ಯಾರ್ಥಿಗಳು ಭರಿಸಬೇಕು' ಎಂದು ಹೇಳಲಾಗಿದೆ.

ಹೆಚ್ಚಿನ ಮಾಹಿತಿಗೆ www.bangaloreuniversity.ac.in ಗೆ ಭೇಟಿ ನೀಡಬಹುದು.

ಸ್ಪುಟ್ನಿಕ್ ಲೈಟ್ ಲಸಿಕೆ ಬಳಕೆಗೆ ಭಾರತ ಒಪ್ಪಿಗೆ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಒಂದೇ ಬಾರಿಗೆ ನೀಡುವ ಸ್ಪುಟ್ನಿಕ್ ಲೈಟ್ ಕೋವಿಡ್ ಲಸಿಕೆಗೆ ಭಾರತದ ಔಷಧ ನಿಯಂತ್ರಣ ಮಹಾನಿಬಂಧಕರು ಮಾನ್ಯತೆ ನೀಡಿದ್ದಾರೆ ಎಂದು ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್ ಮೆಂಟ್ ಫಂಡ್ (ಆರ್‌ಡಿಐಎಫ್) ಭಾನುವಾರ ತಿಳಿಸಿದೆ.

ಸ್ಪುಟ್ನಿಕ್ ಲೈಟ್ ಲಸಿಕೆಯನ್ನು ಇತರೆ ಲಸಿಕೆಗಳ ಜೊತೆಗೆ ಬೂಸ್ಟರ್ ಡೋಸ್ ಆಗಿಯೂ ಬಳಸಬಹುದು ಎಂದು ಆರ್‌ಡಿಐಎಫ್ ತಿಳಿಸಿದೆ. ಆರ್‌ಡಿಐಎಫ್ ಮುಖ್ಯಸ್ಥ ಕಿರಿಲ್ ಮಿಟ್ರಿವ್ ಅವರು ಈ ಕುರಿತು ಹೇಳಿಕೆ ನೀಡಿದ್ದು, ಓಮೈಕ್ರಾನ್ ರೂಪಾಂತರ ತಳಿ ಸೇರಿದಂತೆ ಸೋಂಕು ನಿರೋಧಕ ಶಕ್ತಿ ಹೆಚ್ಚಿಸಲಿದೆ ಎಂದಿದೆ.

ಭಾರತದಲ್ಲಿ ಬಳಸಲು ಮತ್ತು ರಫ್ತು ಉದ್ದೇಶಕ್ಕಾಗಿ 1 ಬಿಲಿಯನ್ ಸ್ಪುಟ್ನಿಕ್ ಡೋಸ್ ತಯಾರಿಕೆ ಸಂಬಂಧ ಆರ್‌ಡಿಐಎಫ್ ಈಗಾಗಲೇ ಭಾರತದ ಏಳು ಔಷಧ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಬಾಗಲೂರು ಮುಖ್ಯರಸ್ತೆಯ ಶಿವಪುರದಲ್ಲಿ ₹2 ಕೋಟಿ ವೆಚ್ಚದಲ್ಲಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಕೃಷ್ಣಬೈರೇಗೌಡ, ನಾಗರಿಕರ ಸಮಸ್ಯೆಗಳನ್ನು ಆಲಿಸಿದರು.

₹2 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬಾಗಲೂರು ಮುಖ್ಯರಸ್ತೆಯ ಶಿವಪುರದಲ್ಲಿ ₹2 ಕೋಟಿ ವೆಚ್ಚದಲ್ಲಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಸಲುವಾಗಿ ಬಡಾವಣೆಯಲ್ಲಿ ಪೈಪ್‌ಲೈನ್ ಅಳವಡಿಸಲು ರಸ್ತೆಗಳನ್ನು ಅಗೆಯಲಾಗಿತ್ತು. ಇದರಿಂದ ರಸ್ತೆಗಳು ಹಾಳಾಗಿ ಜನರು ತೊಂದರೆ ಅನುಭವಿಸುತ್ತಿದ್ದ ಹಿನ್ನೆಲೆಯಲ್ಲಿ ಇಂತಹ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಲಾಗಿದೆ' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬಡಾವಣೆಯಲ್ಲಿ ನೂತನವಾಗಿ ಅಳವಡಿಸಿರುವ ಕೊಳವೆಬಾವಿಯನ್ನು ಸಾರ್ವಜನಿಕರ ಸೇವೆಗೆ ಸಮರ್ಪಿಸಿದರು.

ಕಾಂಗ್ರೆಸ್ ಮುಖಂಡರಾದ ರಾಜಣ್ಣ, ಟಿ.ವೆಂಕಟರಾಮರೆಡ್ಡಿ, ಎಚ್.ಎ.ಶಿವಕುಮಾರ್, ಸಿ.ಮುನಿರಾಜು, ಬಿಬಿಎಂಪಿ ಸಹಾಯಕ ಎಂಜಿನಿಯರ್ ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು.

ತಂತ್ರಾಂಶ ಅಭಿವೃದ್ಧಿ ಎಂಜಿನಿಯರ್ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಲ್ಲಿ ಖಾಲಿ ಇರುವ ಐದು ತಂತ್ರಾಂಶ ಅಭಿವೃದ್ಧಿ ಎಂಜಿನಿಯರ್ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಬಿಇ, ಬಿಟೆಕ್, (ಕಂಪ್ಯೂಟರ್ ಸೈನ್ಸ್), ಇಸಿಇ, ಐಟಿ (ಮಾಹಿತಿ ವಿಜ್ಞಾನ) ಅಥವಾ ಎಂಸಿಎ ವಿದ್ಯಾರ್ಹತೆ ಹೊಂದಿರಬೇಕು. ತಂತ್ರಾಂಶ ಅಭಿವೃದ್ಧಿಯಲ್ಲಿ ಕನಿಷ್ಠ ಎರಗಿಡು ವರ್ಷಗಳ ಅನುಭವ ಇರಬೇಕು. ಈ ಹುದ್ದೆಗಳಿಗೆ ಮಾಸಿಕ ₹ 80 ಸಾವಿರ ವೇತನ ನಿಗದಿಪಡಿಸಲಾಗಿದೆ. ವಿದ್ಯಾರ್ಹತೆ ಮತ್ತು ನೈಪುಣ್ಯತೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ಫೆ. 10ರ ಒಳಗೆ ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಎಸ್.ಎಸ್.ಎಲ್.ಆರ್. ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560001 ಅವರಿಗೆ ನೇರವಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

ಸೋಮವಾರ, ಫೆಬ್ರುವರಿ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 38 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ದೇಶದ ಪ್ರತಿಷ್ಠಿತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳ ಪ್ರವೇಶಕ್ಕಾಗಿ ನಡೆಸುವ 'ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ (ಕ್ಲಾಟ್) ಕುರಿತ ವಿವರ ಇಲ್ಲಿದೆ.

ಆಳ-ಅಗಲ ನದಿ ಜೋಡಣೆ ಹಲವು ಅಡಚಣೆ

'ಬಿಜೆಪಿ ಅಧಿಕಾರಕ್ಕೆ ಬಂದರೆ ಯೋಗಿ ಸಿ.ಎಂ' 12

'ಒತ್ತಡ'ಕ್ಕೆ ಮಣಿದು ಕೋರ್ಟ್ ತೀರ್ಪು ಬದಿಗಿಟ್ಟ ಸರ್ಕಾರ

'ಸಮವಸ್ತ್ರ: ಆದೇಶ ಪಾಲಿಸದಿದ್ದರೆ ಕ್ರಮ' 10

ಕೆಪಿಎಸ್‌ಸಿ: ಅಕ್ರಮ 'ಸಕ್ರಮ'ಕ್ಕೆ ಮಸೂದೆ! 10

ಗಂಧರ್ವ ಸಂಪುಟದ ಅಂತ್ಯ

• ರಘುನಾಥ ಚ.ಹ.

ಲತಾ ಮಂಗೇಶ್ಕರ್ ನಿರ್ಗಮನದೊಂದಿಗೆ ಭಾರತೀಯ ಸಿನಿಮಾ ಸಂಗೀತದ 'ಗಂಧರ್ವ ಸಂಪುಟ' ಕೊನೆಗೊಂಡಂತಾಗಿದೆ. ಅವರು ಕೇವಲ ಹಿನ್ನೆಲೆ ಗಾಯಕಿಯಷ್ಟೇ ಆಗಿರಲಿಲ್ಲ. ಸಿನಿಮಾ ಸಂಗೀತಕ್ಕೆ ಘನತೆ ತಂದು ಕೊಟ್ಟವರು ಹಾಗೂ ಕೋಟಿ ಕೋಟಿ ಭಾರತೀಯರ ಸಂಗೀತ ಸ್ವಪ್ನಗಳಿಗೆ 'ಸರಿಗಮ' ಸಂಯೋಜಿಸಿದ ಸಾಧಕಿ.

ಭಾರತೀಯ ಚಿತ್ರರಂಗದಲ್ಲಿ ಅನೇಕ ಗಾಯಕಿಯರ ಹೆಜ್ಜೆಗುರುತುಗಳಿವೆ. ಆದರೆ, ಅವೆಲ್ಲವೂ ಲತಾ ಎನ್ನುವ ಏಕಚಕ್ರಾಧಿಪತ್ಯದಡಿ ಹರಡಿಕೊಂಡಿರುವ ಬಿಳಲುಗಳಷ್ಟೇ. ಸಂಗೀತಗಾರರ ಪಾಲಿಗೆ ಅಕ್ಕನಂತೆ, ಅಮ್ಮನಂತಿದ್ದ ಲತಾ ದೀದಿ ಅವರಿಗೆ ಆ ಅರ್ಹತೆ ಕೇವಲ ವಯಸ್ಸಿನಿಂದ ಸಿದ್ಧಿಸಿರಲಿಲ್ಲ; ಸಾಧನೆಯಿಂದ ದೊರೆತ ಗೌರವವಾಗಿತ್ತದು. ತಿಳಿ ವರ್ಣದ ಸೀರೆಯುಟ್ಟು, ಶಾಲು ಧರಿಸಿದ ಲತಾ ಅವರು ಸುಳಿದಾಡಿದರೆಂದರೆ, ಸಹೃದಯರ ಪಾಲಿಗೆ ಮಾನುಷಿಯ ರೂಪು ತಳೆದ ಶಾರದೆಯೇ ಕಾಣಿಸಿಕೊಂಡಂತೆ ಭಾಸವಾಗುತ್ತಿತ್ತು.

ಬಡೆ ಗುಲಾಂ ಅಲಿ ಖಾನ್, ಪಂಡಿತ್ ರವಿಶಂಕರ್ ಅವರಂಥ ಶಾಸ್ತ್ರೀಯ ಸಂಗೀತದ ದಂತಕಥೆಗಳು ತಲೆದೂಗುವಷ್ಟು ದಿವ್ಯವಾಗಿತ್ತು ಲತಾ ಅವರ ಗಾಯನವೈಭವ. ಸ್ಪಷ್ಟ ಉಚ್ಚಾರ, ಅಪೂರ್ವ ಮಾಧುರ್ಯಗಳ ಸಂಗಮವಾಗಿದ್ದ ಅವರ ಹಾಡುಗಾರಿಕೆ, ಅಮೃತತ್ವಕ್ಕೆ ಹಂಬಲಿಸುವ ನಾದೋಪಾಸನೆಯಂತಿತ್ತು.

ತಂದೆಯೇ ಗುರು: ಮಧ್ಯಪ್ರದೇಶದ ಇಂದೋರ್‌ನಲ್ಲಿ ಜನಿಸಿದ (ಸೆ. 28, 1929) ಲತಾ ಅವರ ತಂದೆ ದೀನಾನಾಥ್ ಮಂಗೇಶ್ಕರ್ ತಮ್ಮದೇ ಆದ ನಾಟಕ ಕಂಪನಿ ಹೊಂದಿದ್ದರು. ನಾಟಕಗಳೆಂದರೆ ಸಂಗೀತದ ಮತ್ತೊಂದು ರೂಪವೇ ಆಗಿದ್ದ ದಿನಗಳವು. ನಾಟಕದ ಹಾಡುಗಳನ್ನು ಕೇಳುತ್ತಾ ಬೆಳೆದ ಲತಾ ಅವರಲ್ಲಿ ಅವರಿಗರಿವಿಲ್ಲದಂತೆಯೇ ಗಾಯಕಿಯೊಬ್ಬಳು ರೂಪುಗೊಂಡಿದ್ದಳು. ಒಮ್ಮೆ ಅವರ ತಂದೆ, ಸಂಗೀತಪಾಠ ಮಾಡುವಾಗ ಶಿಷ್ಯರೊಬ್ಬರ ಹಾಡುಗಾರಿಕೆಯಲ್ಲಿ ರಾಗ ಯಡವಟ್ಟಾಯಿತು. ತಕ್ಷಣವೇ ಅಲ್ಲಿದ್ದ ಬಾಲಕಿ ಲತಾ, ರಾಗ ಸರಿಪಡಿಸಿದಳು. ಮಗಳ ಸಂಗೀತದ ಆಸಕ್ತಿ ಅಪ್ಪನಿಗೆ ಅರಿವಾದುದೇ ಆಗ. ಮರುದಿನ ಮಗಳ ಕೈಗೆ ತಾನ್ಪುರ ಕೊಟ್ಟು, ಸಂಗೀತದ ಪಾಠ ಆರಂಭಿಸಿದರು. ನಾಟಕ ಕಂಪನಿಯ ಅಂಗಳವೇ ಪಾಠಶಾಲೆ, ಅಪ್ಪನೇ ಮೊದಲ ಗುರು. ಮುಂದೆಲ್ಲ ಸಂಗೀತ ಸೋಪಾನದ ಹಾದಿ. ಕೆ.ಎಲ್. ಸೈಗಾಲ್‌ರ ಹಾಡುಗಳೆಂದರೆ ಅಪ್ಪ-ಮಗಳಿಬ್ಬರಿಗೂ ಮೈಯೆಲ್ಲ ಕಿವಿಯಾಗುತ್ತಿತ್ತು. ಅಪ್ಪನ ನಾಟಕಗಳಲ್ಲಿ ಮಗಳು ಬಾಲಕಲಾವಿದೆಯಾಗಿ ಬಣ್ಣ ಹಚ್ಚಿದ್ದೂ ಆಯಿತು; ಹಾಡಿದ್ದೂ ಆಯಿತು.

ಲತಾ ಶಾಲೆಗೆ ಹೋಗಿ ಕಲಿತವರಲ್ಲ. ಮನೆಯಲ್ಲಿ, ಕಂಪನಿಯ ಜನರೊಂದಿಗೆ ಅವರ ಶಿಕ್ಷಣ ಕುಂಟುತ್ತಾ ಸಾಗಿತು. ಹಿಂದಿ, ಉರ್ದು, ಬಂಗಾಳಿ ಭಾಷೆಗಳನ್ನು ಮನೆಯಲ್ಲಿಯೇ ಕಲಿತರು. ರಾಮಕೃಷ್ಣ ಬುವಾವಚೆ ಮತ್ತು ಉಸ್ತಾದ್ ಅಮಾನತ್ ಖಾನ್ ಗರಡಿಯಲ್ಲಿ ಅವರ ಹಾಡುಗಾರಿಕೆ ಹದಗೊಂಡಿತು.

7ನೇ | ಪುಟ ನೋಡಿ

ವಿಶೇಷ ಪುಟಗಳು | 6, 7



28-9-1929 - 6-2-2022

ನೆಹರೂ ಕಣ್ಣಲ್ಲಿ ನೀರು

ಭಾರತರತ್ನ, ಪದ್ಮವಿಭೂಷಣ ಸೇರಿದಂತೆ ಲತಾ ಅವರ ಸಂಗೀತ ಸಾಧನೆಗೆ ಹಲವು ಮೇರು ಗೌರವಗಳು ಸಂದಿವೆ. ವಿಶ್ವದ ವಿವಿಧ ದೇಶಗಳಲ್ಲಿ, ವಿವಿಧ ಭಾಷೆಗಳಲ್ಲಿ ಹಾಡಿ ಸಂಗೀತರಸಿಕರ ಮನ್ನಣೆ ಪಡೆದಿದ್ದಾರೆ. ಚೀನಾದೊಂದಿಗಿನ ಯುದ್ಧದಲ್ಲಿ ಮಡಿದ ಭಾರತೀಯ ಸೈನಿಕರಿಗೆ ಗೌರವ ಸಲ್ಲಿಸುವ 'ಯೇ ಮೇರೆ ವತನ್ ಕೆ ಲೋಗೋ..' ಗೀತೆಯನ್ನು ಭಾವಪೂರ್ಣವಾಗಿ ಹಾಡಿದಾಗ, ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರ ಕಣ್ಣುಗಳು ಒದ್ದೆಯಾಗಿದ್ದವಂತೆ. 'ನೀನು ನನ್ನನ್ನು ಅಳಿಸಿಬಿಟ್ಟೆ' ಎಂದು ಪ್ರಧಾನಿ ಭಾವುಕರಾಗಿ ಹೇಳಿದ್ದು ಲತಾ ಅವರ ಹಾಡುಗಾರಿಕೆಗೆ ಸಂದ ಬಹುದೊಡ್ಡ ಗೌರವಗಳಲ್ಲೊಂದು.

ಕನ್ನಡದ ಬೆಳಗು

1967ರಲ್ಲಿ ತೆರೆಕಂಡ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಲತಾ ಅವರು ಕನ್ನಡದಲ್ಲಿ ಹಾಡಿದ ಏಕೈಕ ಸಿನಿಮಾ. ಆ ಚಿತ್ರದಲ್ಲಿ 'ಬೆಳ್ಳನೆ ಬೆಳಗಾಯಿತು' ಗೀತೆ ಲತಾ ಅವರ ಕಂಠದಲ್ಲಿ ಮೂಡಿದ ಏಕೈಕ ಕನ್ನಡ ಸಿನಿಮಾ ಗೀತೆ. ಈ ಹಾಡಿಗೆ ಸ್ವರ ಸಂಯೋಜಿಸಿದವರು ಲಕ್ಷ್ಮಣ್ ಬಾರ್ಲೇಕರ್.

ಲತಾ ಮಂಗೇಶ್ಕರ್ ಇನ್ನಿಲ್ಲ

ಮುಂಬೈ (ಪಿಟಿಐ): ಭಾನುವಾರ ಬೆಳಿಗ್ಗೆ ನಿಧನರಾದ 'ಗಾನ ಕೋಗಿಲೆ' ಲತಾ ಮಂಗೇಶ್ಕರ್ (92) ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಭಾನುವಾರ ಸಂಜೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ನಡೆಯಿತು.

ಪ್ರಧಾನಿ ನರೇಂದ್ರ ಮೋದಿ ಅವರು ಅಂತ್ಯಕ್ರಿಯೆ ಸಂದರ್ಭದಲ್ಲಿ ಶಿವಾಜಿ ಪಾರ್ಕ್‌ಗೆ ಭೇಟಿ ಕೊಟ್ಟರು. ಲತಾ ಅವರಿಗೆ ಪುಷ್ಪ ನಮನ ಸಲ್ಲಿಸಿದ ಬಳಿಕ ಪ್ರಧಾನಿಯವರು ಮಂಗೇಶ್ಕರ್ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಅಂತ್ಯಕ್ರಿಯೆಗೆ ಮುನ್ನವೇ ಅವರು ತೆರಳಿದರು.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಪರವಾಗಿಯೂ ಗಾಯನದ ದಂತಕತೆ ಲತಾ ಅವರಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಉಪ ಮುಖ್ಯಮಂತ್ರಿ ಅಜಿತ್ ಪವಾರ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಬಾಲಿವುಡ್ ನಟರಾದ ಶಾರುಕ್ ಖಾನ್ ಮತ್ತು ಅಮೀರ್ ಖಾನ್, ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮುಂತಾದವರು ಅಂತ್ಯಕ್ರಿಯೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಲತಾ ಅವರ ಸಹೋದರ ಹೃದಯನಾಥ ಮಂಗೇಶ್ಕರ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಕೋವಿಡ್ ಬಾಧಿಸಿದ್ದ ಲತಾ ಅವರನ್ನು ಜನವರಿ 8ರಂದು ಇಲ್ಲಿನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೋವಿಡ್‌ನಿಂದ ಚೇತರಿಸಿಕೊಂಡಿದ್ದ ಅವರು ಗುಣಮುಖರಾಗುವ ಲಕ್ಷಣ ತೋರಿಸಿದ್ದರು. ಅವರಿಗೆ ನ್ಯುಮೋನಿಯಾ ಕೂಡ ಬಾಧಿಸಿತ್ತು. ಬಹುಅಂಗಾಂಗ ವೈಫಲ್ಯದಿಂದ ಭಾನುವಾರ ಬೆಳಿಗ್ಗೆ 8.12 ಕ್ಕೆ ಮೃತಪಟ್ಟರು.

7ನೇ | ಪುಟ ನೋಡಿ

ಮದುವೆಯ ವದಂತಿಗಳು

ಸಂಗೀತದ ಸಾಂಗತ್ಯದಲ್ಲಿಯೇ ಜೀವನದ ಸಾರ್ಥಕತೆ ಕಂಡ ಲತಾ ಕೊನೆಯವರೆಗೂ ಅವಿವಾಹಿತರಾಗಿ ಉಳಿದಿದ್ದರು. ಪ್ರತಿ ಬಾರಿ ಅವರು ಲಂಡನ್‌ಗೆ ಹೋದಾಗಲೂ ಮದುವೆಯ ಕುರಿತ ವದಂತಿಗಳು ಜೀವಂತಗೊಳ್ಳುತ್ತಿದ್ದವು. ಇತರ ಗಾಯಕಿಯರು ಬೆಳೆಯಲು ಅವಕಾಶ ಕಲ್ಪಿಸಲಿಲ್ಲ ಎನ್ನುವುದು ಲತಾ ಅವರ ಬಗೆಗಿನ ಮತ್ತೊಂದು ಅಪಸ್ವರ. ಸಂದರ್ಶನಗಳಿಗೆ ಹಾಗೂ ಮಾತುಕತೆಗಳಿಗೆ ಸುಲಭವಾಗಿ ಲಭ್ಯರಿಲ್ಲದೆ ಇರುತ್ತಿದ್ದುದು ಕೂಡ ಅವರ ಕುರಿತು ನಿರಂತರವಾಗಿ ಗಾಸಿಪ್‌ಗಳು ಹುಟ್ಟಿಕೊಳ್ಳಲು ಕಾರಣವಾಗಿತ್ತು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ 4

ಒಳ ಪುಟ



ಯಡಹಳ್ಳಿ ವನ್ಯಧಾಮ: ಚಿಂಕಾರ ಸಂಖ್ಯೆ ಹೆಚ್ಚಳ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಭಾರತ ಯುವಪಡೆಗೆ ಐದನೇ ಕಿರೀಟ

ವೆಸ್ಟ್ ಇಂಡೀಸ್‌ನ ಆ್ಯಂಟಿಗಾದಲ್ಲಿ ನಡೆದ 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಜಯಿಸಿದ ಟ್ರೋಫಿಯೊಂದಿಗೆ ಭಾರತ ತಂಡದ ಆಟಗಾರರ ಸಂಭ್ರಮ. ಶನಿವಾರ ತಡರಾತ್ರಿ ಮುಕ್ತಾಯವಾದ ಫೈನಲ್ ಪಂದ್ಯದಲ್ಲಿ ಭಾರತ 4 ವಿಕೆಟ್‌ಗಳಿಂದ ಇಂಗ್ಲೆಂಡ್ ವಿರುದ್ಧ ಗೆದ್ದಿತು. ಭಾರತಕ್ಕೆ ಇದು ಐದನೇ ವಿಶ್ವಕಪ್ ವಿಜಯ -ಪಿಟಿಐ ಚಿತ್ರ

ಕಾಶ್ಮೀರ: ಶಾರದಾ ದೇವಸ್ಥಾನ ನಿರ್ಮಾಣ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಉತ್ತರದಲ್ಲಿರುವ ಕುಪ್ವಾರ ಜಿಲ್ಲೆಯ ತೀತ್ವಾಲ್ ಗ್ರಾಮದಲ್ಲಿ ಕರ್ನಾಟಕದ ಶೃಂಗೇರಿಯಲ್ಲಿರುವ ಶಂಕರಾಚಾರ್ಯ ಮಠವು ದೇವಿ ಶಾರದೆಯ ನೂತನ ದೇವಾಲಯ ನಿರ್ಮಿಸಲು ಮುಂದಾಗಿದೆ.

ಗ್ರಾಮದ ಬಳಿಯ ಕಿಶನ್‌ಗಂಗಾ ನದಿ ತೀರದಲ್ಲಿ ಈ ದೇವಸ್ಥಾನವನ್ನು ನಿರ್ಮಿಸಲಾಗುತ್ತದೆ.

ಮಠವು ನೀಡುವ ಪಂಚಲೋಹದಿಂದ ಮಾಡಿದ ದೇವಿ ಶಾರದೆಯ ವಿಗ್ರಹವನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ ಎಂದು ಮಠದ ಸಿಇಒ ವಿ.ಆರ್.ಗೌರಿಶಂಕರ್ ತಿಳಿಸಿದ್ದಾರೆ.

6ನೇ ಶತಮಾನದಲ್ಲಿ ಸ್ಥಾಪಿಸಲಾದ ಶಾರದಾ ದೇವಸ್ಥಾನವನ್ನು ಸರ್ವಜ್ಞ ಪೀಠ ಎಂದೂ ಕರೆಯಲಾಗುತ್ತದೆ. ಸದ್ಯ, ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ (ಪಿಒಕೆ) ಈ ದೇವಸ್ಥಾನವನ್ನು ಹಾಳುಗೆಡವಲಾಗಿದೆ. ಇದೇ ಮಾದರಿಯಲ್ಲಿ ನೂತನ ದೇವಸ್ಥಾನವನ್ನು ನಿರ್ಮಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಇಂಧನ ಇಲಾಖೆ ನೇಮಕಾತಿ ಕನ್ನಡಿಗರಿಗೇ ಆದ್ಯತೆ

ಕೆಪಿಟಿಸಿಎಲ್ ವಿವಿಧ ಹುದ್ದೆ ಕನ್ನಡ ಪರೀಕ್ಷೆ ಉತ್ತೀರ್ಣ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವ್ಯಾಪ್ತಿಯ ಐದು ಕಂಪನಿಗಳಲ್ಲಿ (ಬೆಸ್ಕಾಂ, ಸೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ) ಖಾಲಿಯಿರುವ ಸಹಾಯಕ ಎಂಜಿನಿಯರ್, ಕಿರಿಯ ಸಹಾಯಕ ಎಂಜಿನಿಯರ್ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆ ಆದವರಿಗೆ ಮಾತ್ರ ಅರ್ಹತಾ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಈ ಕ್ರಮದಿಂದಾಗಿ ವಿವಿಧ ಎಸ್ಕಾಂಗಳಲ್ಲಿ ಕನ್ನಡಿಗರೇ ಉದ್ಯೋಗ ಪಡೆಯಲು ಸಹಾಯಕವಾಗಲಿದೆ. ಈ ಬಾರಿ 1,456 ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ. ನೇಮಕಾತಿ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ.

7ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಮಾರ್ಚ್ 7 ಕೊನೆಯ ದಿನ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆಯ್ಕೆ ಪರೀಕ್ಷೆ ನಡೆಸಲಿದೆ. ಕೆಇಎ ನಡೆಸುವ ಅಪ್ಟಿಟ್ಯೂಡ್ ಪರೀಕ್ಷೆಗೆ ಅರ್ಹತೆ ಪಡೆಯಲು ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕ ಪಡೆಯಬೇಕು.

2015 ರಲ್ಲಿ ಡಿ.ಕೆ.ಶಿವಕುಮಾರ್ ಇಂಧನ ಸಚಿವರಾಗಿದ್ದಾಗ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ಇತರ ತಾಂತ್ರಿಕ ಹುದ್ದೆಗಳ ನೇಮಕದಲ್ಲಿ ಕಡ್ಡಾಯ ಕನ್ನಡ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿತ್ತು. ಇದರಿಂದ 60 ಕ್ಕೂ ಹೆಚ್ಚು ಹುದ್ದೆಗಳು ಆಂಧ್ರಪ್ರದೇಶ ಸೇರಿದಂತೆ ಹೊರ ರಾಜ್ಯಗಳ ಅಭ್ಯರ್ಥಿಗಳ ಪಾಲಾಗಿತ್ತು. ಈ ಬಗ್ಗೆ ಕನ್ನಡಪರ ಸಂಘಟನೆಗಳು, ವಿದ್ಯಾರ್ಥಿ ಒಕ್ಕೂಟಗಳು ವಿರೋಧಿಸಿದ್ದರೂ ಪ್ರಯೋಜನ ಆಗಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

10ನೇ | ಪುಟ ನೋಡಿ

ಎಷ್ಟು ಹುದ್ದೆಗಳು?

ವೃಂದ	ಕಲ್ಯಾಣ ಕರ್ನಾಟಕ	ಮಿಕ್ಕುಳಿದ ವೃಂದ
ಸಹಾಯಕ ಎಂಜಿನಿಯರ್ (ವಿದ್ಯುತ್)	106	399
ಸಹಾಯಕ ಎಂಜಿನಿಯರ್ (ಸಿವಿಲ್)	7	21
ಕಿರಿಯ ಎಂಜಿನಿಯರ್ (ವಿದ್ಯುತ್)	84	486
ಕಿರಿಯ ಎಂಜಿನಿಯರ್ (ಸಿವಿಲ್)	8	21
ಕಿರಿಯ ಸಹಾಯಕ	3	357

ಮುಂಬೈ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಜಿ.ಎನ್. ಉಪಾಧ್ಯ ಬೇಸರ

‘ಕನ್ನಡಿಗರ ಧ್ವನಿ ರಾಜ್ಯದ ಗಡಿ ದಾಟುತ್ತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾಷೆಯ ಬೆಳವಣಿಗೆಗೆ ಇಲ್ಲಿ ಪ್ರತ್ಯೇಕ ಅಕಾಡೆಮಿ, ಪ್ರಾಧಿಕಾರಗಳು ಇವೆ. ಅದಾಗಿಯೂ ಕನ್ನಡ ಹಾಗೂ ಕನ್ನಡಿಗರ ಧ್ವನಿ ರಾಜ್ಯದ ಗಡಿ ದಾಟುತ್ತಿಲ್ಲ. ನಮ್ಮ ದೃಷ್ಟಿಕೋನಗಳು ಸೀಮಿತವಾಗುತ್ತಿರುವುದೇ ಇದಕ್ಕೆ ಪ್ರಮುಖ ಕಾರಣ’ ಎಂದು ವಿಮರ್ಶಕ ಹಾಗೂ ಮುಂಬೈ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಜಿ.ಎನ್.ಉಪಾಧ್ಯ ಬೇಸರ ವ್ಯಕ್ತಪಡಿಸಿದರು.

ಕನ್ನಡ ಜನಶಕ್ತಿ ಕೇಂದ್ರ, ನರಹಳ್ಳಿ ಪ್ರತಿಷ್ಠಾನ ಹಾಗೂ ಮೈಸೂರು ಅಸೋಸಿಯೇಷನ್ ಜಂಟಿಯಾಗಿ

ಜಿ.ಎನ್. ಉಪಾಧ್ಯ

ಆನ್‌ಲೈನ್ ವೇದಿಕೆಯಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರು 2021ನೇ ಸಾಲಿನ ‘ನರಹಳ್ಳಿ ಪ್ರಶಸ್ತಿ’ ಪ್ರದಾನ ಮಾಡಿದರು. ಪ್ರಶಸ್ತಿಯು ₹ 15 ಸಾವಿರ ನಗದು ಒಳಗೊಂಡಿದೆ.

‘ಉತ್ತರ ಭಾರತದ ರಾಜ್ಯದವರಿಗೆ ಕರ್ನಾಟಕದ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಬೆಂಗಳೂರು, ಮೈಸೂರಿನ ಬಗ್ಗೆ ಮಾತ್ರ ಅಲ್ಪಸ್ವಲ್ಪ ತಿಳಿದುಕೊಂಡಿದ್ದಾರೆ. ಕನ್ನಡ ಭಾಷೆಯು ರಾಷ್ಟ್ರಮಟ್ಟದಲ್ಲಿ ಬೆಳವಣಿಗೆ ಹೊಂದಿದರೆ ಕರ್ನಾಟಕದ ಬಗ್ಗೆ ತಿಳಿದುಕೊಳ್ಳಲು ಎಲ್ಲರೂ ಉತ್ಸುಕರಾಗುತ್ತಾರೆ. ಹೀಗಾಗಿ, ವಿಶಾಲ ದೃಷ್ಟಿಕೋನದೊಂದಿಗೆ ಕಾರ್ಯತತ್ಪರರಾಗಬೇಕು. ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನ ದೇಶದ ವಿವಿಧೆಡೆ ನಡೆಯುತ್ತದೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಸಾಹಿತಿಗಳನ್ನು ಆಹ್ವಾನಿಸಲಾಗುತ್ತದೆ. ಆದರೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ರಾಜ್ಯಕ್ಕೆ ಮಾತ್ರ ಸೀಮಿತವಾಗಿದೆ’ ಎಂದು ಜಿ.ಎನ್.ಉಪಾಧ್ಯ ತಿಳಿಸಿದರು.

‘ಈ ಹಿಂದೆ ಅಂತರರಾಷ್ಟ್ರೀಯ ಮಟ್ಟದ ಸಾಹಿತ್ಯ ಗೋಷ್ಠಿಗಳಲ್ಲಿ ಕನ್ನಡದ ಸಾಹಿತಿಗಳಿಗೆ ವಿಶೇಷ ಮನ್ನಣೆಯಿತ್ತು. ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಭೈರಪ್ಪ ಅವರ ಸಾಹಿತ್ಯದ ಬಗ್ಗೆ ಚರ್ಚೆ ನಡೆಯಿತು. ಹಾ.ಮಾ. ನಾಯಕರಂತಹವರು ರಾಷ್ಟ್ರಮಟ್ಟದಲ್ಲಿ ಕನ್ನಡ ಬೆಳೆಯುವಂತೆ ಮಾಡಿದರು. ಆದರೆ, ಈಗ ರಾಷ್ಟ್ರಮಟ್ಟದಲ್ಲಿ ಕನ್ನಡದ ವಕ್ತಾರರು ಇಲ್ಲ. ಕನ್ನಡಿಗರು ಇಲ್ಲಿಯವರನ್ನೇ ಗುರುತಿಸುವಲ್ಲಿ ಸೋಲುತ್ತಿದ್ದಾರೆ. ಕನ್ನಡ ಅಪಾಯ ಎದುರಿಸುತ್ತಿದೆ ಎಂದು ಬೊಬ್ಬೆ ಹಾಕುವುದರ ಬದಲು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕಾರ್ಯತತ್ಪರರಾಗಬೇಕು. ಸರ್ಕಾರ, ಅಕಾಡೆಮಿಗಳು ಕಣ್ಣು ತೆರೆದು ನೋಡಬೇಕು’ ಎಂದು ಹೇಳಿದರು.

ಮುಂಬೈ ಬಗ್ಗೆ ಮೋಹ: ಕವಿ ಹಾಗೂ ನರಹಳ್ಳಿ ಪ್ರತಿಷ್ಠಾನದ ಅಧ್ಯಕ್ಷ ಎಚ್.ಎಸ್. ವೆಂಕಟೇಶಮೂರ್ತಿ, ‘ನಾಡನ್ನು ಕಟ್ಟುವುದು ಸಾಹಿತ್ಯದ ಕೆಲಸ. ಮುಂಬೈ ಬಗ್ಗೆ ನಮಗೆ ವಿಶೇಷ ಮೋಹ ಇದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮುಂಬೈ ಕನ್ನಡಿಗರು ದೊಡ್ಡ ಕೊಡುಗೆ ನೀಡಿದ್ದಾರೆ. ಕರ್ನಾಟಕದ ಒಳಗಡೆಗಿಂತ ಹೊರಗಡೆ ಕನ್ನಡದ ದೀಪ ಹಚ್ಚುವುದು ಕಷ್ಟದ ಕೆಲಸ. ಉಪಾಧ್ಯ ಅಂತಹವರು ಈ ಕೆಲಸವನ್ನು ಉತ್ತಮವಾಗಿ ಮಾಡುತ್ತಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನರಹಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿ ಆನಂದರಾಮ ಉಪಾಧ್ಯ, ಪ್ರಶಸ್ತಿಯ ಸ್ಥಾಪಕರಾದ ನರಹಳ್ಳಿ ಬಾಲಸುಬ್ರಹ್ಮಣ್ಯ, ರಜನಿ ಬಾಲಸುಬ್ರಹ್ಮಣ್ಯ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಮತ್ತಿತರರು ಇದ್ದರು.

ಪ್ರಶಸ್ತಿ ಪ್ರದಾನ ದಾಸವಾಣಿ ಸಂಸ್ಥೆಯು ಮಲ್ಲೇಶ್ವರದ ಶ್ರೀರಾಮ ಮಂದಿರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಗೀತ ಕ್ಷೇತ್ರದ (ಕುಳಿತವರು ಎಡದಿಂದ) ದಿವ್ಯಾ ಗಿರಿಧರ್, ಮಾನಸಾ ಕುಲಕರ್ಣಿ ಹಾಗೂ ಚಂದ್ರಿಕಾ ಗಿರೀಶ್ ಅವರಿಗೆ ‘ಪುರಂದರ ನಮನ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಿನಿಮಾ ನಿರ್ದೇಶಕ ಮಧುಸೂದನ ಹವಾಲ್ದಾರ್, ಸಂಗೀತ ನಿರ್ದೇಶಕ ವಿಜಯ ಕೃಷ್ಣ, ಪ್ರಭಂಜನ ದೇಶಪಾಂಡೆ, ದಾಸವಾಣಿ ಸಂಸ್ಥೆಯ ಮುಖ್ಯಸ್ಥ ಜಯರಾಜ್ ಕುಲಕರ್ಣಿ ಇದ್ದಾರೆ

ಪ್ರಜಾವಾಣಿ ಚಿತ್ರ

CONNECT ಕ್ಲಾಸಿಫೈಡ್ಸ್

St. Joseph's Institute of Management
28/1, Primrose Road (off M G Road), Bengaluru - 560 025
First - Ever Business School in Karnataka (Estd. 1968)
SJIM
PGDM - 2022 (AICTE Approved)
Admissions Open
Exams Accepted: CAT XAT CMAT MAT
Specialisations Offered: Finance, Marketing, HR, Operations, Supply Chain Management
54 Years of Legacy, 10,000 + Alumni, 150 + Recruiters, Highest Package - 22 Lakhs (2022 Batch)
Apply Today
info@sjim.edu.in +91 99722 52765 www.sjim.edu.in
February Session Admissions close on 9 February 2022

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Call Centre

WALK-ININTERVIEW Position Experience Qualification Process Executive-Outbound Freshers/ Outbound experience 12th/ Diploma /Graduates•Candidates must befluent in Kannada / Telugu / Malayalam/ Tamil+ English•Preferably looking for candidates having experience in the outbound process•Permanent day shifts and Sunday fixed week offs •Salary is best in industry and performance-based Incentives Interested candidates may attend the interview along with a copy of their CV at our branch o rdroptheirCVtohr@goalcryst.com .Dates of walk-in Venue Time 7th February to 11th February Goalcryst India Pvt Ltd No 1478 SRT Tower 39hF Cross, Jayanagar 04hT Block Bangalore-560041 Phone No: 7795707505 10 am to 4 pm

Multiple Vacancy

REQ, TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

Wanted

St Aloysius Institute of Management and IT
Beeri, Kotekar, Mangalore 575022
Applications are invited from qualified candidates for the position of faculties in the following departments:
• MCA
• MSc Software Technology
• MSc Big Data Analytics
Qualification expected as per AICTE and UGC norms. Candidates with NET/KSET, Ph.D and good teaching skills and quality research publications preferred. Apply by e-mail before February 16, 2022 to: recruitments@staloysius.ac.in

Graphic Designers

WANTED DTP Operator/ Graphic Designer Corel Draw Illustrator & Photoshop for a Pvt Limited Company in around Rajajinagar Contact: 23307910/ 9108458798

Teachers/ Professors

WANTED TEACHERS 1st TO 10th English Medium, All Subjects “Sagar Convent” Kanakapura Main Road, B'lore-82, Near APS Engineer College: 9342557250

BgSE Financials Limited
STOCK AND SHARE BROKERS
No. 51, Stock Exchange Towers, 1st Cross, JC Road, Bangalore -560 027
SEBI Regn. No. INZ000095638 ARN - 2119
RTA Regn. No. INR000004041
(MEMBER OF NSE, BSE, MCX, DP OF NSDL & CDSL and category 1-RTA)
CIN: U67120KA1999PLC025860
• Open Free Demat and Trading Account - Offline / Online by clicking - www.bfsl.co.in
• Invest in Mutual Fund for long term goal / growth
• Trade in MCX-Gold / Silver / Other commodities
Contact: M: 7353760040 Tel: 080-66673310 / 66673333
Email: manager_mktg@bfsl.co.in | Visit: www.bfsl.co.in
Contact nearest investors service centre:
Mysore 8660290459 | Mangalore 8660321467 | Hubli 8660314806
Davanagere 8660473295 | Chitradurga 8660316458 | Shimoga 8660312675
Arsikere 8660523308 | Hosur 8660315064 | Chennai 8660286278
Tumkur 8660511075 | Harihara 8660507809 | Madikeri 8660315194
Dharwad 8660511854 | Hassan 8660325894 | Udupi 8660312689
Investment in securities market are subject to market risk, read all the related documents carefully before investing.

REAL ESTATE SELLING

Flat

J P Nagar

1100 SFT, North facing Semifurnished Flat for Sale at JP Nagar & Bank Loan Available, A-Khata & OC CC Available, Immediate ready to move, Owner going Abroad. Contact- 6362961311/ 9901050888

Villas/Bunglows

Sahakarnagar

FOR SALE PROPERTY WITH FABULOUS HOUSE SAHAKAR NAGAR BANGALORE SITE 1596 12Th MAIN B BLOCK 2KM FROM BRIGADE OPUS MAIN AIRPORT ROAD 40X60 PLOT SOUTH FACING ABOUT 4100 Sft BUILT UP BANGALOW THREE FLOORS FULLY FURNISHED CONTACT AGENT KRISHNA MURTHY 8277305783 BROKERS PLEASE EXCUSE.

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

WANTED INVESTER We Are Manufacturer, Pure Silk Sarees, Invester Get Good Profit in-our Business, 7899356649

PERSONAL

Change of Name

I, SUBRAMANYAM NAGARAJA, resident of No. A1055, Prestige Kensington Gardens, HMT Estate Jalahalli, Bangalore-560013 have changed my name to NAGARAJ SUBRAMANYAM Vide affidavit dated 03-02-2022 sworn before notary C. Srinivas, Bengaluru

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 7 ಮತ್ತು 8ರಂದು ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯ ಆಗಲಿರುವ ಸ್ಥಳಗಳು (ಬೆಳಿಗ್ಗೆ 10 ರಿಂದ 4): ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತು ಜಯಂತಿ ಕಾಲೇಜು, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್.ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಸಿ.ಎ.ಸ್.ಐ.ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್‌ಗ್ರೀನ್ ಲೇಔಟ್, ಕನಕಶ್ರೀ ಲೇಔಟ್, ಗೆದ್ದಲಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿ.ಎಚ್. ಕೆ.ಇಂಡಸ್ಟ್ರೀಸ್, ಜಾನಕಿರಾಮ್ ಲೇಔಟ್, ವಡ್ಡರಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮವಿದ್ಯಾನಗರ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಂ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಆಂಧ್ರ ಕಾಲೊನಿ, ಮಂಜುನಾಥ್ ನಗರ, ಹೊರಮಾವು ಬಿಬಿಎಂಪಿ, ಆಗರ ಗ್ರಾಮ, ಪಟಾಲಮ್ಮ ದೇವಸ್ಥಾನ, ಎ.ಕೆ. ಆರ್.ಸ್ಕೂಲ್, ಹೊಸ ಮಿಲೆನಿಯಂ ಸ್ಕೂಲ್, ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್, ಕ್ರಿಸ್ಟೈನ್ ಕಾಲೇಜು ರಸ್ತೆ.

ಶ್ರೀಗಂಧಕಾವಲ್‌ಕೇಂದ್ರ(ಬೆಳಿಗ್ಗೆ10ರಿಂದ5): ಸುಂಕದಕಟ್ಟೆ, ಕಾಮಾಕ್ಷಿಪಾಳ್ಯ, ಮಲ್ಲತ್ತಹಳ್ಳಿ, ನೀಲಗಿರಿ ತೋಪು, ಹೆಗ್ಗನಹಳ್ಳಿ, ಅನ್ನಪೂರ್ಣೇಶ್ವರಿ ನಗರ, ಪಟ್ಟೇಗಾರಪಾಳ್ಯ, ಕೆಂಗುಂಟೆ ಮತ್ತು ಸುತ್ತಲಿನ ಪ್ರದೇಶ.

ನಿವೃತ್ತ ಪ್ರಾಧ್ಯಾಪಕ ಭಕ್ತರಹಳ್ಳಿ ಕಾಮರಾಜ್ ಅಭಿಮತ

‘ಜಾತಿ–ಧರ್ಮ ವಿರೋಧಿಸಿದ್ದ ಪ್ರಾಚೀನ ಸಾಹಿತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನಲ್ಲಿ ಇಂದು ಹಿಂಸೆ, ದ್ವೇಷ ಕಾಣುತ್ತೇವೆ. ಧರ್ಮ, ಜಾತಿ, ಅಧಿಕಾರದ ಹೆಸರಿನಲ್ಲಿ ಕಿತ್ತಾಡುತ್ತಿದ್ದೇವೆ. ಪಂಪ, ರನ್ನ, ಜನ್ನ ಆಗಲೇ ತಮ್ಮ ಕೃತಿಗಳಲ್ಲಿ ಜಾತಿ–ಧರ್ಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು’ ಎಂದು ನಿವೃತ್ತ ಪ್ರಾಧ್ಯಾಪಕ ಭಕ್ತರಹಳ್ಳಿ ಕಾಮರಾಜ್ ತಿಳಿಸಿದರು.

ಬಂಡಾಯ ಸಾಹಿತ್ಯ ಸಂಘಟನೆ ಬೆಂಗಳೂರು ಜಿಲ್ಲೆ ಆಯೋಜಿಸಿದ್ದ ‘ಕನ್ನಡ ಸಾಹಿತ್ಯದಲ್ಲಿ ಜಾತಿ–ವರ್ಗ ವಿರೋಧ’ ಆನ್‌ಲೈನ್ ವಿಚಾರಗೋಷ್ಠಿಯಲ್ಲಿ ‘ಪ್ರಾಚೀನ ಕನ್ನಡ ಸಾಹಿತ್ಯ’ದ ಬಗ್ಗೆ ಮಾತನಾಡಿದರು. ‘ಪಂಪ, ರನ್ನ, ಜನ್ನ ರಾಜಾಶ್ರಯದಲ್ಲಿದ್ದರೂ ರಾಜರಿಗೆ ತಮ್ಮ ವ್ಯಕ್ತಿತ್ವವನ್ನು ಮಾರಿಕೊಂಡಿರಲಿಲ್ಲ. ರಾಜರಿಗೆ ಹತ್ತಿರವಿದ್ದರೂ ಅಂತರ ಕಾಯ್ದುಕೊಂಡಿದ್ದರು. ಪಂಪನು ‘ವಿಕ್ರಮಾರ್ಜುನ ವಿಜಯ’ ಗ್ರಂಥದಲ್ಲಿ ಕರ್ಣನ ಮೂಲಕ ಜಾತಿಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುತ್ತಾನೆ. ರನ್ನನ ‘ಗದಾಯುದ್ಧ’ದಲ್ಲಿ ಕೂಡ ಅವಕಾಶ ಸಿಕ್ಕಾಗಲೆಲ್ಲ ಜಾತಿ ವ್ಯವಸ್ಥೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಾಗಿದೆ. ಜನ್ನನ ‘ಯಶೋಧರ ಚರಿತೆ’ ಕೃತಿಯು ಸಮಾನತೆ ತತ್ವವನ್ನು ಎತ್ತಿಹಿಡಿಯುತ್ತದೆ’ ಎಂದು ಹೇಳಿದರು.

‘ಮಧ್ಯಕಾಲೀನ ಕನ್ನಡ ಸಾಹಿತ್ಯ’ದ ಬಗ್ಗೆ ಮಾತನಾಡಿದ ಲೇಖಕಿ ಪುಷ್ಪಭಾರತಿ, ‘ಸಮಾಜ ಪರಿಷ್ಕರಣೆಯ ಜಾಗೃತಿ ಹೊಣೆ ಹೊತ್ತು ಸಾಹಿತ್ಯ ಬೆಳೆದಿದೆ. 12ರಿಂದ 18ನೇ ಶತಮಾನವನ್ನು ಮಧ್ಯಕಾಲೀನ ಸಾಹಿತ್ಯದ ಘಟ್ಟ ಎಂದು ಗುರುತಿಸಲಾಗಿದೆ. ಸಾಹಿತ್ಯವನ್ನು ಶ್ರೀಸಾಮಾನ್ಯನ ಮಟ್ಟಕ್ಕೆ ತಂದದ್ದು ಈ ಕಾಲದಲ್ಲಿ. ಜನಸಾಮಾನ್ಯರ ಜೀವನದಲ್ಲಿ ಜಾತಿ ಮತ್ತು ಧರ್ಮ ಭದ್ರವಾಗಿ ತಳವೂರಿದೆ. ವಚನಕಾರರು ತಮ್ಮ ವಚನಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯವು ಜಾತಿ ಮತ್ತು ಧರ್ಮವನ್ನು ಪ್ರಬಲವಾಗಿ ವಿರೋಧ ಮಾಡಿದೆ’ ಎಂದರು.

‘ಆಧುನಿಕ ಕನ್ನಡ ಸಾಹಿತ್ಯ’ದ ಬಗ್ಗೆ ಮಾತನಾಡಿದ ರಾಜಪ್ಪ ದಳವಾಯಿ, ‘ಜಾತಿ–ಧರ್ಮದಿಂದ ಬಿಡುಗಡೆ ಹೊಂದುವ ಕೆಲಸವನ್ನು ಕನ್ನಡ ಸಾಹಿತ್ಯ ಮಾಡಿತು. ಲೇಖಕನಾದವನು ಅದನ್ನು ಮೀರಿರಬೇಕಾಗುತ್ತದೆ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕ್ಸೇವಿಯರ್ ಇನ್‌ಸ್ಟಿಟ್ಯೂಟ್‌ಗೆ ಅನಿಲ್ ಫಿಲಿಪ್ ಅಧ್ಯಕ್ಷ

ಬೆಂಗಳೂರು: ಕ್ಸೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಆಂತ್ರಪ್ರ್ಯೂನರ್‌ಶಿಪ್ (ಎಕ್ಸ್‌ಐಎಂಇ) ಸೊಸೈಟಿಯ ನೂತನ ಅಧ್ಯಕ್ಷರನ್ನಾಗಿ ಅನಿಲ್ ಕೆ. ಫಿಲಿಪ್ ಅವರನ್ನು ಆಯ್ಕೆ ಮಾಡಲಾಗಿದೆ. ಅವರು ಸಂಸ್ಥೆಯ ಉಪಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಕಾರ್ಪೊರೇಟ್ ಜಗತ್ತಿನಲ್ಲಿ ನಾಯಕತ್ವದ ಹುದ್ದೆಗಳನ್ನು ಕೂಡ ಅನಿಲ್ ಫಿಲಿಪ್ ನಿಭಾಯಿಸಿದ್ದಾರೆ. ಅವರು ವೊಡಾಫೋನ್ ಇಂಡಿಯಾ ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿದ್ದರು. ಐ.ಟಿ. ಮತ್ತು ದೂರಸಂಪರ್ಕ ಉದ್ದಿಮೆಯಲ್ಲಿ 25 ವರ್ಷಗಳಿಗಿಂತ ಹೆಚ್ಚಿನ ಅವಧಿಯ ಕೆಲಸದ ಅನುಭವ ಹೊಂದಿರುವ ಅನಿಲ್ ಫಿಲಿಪ್ ಅವರು ವಾಣಿಜ್ಯ ಶಿಕ್ಷಣಕ್ಕೆ ಹೊಸ ರೂಪ ನೀಡುವ ಗುರಿ ಹೊಂದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಯ (ಐಐಎಂ-ಬಿ) ನಿರ್ದೇಶಕರಾಗಿದ್ದ ಪ್ರೊ. ಜೆ. ಫಿಲಿಪ್ ಅವರು ಎಕ್ಸ್‌ಐಎಂಇ ಸ್ಥಾಪಿಸಿದರು. ಇದು ಈಗ ಬೆಂಗಳೂರು, ಕೊಚ್ಚಿ ಮತ್ತು ಚೆನ್ನೈನಲ್ಲಿ ಕ್ಯಾಂಪಸ್ ಹೊಂದಿದೆ.

ಮೀನುಗಾರಿಕೆ ಉಚಿತ ತರಬೇತಿ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮವು ಹೈನುಗಾರಿಕೆ ಹಾಗೂ ಮೀನುಗಾರಿಕೆ ವಲಯದಲ್ಲಿ ಉಚಿತ ತರಬೇತಿ ಹಾಗೂ ಸ್ವ ಉದ್ಯೋಗ ಕಲ್ಪಿಸಲು ನಿರ್ಧರಿಸಿದ್ದು, ಇದಕ್ಕಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

‘ಹೆಬ್ಬಾಳದ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ ಹಾಗೂ ಕರ್ನಾಟಕ ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಮೀನು ಕೃಷಿಕರಿಗೆ ಮೀನು ಮರಿಗಳ ಉತ್ಪಾದನೆ ಹಾಗೂ ಕಾರ್ಯನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತದೆ. ಅರ್ಜಿ ಸಲ್ಲಿಸುವವರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 18 ರಿಂದ 35 ವರ್ಷದೊಳಗಿನವರಾಗಿರಬೇಕು. ಅರ್ಹರಿಗೆ 25 ದಿನ ತರಬೇತಿ ಕೊಡಲಾಗುತ್ತದೆ. ಅರ್ಜಿ ಸಲ್ಲಿಸಲು ಇದೇ 10 ಕೊನೆಯ ದಿನ’ ಎಂದು ಪ್ರಕಟಣೆ ತಿಳಿಸಿದೆ.

https://skillconnect.kaushalkar.com/app/fishseedGrower ಮೂಲಕ ಹೆಸರು ಹಾಗೂ ವಿವರ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಇ-ಮೇಲ್: fricbangalore@gmail.com ಅಥವಾ 9945783906.

ಕೊಳೆಗೇರಿ ಅಭಿವೃದ್ಧಿಗೆ ಶ್ರಮಿಸಿ: ಜಿಲ್ಲಾಧಿಕಾರಿ ಮಂಜುನಾಥ್

ಬೆಂಗಳೂರು: ‘ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಕೊಳೆಗೇರಿಗಳ ಅಭಿವೃದ್ಧಿಗೆ ಶ್ರಮಿಸಬೇಕು. ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಪೋಲಾಗದಂತೆ ಎಚ್ಚರವಹಿಸಬೇಕು’ ಎಂದು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

‘ಬೆಂಗಳೂರು ಸೇರಿ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಧಿಸೂಚಿತವಲ್ಲದ ಹಲವು ಕೊಳೆಗೇರಿಗಳಿವೆ. ಅಲ್ಲಿ ಸಾವಿರಾರು ಮಂದಿ ವಾಸವಾಗಿದ್ದಾರೆ. ಅಲ್ಪಸಂಖ್ಯಾತರೇ ಹೆಚ್ಚಾಗಿ ನೆಲೆಸಿರುವ ಅಂತಹ ಕಾಲೊನಿ, ಕೇರಿ, ಮೊಹಲ್ಲಾಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ₹200 ಕೋಟಿ ಅನುದಾನ ಬಿಡುಗಡೆ ಮಾಡಿದೆ. ನಗರದಲ್ಲಿ ವಾಸಿಸುವ ಕೊಳೆಗೇರಿ ನಿವಾಸಿಗಳು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಅಂತಹ ಕೊಳೆಗೇರಿಗಳಲ್ಲಿ ಗುಣಮಟ್ಟದ ರಸ್ತೆ, ಚರಂಡಿ, ಕೊಳವೆ ಬಾವಿ, ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಬೇಕು’ ಎಂದು ತಿಳಿಸಿದರು.

ಜಿ.ಎಸ್.ಶಿವರುದ್ರಪ್ಪ ಅವರ ಭಾವಚಿತ್ರಕ್ಕೆ ಆರ್.ಜಿ.ಹಳ್ಳಿ ನಾಗರಾಜ್, ಸಂತೋಷ್ ಕುಮಾರ್ ಹೊಸಮನಿ, ಬಿ.ಟಿ.ಲಲಿತಾ ನಾಯಕ್, ಸಿ.ಸೋಮಶೇಖರ ಅವರು ಪುಷ್ಪ ನಮನ ಸಲ್ಲಿಸಿದರು

‘ಮಾನವೀಯ ಮೌಲ್ಯ ಕಾಪಾಡಿಕೊಂಡಿದ್ದ ಜಿಎಸ್‌ಎಸ್’

ಬೆಂಗಳೂರು: ‘ಮಾನವೀಯ ಮೌಲ್ಯಗಳನ್ನು ಬದುಕಿನುದ್ದಕ್ಕೂ ಕಾಪಾಡಿಕೊಂಡ ಕವಿ ಜಿ.ಎಸ್. ಶಿವರುದ್ರಪ್ಪ ಅವರು ಸಾರ್ವಜನಿಕ ಆಸ್ತಿ ಆಗಿದ್ದಾರೆ’ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ತಿಳಿಸಿದರು.

ಜಿ.ಎಸ್.ಶಿವರುದ್ರಪ್ಪ ಅವರ 97ನೇ ಹುಟ್ಟುಹಬ್ಬದ ಪ್ರಯುಕ್ತ ಪ್ರೊ.ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಶಿವರುದ್ರಪ್ಪ ಅವರ ಕಾವ್ಯದ ಜೀವ ದ್ರವ್ಯ. ಅವರು ಜಗತ್ತಿಗೆ ನೀಡಿದ ಸಂದೇಶ ಶಾಶ್ವತವಾಗಿ ಉಳಿದಿದೆ’ ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್, ‘ಶಿವರುದ್ರಪ್ಪ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ವಿದ್ವತ್ ಪೂರ್ಣವಾಗಿ ಕಟ್ಟಲು ಶ್ರೇಷ್ಠ ಚಿಂತಕರ ಪಡೆಯನ್ನೇ ತಮ್ಮ ಜತೆಯಲ್ಲಿ ಇಟ್ಟುಕೊಂಡಿದ್ದರು. ಉತ್ತಮ ಆಡಳಿತಗಾರರಾಗಿದ್ದ ಅವರು, ಹೊಸತನ್ನು ಕಟ್ಟಿ ಬೆಳೆಸುವುದರಲ್ಲಿ ಸದಾ ಆಸಕ್ತಿ ಹೊಂದಿದ್ದರು. ಕವಿ, ವಿಮರ್ಶಕರಾಗಿ ಜನಪರ ಚಳವಳಿಗಳಿಗೆ ತಮ್ಮ ವಿಭಾಗದ ಸಹೋದ್ಯೋಗಿಗಳನ್ನು ಪ್ರೋತ್ಸಾಹಿಸಿದ್ದರು’ ಎಂದು ಹೇಳಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ ಕುಮಾರ್ ಹೊಸಮನಿ, ‘ಸಾಮಾಜಿಕ ಬದಲಾವಣೆಗೆ ಸಾಹಿತ್ಯ ಕೃತಿಗಳನ್ನು ಓದಬೇಕು. ಕವಿ ಜಿಎಸ್‌ಎಸ್ ಅವರು ಜನಪರ ಆಶಯಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**ಕಕ್ಷಿದಾರ**) ಈ ಕೆಳಕಂಡ “ಷೆಡ್ಯೂಲ್” ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **“ಷೆಡ್ಯೂಲ್ ಸ್ವತ್ತುಗಳು”** ಎಂದು ಕರೆಯಲ್ಪಡುವ, ಸ್ಥಿರಾಸ್ಥಿ ಸ್ವತ್ತುಗಳ ಸಂಬಂಧ ವ್ಯವಹರಿಸಲು ಮುಂದಾಗಿದ್ದು ಈ ಕೆಳಗೆ ಷೆಡ್ಯೂಲ್ ನಲ್ಲಿ ವಿವರಿಸಿರುವ ಮಾಲೀಕರುಗಳು ತಮ್ಮ ಭಾಗದ ಸ್ವತ್ತುಗಳಿಗೆ ನಾವುಗಳೇ ಏಕಮೇವ ಮತ್ತು ನಿರುಪಾಧಿಕ ಮಾಲೀಕರೆಂದೂ ಹಾಗೂ ಷೆಡ್ಯೂಲ್ ಸ್ವತ್ತುಗಳನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರುಗಳು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಕೆಳಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ ಅಥವಾ ಮತ್ತಾವುದೇ ಕ್ಲೇಮ್‌ಗಳನ್ನು, ಹೊಂದಿದ್ದಲ್ಲಿ, ಅಂತಹ ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಅವಧಿಯೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಮೇಲ್ಕಂಡ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಕೆಳಗೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹೊಸೂರು ಗ್ರಾಮದಲ್ಲಿರುವ ಸ್ಥಿರಾಸ್ಥಿಯ ಸ್ವತ್ತುಗಳ ಒಟ್ಟಾರೆ ವಿಸ್ತೀರ್ಣ 04 ಎಕರೆ 07 ಗುಂಟೆಗಳ ಸಂಪೂರ್ಣ ಜಮೀನುಗಳ ವಿವರಗಳನ್ನು ಈ ಕೆಳಗಿನ ಟೇಬಲ್‌ನಲ್ಲಿ ತಿಳಿಸಲಾಗಿದೆ.

ಕ್ರಮ ಸಂಖ್ಯೆ	ಸರ್ವೆ ನಂ	ವಿಸ್ತೀರ್ಣ		ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :	ಮಾಲೀಕರ ಹೆಸರು
		ಎಕರೆ	ಗುಂಟೆ					
1	393/3	01	28.5	ಶ್ರೀ ಕೆ.ಎಸ್. ರಾಮ್‌ಬಾಬು ರವರಿಗೆ ಸೇರಿದ ಸ್ವತ್ತು;	ಶ್ರೀ ಹೆಚ್.ಕೆ. ಶಿವರಾಜು ರವರಿಗೆ ಸೇರಿದ ಸ್ವತ್ತು;	ಶ್ರೀಮತಿ ನಂಜಮ್ಮ ಮತ್ತು ಶ್ರೀ ರಾಮಣ್ಣ ರವರಿಗೆ ಸೇರಿದ ಸ್ವತ್ತು; ಮತ್ತು	ಶ್ರೀ ನಿಂಗಪ್ಪ ಮತ್ತು ಶ್ರೀ ಶಿವಣ್ಣ ರವರಿಗೆ ಸೇರಿದ ಸ್ವತ್ತು.	ಶ್ರೀ. ಉಮೇಶ್ ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ.
2	393/4	01	28.5	ಶ್ರೀ ದೇವರಾಜ್‌ರವರಿಗೆ ಸೇರಿದ ಹಿಂದಿನ ಸ್ವತ್ತು;	ಶ್ರೀ ಸಿದ್ದಪ್ಪ ರವರಿಗೆ ಸೇರಿದ ಸ್ವತ್ತು;	ಶ್ರೀ ರಾಮಯ್ಯ ರವರಿಗೆ ಸೇರಿದ ಸ್ವತ್ತು; ಮತ್ತು	ಶ್ರೀ ನಿಂಗಪ್ಪ ರವರಿಗೆ ಸೇರಿದ ಸ್ವತ್ತು.	(1) ಶ್ರೀಮತಿ ಗಾಯತ್ರಿ ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ. (2) ಶ್ರೀ. ಉಮೇಶ್ ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ. (3) ಶ್ರೀ ರಾಮ್‌ಬಾಬು ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ.
3	393/5	00	30	ಗಾಡಿ ರಸ್ತೆ;	ಶ್ರೀ ಲಿಂಗಪ್ಪ ರವರಿಗೆ ಸೇರಿದ ಸ್ವತ್ತು;	ಗಾಡಿ ರಸ್ತೆ; ಮತ್ತು	ಶ್ರೀ ವೆಂಕಟರಾವ್ ಸಿಂಧ್ಯ ರವರಿಗೆ ಸೇರಿದ ಸ್ವತ್ತು.	(1) ಶ್ರೀಮತಿ ಗಾಯತ್ರಿ ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ. (2) ಶ್ರೀ. ಉಮೇಶ್ ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ. (3) ಶ್ರೀ ರಾಮ್‌ಬಾಬು ಕೆ.ಎಸ್. ಬಿನ್ ಲೇಟ್ ಶ್ರೀ. ಶ್ರೀನಿವಾಸ ಮೂರ್ತಿ ಎ.

ಸಹಿ/– **ಶ್ರೀನಿವಾಸ್ ಬಿ.ಆರ್. ಮತ್ತು ಬ್ರಿಜಿತ ಪ್ರಕಾಶ್** ಪಾಲುದಾರರು
ದುಅ ಅಸೋಸಿಯೇಟ್ಸ್,
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಅಲಸೂರು ರಸ್ತೆ, ಬೆಂಗಳೂರು–560 042.
ದೂ. ಸಂ. 91-80-25588799/ 25589909, ಫ್ಯಾಕ್ಸ್ : 91-80-25588801.

ದಿನಾಂಕ: 07.02.2022
ಸ್ಥಳ : ಬೆಂಗಳೂರು

ಉಪ ತಹಶೀಲ್ದಾರ್ ಅಮಾನತು

ಹರಪನಹಳ್ಳಿ: ಕಾನೂನುಬಾಹಿರವಾಗಿ ವಿವಿಧ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದ ಜಮೀನುಗಳ ಹಕ್ಕು ಬದಲಿಸಿದ ಆರೋಪದಡಿ ಚಿಗಟೇರಿ ಹೋಬಳಿ ಉಪ ತಹಶೀಲ್ದಾರ್ ಎಸ್.ಚಂದ್ರಶೇಖರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಕಲಬುರಗಿ ವಿಭಾಗೀಯ ಪ್ರಾದೇಶಿಕ ಆಯುಕ್ತರು ಆದೇಶಿಸಿದ್ದಾರೆ.

ಹರಪನಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ಮೂರು ಸರ್ವೆ ನಂಬರ್‌ಗಳು ಮತ್ತು ಅಡವಿಹಳ್ಳಿ ವಿವಿಧೆಡೆ ಎಂಟು ಸರ್ವೆ ನಂಬರ್ ನಲ್ಲಿದ್ದ ಜಮೀನುಗಳ ಹಕ್ಕು ಬದಲಾವಣೆಗೆ ಛಾಪಾ ಕಾಗದದಲ್ಲಿದ್ದ ನೈಜ ವಂಶವೃಕ್ಷ ಪ್ರಮಾಣಪತ್ರ ಪರಿಶೀಲಿಸದೇ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ತನಿಖೆ ನಡೆಸಿದ ಅಧಿಕಾರಿಗಳು ವಿಚಾರಣೆ ಕಾಯ್ದಿರಿಸಿ, ಅಮಾನತುಗೊಳಿಸಿದ್ದಾರೆ. ಉಪ ತಹಶೀಲ್ದಾರ್ ಅವರಿಗೆ ಕೇಂದ್ರ ಸ್ಥಾನ ತೊರೆಯದಂತೆ ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ

ಕಾಡುಗೊಲ್ಲ: ಎಸ್‌.ಟಿಗೆ ಸೇರಿಸಲು ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಮೀಸಲಾತಿ ಸೌಲಭ್ಯ ಕಲ್ಪಿಸಲು ಪ್ರಯತ್ನಿಸುತ್ತೇನೆ. ಈ ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೊತೆಗೂ ಚರ್ಚಿಸುತ್ತೇನೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ನಾವು ಕಾಡುಗೊಲ್ಲರು' ಸಾಕ್ಷ್ಯ ಚಿತ್ರ ಬಿಡುಗಡೆ ಮಾಡಿ ಭಾನುವಾರ ಮಾತನಾಡಿದರು.

'ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಸಿರಿತನವಿದೆ. ಈ ಸಮುದಾಯದವರು ಮನುಕುಲಕ್ಕೆ ಮಾದರಿಯಾಗಿ ಬಾಳುತ್ತಿದ್ದಾರೆ. ಸ್ವಾತಂತ್ರ್ಯ ನಂತರದ ಎಲ್ಲಾ ಸರ್ಕಾರಗಳೂ ಇವರನ್ನು ಕಡೆಗಣಿಸಿವೆ. ಮೈಸೂರು ವಿಶ್ವವಿದ್ಯಾಲಯವು ಕಾಡುಗೊಲ್ಲರ ಇತಿಹಾಸವನ್ನು ಕಲೆಹಾಕುವ ಕೆಲಸ ಮಾಡಿದೆ. ಈ ಕುರಿತಾದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇನೆ' ಎಂದರು.

'ಕಾಡುಗೊಲ್ಲರು ನೆಲೆಸಿರುವ ಪ್ರದೇಶವನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಅವರಿಗೆ ಹಕ್ಕುಪತ್ರ ನೀಡಬೇಕು. ಈ ಸಮುದಾಯದವರಿಗಾಗಿ 15 ಎಕರೆ ಭೂಮಿ ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ' ಎಂದು ಹೇಳಿದರು.

ಕಾಡುಗೊಲ್ಲರ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಣ್ಣ ಅವರು ಮಾತನಾಡಿ, 'ನಮ್ಮ ಜನಾಂಗ ಆರ್ಥಿಕವಾಗಿ ಹಿಂದುಳಿದಿದೆ. ಸಮುದಾಯವನ್ನು ಎಸ್‌.ಟಿ.ಗೆ ಸೇರಿಸಬೇಕೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದ್ದೇವೆ. ಅಗತ್ಯ ಮೌಲಸೌಕರ್ಯ ಕಲ್ಪಿಸುವ ಜೊತೆಗೆ ಕಾಡಂಚಿನ ಹಟ್ಟಿಗಳಲ್ಲಿ ವಾಸಿಸುತ್ತಿರುವ ಸಮುದಾಯದ ಜನರಿಗೆ ಹಕ್ಕು ಪತ್ರ ನೀಡುವಂತೆಯೂ ಕೋರಲಾಗಿದೆ' ಎಂದು ತಿಳಿಸಿದರು.

'ಸಮುದಾಯದ ಜನ ಶಿಕ್ಷಣ, ವಸತಿ, ಉದ್ಯೋಗವಕಾಶಗಳಿಂದ ವಂಚಿತರಾಗಿದ್ದಾರೆ. ಜನರ ಜೀವನದ ವಾಸ್ತವತೆಯನ್ನು ತೋರಿಸುವ ಸಲುವಾಗಿಯೇ ಸಾಕ್ಷ್ಯಚಿತ್ರ ನಿರ್ಮಿಸಲಾಗಿದೆ. ಚಿತ್ರದುರ್ಗ, ತುಮಕೂರು, ಪಾವಗಡ, ಶಿರಾ, ಕೂಡ್ಲಿಗಿ, ಕೊರಟಗೆರೆಯಲ್ಲಿ ಹೆಚ್ಚಾಗಿ ವಾಸಿಸುವ ಸಮುದಾಯದ ಜನರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಪ್ರಯತ್ನಿಸಬೇಕು' ಎಂದು ತಿಳಿಸಿದರು. ಮುಖಂಡರಾದ ಉಮಾಪತಿ, ಮಹಲಿಂಗಪ್ಪ, ದೇವರಾಜು, ಬಸವರಾಜ್, ತಿಮ್ಮಯ್ಯ, ಗುರುಲಿಂಗಯ್ಯ, ಸಿದ್ದೇಶ್, ಮುರಳಿ, ದೊಡ್ಡಪ್ಪ, ವಿಶ್ವನಾಥ, ರಂಗಸ್ವಾಮಿ, ಪೂಜಾರಪ್ಪ ಇದ್ದರು.

ಸಚಿವ ಎ.ನಾರಾಯಣಸ್ವಾಮಿ 'ನಾವು ಕಾಡುಗೊಲ್ಲರು' ಸಾಕ್ಷ್ಯಚಿತ್ರದ ಸಿ.ಡಿ. ಬಿಡುಗಡೆ ಮಾಡಿದರು. ನಿರ್ದೇಶಕ ಎ.ಆರ್‌. ನಂಜುಂಡೇಗೌಡ, ಕಾಡುಗೊಲ್ಲರ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಣ್ಣ, ನಿರ್ಮಾಪಕ ದೊಡ್ಡನಾಗಯ್ಯ ಇದ್ದಾರೆ– ಪ್ರಜಾವಾಣಿ ಚಿತ್ರ

ದರೋಡೆಗೆ ಸಂಚು: ಕುಳ್ಳ ರಿಜ್ವಾನ್ ಸಹಚರರ ಬಂಧನ

ಬೆಂಗಳೂರು: ಹನುಮಂತನಗರದ ಸುಂಕೇನಹಳ್ಳಿಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ದರೋಡೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ಕುಳ್ಳ ರಿಜ್ವಾನ್‌ನ ನಾಲ್ವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬ್ಯಾಟರಾಯನಪುರದ ದಿಲೀಪ್, ಕೇಶವ್, ಮಾಗಡಿ ರಸ್ತೆಯ ಅಜಿತ್ ಹಾಗೂ ಹರೀಶ್ ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಬಳಿಯ ಖಾಲಿ ಜಾಗದಲ್ಲಿ ಸೇರಿದ್ದ ಆರೋಪಿಗಳು, ರಸ್ತೆಯಲ್ಲಿ ಬರುವ ಸಾರ್ವಜನಿಕರನ್ನು ಅಡ್ಡಗಟ್ಟಲು ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಭಾರತದ ಕೋಗಿಲೆಗೆ ನಮನಗಳು!!

ರಾಜ್‌ಕುಮಾರ್ ಪುತ್ಥಳಿ ಕಳವು

ಬೆಂಗಳೂರು: ಲುಂಬಿನಿ ಉದ್ಯಾನದಲ್ಲಿದ್ದ ನಟ ರಾಜ್‌ಕುಮಾರ್ ಅವರ ಕಂಚಿನ ಪುತ್ಥಳಿ ಕಳ್ಳತನವಾಗಿದ್ದು, ಈ ಬಗ್ಗೆ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪುತ್ಥಳಿ ಕಳ್ಳತನ ಬಗ್ಗೆ ಅರಣ್ಯ ಅಧಿಕಾರಿ ಯೋಗೇಶ್ ಎಂಬುವರು ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಳ್ಳತನ ಆರೋಪದಡಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲುಂಬಿನಿ ಉದ್ಯಾನವನ್ನು ಅರಣ್ಯ ಇಲಾಖೆ ನಿರ್ವಹಣೆ ಮಾಡುತ್ತಿದೆ. ರಾಜ್‌ಕುಮಾರ್ ನೆನಪಿಗಾಗಿ ಕೆಲ ತಿಂಗಳ ಹಿಂದೆ ಕಂಚಿನ ಪುತ್ಥಳಿ ಅನಾವರಣಗೊಳಿಸಲಾಗಿತ್ತು. ಜ. 24ರಂದು ಯಾರೋ ದುಷ್ಕರ್ಮಿಗಳು, ಪುತ್ಥಳಿ ಕದ್ದುಕೊಂಡು ಹೋಗಿರುವುದಾಗಿ ಅರಣ್ಯ ಅಧಿಕಾರಿ ದೂರಿನಲ್ಲಿ ತಿಳಿಸಿದ್ದಾರೆ' ಎಂದೂ ತಿಳಿಸಿವೆ.

ಶ್ವಾನದ ಮೇಲೆ ಕಾರು ಹರಿಸಿ ಚಾಲಕ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾಕ್ಸ್‌ಟೌನ್ ಬಳಿಯ ರಸ್ತೆಯಲ್ಲಿ ಮಲಗಿದ್ದ ಶ್ವಾನವೊಂದರ ಮೇಲೆ ಕಾರು ಹರಿಸಿ ಚಾಲಕ ಪರಾರಿಯಾಗಿದ್ದು, ಈ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ರಸ್ತೆಯ ಪಕ್ಕದಲ್ಲಿ ಶ್ವಾನ ಮಲಗಿತ್ತು. ಅದೇ ರಸ್ತೆಯಲ್ಲಿ ವೇಗವಾಗಿ ಕಾರು ಚಲಾಯಿಸಿಕೊಂಡು ಬಂದಿದ್ದ ಚಾಲಕ, ಶ್ವಾನದ ಮೇಲೆ ಹರಿಸಿದ್ದ. ಶ್ವಾನ ನರಳಾಡುತ್ತಿತ್ತು. ನಂತರ, ಕಾರಿನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಈ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ. ಮನೆಯೊಂದರ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ವಿಡಿಯೊವನ್ನು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. 'ಶ್ವಾನದ ಮೇಲೆ ಕಾರು ಹರಿಸಿದವನನ್ನ ಹಿಡಿದು, ಕಾನೂನು ಕ್ರಮ ಕೈಗೊಳ್ಳಿ' ಎಂದೂ ಆಗ್ರಹಿಸಿದ್ದಾರೆ.

ಜಯನಗರ ಒಂದನೇ ಹಂತದಲ್ಲಿ ಜ. 29ರಂದು ಕಾರು ಹರಿಸಿ ಶ್ವಾನವನ್ನು ಸಾಯಿಸಲಾಗಿತ್ತು. ಈ ಬಗ್ಗೆ ದೂರು ದಾಖಲಿಸಿಕೊಂಡಿದ್ದ ಪೊಲೀಸರು, ಉದ್ಯಮಿ ಆದಿಕೇಶವಲು ಮೊಮ್ಮಗ ಆದಿಯನ್ನು ಬಂಧಿಸಿದ್ದರು.

ಕನ್ನಡ ಹಾಡಿಗೆ ಬೇಡಿಕೆ: ಪಬ್‌ನಲ್ಲಿ ಹಲ್ಲೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಪಬ್‌ವೊಂದರಲ್ಲಿ ಕನ್ನಡ ಹಾಡಿನ ವಿಚಾರವಾಗಿ ಗಲಾಟೆ ನಡೆದಿದ್ದು, ಯುವತಿ ಹಾಗೂ ಅವರ ಸಹೋದರನ ಮೇಲೆ ಹಲ್ಲೆಗೆ ಯತ್ನಿಸಿರುವ ಆರೋಪ ಕೇಳಿಬಂದಿದೆ.

'ನಗರದ ನಿವಾಸಿಯಾಗಿರುವ ಯುವತಿಯೊಬ್ಬರು ತಮ್ಮ ಹುಟ್ಟುಹಬ್ಬವಿದ್ದಿದ್ದರಿಂದ ಸಹೋದರ ಹಾಗೂ ಸ್ನೇಹಿತರ ಜೊತೆ ಕೋರಮಂಗಲದ 80 ಅಡಿ ರಸ್ತೆಯಲ್ಲಿರುವ 'ಬದ್ಮಾಷ್' ಪಬ್‌ಗೆ ಶನಿವಾರ (ಫೆ. 5) ರಾತ್ರಿ ಹೋಗಿದ್ದರು. ಅದೇ ಸಂದರ್ಭದಲ್ಲೇ ಕನ್ನಡ ಹಾಡಿನ ವಿಚಾರವಾಗಿ ಮಾತಿನ ಚಕಮಕಿ ನಡೆದಿರುವ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಬ್‌ನಲ್ಲಿ ಪರಭಾಷೆ ಹಾಡುಗಳನ್ನು ಹಾಕಲಾಗಿತ್ತು. ಅದನ್ನು ಪ್ರಶ್ನಿಸಿದ್ದ ಯುವತಿ, ಕನ್ನಡ ಹಾಡು ಹಾಕುವಂತೆ ಹೇಳಿದ್ದರು. ಅದಕ್ಕೆ ಒಪ್ಪದ ಪಬ್ ಸಿಬ್ಬಂದಿ, ಯುವತಿ ಮೇಲೆ ಹರಿಹಾಯ್ದಿದ್ದರು. ಮಧ್ಯಪ್ರವೇಶಿಸಿದ್ದ ಸಹೋದರನ ಮೇಲೂ ಹಲ್ಲೆಗೆ ಯತ್ನಿಸಿದ್ದರೆಂದು ಯುವತಿ ಕಡೆಯವರು ಹೇಳುತ್ತಿದ್ದಾರೆ.'

'ಪಬ್‌ನಲ್ಲಿ ನಡೆದ ವಾಗ್ವಾದ ಹಾಗೂ ಗಲಾಟೆ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನು ಸುಪರ್ದಿಗೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿವೆ.

'ಘಟನೆ ಬಗ್ಗೆ ದೂರು ನೀಡಿದರೂ ಪಬ್ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ' ಎಂಬುದಾಗಿ ಯುವತಿ ಸ್ನೇಹಿತರು ದೂರಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಬದ್ಮಾಷ್ ಪಬ್ ವ್ಯವಸ್ಥಾಪಕ ಡೊಮಿನಿಕ್, 'ನಾವೂ ಕನ್ನಡ ಅಭಿಮಾನಿಗಳು. ಕನ್ನಡ ಹಾಡು ಹಾಕುತ್ತೇವೆ. ಆದರೆ, ಶನಿವಾರ ರಾತ್ರಿ ತಪ್ಪಾಗಿದೆ. ಕ್ಷಮೆ ಕೋರುತ್ತೇನೆ. ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆ. ತಪ್ಪು ಮಾಡಿದ ಪಬ್ ಸಿಬ್ಬಂದಿ ವಿರುದ್ಧ ಆಡಳಿತ ಮಂಡಳಿ ಕ್ರಮ ಕೈಗೊಳ್ಳುತ್ತದೆ' ಎಂದು ಹೇಳಿದ್ದಾರೆ.

ಅಪರಾಧ ಸುದ್ದಿ

ದ್ವಿಚಕ್ರ ವಾಹನ ವ್ಹೀಲಿಂಗ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ವ್ಹೀಲಿಂಗ್ ಮಾಡಿ ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ಯತ್ನಿಸಿದ ಆರೋಪದಡಿ ಮೂವರನ್ನು ನಗರದ ಸಂಚಾರ ಪೊಲೀಸರು ಬಂಧಿಸಿದ್ದಾರೆ.

'ಗೌರವ್, ಶ್ರೇಯಸ್ ಬಂಧಿತರು. ಇನ್ನೊಬ್ಬನ ಹೆಸರು ಗೋಪ್ಯವಾಗಿರಿಸಲಾಗಿದೆ. ಆತನ ಜೊತೆಗಿದ್ದ ಮತ್ತೊಬ್ಬ ಆರೋಪಿಯನ್ನು ಪತ್ತೆ ಹಚ್ಚಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಯನಗರದ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೊರಟಿದ್ದ ಸವಾರ ಗೌರವ್ ಹಾಗೂ ಹಿಂಬದಿ ಸವಾರ ಶ್ರೇಯಸ್, ವ್ಹೀಲಿಂಗ್ ಮಾಡಿದ್ದರು. ಅಕ್ಕ-ಪಕ್ಕದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿತ್ತು. ಅಪಘಾತವಾಗುವ ಸಾಧ್ಯತೆ ಇತ್ತು.'

'ಆರೋಪಿಗಳನ್ನು ಹಿಡಿದಿದ್ದ ಪೊಲೀಸರು, ಪರಿಶೀಲನೆ ನಡೆಸಿದ್ದರು. ಅವರ ಬಳಿ ಚಾಲನಾ ಪರವಾನಗಿಯೂ ಇರಲಿಲ್ಲ. ಹೀಗಾಗಿ, ವ್ಹೀಲಿಂಗ್ ಪ್ರಕರಣದಲ್ಲಿ ಇಬ್ಬರನ್ನೂ ಬಂಧಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಇನ್ನೊಂದು ಪ್ರಕರಣದಲ್ಲಿ, ಗೋವಿಂದಪುರ ಜಂಕ್ಷನ್ ಬಳಿ ವ್ಹೀಲಿಂಗ್ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ. ಆತ ವ್ಹೀಲಿಂಗ್ ಮಾಡುತ್ತಿದ್ದ ದೃಶ್ಯವನ್ನು ಸೆರೆಹಿಡಿದಿದ್ದ ಸ್ಥಳೀಯರು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದರು. ಅದನ್ನು ಆಧರಿಸಿ ಪ್ರಕರಣ ಸಹ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ನಾದಿನಿ ಮೇಲೆ ಅತ್ಯಾಚಾರ: ಭಾವನ ಬಂಧನ

ಕುಂಸಿ: ಭಾವನಿಂದ ಅತ್ಯಾಚಾರಕ್ಕೊಳಗಾಗಿ ಗರ್ಭವತಿಯಾಗಿದ್ದ ಯುವತಿಗೆ ಏಳು ತಿಂಗಳ ಗಂಡು ಮಗು ಜನಿಸಿದ ಮೂರು ದಿನಗಳ ನಂತರ ಸಾವನ್ನಪ್ಪಿರುವ ಪ್ರಕರಣ ಬೆಳಕಿಗೆ ಬಂದಿದೆ.

ಇಲ್ಲಿಗೆ ಸಮೀಪದ ಗ್ರಾಮವೊಂದರ ಹದಿನೆಂಟು ವರ್ಷದ ಯುವತಿ ತನ್ನ ತಾಯಿಯ ಅಕ್ಕನ ಮಗಳ ಗಂಡನ ಮನೆಯಲ್ಲಿ ಆರನೇ ತರಗತಿಯಿಂದಲೂ ಓದುತ್ತಿದ್ದಳು. 10ನೇ ತರಗತಿಯಲ್ಲಿ ಅನುತ್ತೀರ್ಣಳಾಗಿದ್ದ ಯುವತಿ, ಅಕ್ಕ-ಭಾವನ ಮನೆಯಲ್ಲಿಯೇ ಇದ್ದಳು. ಈ ಸಂದರ್ಭದಲ್ಲಿ ಯುವತಿ ಮೇಲೆ ಭಾವ ಅತ್ಯಾಚಾರ ಎಸಗಿದ್ದಾನೆ.

ನಂತರ ಯುವತಿ ತನ್ನ ಊರಿಗೆ ವಾಪಸ್ ಬಂದಿದ್ದಳು. ಎಂಟು ತಿಂಗಳ ಬಳಿಕ ತೀವ್ರ ಹೊಟ್ಟೆನೋವು ಕಾಣಿಸಿಕೊಂಡಿದ್ದರಿಂದ ಕುಟುಂಬದವರು ಯುವತಿಯನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಆಕೆ ಗರ್ಭವತಿಯಾಗಿರುವುದು ತಿಳಿದುಬಂದಿದೆ. ಯುವತಿಗೆ ಗಂಡು ಮಗು ಜನಿಸಿದ್ದು, ಮಗು ಬದುಕುಳಿಯಲಿಲ್ಲ.

ಈ ಸಂಬಂಧ ಕುಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.





ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ನಿರ್ವಹಣೆ ಇಲ್ಲದ ಬಸ್ ತಂಗುದಾಣ

ಮೇಡಹಳ್ಳಿ ಬಸ್ ತಂಗುದಾಣದ ದುಸ್ಥಿತಿ

ಮೇಡಹಳ್ಳಿ ಗ್ರಾಮದಲ್ಲಿ ಹೆಸರಿಗೆ ಮಾತ್ರ ಬಸ್ ತಂಗುದಾಣವಿದೆ. ಸರಿಯಾದ ನಿರ್ವಹಣೆ ಇಲ್ಲದೆ ಕಸ ಮತ್ತು ದೂಳಿನಿಂದ ತುಂಬಿಕೊಂಡಿದೆ. ತಂಗುದಾಣದ ತುಂಬ ನಾಮಫಲಕಗಳು ಹಾಗೂ ಜಾಹೀರಾತು ಫಲಕಗಳನ್ನು ಅಂಟಿಸಿ ಮತ್ತಷ್ಟು ಹಾಳು ಮಾಡಲಾಗಿದೆ. ತಂಗುದಾಣದಲ್ಲೇ ಕಸಕ್ಕೆ ಬೆಂಕಿ ಹಾಕುತ್ತಾರೆ.

ಈ ಎಲ್ಲ ಕಾರಣಗಳಿಂದ ಪ್ರಯಾಣಿಕರು ತಂಗುದಾಣದ ಅಂತರ ಕಾಯ್ದುಕೊಳ್ಳುತ್ತಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಸ್ಥಳೀಯ ಜನಪ್ರತಿನಿಧಿಗಳೂ ಇತ್ತ ಮುಖ ಮಾಡುವುದಿಲ್ಲ. ಬಸ್ ತಂಗುದಾಣವನ್ನು ಸ್ವಚ್ಛಗೊಳಿಸಿ, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು.

ಕಿರಣ್, ಮೇಡಹಳ್ಳಿ

ಬಿಇಎಲ್ ವೃತ್ತ: ಬಸ್‌ಗಳಲ್ಲಿ ನೂಕುನುಗ್ಗಲು

ಬಿಇಎಲ್ ವೃತ್ತದಲ್ಲಿ ಬಸ್ ಹತ್ತಲು ನೂಕುನುಗ್ಗಲು

ಬಿಇಎಲ್ ವೃತ್ತದಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರು ಸದಾ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ವೇಳೆ ನೂರಾರು ವಿದ್ಯಾರ್ಥಿಗಳು ಮತ್ತು ಕೆಲಸಗಳಿಗೆ ತೆರಳುವವರು ಈ ವೃತ್ತದಲ್ಲಿ ಬಸ್‌ಗಾಗಿ ಕಾಯುತ್ತಾರೆ. ಈ ಮಾರ್ಗಗಳಲ್ಲಿ ಸಂಚರಿಸುವ ಬಹುತೇಕ ಬಿಎಂಟಿಸಿ ಬಸ್‌ಗಳೆಲ್ಲ ಸದಾ ಪ್ರಯಾಣಿಕರಿಂದ ಭರ್ತಿಯಾಗಿರುತ್ತವೆ.

ಬಸ್‌ಗಳ ಪ್ರವೇಶದ್ವಾರದವರೆಗೆ ಪ್ರಯಾಣಿಕರು ನಿಂತು ಪ್ರಯಾಣಿಸುವ ದೃಶ್ಯಗಳು ಇಲ್ಲಿ ಸಾಮಾನ್ಯ. ತುರ್ತು ಕಾರಣಗಳಿಗೆ ಬೇರೆ ಸ್ಥಳಗಳಿಗೆ ತೆರಳುವವರು ಜನದಟ್ಟಣೆ ನೋಡಿ ಬಸ್ ಹತ್ತಲು ಹಿಂಜರಿಯುತ್ತಾರೆ. ಈ ಮಾರ್ಗಕ್ಕೆ ಬಿಎಂಟಿಸಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿದರೆ, ಎಲ್ಲರೂ ಆರಾಮವಾಗಿ ಪ್ರಯಾಣಿಸಬಹುದು.

ರಘು ಕೋಟ್ಯಾನ್, ಸಾರ್ವಜನಿಕ

ವಿದ್ಯಾರಣ್ಯಪುರದ ಎಂಎಸ್ ಬಡಾವಣೆಯಲ್ಲಿ ಚರಂಡಿ ಮೇಲ್ಭಾಗವನ್ನು ಮುಚ್ಚಲಾಗಿದೆ

ವರದಿ ಪರಿಣಾಮ: ಚರಂಡಿ ಕಾಮಗಾರಿ ಪೂರ್ಣ

ವಿದ್ಯಾರಣ್ಯಪುರದ ಎಂಎಸ್ ಬಡಾವಣೆಯ 6ನೇ ಮುಖ್ಯರಸ್ತೆಯಲ್ಲಿ ಅಪೂರ್ಣವಾಗಿದ್ದ ಚರಂಡಿ ಕಾಮಗಾರಿಯನ್ನು ಸರಿಪಡಿಸಲಾಗಿದೆ. ತೆರೆದುಕೊಂಡಿದ್ದ ಚರಂಡಿ ಮೇಲ್ಭಾಗವನ್ನು ಮುಚ್ಚಲಾಗಿದೆ.

ಬಡಾವಣೆಯಲ್ಲಿ ಚರಂಡಿ ನಿರ್ಮಿಸಿ ತಿಂಗಳುಗಳು ಕಳೆದಿದ್ದರೂ ಅದರ ಮೇಲ್ಭಾಗವನ್ನು ಮುಚ್ಚದೆ ಹಾಗೆಯೇ ಬಿಡಲಾಗಿತ್ತು.

‘ಇದು, ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ಮೃತ್ಯುಕೂಪವಾಗಿದ್ದು, ಅಪೂರ್ಣತೆಯನ್ನು ಕೂಡಲೇ ಸರಿಪಡಿಸಬೇಕು. ಕಾಮಗಾರಿಯಿಂದಾಗಿ ಬಡಾವಣೆಯ ರಸ್ತೆಗಳೂ ಹದಗೆಟ್ಟಿದ್ದು, ಡಾಂಬರು ಹಾಕಿ ಸರಿಪಡಿಸಬೇಕು’ ಎಂದು ಸ್ಥಳೀಯರು ಮನವಿ ಮಾಡಿದ್ದರು.

ಈ ಕುರಿತು ಕಳೆದ ವಾರದ (ಜ.31) ‘ಕುಂದು ಕೊರತೆ’ ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಚರಂಡಿ ಮೇಲ್ಭಾಗವನ್ನು ಮುಚ್ಚಲು ಕ್ರಮ ಕೈಗೊಂಡಿದ್ದಾರೆ.

ರಸ್ತೆ ಗುಂಡಿಗಳನ್ನು ಮುಚ್ಚಿರಿ

ಸಹಕಾರ ನಗರದ ರಾಧಾಕೃಷ್ಣ ಕಲ್ಯಾಣ ಮಂಟಪದ ಹತ್ತಿರ ಇರುವ ಜಂಕ್ಷನ್‌ನಲ್ಲಿ ಗ್ಯಾಸ್ ಲೈನ್ ಮಾರ್ಗದ ಅಳವಡಿಕೆಗಾಗಿ ಅಗೆಯಲಾಗಿದ್ದ ರಸ್ತೆಗಳನ್ನು ಅಪೂರ್ಣವಾಗಿ ಮುಚ್ಚಲಾಗಿದೆ. ಆರು ತಿಂಗಳುಗಳು ಕಳೆದರೂ ಕಿತ್ತಿದ್ದ ಡಾಂಬರನ್ನು ಮತ್ತೆ ಹಾಕಿಲ್ಲ. ಇದರಿಂದ ಗುಂಡಿಗಳು ನಿರ್ಮಾಣವಾಗಿದ್ದು, ವಾಹನಗಳ ಸಂಚಾರಕ್ಕೆ ಭಾರಿ ತೊಂದರೆಯಾಗಿದೆ. ಕೆಲವರಿಗೆ ರಸ್ತೆಯಲ್ಲಿ ಬಿದ್ದು ಗಾಯಗಳೂ ಆಗಿವೆ. ಸಂಬಂಧಪಟ್ಟವರು ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿದರೆ ಸಂಚಾರಕ್ಕೆ ಅನುಕೂಲ.

ಸಹಕಾರ ನಗರದ ರಸ್ತೆಯಲ್ಲಿ ಡಾಂಬರು ಕಿತ್ತು ಹಾಕಿರುವುದು

ರಮೇಶ್ ಗೌಡ, ನಾಗವಾರ

ದುರಸ್ತಿಯಾಗದ ರಸ್ತೆಗಳು

ಬಿಇಎಲ್ ಬಡಾವಣೆಯ ಭಾರತ್ ನಗರದಲ್ಲಿ ರಸ್ತೆ ಅಗೆದಿರುವುದು

ಬಿಇಎಲ್ ಬಡಾವಣೆಯಲ್ಲಿರುವ ಭಾರತ್ ನಗರದ 1 ಮತ್ತು 2ನೇ ಹಂತಗಳ ರಸ್ತೆಗಳನ್ನು ವಿವಿಧ ಕಾಮಗಾರಿಗಳಿಗಾಗಿ ಅಗೆಯಲಾಗಿದೆ. ಇದರಿಂದ ಇಲ್ಲಿನ ರಸ್ತೆಗಳೆಲ್ಲ ಹದಗೆಟ್ಟಿವೆ. ಸುಮಾರು ಮೂರು ತಿಂಗಳಿನಿಂದ ರಸ್ತೆಗಳ ಸ್ಥಿತಿ ಹಾಗೆಯೇ ಇದ್ದು, ದುರಸ್ತಿಗೆ ಮುಂದಾಗಿಲ್ಲ.

ಮೊದಲು ಸುಗಮವಾಗಿದ್ದ ರಸ್ತೆಗಳನ್ನು ಈ ದುಸ್ಥಿತಿಗೆ ತಂದಿದ್ದು, ಕೆಲವೆಡೆ ಗುಂಡಿಗಳು ಹಾಗೆಯೇ ಬಿಟ್ಟಿದ್ದಾರೆ. ಈ ಭಾಗದ ಸಾರ್ವಜನಿಕರು ಹಾಗೂ ವಾಹನಗಳ ಸಂಚಾರಕ್ಕೆ ಭಾರಿ ಸಮಸ್ಯೆ ಎದುರಾಗಿದೆ. ಶೀಘ್ರವಾಗಿ ಇಲ್ಲಿನ ರಸ್ತೆಗಳನ್ನು ದುರಸ್ತಿ ಮಾಡಬೇಕು.

ಜಗದೀಶ್‌ಗೌಡ ಪಾಟೀಲ, ಬಿಇಎಲ್ ಬಡಾವಣೆ ನಿವಾಸಿ

ಪಂಚಮಸಾಲಿ ಸಮಾಜ ನೀವೊಬ್ಬರೇ ಕಟ್ಟಿಲ್ಲ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೂಡಲಸಂಗಮ ಶ್ರೀಗಳು ಒಬ್ಬರೇ ಸಮಾಜ ಕಟ್ಟಿಲ್ಲ, ಅವರಿಗೂ ಮೊದಲು ಹರಿಹರದ ಮಹಾಂತ ಸ್ವಾಮೀಜಿ ಸಮಾಜ ಒಗ್ಗೂಡಿಸಿದ್ದಾರೆ’ ಎಂದು ಪಂಚಮಸಾಲಿ ಮಠಾಧೀಶರ ಒಕ್ಕೂಟದ ಕಾರ್ಯದರ್ಶಿ, ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಮೂರನೇ ಪೀಠದ ಬಗ್ಗೆ ಮಾಡಿರುವ ಆರೋಪಕ್ಕೆ ಸಂಗನಬಸವ ಶ್ರೀಗಳು ತಿರುಗೇಟು ನೀಡಿದರು.

‘ಹರಿಹರ ಪೀಠವೇ ಸಮಾಜದ ಮೊದಲ ಪೀಠ, ಕೂಡಲಸಂಗಮ

> **ಮತ್ತೊಬ್ಬರನ್ನು ನಿಂದಿಸುವ ಬದಲು ಎಲ್ಲರೂ ನಮ್ಮವರು ಎನ್ನುವ ರೀತಿಯಲ್ಲಿ ಮುಂದೆ ನಡೆಯುವುದು ಉತ್ತಮ.**
> **ಅಭಿನವ ಸಂಗನಬಸವ ಸ್ವಾಮೀಜಿ,** ಮನಗೂಳಿ ಹಿರೇಮಠ, ಪಂಚಮಸಾಲಿ ಮಠಾಧೀಶರ ಒಕ್ಕೂಟದ ಕಾರ್ಯದರ್ಶಿ

ಪೀಠವಲ್ಲ. 10 ಲಕ್ಷ ಜನರನ್ನು ಸೇರಿಸಿ ಪೀಠ ಸ್ಥಾಪಿಸಲಾಗಿದೆ. ಸಮಾಜದ ಜನರು ಮುಗ್ಧರಿದ್ದಾರೆ ಎಂದು ಏನು ಹೇಳಿದರೂ ನಂಬುತ್ತಾರೆ ಎಂದು ತಿಳಿದುಕೊಳ್ಳಬೇಡಿ. ಗುರು ಪರಂಪರೆಯ ಸ್ವಾಮೀಜಿಗಳು ಸೇರಿದಂತೆ ಅನೇಕ ಸ್ವಾಮೀಜಿಗಳು ಸಮಾಜ ಕಟ್ಟಿದ್ದಾರೆ. ನೀವು ಒಂದೇ ಸಮಾಜ ಕಟ್ಟಿರಬೇಕು, ನಾವು ಬೇರೆ ಸಮಾಜದವರನ್ನು ಕಟ್ಟಿಕೊಂಡು ಸಮಾಜ ಬೆಳೆಸುತ್ತಿದ್ದೇವೆ’ ಎಂದರು.

‘2 ಎ ಮೀಸಲಾತಿ ಹೋರಾಟ ನೀವೊಬ್ಬರೇ ಮಾಡಿದ್ದೀರಾ? ಮನಗೂಳಿ ಸ್ವಾಮೀಜಿ ಸಮಾಜದ ಜನರನ್ನು ಕರೆತಂದು ದುಡ್ಡು ಕೊಟ್ಟಿದ್ದಾರೆ. ಬಾಗೇವಾಡಿ, ಬಾಗಲಕೋಟೆ ಜನ ದುಡ್ಡು ನೀಡಿದ್ದಾರೆ. ನೀವು ಕೈಗೊಂಡ ಪಾದಯಾತ್ರೆಯಲ್ಲಿ ನಾವೂ ಭಾಗವಹಿಸಿದ್ದೇವೆ. ಯಾರು ಸಮಾಜ ಒಡೆಯುತ್ತಿದ್ದಾರೆ ಎಂಬುದಕ್ಕೆ ಜನರೇ ಉತ್ತರಿಸುತ್ತಾರೆ. 80 ಸಾವಿರದಿಂದ 1 ಲಕ್ಷ ಜನರನ್ನು ಸೇರಿಸಿ ಪೀಠಾರೋಹಣ ಸಮಾರಂಭ ನಡೆಸುತ್ತೇವೆ, ನಿಮ್ಮನ್ನೂ ಆಹ್ವಾನಿಸುತ್ತೇವೆ. ಬರುವುದು ಬಿಡುವುದು ನಿಮಗೆ ಬಿಟ್ಟ ವಿಚಾರ’ ಎಂದರು.

‘ಪಂಚಮಸಾಲಿ ಸಮಾಜದ ಮೂರನೇ ಪೀಠ ಮುಂದಿನ ದಿನಗಳಲ್ಲಿ ಮೂರಾಬಟ್ಟೆ ಆಗುತ್ತದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಗೆ, ‘ಮುಂದಿನ 10 ವರ್ಷಗಳ ನಂತರ ಉತ್ತರ ಸಿಗಲಿದೆ’ ಎಂದರು.

ಸ್ನೇಹಜೀವಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಯಶವಂತಪುರದಲ್ಲಿ ಆಯೋಜಿಸಲಾಗಿದ್ದ ಇ–ಶ್ರಮ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ ನೋಂದಣಿ ಕಾರ್ಯಕ್ರಮಕ್ಕೆ ಸಚಿವ ಎಸ್‌.ಟಿ.ಸೋಮಶೇಖರ್ ಪುತ್ರ ನಿಶಾಂತ್ ಚಾಲನೆ ನೀಡಿದರು. ಟ್ರಸ್ಟ್‌ನ ಸದಸ್ಯರು ಹಾಗೂ ನಿವಾಸಿಗಳು ಇದ್ದಾರೆ

‘ಒಕ್ಕಲಿಗರಲ್ಲಿ ಉದ್ಯಮಶೀಲ ಸಂಸ್ಕೃತಿ ಅಗತ್ಯ: ಸಚಿವ ಸಿ.ಎನ್. ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಕೃಷಿಗೆ ಹೆಸರಾಗಿರುವ ಒಕ್ಕಲಿಗ ಜನಾಂಗವು ವ್ಯಾಪಾರ ವಹಿವಾಟು ನಡೆಸುವ ಉದ್ಯಮಶೀಲ ಸಂಸ್ಕೃತಿ ರೂಪಿಸಿಕೊಳ್ಳುವುದು ಅಗತ್ಯ’ ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಶನಿವಾರ ಆಯೋಜಿಸಿದ್ದ ‘ಫಸ್ಟ್ ಸರ್ಕಲ್’ ಸಂಘಟನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಸಮುದಾಯದ ಉತ್ತಮ ಸಾಧಕರು ಮತ್ತು ಪ್ರತಿಭಾವಂತರು ಸಮಾಜದ ಋಣ ತೀರಿಸಲು ಮೆಟ್ಟಿಲುಗಳಾಗಲು ಸಿದ್ಧರಿದ್ದಾರೆ. ಒಕ್ಕಲಿಗ ಜನಾಂಗವು ಕೇವಲ ಪ್ರೋತ್ಸಾಹ ಭತ್ಯೆಗಳನ್ನು ನೆಚ್ಚಿಕೊಂಡಿರುವ ಕೃಷಿ ಮಾರುಕಟ್ಟೆಯನ್ನು ನಂಬಿ ಕೂರಬಾರದು. ಬದಲಿಗೆ ಮಾರುಕಟ್ಟೆ ಆರ್ಥಿಕತೆ ಆಧರಿಸಿ ನಡೆದರೆ ಪ್ರಗತಿ ಸಾಧ್ಯ’ ಎಂದರು.

‘ಫಸ್ಟ್ ಸರ್ಕಲ್’ ಸಂಘಟನೆಯನ್ನು ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಉದ್ಘಾಟಿಸಿದರು. ನವೋದ್ಯಮ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ ಪ್ರಕಾಶ್, ಐಆರ್‌ಎಸ್ ಅಧಿಕಾರಿ ಜಯರಾಂ ರಾಯಪುರ, ರವಿಕುಮಾರ್ ಹಾಗೂ ಇತರರು ಇದ್ದಾರೆ

‘ಸಮುದಾಯವು ತನ್ನ ಶಕ್ತಿ ಮತ್ತು ಜಾಣ್ಮೆಯನ್ನು ಪರಿಪೂರ್ಣವಾಗಿ ಬಳಸಿಕೊಂಡಿಲ್ಲ. ಉತ್ತಮ ಗುಣಮಟ್ಟದ ಜೊತೆ ಮುನ್ನುಗ್ಗಿ ನಡೆದರೆ, ಏಳಿಗೆ ಸಾಧಿಸಬಹುದು’ ಎಂದರು. ‘ತೆಂಗು ಮತ್ತು ಮಾವು ಬೆಳೆಗಳ ಮೌಲ್ಯವರ್ಧನೆಗೆ ಕೃಷಿಕಲ್ಪ ಯೋಜನೆಯನ್ನು ಸರ್ಕಾರ ಆರಂಭಿಸಿದೆ. ಇದರ ಪ್ರಯೋಜನ ರಾಮನಗರ ಜಿಲ್ಲೆಯ ರೈತರಿಗೆ ಸಿಕ್ಕಿದೆ. ಉಳಿದ ಜಿಲ್ಲೆಗಳ ರೈತರಿಗೂ ಇಂತಹ ಸೂಕ್ತ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯ ಇದೆ’ ಎಂದರು.

‘ಚುನಾವಣೆ: ಶೀಘ್ರವೇ ರಾಜ್ಯ ಪ್ರವಾಸ’

ನಿವಳಿ (ಕಾರವಾರ): ‘ಕೋವಿಡ್ ಸೋಂಕಿನ ಪ್ರಮಾಣ ಕಡಿಮೆಯಾದ ಬಳಿಕ 15–20 ದಿನಗಳಲ್ಲಿ ರಾಜ್ಯ ಪ್ರವಾಸ ಮಾಡುತ್ತೇನೆ. ಪ್ರತಿ ಜಿಲ್ಲೆಯಲ್ಲಿ ಪಕ್ಷವನ್ನು ಬಲಪಡಿಸಿ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ 135ರಿಂದ 140 ಸ್ಥಾನಗಳನ್ನು ಬಿಜೆಪಿ ಗೆಲ್ಲಲು ಬೇಕಾದ ಎಲ್ಲ ಸಿದ್ಧತೆ ಮಾಡುತ್ತಿದ್ದೇವೆ’ ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಕಾರವಾರ ತಾಲ್ಲೂಕಿನ ದೇವಳಮಕ್ಕಿ ಗ್ರಾಮದ ನಿವಳಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ನಿಟ್ಟಿನಲ್ಲಿ ಶನಿವಾರವಷ್ಟೇ ಪಕ್ಷದ ಎಲ್ಲ ಮುಖಂಡರ ಜೊತೆ ಸಮಾಲೋಚನೆ ಮಾಡಿದ್ದೇನೆ’ ಎಂದರು.

‘ದೇಶದಲ್ಲಿ ನಡೆಯುತ್ತಿರುವ ಐದು ರಾಜ್ಯಗಳ ಚುನಾವಣೆಯಲ್ಲಿ ಬಿ.ಜೆ.ಪಿ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಲಿದೆ. ದೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪರ ಅಲೆಯಿದೆ. ಹಾಗಾಗಿ ಪಕ್ಷಕ್ಕೆ ಎಲ್ಲೂ ಹಿನ್ನಡೆ ಆಗುವುದಿಲ್ಲ. ಅದೇ ರೀತಿ, ಮಾಧ್ಯಮದಲ್ಲಿ ಏನೇ ವರದಿಗಳು ಬಂದರೂ ಗೋವಾದಲ್ಲೂ ಬಿ.ಜೆ.ಪಿ ಸರ್ಕಾರವೇ ಅಧಿಕಾರಕ್ಕೆ ಬರಲಿದೆ. ಅದರಲ್ಲಿ ಯಾವುದೇ ಅನುಮಾನ ಬೇಡ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ರೈಲ್ವೆ: 2.65 ಲಕ್ಷ ಹುದ್ದೆಗಳು ಖಾಲಿ’

ನವದೆಹಲಿ: ಭಾರತೀಯ ರೈಲ್ವೆಯಲ್ಲಿ 2,177 ಗೆಜೆಟೆಡ್ ಹುದ್ದೆಗಳು ಸೇರಿದಂತೆ ಒಟ್ಟು 2,65,547 ಹುದ್ದೆಗಳು ಖಾಲಿ ಇವೆ ಎಂದು ಸರ್ಕಾರ ಸಂಸತ್ತಿಗೆ ತಿಳಿಸಿದೆ.

2016 ರಿಂದ, ರೈಲ್ವೆಯು ವಿವಿಧ ಹುದ್ದೆಗಳಿಗೆ 1,89,790 ಜನರನ್ನು ನೇಮಿಸಿಕೊಂಡಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಕೇರಳದ ರಾಜ್ಯಸಭಾ ಸದಸ್ಯ ವಿ.ಶಿವದಾಸನ್ ಅವರ ಪ್ರಶ್ನೆಗೆ ಅಂಕಿ–ಅಂಶಗಳ ಸಹಿತ ಉತ್ತರ ನೀಡಿದ್ದಾರೆ.

ಪೂರ್ವ ರೈಲ್ವೆ ವಲಯದಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಇವೆ. 195 ಗೆಜೆಟೆಡ್ ಹಾಗೂ 28,204 ಇತರೆ ಹುದ್ದೆಗಳು ಖಾಲಿ ಇವೆ. ಪಶ್ಚಿಮ ರೈಲ್ವೆ ವಲಯದಲ್ಲಿ 172 ಗೆಜೆಟೆಡ್ ಮತ್ತು 26,227 ಇತರೆ ಹುದ್ದೆಗಳು ಖಾಲಿ ಇವೆ. ನೈರುತ್ಯ ರೈಲ್ವೆ ವಲಯದಲ್ಲಿ 65 ಗೆಜೆಟೆಡ್ ಮತ್ತು 6,525 ಇತರೆ ಹುದ್ದೆಗಳು ಖಾಲಿ ಇವೆ.

‘ಸಾವಿರಾರು ಹುದ್ದೆಗಳು ಖಾಲಿ ಇರುವುದು ಕಳವಳಕಾರಿಯಾಗಿದೆ’ ಎಂದು ಶಿವದಾಸನ್ ಹೇಳಿದಿದ್ದಾರೆ.

ನ್ಯೂಯಾರ್ಕ್: ಮಹಾತ್ಮ ಗಾಂಧಿ ಪ್ರತಿಮೆಗೆ ಹಾನಿ

ನ್ಯೂಯಾರ್ಕ್ (ಪಿಟಿಐ): ಇಲ್ಲಿನ ಮ್ಯಾನ್‌ಹಟನ್‌ನಲ್ಲಿರುವ ಯೂನಿಯನ್ ಸ್ಕ್ವಾರ್‌ನಲ್ಲಿ ಸ್ಥಾಪಿಸಲಾಗಿದ್ದ ಮಹಾತ್ಮ ಗಾಂಧಿ ಅವರ ಆಳೆತ್ತರದ ಪ್ರತಿಮೆಯನ್ನು ದುಷ್ಕರ್ಮಿಗಳು ಶನಿವಾರ ವಿರೂಪಗೊಳಿಸಿದ್ದಾರೆ.

‘ಇದೊಂದು ಹೇಯ ಕೃತ್ಯವಾಗಿದ್ದು, ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅಮೆರಿಕದ ವಿದೇಶಾಂಗ ಇಲಾಖೆಯನ್ನು ಕೇಳಿಕೊಳ್ಳಲಾಗಿದೆ’ ಎಂದು ಭಾರತೀಯ ಕಾನ್ಸುಲೇಟ್ ಜನರಲ್ ಹೇಳಿಕೆಯಲ್ಲಿ ತಿಳಿಸಿದೆ. ಹಲವಾರು ಸಂಘಟನೆಗಳು, ಸಂಘ ಸಂಸ್ಥೆಗಳೂ ಈ ಘಟನೆಗೆ ಆಕ್ಷೇಪ ವ್ಯಕ್ತಪಡಿಸಿವೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Prose-4

Dr. B. R. Ambedkar

English



ಎಸ್ಸೆಸ್ಸೆಲ್ಸಿ

1. How can you say that Dr.B.R. Ambedkar was a voracious reader?

Dr. B. R.Ambedkar was very fond of reading books. He had an insatiable thirst for books. He used to buy books by curtailing his daily needs. In New York he purchased 2000 old books, and when he was in London also bought so many books. He sent them to India in 32 boxes. This shows that he was a voracious reader.

2. What made Dr.Ambedkar describe the methods of Civil Disobedience, Non cooperation and Satyagraha as the ‘Grammar of Anarchy’?

According to Ambedkar methods of Civil disobedience, non co operation, and Satyagraha are necessary in a state which is ruled by foreigners. It is one thing to utilize these methods in a struggle against a government without people’s consent. But in a democratic country these methods should not be used, if used volatility and misdirection would be there. Such agitations invariably result in the loss of lives and public property.

3. Write a short note on Ambedkar’s perception of the three pillars of the state.

Ambedkar had a clear perception about the constitution, that it is a fundamental document which defines the position and power of the three pillars of the state: the legislature, the executive, and the judiciary. He said that the jurisdiction of each should be clear and untrammelled. It also defines the powers of the executive and legislature against the citizens.It deals with fundamental rights also.

4. Nehru chose Ambedkar as the law minister. What might have prompted Nehru to do so?

In recognition of Dr.B.R.Ambedkar’s skills in the field of law and legislation and also a great vision of social Justice. Above all this was a tribute to the success of his own campaigns against social injustice. So Nehru chose Dr. B.R. Ambedkar to be the first law minister of Independent India.

5. Why is Dr.B.R. Ambedkar considered as a Champion of the depressed classes in India?

Dr. B.R.Ambedkar devoted all his time and talents for the upliftment of the depressed classes. He started the newspapers of Mooknayak, Bahishkrit Bharat, and Samatha to be the authentic voices of them. Likewise institutions were set up by him such as, the Hitakarini Sabha and the Independent Labour Party of India became vehicles of change. He stressed the rights of the depressed classes and helped in raising up who had suffered for so long in the past and fought for the social justice.

6.“His flair for legislative work became evident to the whole nation.”

a) What kind of flair did Ambedkar have?

Natural ability in law and legislation.

b) Where did he show his flair?

Making rules for the underprivileged and depressed classes.

c) How was it evident to the whole nation? The Constitution of India.

Annappa Shetty MA,M.Ed, SRP in English,Hassan

ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

ಪಿಯುಸಿ

(...ಹಿಂದಿನ ಸಂಚಿಕೆಯಿಂದ)

$$\mathbf{E} = \lim_{q \to 0} \left(\frac{\mathbf{F}}{q} \right) \quad \text{.................(9)}$$

ಪ್ರಾಯೋಗಿಕವಾಗಿ ಸಮಸ್ಯೆಯ ಸುತ್ತಲು ಗಮನಿಸುವುದಾದರೆ, (qನ ಸಮ್ಮುಖದಲ್ಲಿ Q ಅನ್ನು ತೊಂದರೆ ಅನುಭವಿಸದಂತೆ ಇರಿಸುವುದು) ಅನಿರ್ದಿಷ್ಟವಾದ ಬಲಗಳಿಂದ Q ಅನ್ನು ಅದರ ಸ್ಥಾನದಲ್ಲೇ ಹಿಡಿದಿಡುವುದಾಗಿದೆ! ಇದು ವಿಚಿತ್ರವಾಗಿ ಕಂಡರೂ, ನಿಜವಾಗಿಯೂ ಆಚರಣೆಯಲ್ಲಿ ಇದೇ ಸಂಭವಿಸುತ್ತದೆ. ವಿದ್ಯುದಾವೇಶಿತ ಸಮತಲೀಯ ಫಲಕದಿಂದ, ಪರೀಕ್ಷ ವಿದ್ಯುದಾವೇಶ qನ ಮೇಲಿನ ವಿದ್ಯುತ್ ಬಲವನ್ನು ಕಂಡುಕೊಳ್ಳುವ ನಿದರ್ಶನವನ್ನು ತೆಗೆದುಕೊಂಡಲ್ಲಿ, ಫಲಕದ ಒಳಗಿನ ಅನಿರ್ದಿಷ್ಟವಾದ ವಿದ್ಯುದ್ದಾವೇಶಿತ ಘಟಕಗಳಿಂದ ಉಂಟಾಗುವ ಬಲಗಳಿಂದ ಫಲಕದ ಮೇಲಿನ ವಿದ್ಯುದಾವೇಶಗಳನ್ನು ಅವುಗಳ ಸ್ಥಾನದಲ್ಲೇ ಹಿಡಿದಿಡಲಾಗುತ್ತದೆ.

(ii) ಗಮನಿಸಬೇಕಾದ ಅಂಶವೆಂದರೆ, Q ನಿಂದ ಉಂಟಾಗುವ ವಿದ್ಯುತ್ ಕ್ಷೇತ್ರ E ಯನ್ನು ಕಾರ್ಯಾತ್ಮಕವಾಗಿ ಕೆಲ ಪರೀಕ್ಷ ವಿದ್ಯುದಾವೇಶ q ನ ಪದಗಳಲ್ಲಿ ವ್ಯಾಖ್ಯಾನಿಸುವುದಾದರೂ ಕೂಡ, E ಯು q ನ ಮೇಲೆ ಅವಲಂಬಿತವಾಗಿಲ್ಲ. ಇದಕ್ಕೆ ಕಾರಣ, ಈ ‘q’ ಗೆ ಅನುಗುಣವಾಗಿದೆ, ಹಾಗಾಗಿ, F/q ಅನುಪಾತವು ‘q’ ನ್ನು ಅವಲಂಬಿಸಿಲ್ಲ. ‘q’ ವಿದ್ಯುದಾವೇಶದ ಮೇಲೆ Q ವಿದ್ಯುದಾವೇಶದಿಂದ ಉಂಟಾದ F ಬಲವು q ವಿದ್ಯುದಾವೇಶದ ನಿರ್ದಿಷ್ಟವಾದ ಸ್ಥಾನವನ್ನು ಅವಲಂಬಿಸಿದೆ, ಅದು Q ವಿದ್ಯುದಾವೇಶದ ಸುತ್ತಲಿನ ಸ್ಥಳಾವಕಾಶದಲ್ಲಿ ಯಾವುದೇ ಮೌಲ್ಯವನ್ನು ಪಡೆಯಬಹುದಾಗಿದೆ. ಹಾಗಾಗಿ, Q ನಿಂದ ಉಂಟಾದ ವಿದ್ಯುತ್ ಕ್ಷೇತ್ರವು, ಸ್ಥಳಾವಕಾಶದ ನಿರ್ದೇಶನಾಂಕವಾದ rನ್ನು ಕೂಡ ಅವಲಂಬಿಸಿದೆ. ಸ್ಥಳಾವಕಾಶದಲ್ಲಿ, ವಿದ್ಯುದಾವೇಶ ‘q’ ನ ಬೇರೆ ಬೇರೆ ಸ್ಥಾನಗಳಿಗೆ ಅನುಗುಣವಾಗಿ ವಿದ್ಯುತ್ ಕ್ಷೇತ್ರ E ಯು ಬೇರೆ ಬೇರೆ ಮೌಲ್ಯಗಳನ್ನು ಪಡೆಯುತ್ತದೆ. ಮೂರು ಆಯಾಮಗಳ ಸ್ಥಳಾವಕಾಶದಲ್ಲಿನ ಎಲ್ಲ ಬಿಂದುಗಳಲ್ಲೂ ವಿದ್ಯುತ್ ಕ್ಷೇತ್ರವು ಮೂಡಿರುತ್ತದೆ.

(iii) ಧನಾತ್ಮಕ ವಿದ್ಯುದಾವೇಶದಲ್ಲಿ, ವಿದ್ಯುತ್ ಕ್ಷೇತ್ರದ ದಿಕ್ಕನ್ನು ವಿದ್ಯುದಾವೇಶದಿಂದ ತ್ರಿಜ್ಯೀಯ ಹೊರಮುಖವಾಗಿ ತೋರಿಸಲಾಗುತ್ತದೆ. ಬೇರೊಂದು ಪಕ್ಷದಲ್ಲಿ, ಆಕರ ವಿದ್ಯುದಾವೇಶವು ಋಣಾತ್ಮಕವಾಗಿದ್ದಲ್ಲಿ, ಪ್ರತಿಯೊಂದು ಬಿಂದುವಿನಲ್ಲಿನ ಸದಿಶ ವಿದ್ಯುತ್ ಕ್ಷೇತ್ರವು ತ್ರಿಜ್ಯೀಯ ಒಳಮುಖವಾಗಿರುತ್ತದೆ.

(iv) q ವಿದ್ಯುದಾವೇಶದ ಮೇಲೆ, Q ವಿದ್ಯುದಾವೇಶದಿಂದ ಮೂಡಿದ ಬಲ F ನ ಪರಿಮಾಣವು ಕೇವಲ q ವಿದ್ಯುದಾವೇಶವು Q ವಿದ್ಯುದಾವೇಶದಿಂದ ಇರುವ ದೂರ r ಅನ್ನು ಮಾತ್ರ ಅವಲಂಬಿಸಿದೆ. ಹಾಗೆಯೇ, ವಿದ್ಯುತ್ ಕ್ಷೇತ್ರ Eದ ಪರಿಮಾಣವು ಕೂಡ ಕೇವಲ ದೂರ r ನ್ನು ಅವಲಂಬಿಸಿದೆ. ಹಾಗಾಗಿ, Q ವಿದ್ಯುದಾವೇಶದಿಂದ ಇರುವ ಸಮಾನ ದೂರಗಳಿಗೆ ವಿದ್ಯುತ್ ಕ್ಷೇತ್ರ E ದ ಪರಿಮಾಣವು ಒಂದೇ ಆಗಿರುತ್ತದೆ. ಒಂದು ಬಿಂದು ವಿದ್ಯುದಾವೇಶದಿಂದ ಉಂಟಾಗುವ ವಿದ್ಯುತ್ ಕ್ಷೇತ್ರ Eದ ಪರಿಮಾಣವು, ಕೇಂದ್ರದಲ್ಲಿ ಬಿಂದು ವಿದ್ಯುದಾವೇಶವನ್ನು ಹೊಂದಿದ ಗೋಳದಿಂದ ಉಂಟಾಗುವ ವಿದ್ಯುತ್ ಕ್ಷೇತ್ರದ ಪರಿಮಾಣಕ್ಕೆ ಸಮನಾಗಿರುತ್ತದೆ; ಇದನ್ನೇ, ಅದು ಗೋಳೀಯ ಸಮಮಿತೀಯತೆಯನ್ನು ಹೊಂದಿದೆ ಎಂದು ಹೇಳುತ್ತೇವೆ.

ವಿದ್ಯುದಾವೇಶಗಳ ವ್ಯವಸ್ಥೆಯಿಂದ ಉಂಟಾಗುವ ವಿದ್ಯುತ್ ಕ್ಷೇತ್ರ

q1, q2, ..., qn ವಿದ್ಯುದಾವೇಶಗಳ ವ್ಯವಸ್ಥೆಯಲ್ಲಿ ಕ್ರಮಾನುಗತವಾಗಿ r1, r2, ..., rn ಗಳು ಯಾವುದೋ ಒಂದು ಮೂಲಬಿಂದು ‘O’ಗೆ ಹೊಂದಿಕೊಂಡಂತೆ ಸ್ಥಾನೀಯ ಸದಿಶ ಪರಿಮಾಣಗಳಾಗಿರುವಂತೆ ತೆಗೆದುಕೊಳ್ಳೋಣ. ಒಂದೇ ಒಂದು ವಿದ್ಯುದಾವೇಶದಿಂದ ಸ್ಥಳಾವಕಾಶದಲ್ಲಿನ ಒಂದು ಬಿಂದುವಿನಲ್ಲಿ ಉಂಟಾಗುವ ವಿದ್ಯುತ್ ಕ್ಷೇತ್ರದ ರೀತಿಯಲ್ಲಿಯೇ, ವಿದ್ಯುದಾವೇಶಗಳ ವ್ಯವಸ್ಥೆಯಿಂದ ಸ್ಥಳಾವಕಾಶದಲ್ಲಿನ ಒಂದು ಬಿಂದುವಿನಲ್ಲಿ ಮೂಡುವ ವಿದ್ಯುತ್ ಕ್ಷೇತ್ರವನ್ನು ಅದೇ ಬಿಂದುವಿನಲ್ಲಿ ಇರಿಸಿದ ಪರೀಕ್ಷಕ ಘಟಕ ವಿದ್ಯುದಾವೇಶ ಅನುಭವಿಸುವ ಬಲದಿಂದ ವ್ಯಾಖ್ಯಾನಿಸಬಹುದಾಗಿದ್ದು, ಅದೂ ಕರಾರಾಗಿ, $q_1, q_2, ..., q_n$. ವಿದ್ಯುದಾವೇಶಗಳ ಸ್ಥಾನವನ್ನು ಕದಲಿಸದೇ ಇರಬೇಕು. ಸ್ಥಾನೀಯ ಸದಿಶ ಪರಿಮಾಣ ಹೊಂದಿದ ಒಂದು ಬಿಂದು P ನಲ್ಲಿ ಮೂಡುವ ವಿದ್ಯುತ್ ಕ್ಷೇತ್ರವನ್ನು ಕಂಡುಹಿಡಿಯಲು ಕೂಲಂಬನ ನಿಯಮ ಮತ್ತು ಆಧ್ಯಾರೋಪಣ ತತ್ವಗಳನ್ನು ನಾವು ಬಳಸಬಹುದು.

ಸ್ಥಾನೀಯ ಸದಿಶದ q_1 ಆವೇಶದಿಂದ r ಸ್ಥಾನೀಯ ಸದಿಶದಲ್ಲಿ ಮೂಡಿದ ವಿದ್ಯುತ್ ಕ್ಷೇತ್ರ E_1ನ್ನು ಹೀಗೆ ಬರೆಯಬಹುದು:

$$\mathbf{E}_1 = \frac{1}{4\pi\varepsilon_0} \frac{q_1}{r_{1P}^2} \hat{\mathbf{r}}_{1P}$$

ಇಲ್ಲಿ $\hat{r}_{1P}$ ಒಂದು ಘಟಕ ಸದಿಶ ಪರಿಮಾಣವಾಗಿದ್ದು, q_1 ನಿಂದ P ಯ ನೇರದಲ್ಲಿದೆ ಮತ್ತು r_{1P} ಯು q_1 ಮತ್ತು P ನಡುವಿನ ದೂರವಾಗಿದೆ.



ಇದೇ ರೀತಿಯಲ್ಲಿ, r_2 ಸ್ಥಾನೀಯ ಸದಿಶದ q_2 ಆವೇಶದಿಂದ r ಸ್ಥಾನೀಯ ಸದಿಶದಲ್ಲಿ ಮೂಡಿದ ವಿದ್ಯುತ್ ಕ್ಷೇತ್ರ E2 ನ್ನು ಬರೆಯಬಹುದು ಅದು.

$$\mathbf{E}_2 = \frac{1}{4\pi\varepsilon_0} \frac{q_2}{r_{2P}^2} \hat{\mathbf{r}}_{2P}$$

ಇಲ್ಲಿ $\hat{r}_{2P}$ ಒಂದು ಘಟಕ ಸದಿಶ ಪರಿಮಾಣವಾಗಿದ್ದು, q_2 ನಿಂದ Pಯ ನೇರದಲ್ಲಿದೆ ಮತ್ತು r_P ಯು q_2 ಮತ್ತು P. ನಡುವಿನ ದೂರವಾಗಿದೆ. $q_3, q_4, ..., q_n$ ವಿದ್ಯುದಾವೇಶಗಳಿಂದ ಮೂಡುವ ವಿದ್ಯುತ್ ಕ್ಷೇತ್ರಗಳು ಕ್ರಮವಾಗಿ $E_3, E_4, ..., E_n$ ಗಳಿಗೂ ಕೂಡ ಇದೇ ರೀತಿಯ ಸಮೀಕರಣಗಳು ಸರಿಹೊಂದುತ್ತವೆ.

ಆಧ್ಯಾರೋಪಣ ತತ್ವದ ಪ್ರಕಾರ, ವಿದ್ಯುದಾವೇಶಗಳ ವ್ಯವಸ್ಥೆಯಿಂದ r ಸ್ಥಾನೀಯ ಸದಿಶದಲ್ಲಿ ಉಂಟಾದ ವಿದ್ಯುತ್ ಕ್ಷೇತ್ರ E_2 ಯು (ಮೇಲಿನ ಚಿತ್ರದಲ್ಲಿ ತೋರಿಸಿದಂತೆ).

$$\mathbf{E}(\mathbf{r}) = \mathbf{E}_1(\mathbf{r}) + \mathbf{E}_2(\mathbf{r}) + \ldots + \mathbf{E}_n(\mathbf{r})$$

$$= \frac{1}{4\pi\varepsilon_0}\frac{q_1}{r_{1P}^2}\hat{\mathbf{r}}_{1P} + \frac{1}{4\pi\varepsilon_0}\frac{q_2}{r_{2P}^2}\hat{\mathbf{r}}_{2P} + \ldots + \frac{1}{4\pi\varepsilon_0}\frac{q_n}{r_{nP}^2}\hat{\mathbf{r}}_{nP}$$

$$\mathbf{E}(\mathbf{r}) = \frac{1}{4\pi\varepsilon_0}\sum_{i=1}^{n}\frac{q_i}{r_{iP}^2}\hat{\mathbf{r}}_{iP} \quad \text{........(10)}$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ ‘ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್’ ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಕಾನೂನು ಕಲಿಕೆಗೆ ‘ಕ್ಲಾಟ್’

ಮಹೇಶ್ ಎಚ್. ನಾಯಕ್

ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿರುವಂತೆಯೇ ದೇಶದ ಪ್ರತಿಷ್ಠಿತ 22 ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳ ಪ್ರವೇಶಕ್ಕಾಗಿ ‘ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ–ಸಿಎಲ್‌ಎಟಿ(ಕ್ಲಾಟ್–Common Law Admission Test)’ ನಡೆಸಲಾಗುತ್ತದೆ. ಲೀಗಲ್ ಇಂಡಿಯಾ ಡಾಟ್ ಕಾಮ್ ವರದಿ ಪ್ರಕಾರ ಈ ರಾಷ್ಟ್ರೀಯ ಕಾನೂನು ಕಾಲೇಜಿನಲ್ಲಿ ಪದವಿ ಪೂರೈಸಿದ ಶೇ 90 ರಿಂದ 100ರಷ್ಟು ಅಭ್ಯರ್ಥಿಗಳಿಗೆ ಕ್ಯಾಂಪಸ್ ಆಯ್ಕೆಯಲ್ಲಿ ಉದ್ಯೋಗ ಅವಕಾಶ ದೊರೆಯುತ್ತಿದೆ.

ಈಗಾಗಲೇ ಪ್ರಸಕ್ತ ಸಾಲಿನ (2022–23) ಪ್ರವೇಶಕ್ಕೆ ನೋಂದಣಿ ಆರಂಭವಾಗಿದೆ. ಮಾ.31ರವರೆಗೂ ನೋಂದಣಿಗೆ ಅವಕಾಶವಿದೆ.

ಆಸಕ್ತರು www.clatcansortiumofntu.ac.in ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಹತೆ: ದ್ವಿತೀಯ ಪಿಯುಸಿ ಓದುತ್ತಿರುವ ಹಾಗೂ ಪೂರ್ಣಗೊಳಿಸಿರುವ ವಿಜ್ಞಾನ, ವಾಣಿಜ್ಯ, ಕಲಾ ವಿಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಪಿಯುಸಿಯಲ್ಲಿ ಶೇ 45ರಷ್ಟು ಅಂಕ ಪಡೆದಿರುವ ಸಾಮಾನ್ಯ ಅಭ್ಯರ್ಥಿಗಳು ಹಾಗೂ ಶೇ 40ರಷ್ಟು ಅಂಕಗಳಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ.

ಬೆಂಗಳೂರಿನ ಎನ್‌ಎಲ್‌ಎಸ್‌ಐ ವಿವಿಯಲ್ಲಿ ಕಾನೂನು ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಕನ್ನಡಿಗರಿಗೆ ಶೇ 25ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ. ಪ್ರವೇಶ ಪರೀಕ್ಷೆ ‘ಕ್ಲಾಟ್’ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ದೆಹಲಿ ಕಾನೂನು ಕಾಲೇಜು

ದೇಶದ ಅತ್ಯುತ್ತಮ ಕಾನೂನು ವಿವಿಗಳ ಪಟ್ಟಿಯಲ್ಲಿ ದೆಹಲಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಎರಡನೇ ಸ್ಥಾನದಲ್ಲಿದೆ. ಈ ವಿವಿಯ ಪ್ರವೇಶಕ್ಕಾಗಿ ಪ್ರತ್ಯೇಕ ಆಲ್ ಇಂಡಿಯಾ ಲಾ ಎಂಟ್ರೆನ್ಸ್ ಟೆಸ್ಟ್(AILT) ಪರೀಕ್ಷೆ ನಡೆಸಲಾಗುತ್ತದೆ. ವಿವಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌ಡಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಅರ್ಜಿ ಸಲ್ಲಿಸಲು ಏ.7 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಇಲ್ಲಿ ನೋಡಬಹುದು; nationallawuniversitydelhi.in

ಪ್ರವೇಶ ಪರೀಕ್ಷೆಯು 5 ವಿಷಯಗಳನ್ನು ಒಳಗೊಂಡಿದ್ದು. ಈ ಕೆಳಕಂಡ ಪಠ್ಯಕ್ರಮ ಹೊಂದಿದೆ.

ವಿಷಯ	ಸಂಭವನೀಯ ಪ್ರಶ್ನೆಗಳ ಸಂಖ್ಯೆ	ದ್ವಿತೀಯ ಪಿಯುಸಿ ಗುಣಮಟ್ಟದ ಪ್ರಶ್ನೆಗಳಿರುತ್ತವೆ
1. ಆಂಗ್ಲ ಭಾಷೆ	28-32 ಪ್ರಶ್ನೆಗಳು (ಶೇ 20ರಷ್ಟು ಪ್ರಶ್ನೆಗಳು)	ಇಂಗ್ಲೀಷ್ ಭಾಷೆಯ ಜ್ಞಾನ ಹಾಗೂ ಕೌಶಲ್ಯವನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ.
2. ಸಾಮಾನ್ಯ ಜ್ಞಾನ	35-39 ಪ್ರಶ್ನೆಗಳು, (ಶೇ 25ರಷ್ಟು ಪ್ರಶ್ನೆಗಳು)	ಪ್ರಚಲಿತ ಘಟನೆಯೊಂದಿಗೆ ಕಲೆ-ಸಂಸ್ಕೃತಿ ಅಂತರರಾಷ್ಟ್ರೀಯ ಸಂಬಂಧ, ಐತಿಹಾಸಿಕ ಘಟನೆಗಳ ಕುರಿತ ಪ್ರಶ್ನೆಗಳಿರುತ್ತವೆ.
3. ಕಾನೂನು ಗ್ರಹಿಕೆ	35-39 ಪ್ರಶ್ನೆಗಳು, (ಶೇ 25ಪ್ರಶ್ನೆಗಳು)	450 ಪದದ ಪ್ಯಾಸೆಜ್‌ನ್ನು ಒಳಗೊಂಡಿರುತ್ತದೆ. ಕಾನೂನು ವಿಷಯ, ಸಾರ್ವಜನಿಕ ಕಾರ್ಯನೀತಿ, ನೈತಿಕತೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳಿರುತ್ತವೆ.
4. ಪರಿಮಾಣತ್ಮಕ ಸಾಮರ್ಥ್ಯ ಮತ್ತು 5. ಗಣಿತ	28-32 ಪ್ರಶ್ನೆಗಳು (ಶೇ 20 ಪ್ರಶ್ನೆಗಳು)	ಇಲ್ಲಿ ಎರಡು ವಿಷಯಗಳ ಬೌದ್ಧಿಕ ಸಾಮರ್ಥ್ಯದ ಜೊತೆಗೆ ಅಂಕಿ-ಸಂಖ್ಯೆಗಳ ಜ್ಞಾನ ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ. 10ನೇ ತರಗತಿ ಮಟ್ಟದ ಗಣಿತ ಪ್ರಶ್ನೆಗಳಿರುತ್ತವೆ.

ಪ್ರವೇಶ ಪರೀಕ್ಷೆ

ಪ್ರವೇಶ ಪರೀಕ್ಷೆಯಲ್ಲಿ 150 ಅಂಕಗಳ ಒಂದು ಪ್ರಶ್ನೆಪತ್ರಿಕೆ ಇರುತ್ತದೆ. ಪ್ರತಿ ಪ್ರಶ್ನೆಗೆ 1 ಅಂಕದಂತೆ 150 ಅಂಕಗಳನ್ನು ನಿಗದಿಪಡಿಸಲಾಗಿದೆ. ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕವನ್ನು(ನೆಗೆಟಿವ್) ಕಳೆಯಲಾಗುತ್ತದೆ. ಇದು ಆಫ್‌ಲೈನ್ ಆಧಾರಿತ ಬಹುಆಯ್ಕೆ ಮಾದರಿ ಪರೀಕ್ಷೆಯಾಗಿದೆ.

ಪರೀಕ್ಷಾ ಸಿದ್ದತೆ ಹೇಗಿರಬೇಕು

ಜೆಇಇ, ನೀಟ್, ಎನ್‌ಡಿಎ, ಎನ್‌ಎಟಿಎ ಸೇರಿದಂತೆ ವಿವಿಧ ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವಂತೆ ಈ ಕ್ಲಾಟ್ ಪರೀಕ್ಷೆಗೂ ತಯಾರಿ ನಡೆಸಬೇಕು. ನಿಗದಿತ ಪಠ್ಯಕ್ರಮಕ್ಕೆ ಅನುಗುಣವಾಗಿ ಅಧ್ಯಯನ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಹಳೆಯ ಪ್ರಶ್ನೆ ಪತ್ರಿಕೆಗಳನ್ನು ವಿಶ್ಲೇಷಿಸಬೇಕು. ಮಾದರಿ ಪ್ರಶ್ನೆ ಪತ್ರಿಕೆಗಳೊಂದಿಗೆ ಆನ್‌ಲೈನ್ ಹಾಗೂ ಆಫ್‌ಲೈನ್ ಪರೀಕ್ಷೆ ಅಭ್ಯಾಸ ಮಾಡಬೇಕು. ಕ್ಲಾಟ್‌ಗೆ ಸಂಬಂಧಿಸಿದ ಹಳೆಯ ಪ್ರಶ್ನೆಪತ್ರಿಕೆ, ಮಾದರಿ ಪ್ರಶ್ನೆಪತ್ರಿಕೆಗಳು ಹಾಗೂ ಅಧ್ಯಯನ ಸಾಮಗ್ರಿಗಳು clatcoansortiumofntu.ac.in ಜಾಲತಾಣದಲ್ಲಿ ಲಭ್ಯವಿವೆ.

ಎನ್‌ಎಲ್‌ಎಸ್‌ಐನಲ್ಲಿ ಕನ್ನಡಿಗರಿಗೆ ಮೀಸಲು

ಕೇಂದ್ರ ಉನ್ನತ ಶಿಕ್ಷಣ ಸಚಿವಾಲಯ ಪ್ರಕಟಿಸಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್‌ನ (ಎನ್‌ಐಆರ್‌ಎಫ್) ದೇಶದ ಅತ್ಯುತ್ತಮ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (National Law School of India University) ಪ್ರಥಮ ಸ್ಥಾನದಲ್ಲಿದೆ. ಈ ವಿವಿಯಲ್ಲಿ ಪ್ರತಿ ವರ್ಷ ಪದವಿ ಕೋರ್ಸ್‌ಗೆ 180 ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅವಕಾಶವಿದೆ. ಇದರಲ್ಲಿ ಶೇ 25 ರಷ್ಟು ಸ್ಥಾನವನ್ನು ಕರ್ನಾಟಕದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಉಳಿದ ಶೇ 75 ರಷ್ಟು ಸ್ಥಾನಗಳನ್ನು ರಾಷ್ಟ್ರೀಯ ಆಯ್ಕೆ ಕೋಟಾದಡಿ ಭರ್ತಿ ಮಾಡಲಾಗುತ್ತದೆ. ಸ್ನಾತಕೋತ್ತರ ಪದವಿಯಲ್ಲೂ ಕನ್ನಡಿಗರಿಗೆ ಶೇ 25 ರಷ್ಟು ಸ್ಥಾನ ಮೀಸಲಿಡಲಾಗಿದೆ.

ಪ್ರತಿಷ್ಠಿತ ಕಾನೂನು ಕಾಲೇಜುಗಳಲ್ಲಿ ಪ್ರವೇಶ ಪರೀಕ್ಷೆ

ದೇಶದ ಪ್ರಮುಖ 60 ಕಾನೂನು ಕಾಲೇಜುಗಳ ಪ್ರವೇಶಕ್ಕಾಗಿ ಪ್ರತಿ ವರ್ಷ ಲಾ ಸ್ಕೂಲ್ ಎಂಟ್ರೆನ್ಸ್ ಟೆಸ್ಟ್ (LSAT) ನಡೆಸಲಾಗುತ್ತದೆ.

ಬೆಂಗಳೂರಿನ ಕ್ರೈಸ್ಟ್ ಯುನಿವರ್ಸಿಟಿ, ಸ್ಯಾಂಬಸೀಸ್, ಲಾಯ್ಡ್ ಕಾನೂನು ಕಾಲೇಜುಗಳು ಪ್ರವೇಶ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತವೆ. ಸಾಮಾನ್ಯವಾಗಿ ಜನವರಿ-ಫೆಬ್ರವರಿ ತಿಂಗಳಲ್ಲಿ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸುತ್ತವೆ. ಏಪ್ರಿಲ್- ಮೇ ತಿಂಗಳಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ ಇದೆ.

ವಿಸ್ತಾಸ್ ಹೈಬ್ರಿಡ್ ಲರ್ನಿಂಗ್ ಆ್ಯಪ್ ಇದೀಗ ₹999 ವರ್ಷಕ್ಕೆ!

ಖ್ಯಾತ ನಟಿ ಭಾರತಿ ವಿಷ್ಣುವರ್ಧನ್ ಅವರಿಗೆ ವಿಸ್ತಾಸ್ ಲರ್ನಿಂಗ್ ತಂಡದಿಂದ ಅಭಿನಂದನೆ

ಕೊರೊನಾ ಕಾರಣದಿಂದ ಮಕ್ಕಳಿಗೆ ವರ್ಷಗಟ್ಟಲೆ ರಜೆ ಸಿಕ್ಕಿದೆ. ರಜಾ ಮಜಾ ಅಂತ ಮೇಲ್ನೋಟಕ್ಕೆ ಅನಿಸಿದರೂ ಅವರ ಪ್ರಗತಿಯ ಮೇಲೆ ಇದು ಭಾರಿ ಹೊಡೆತವಾಗಿದೆ. ಅವರ ಇಡೀ ಜೀವನ, ಅವರ ಅನುಭವ, ಜ್ಞಾನ ಮತ್ತು ಅವಕಾಶಗಳಲ್ಲಿ ಎರಡು ವರ್ಷ ಹಿಂದೆ ಹೋಗಿವೆ.

ಇದನ್ನೆಲ್ಲ ಗಮನಿಸಿದ ವಿಸ್ತಾಸ್ ಲರ್ನಿಂಗ್ ಆನ್ಲೈನ್ ಶಿಕ್ಷಣ ವೇದಿಕೆ ಅಪರೂಪದ ಆದರೆ ಅತ್ಯಗತ್ಯವಾದ ಸೇವೆಯೊಂದಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ವಿಸ್ತಾಸ್ ಲರ್ನಿಂಗ್, ವಿದ್ಯಾರ್ಥಿಗಳಿಗೆ ಹಣದ ಚಿಂತೆ ನೀಡದೆ ಜ್ಞಾನ ನೀಡುವ ಹೊಚ್ಚ ಹೊಸ ಆನ್ಲೈನ್ ವೇದಿಕೆ. ಇದರ ಬೆಲೆ ಒಂದು ವರ್ಷಕ್ಕೆ ಕೇವಲ ₹999, ಅಂದರೆ ತಿಂಗಳಿಗೆ ₹ 83 ಅಷ್ಟೇ.

ಇಷ್ಟು ಕಡಿಮೆ ಬೆಲೆಗೆ ಏನೆಲ್ಲ ಸಿಗುತ್ತೆ? ಬೆಲೆ ಕಡಿಮೆ ಅಂತ ಸೇವೆಗಳೂ ಕಡಿಮೆ ಅಂದುಕೊಳ್ಳಬೇಡಿ. ಬೆಲೆಗೂ ಸೇವೆಗೂ ಸಂಬಂಧವಿಲ್ಲದೇ ಒಂದಲ್ಲ ಎರಡಲ್ಲ ಹಲವಾರು ವೈಶಿಷ್ಟ್ಯಗಳು ವಿಸ್ತಾಸ್ ಲರ್ನಿಂಗ್‌ನಲ್ಲಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವಿಸ್ತಾಸ್ ಲರ್ನಿಂಗ್ ವೈಶಿಷ್ಟ್ಯಗಳು:

1) K-12 ತರಗತಿಗಳು
2) CBSE, State syllabus ಪಾಠಗಳು
3) Live Classes
4) Academic Animated videos
5) Concept based learning
6) Available in 5 Languages
7) Simplified Study Materials
8) Encrypted Live chatting with tutors
9) Chapter wise assessments

ಸದ್ಯಕ್ಕೆ www.v-learning.in ಮೂಲಕ ಈ ಸೇವೆಗಳನ್ನು ವಿದ್ಯಾರ್ಥಿಗಳು ಪಡೆಯಬಹುದಾಗಿದೆ. ಇಂಗ್ಲಿಷ್, ಕನ್ನಡ, ತಮಿಳು, ಮಲಯಾಳಂ ಭಾಷೆಗಳಲ್ಲಿ ಈಗಾಗಲೇ ಪಾಠಗಳು ಲಭ್ಯವಿದ್ದು ಕೆಲವು ಸಾವಿರ ವಿದ್ಯಾರ್ಥಿಗಳು ಇವುಗಳ ಪ್ರಯೋಜನ ಪಡೆಯುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಮಾತೃಭಾಷೆಯ ಶಿಕ್ಷಣ ಸಿಗುವುದು ಬಹಳ ಅಪರೂಪವಾಗಿರುವ ಈ ಸಮಯದಲ್ಲಿ ವಿಸ್ತಾಸ್ ಲರ್ನಿಂಗ್ ದಿಟ್ಟ ಹೆಜ್ಜೆ ಇಟ್ಟು ಲಕ್ಷಾಂತರ ಮಕ್ಕಳ ಜೀವನದಲ್ಲಿ ಕಲಿಕೆಯ ಜ್ಯೋತಿಯನ್ನು ಬೆಳಗಲಿದೆ.

ಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ತಯಾರಿಸಲಾದ ಈ ಅಪ್ಲಿಕೇಷನ್ ಹಲವಾರು ವಿಶೇಷತೆಗಳಿಂದಾಗಿ ಜನರ ಮೆಚ್ಚುಗೆ ಪಡೆಯುತ್ತಿದೆ. ಒಂದು ಪಾಠವನ್ನು ಒಂದಲ್ಲ ಎರಡಲ್ಲ ಮೂರು ಬೇರೆ ವಿಧಾನಗಳಲ್ಲಿ (ಲೈವ್, ಅನಿಮೇಟೆಡ್, ಕಾನ್ಸೆಪ್ಟ್ ಬೇಸ್ಡ್) ಮಾಡುವ ಮೂಲಕ ಮಕ್ಕಳ ಹೃದಯದಲ್ಲಿ ಪಾಠಗಳನ್ನು ಅಚ್ಚೊತ್ತಿಸುವ ಪ್ರಯತ್ನ ವಿಸ್ತಾಸ್ ಲರ್ನಿಂಗ್‌ನ ವಿಶೇಷತೆ. ಸಾಮ್ರಾಟ್ ನೇತೃತ್ವದ ವಿಸ್ತಾಸ್ ಲರ್ನಿಂಗ್‌ನ ಯುವಕರ ತಂಡ ಮುಂದಿನ ದಿನಗಳಲ್ಲಿ ಎಲ್ಲರನ್ನೂ ಅಚ್ಚರಿಪಡಿಸುವ ಮಕ್ಕಳ ಪ್ರಪಂಚವನ್ನೇ ಈ ಅಪ್ಲಿಕೇಷನಲ್ಲಿ ತರಲಿದೆ.

“ವಿಸ್ತಾಸ್ ಲರ್ನಿಂಗ್‌ನ ವಿಶೇಷತೆ, ಕಡಿಮೆ ಬೆಲೆ ಮತ್ತು ವಿಧಿವಿಧಾನಗಳನ್ನು ಗಮನಿಸಿದರೆ ತುಂಬ ಖುಷಿಯಾಗುತ್ತೆ. ಮಕ್ಕಳ ಪ್ರಯೋಜನಕ್ಕೆಂದೇ ಇರುವ ಈ ವೇದಿಕೆಯನ್ನು ನಾವು ಸ್ವಾಗತಿಸಬೇಕು. ಜನ ಈ ಸುದ್ದಿಯನ್ನು ಮನೆಮನೆಗೆ ತಲುಪಿಸಿ ಮಕ್ಕಳ ಜ್ಞಾನಾರ್ಜನೆಗೆ ಸಹಾಯ ಮಾಡಬೇಕು”

ಶ್ರೀಮತಿ ಭಾರತಿ ವಿಷ್ಣುವರ್ಧನ್, ಹಿರಿಯ ಕಲಾವಿದೆ

“ಇಷ್ಟೆಲ್ಲ ವೈಶಿಷ್ಟ್ಯಗಳನ್ನು ನೀಡುವುದು ದೊಡ್ಡ ಸವಾಲೇ! ಆದರೆ ವಿಸ್ತಾಸ್ ಲರ್ನಿಂಗ್‌ನ ಯುವ ತಂಡವನ್ನು ನೋಡಿದರೆ ಖಂಡಿತ ಇವರ ಶ್ರಮ ಫಲಿಸುತ್ತದೆ ಎಂಬ ಭರವಸೆ ನನಗಿದೆ. ಏರ್ ಡೆಕ್ಕನ್ ಸ್ಥಾಪಿಸುವಾಗಲೂ ನಮಗೆ ಹಲವಾರು ಸವಾಲುಗಳು ಎದುರಾಯಿತು, ಎಲ್ಲರ ಸಮಾನತೆಗಾಗಿ ಏರ್ ಡೆಕ್ಕನ್ ಸ್ಥಾಪಿತವಾದಂತೆ ಈಗ ವಿಸ್ತಾಸ್ ಲರ್ನಿಂಗ್ ಸಮಾನ ಶಿಕ್ಷಣಕ್ಕಾಗಿ ಪಣ ತೊಟ್ಟಿದೆ.”

ಶ್ರೀಮತಿ ಭಾರ್ಗವಿ ಗೋಪಿನಾಥ್, ಉದ್ಯಮಿ

“ಕಲಿಕೆಯ ಬಗ್ಗೆ ಮಕ್ಕಳಲ್ಲಿರುವ ಭಯವನ್ನು ಮೊದಲು ತೆಗೆಯಬೇಕು. ಆನ್ಲೈನ್ ಶಿಕ್ಷಣದ ಮೂಲಕ ವಿಸ್ತಾಸ್ ಲರ್ನಿಂಗ್ ಹೊಸ ವಿಧಾನದ ಬೋಧನೆಯ ಮೂಲಕ ಮಕ್ಕಳಲ್ಲಿ ವಿದ್ಯೆಯನ್ನು ಮನೋರಂಜನೆಯ ರೀತಿ ನೀಡಲಿದೆ.”

C S ಅರವಿಂದ, ಗಣಿತಶಾಸ್ತ್ರಜ್ಞ

ಹೆಚ್ಚಿನ ಮಾಹಿತಿಗಾಗಿ: Website: www.v-learning.in, Toll-free No.: 18004193629

ಡಿಪ್ಲೊಮಾ ಬಳಿಕ ಪದವಿ ಸೇರಬಹುದೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **ನಾನು ಡಿಪ್ಲೊಮಾ ಓದುತ್ತಿದ್ದೇನೆ. ಮೂರು ವರ್ಷದ ಡಿಪ್ಲೊಮಾ ಬಳಿಕ ಪದವಿ ಕೋರ್ಸ್ ಸೇರಲು ಸಾಧ್ಯವೇ?**

ಪವನಾ, ಊರು ತಿಳಿಸಿಲ್ಲ.

ಮೂರು ವರ್ಷದ ಡಿಪ್ಲೊಮಾ ಬಳಿಕ ಪದವಿ ಕೋರ್ಸ್‌ಗೆ ಸೇರಬಹುದು.

- **ನಾನು ಈಗ ಬಿಕಾಂ ಅಂತಿಮ ವರ್ಷದಲ್ಲಿ ಓದುತ್ತಿದ್ದು, ಮನೆಯಲ್ಲಿ ಆರ್ಥಿಕ ಸಮಸ್ಯೆ ಇರುವ ಕಾರಣ ಓದಿನ ಜೊತೆ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಆದ್ದರಿಂದ, ಬೇಗನೆ ಉದ್ಯೋಗ ಮಾಡಲು ಯಾವ ಕೋರ್ಸ್ ಕಲಿಯಬೇಕು ಎಂದು ತಿಳಿಸಿಕೊಡಿ.**

ಹೆಸರು, ಊರು ತಿಳಿಸಿಲ್ಲ.

ಈಗಿನ ಪರಿಸ್ಥಿತಿಯಿಂದ ಎದೆಗುಂದದೆ, ನಿಮ್ಮ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ. ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ ಮುಂದಿನ ಬದುಕಿನ ಬಗ್ಗೆ ರಾಜಿಯಾಗದಿರಿ; ಏಕೆಂದರೆ, ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ.

ಬಿಕಾಂ ನಂತರ ಬ್ಯಾಂಕಿಂಗ್, ಫೈನಾನ್ಸ್, ಇನ್ವೆಸ್ಟ್‌ಮೆಂಟ್, ಇನ್ಶ್ಯೂರೆನ್ಸ್, ರೀಟೇಲ್, ಮಾರ್ಕೆಟಿಂಗ್, ಎಫ್‌ಎಂಜಿಸಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನೀವು ವೃತ್ತಿಯನ್ನು ಅರಸಬಹುದು ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಕೆಲಸಗಳನ್ನೂ ಪಡೆದುಕೊಳ್ಳಬಹುದು. ಜೊತೆಗೆ, ನಿಮ್ಮ ಆಸಕ್ತಿಯ ಅನುಸಾರ ದೂರ ಶಿಕ್ಷಣದ ಮುಖಾಂತರ ಎಂಬಿಎ, ಎಂಕಾಂ ಮುಂತಾದ ಸ್ನಾತಕೋತ್ತರ ಕೋರ್ಸ್‌ಗಳನ್ನು ಮಾಡಬಹುದು. ಬಿಕಾಂ ಮುಗಿಯುವವರೆಗೆ ಅರೆಕಾಲಿಕ ಕೆಲಸಗಳನ್ನು ಮಾಡಬಹುದು. ಹೆಚ್ಚಿನ ವಿವರಗಳಿಗೆ ಗಮನಿಸಿ: http://www.vpradeepkumar.com/earn-while-you-learn-3

- **ನಾನು ಬಿಬಿಎ ಪದವಿಯಲ್ಲಿ ಶೇಕಡ 80 ಅಂಕ ಪಡೆದಿದ್ದೇನೆ. ಮುಂದೆ ಯಾವ ಕೋರ್ಸ್ ಮಾಡಿದರೆ ಹೆಚ್ಚಿನ ಉದ್ಯೋಗಾವಕಾಶಗಳು ಸಿಗುತ್ತವೆ ಮತ್ತು ಆ ಕೋರ್ಸ್ ಮಾಡಲು ಇರುವ ಒಳ್ಳೆಯ ಕಾಲೇಜುಗಳನ್ನು ತಿಳಿಸಿ.**

ಚೇತನ್ ಎಸ್.ಕೆ., ಚಿತ್ರದುರ್ಗ.

ಬಿಬಿಎ ನಂತರ ಎಂಬಿಎ ಕೋರ್ಸ್ ಮಾಡುವುದು ಉತ್ತಮ. ಉದ್ಯಮಗಳ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಇದಲ್ಲದೆ, ಉದ್ಯಮಗಳಲ್ಲಿ ಪ್ರಾಯೋಗಿಕವಾದ ತರಬೇತಿಯನ್ನು ಪ್ರಾಜೆಕ್ಟ್‌ಗಳ ಮುಖಾಂತರ ನೀಡುವುದರಿಂದ ಕಲಿಕೆ ಪರಿಪೂರ್ಣವಾಗುತ್ತದೆ. ನಿಮ್ಮ ನೈಪುಣ್ಯತೆ ಮತ್ತು ಚತುರತೆ ವರ್ಧಿಸಿ, ಯಾವುದೇ ಕೆಲಸವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ.

ಒಟ್ಟಾರೆ, ಎಂಬಿಎ ಕಲಿಕೆಯ ವೈವಿಧ್ಯತೆಗಳಿಂದ ನಿಮ್ಮ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯಾಗುತ್ತದೆ. ಆದ್ದರಿಂದಲೇ, ಎಂಬಿಎ ಕೋರ್ಸ್ ಜನಪ್ರಿಯ.

ನಮ್ಮ ದೇಶದಲ್ಲಿ ಸುಮಾರು 5000ಕ್ಕೂ ಹೆಚ್ಚಿನ ಎಂಬಿಎ ಕಾಲೇಜುಗಳಿದ್ದು, ಸಿಎಟಿ, ಪಿಜಿಸಿಇಟಿ ಗಳಂತಹ ಪರೀಕ್ಷೆಗಳ ಮೂಲಕ ಪ್ರವೇಶದ ಆಯ್ಕೆಯಾಗುತ್ತದೆ. ಕ್ಯಾಂಪಸ್ ನೇಮಕಾತಿ ಇರುವ, ಉತ್ತಮ ರ‍್ಯಾಂಕಿಂಗ್ ಇರುವ ಪ್ರತಿಷ್ಠಿತ ಕಾಲೇಜು/ವಿಶ್ವವಿದ್ಯಾಲಯದಲ್ಲಿ ಎಂಬಿಎ ಮಾಡಬೇಕು. ಈ ಮಾಹಿತಿಯನ್ನು ಅನೇಕ ಮಾಧ್ಯಮಗಳು ಅಂತರ್ಜಾಲದಲ್ಲಿ ಪ್ರಕಟಿಸುತ್ತವೆ. ಎಲ್ಲಕ್ಕಿಂತ ಪ್ರಮುಖವಾಗಿ ಎಂಬಿಎ ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಈ ತತ್ವಗಳ ಆಧಾರದ ಮೇಲೆ, ನೀವು ವೃತ್ತಿ ಮತ್ತು ಖಾಸಗಿ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ಹೆಚ್ಚಿನ ವಿವರಗಳಿಗಾಗಿ ಈ ವೀಡಿಯೊ ವೀಕ್ಷಿಸಿ: https://www.youtube.com/watch?v = WHZTFCmu3zg

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿಶ್ವ ವಿದ್ಯಾಪೀಠ ಸಮೂಹ ಶಾಲೆಗಳಲ್ಲಿ ನರವಿಜ್ಞಾನ ಆಧಾರಿತ ಶಿಕ್ಷಣ

ವಿದ್ಯಾರ್ಥಿ ಕೇಂದ್ರೀತವಾದ ಬೋಧನಾ ಕ್ರಮವು ಮಕ್ಕಳಿಗೆ ತಮ್ಮದೇ ಆದ ಸಾಮರ್ಥ್ಯವನ್ನು ಗುರುತಿಸಿಕೊಳ್ಳಲು ಅವರ ಪ್ರತಿಭಾವೃದ್ಧಿಗೆ ಸಹಕಾರಿಯಾಗಿದ್ದು, ಜೀವನಪೂರ್ತಿ ನೆರವಾಗಲಿದೆ.

ವಿಶ್ವ ವಿದ್ಯಾಪೀಠ ಸಮೂಹದ ಶಾಲೆಗಳು, ನಿರ್ದೇಶಕಿ ಸುಶೀಲಾ ಸಂತೋಷ್ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿವೆ. ದೇಶದಲ್ಲಿಯೇ ಮೊದಲ ಬಾರಿಗೆ ತನ್ನ ಶಾಲೆಗಳಲ್ಲಿ ನರವಿಜ್ಞಾನ ಆಧರಿತ ಶಿಕ್ಷಣವನ್ನು ಪರಿಚಯಿಸಿದೆ. ಇತ್ತೀಚೆಗೆ 10ನೇ ವಾರ್ಷಿಕೋತ್ಸವ ನಡೆದಿದ್ದು ಶಾಲೆಯ ಆಡಳಿತ ಮಂಡಳಿಯು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ಶಾಲೆಯು ನರವಿಜ್ಞಾನ ಆಧರಿತ ಬೋಧನಾ ಕಾರ್ಯತಂತ್ರದ ಮೂಲಕ ಪಠ್ಯವನ್ನೂ ಮೀರಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದೆ.

ನರವಿಜ್ಞಾನ ಆಧಾರಿತ ಬೋಧನಾ–ಕಲಿಕೆ ಕ್ರಮವು, ಮಿದುಳು ಮಾಹಿತಿಯನ್ನು ಗ್ರಹಿಸುವ ಕ್ರಮ ಆಧರಿಸಿದೆ. ಅದರೆ, ಸ್ವಯಂನಿರ್ದೇಶಿತ ಕಲಿಕಾ ಕ್ರಮದ ಮೂಲಕ ಇದು ಸಕಾರಾತ್ಮಕ ಭಾವನೆಯನ್ನು ಕಲಿಕೆಯುದ್ದಕ್ಕೂ ಮೂಡಿಸಲಿದೆ. ಈ ಮೂಲಕ ಮಿದುಳು ಹೊಸ ವಿಷಯಗಳನ್ನು ಗ್ರಹಿಸಲು ಉತ್ತೇಜನ ನೀಡಲಿದ್ದು, ಗ್ರಹಿಸುವ ವೇಗವನ್ನು ಹೆಚ್ಚಿಸಲಿದೆ.

ಪ್ರತಿಭೆಗಳನ್ನು ಗುರುತಿಸಲು ಸಜ್ಜು

ನರವಿಜ್ಞಾನ ಶಿಕ್ಷಣ ಆಧರಿಸಿದ ಬೋಧನಾಕ್ರಮವು ಶಿಕ್ಷಕರಿಗೆ ವಿದ್ಯಾರ್ಥಿಗಳ ಮನಸ್ಥಿತಿಯನ್ನು ಅರಿಯಲು ಹಾಗೂ ವಿಶ್ಲೇಷಿಸಲು, ಪ್ರತಿ ವಿದ್ಯಾರ್ಥಿಯು ಖುಷಿಯಿಂದ, ವೇಗವಾಗಿ ಕಲಿಯಬೇಕು ಎಂದು ಪ್ರೇರೇಪಿಸಲು ಸಹಕಾರಿಯಾಗಿದೆ. ಎನ್‌ಇಪಿ 2020 ಪ್ರಕಾರ, ನರವಿಜ್ಞಾನ ಆಧರಿತ ಶಿಕ್ಷಣವನ್ನು ಬಿ.ಇಡಿ ಶಿಕ್ಷಣದ ಹಂತದಲ್ಲಿ ಪರಿಚಯಿಸಲಾಗುತ್ತಿದೆ. ಪ್ರತಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಅರಿತುಕೊಳ್ಳಬೇಕು.

ವಿಶ್ವ ವಿದ್ಯಾಪೀಠವು ಮತ್ತೂ ಒಂದು ಹೆಜ್ಜೆ ಮುಂದಿಟ್ಟಿದ್ದು, ತನ್ನ ಶಿಕ್ಷಕರಿಗೆ ನರವಿಜ್ಞಾನ ಆಧಾರಿತ ಶಿಕ್ಷಣ ಕುರಿತು ತರಬೇತಿಯನ್ನು ನೀಡಿದೆ. ಈಗ ಶಿಕ್ಷಕರು ಮೆದುಳು ಹೇಗೆ ವಿಕಸನಗೊಳ್ಳಲಿದೆ, ಮೆದುಳಿನ ಭಿನ್ನ ಭಾಗಗಳೇನು? ಮಕ್ಕಳ ಜೀವನದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂದು ಅರಿತುಕೊಳ್ಳಲಿದ್ದಾರೆ. ಈ ಜ್ಞಾನವನ್ನು ಆಧರಿಸಿ, ಅವರು ಮಕ್ಕಳ ನಿಜವಾದ ಸಾಮರ್ಥ್ಯವನ್ನು ಗುರುತಿಸಲಿದ್ದಾರೆ ಹಾಗೂ ಅವರ ಕೌಶಲವನ್ನು ಶ್ಲಾಘಿಸಲಿದ್ದಾರೆ. ಅವರು ಮಕ್ಕಳು ಯಾವುದರಲ್ಲಿ ಹಿಂದುಳಿದಿದ್ದರೂ ಆ ಬಗ್ಗೆ ದೂರುವುದಿಲ್ಲ.

ಪ್ರತಿ ವಿದ್ಯಾರ್ಥಿಯ ಬದುಕಿನಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ನರವಿಜ್ಞಾನ ಆಧಾರಿತ ಶಿಕ್ಷಣವನ್ನು ವಿಶ್ವ ವಿದ್ಯಾಪೀಠದಲ್ಲಿ ಪರಿಚಯಿಸಲು, ಮಕ್ಕಳ ಕಲಿಕೆ, ಗ್ರಹಿಕೆಯನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಶಿಕ್ಷಕರು ಮಕ್ಕಳನ್ನು ಅರ್ಥ ಮಾಡಿಕೊಳ್ಳುವುದು, ತಮ್ಮ ಸಾಮರ್ಥ್ಯವನ್ನು ತಿಳಿಯುವಂತೆ ಮಾಡುವುದೂ ಅಗತ್ಯವಾಗಿದೆ. ಪೋಷಕರ ಪಾತ್ರವು ಮುಖ್ಯವಾಗಿದೆ. ಹೀಗಾಗಿ, ಮಕ್ಕಳ ಅಗತ್ಯವನ್ನು ಗ್ರಹಿಸುವಂತೆ ಪೋಷಕರಿಗೂ ತರಬೇತಿ ನೀಡಲಾಗುತ್ತದೆ.

10ನೇ ವಯಸ್ಸಿಗೆ 10 ಕಲಿಯಿರಿ

ದಶ ಪ್ರಬೋಧ – ಇದು ವಿಶ್ವವಿದ್ಯಾಪೀಠವು 10ನೇ ವಾರ್ಷಿಕೋತ್ಸವ ನಿಮಿತ್ತ ಜಾರಿಗೊಳಿಸಿರುವ ಚಿಂತನೆ. ‘10ನೇ ವಯಸ್ಸಿಗೆ 10 ಕಲಿಯಿರಿ’ ಪ್ರಕಾರ ಪ್ರತಿ ವಿದ್ಯಾರ್ಥಿಯು ಸ್ವಯಂ ಅವಲಂಬಿ ಆಗಬೇಕು, ಸ್ವಯಂ ನಿರ್ದೇಶಿತನಾಗಿರಬೇಕು, ಸ್ವಯಂ ಪ್ರೇರಕವಾಗಿರಬೇಕು, ಸ್ವಶಿಸ್ತು ರೂಡಿಸಿಕೊಳ್ಳಬೇಕು ಎಂಬುದೇ ಆಗಿದೆ.

ಪ್ರತಿಯೊಬ್ಬರಿಗೂ ಆಂತರಿಕ ಪ್ರೇರೇಪಣೆ ಮುಖ್ಯವಾಗಲಿದೆ. ಕಲಿಕೆ ಉದ್ದೇಶವೇನು? ಬದುಕಿನ ಮೇಲೆ ಅದರ ಪರಿಣಾಮ ಏನು ಎಂದು ವಿದ್ಯಾರ್ಥಿಗಳು ಅರ್ಥ-ಮಾಡಿಕೊಳ್ಳದೇ ಇದ್ದರೆ ಅವರು ಕಲಿಕೆಯಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳಬಹುದು. ಹೀಗಾಗಿ, ಅದಕ್ಕೆ ಪೂರಕವಾಗಿ ವಿದ್ಯರ್ಥಿಗಳನ್ನು ಬೆಳೆಸುವುದು ಶಿಕ್ಷಕರ ಹೊಣೆಯೂ ಆಗಿದೆ. ಕೇವಲ ಬಾಯಿಪಾಠ ಮತ್ತು ಉತ್ತರಗಳನ್ನು ಮನನ ಮಾಡುವುದರಿಂದ ಪ್ರಯೋಜನ ಆಗದು.

ವಿಶ್ವ ವಿದ್ಯಾಪೀಠ ಸಮೂಹ ಶಾಲೆಗಳು

(ಸಿ.ಎಸ್.ಎಜುಕೇಷನ್ ಟ್ರಸ್ಟ್‌ನ ನಿರ್ವಹಣೆ)

ಕಲಿಯುವ, ಬೆಳೆಯುವ ತಾಣ

2012ರಲ್ಲಿ ಸ್ಥಾಪನೆಯಾದ ಶಾಲೆಯು ಸದ್ಯ ಬೆಂಗಳೂರಿನಲ್ಲಿ ಮೂರು ಕ್ಯಾಂಪಸ್‌ಗಳನ್ನು ಹೊಂದಿದೆ. ವಿಕ್ರಮಶೀಲ ಮತ್ತು ತಕ್ಷಶೀಲ ಕ್ಯಾಂಪಸ್‌ಗಳು ಯಲಹಂಕದಲ್ಲಿವೆ. ಮಗಧಾ ಕ್ಯಾಂಪಸ್ ವೈಟ್‌ಫೀಲ್ಡ್‌ನಲ್ಲಿದೆ. ಯಲಹಂಕದ ಕ್ಯಾಂಪಸ್‌ನಲ್ಲಿ ಐಸಿಎಸ್‌ಇ, ಸಿಬಿಎಸ್‌ಇ, ಐಜಿಸಿಎಸ್‌ಇ ಪದ್ಧತಿಯಲ್ಲಿ ಶಿಕ್ಷಣ ನೀಡಲಾಗುತ್ತದೆ.

ವಿಶ್ವ ವಿದ್ಯಾಪೀಠವು ನಗರದ ಉನ್ನತ ಶಾಲೆಗಳ ಪಟ್ಟಿಯಲ್ಲಿದ್ದು, ಅತ್ಯಾಧುನಿಕವಾದ ಮೂಲಸೌಕರ್ಯವನ್ನು ಹೊಂದಿದೆ. ವಿಶಾಲವಾದ ಸ್ಥಳವನ್ನು ಒಳಗೊಂಡಿದ್ದು, ತಂತ್ರಜ್ಞಾನ ಆಧಾರಿತ ತರಗತಿಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಸಂಗೀತ ಹಾಗೂ ಯೋಗ ಒಳಗೊಂಡಂತೆ ಪಠ್ಯೇತರ ಚಟುವಟಿಕೆಗಳಿಗೆ ಅಗತ್ಯ ಸ್ಥಳಾವಕಾಶವಿದೆ.

ದೈಹಿಕ ಶಿಕ್ಷಣವು ಪಠ್ಯದ ಭಾಗವೇ ಆಗಿದ್ದು, ವಿದ್ಯಾರ್ಥಿಗಳು ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವಿದೆ.

ವಿಶ್ವ ವಿದ್ಯಾಪೀಠ ಸಮೂಹ ಶಾಲೆಗಳ ತಕ್ಷಶೀಲ ಕ್ಯಾಂಪಸ್‌ನ ವಿಶಾಲನೋಟ.

ವಿಶ್ವ ವಿದ್ಯಾಪೀಠದಲ್ಲಿ ನರವಿಜ್ಞಾನ ಆಧಾರಿತ ಶಿಕ್ಷಣ ಆರಂಭ

ಶಾಲೆಯ 10ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ನರವಿಜ್ಞಾನ ಆಧಾರಿತ ಶಿಕ್ಷಣ ಆರಂಭಿಸಿದ ವೇಳೆ ಕೇಳಿಬಂದ ಕೆಲವು ಅಭಿಪ್ರಾಯಗಳು.

ನಾವು ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯ ಗುರುತಿಸಿ, ಬೆಳೆಸಬೇಕು. ಪ್ರತಿ ವಿದ್ಯಾರ್ಥಿಯು ಭಿನ್ನ. ನರವಿಜ್ಞಾನ ಆಧಾರಿತ ಶಾಲೆ ಚಿಂತನೆಯನ್ನು ವಿಶ್ವವಿದ್ಯಾಪೀಠವು ಆರಂಭಿಸಿರುವುದು ನನ್ನ ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಹೆಮ್ಮೆಯ ಕ್ಷಣ.

ಎಸ್.ಆರ್.ವಿಶ್ವನಾಥ್, ಶಾಸಕ, ಬಿಡಿಎ ಅಧ್ಯಕ್ಷ

ಇಂದು ನೀಡುತ್ತಿರುವ ಶಿಕ್ಷಣವು ವಿದ್ಯಾರ್ಥಿಗಷ್ಟೇ ಅಲ್ಲ, ಇಡೀ ಸಮಾಜಕ್ಕೆ ಉಪಯೋಗಕರ ಎಂಬುದು ಶ್ಲಾಘನೀಯ. ನರವಿಜ್ಞಾನ ಆಧಾರಿತ ಬೋಧನೆಯು ಮುಖ್ಯವಾಗಿ ಶಿಕ್ಷಕರಿಗೂ ಅಗತ್ಯ ತರಬೇತಿ ನೀಡಿರುವುದು ಮಕ್ಕಳು ಸರಿಯಾದ ಆಯ್ಕೆ ಮಾಡಿಕೊಳ್ಳಲು ಸಹಕಾರಿ ಆಗಲಿದೆ. ಇದು ಸ್ವತಃ ಮಕ್ಕಳಿಗೆ, ಸಮಾಜ ಹಾಗೂ ಒಟ್ಟಾರೆ ದೇಶಕ್ಕೆ ನೆರವಾಗಲಿದೆ.

ಎನ್.ಕುಮಾರ್, ನಿವೃತ್ತ ನ್ಯಾಯಮೂರ್ತಿ ಕರ್ನಾಟಕ ಹೈಕೋರ್ಟ್

ಮಕ್ಕಳ ಸಾಮರ್ಥ್ಯವನ್ನು ಗುರುತಿಸಿ, ಪ್ರೇರೇಪಿಸುವ ಕ್ರಮವು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಗೆಳೆಯುವ ನಿಟ್ಟಿನಲ್ಲಿ ಮುಖ್ಯವಾದ ಪಾತ್ರ ವಹಿಸಲಿದೆ.

ಡಾ.ಗುರುರಾಜ ಕರಜಗಿ ಅಧ್ಯಕ್ಷರು, ಎಸಿಟಿ

ಶಿಕ್ಷಕರು ಮತ್ತು ಪೋಷಕರು ಒಟ್ಟಾಗಿ ಕಾರ್ಯನಿರ್ವಹಿಸಿದರೆ, ಮಕ್ಕಳನ್ನು ಕಲ್ಪನೆಯನ್ನೂ ಮೀರಿ ಬೆಳೆಸಲು ಸಾಧ್ಯವಾಗಲಿದೆ. ಜೊತೆಗೆ ಕೌಶಲಯುಕ್ತ, ಭಾವನಾತ್ಮಕ ತರಬೇತಿ ನೀಡುವುದೂ ಅಷ್ಟೇ ಪ್ರಮುಖವಾದುದು.

ಡಾ.ಪ್ರತಿಮಾ ಮೂರ್ತಿ ನಿರ್ದೇಶಕಿ, ನಿಮ್ಹಾನ್ಸ್.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಫುಟ್‌ವೇರ್ ಡಿಸೈನರ್ ಕೋರ್ಸ್

ಆರ್.ಬಿ. ಗುರುಬಸವರಾಜ



ಕೋರ್ಸ್ ಕಾರ್ನರ್

ಪಾದರಕ್ಷೆಗಳ ವಿನ್ಯಾಸಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿವೆ. ಈ ಕ್ಷೇತ್ರದಲ್ಲಿ ಕ್ರಿಯಾಶೀಲ ವಿನ್ಯಾಸಕಾರರಿಗೆ ಬೇಡಿಕೆಯೂ ಇದೆ. ಇಲ್ಲಿ ಉದ್ಯೋಗ ಪಡೆಯುವವರು ಕಡ್ಡಾಯವಾಗಿ ಫುಟ್‌ವೇರ್ ಡಿಸೈನಿಂಗ್ ಕೋರ್ಸ್ ಕಲಿತಿರಬೇಕು.

ಏನಿದು ಕೋರ್ಸ್?: ಉತ್ತಮ ವಿನ್ಯಾಸದ ಪಾದರಕ್ಷೆಗಳ ತಯಾರಿಸುವ, ಅವಶ್ಯಕತೆಗೆ ತಕ್ಕಂತೆ ಪಾದರಕ್ಷೆಗಳನ್ನು ವಿನ್ಯಾಸಗೊಳಿಸಿ, ಉತ್ಪಾದಿಸಿ, ಅದನ್ನು ಮಾರ್ಕೆಟಿಂಗ್ ಮಾಡುವ ಕುರಿತು ಸಂಶೋಧನಾತ್ಮಕ ಅಂಶಗಳನ್ನು ಕಲಿಸುವುದು ಈ ಫುಟ್‌ವೇರ್ ಡಿಸೈನಿಂಗ್ ಕೋರ್ಸ್ ಉದ್ದೇಶ.

ಕೋರ್ಸ್‌ನಲ್ಲಿ ಏನಿರುತ್ತದೆ?: ವಿನ್ಯಾಸದ ಮೂಲಾಂಶಗಳು, ವಿನ್ಯಾಸ ಮತ್ತು ಉತ್ಪನ್ನ ಅಭಿವೃದ್ಧಿ, ಹೊಲಿಗೆ, ಕಚ್ಚಾ ಸಾಮಗ್ರಿಗಳ ಆಯ್ಕೆ ಮತ್ತು ಸರಬರಾಜು, ಶೈಲಿಯ ಪ್ರಮಾಣೀಕರಣ, ಮಾರುಕಟ್ಟೆ ವಿಸ್ತಾರಣೆ, ಪ್ರತಿಕ್ರಿಯೆಗಳ ಸ್ವೀಕರಣೆ, ವಿವಿಧ ಕಚ್ಚಾಸಾಮಗ್ರಿಗಳ ಬಳಕೆ ಮತ್ತು ಸಂಸ್ಕರಣೆ, ಗ್ರಾಹಕರ ಅಪೇಕ್ಷೆಗೆ ಅನುಗುಣವಾಗಿ ಪಾದರಕ್ಷೆಗಳ ವಿನ್ಯಾಸ, ಡಿಜಿಟಲ್ ಪ್ರಾತಿನಿಧಿಕ ತಂತ್ರ, ಫ್ಯಾಷನ್ ಪ್ರವೃತ್ತಿ, ಸಂಶೋಧನೆ, ಲೆಕ್ಕಪತ್ರ ನಿರ್ವಹಣೆ ಇತ್ಯಾದಿಗಳ ಬಗ್ಗೆ ಪ್ರಾಯೋಗಿಕ ಜ್ಞಾನ ನೀಡಲಾಗುತ್ತದೆ.

ಕೋರ್ಸ್ ವಿವರ: ಆರು ತಿಂಗಳು ಮತ್ತು ಒಂದು ತಿಂಗಳ ಎರಡು ಸರ್ಟಿಫಿಕೇಟ್ ಕೋರ್ಸ್, ಒಂದು ವರ್ಷದ ಡಿಪ್ಲೊಮಾ ಕೋರ್ಸ್, ಜೊತೆಗೆ ಫುಟ್‌ವೇರ್ ಟೆಕ್ನಾಲಜಿ ಹಾಗೂ ವಿನ್ಯಾಸ-ಉತ್ಪಾದನೆ ವಿಷಯಗಳಿರುವ 4 ವರ್ಷದ (ಬಿ.ಎಸ್‌ಸಿ ಮತ್ತು ಬಿ.ಡಿಎಸ್) ಪದವಿ ಕೋರ್ಸ್‌ಗಳಿವೆ. ಸರ್ಟಿಫಿಕೇಟ್/ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಯಾವುದೇ ವಿಭಾಗದಲ್ಲಿ ಪಿಯುಸಿ ಪಾಸಾಗಿರಬೇಕು. ಪದವಿ ಪ್ರವೇಶಕ್ಕೆ ಪಿಯುಸಿ ಜೊತೆಗೆ, ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲೂ ಉತ್ತೀರ್ಣರಾಗಿರಬೇಕು.

ಈ ಕೋರ್ಸ್ ಪೂರೈಸಿದವರು ಪ್ರಾಡಕ್ಟ್ ಡೆವಲಪರ್, ಪ್ರಾಡಕ್ಟ್ ಡೆವಲಪ್‌ಮೆಂಟ್ ಮ್ಯಾನೇಜರ್, ಕ್ವಾಲಿಟಿ ಕಂಟ್ರೋಲರ್, ಫುಟ್‌ವೇರ್ ಟೆಕ್ನಾಲಜಿಸ್ಟ್, ಹೋಲ್‌ಸೇಲ್ ಮತ್ತು ರಿಟೇಲ್ ವ್ಯಾಪಾರ, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್, ಪ್ಲಾನಿಂಗ್ ಎಕ್ಸಿಕ್ಯೂಟಿವ್ ಮತ್ತು ಟ್ರೆಂಡ್ ಅನಲೈಸರ್ ಹೀಗೆ ವಿವಿಧ ವೃತ್ತಿಗಳಿಗೆ ಸೇರಬಹುದು. ವಿವಿಧ ಖಾಸಗಿ ಕಂಪನಿಗಳು ಮತ್ತು ಸರ್ಕಾರದ ಸಹಭಾಗಿತ್ವದ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳಿವೆ.

ಕೋರ್ಸ್ ಇಲ್ಲಿ ಲಭ್ಯ: ನೊಯ್ಡಾ, ಬೆಂಗಳೂರು, ಚೆನ್ನೈ, ಕೋಲ್ಕತ್ತಾ, ಮುಂಬೈನಲ್ಲಿರುವ ಪಾದರಕ್ಷೆ ವಿನ್ಯಾಸ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿ ಕೋರ್ಸ್ ಲಭ್ಯವಿದೆ. ಚೆನ್ನೈ ಮತ್ತು ಆಗ್ರಾದಲ್ಲಿರುವ ಕೇಂದ್ರೀಯ ಪಾದರಕ್ಷೆ ತರಬೇತಿ ಸಂಸ್ಥೆಯಲ್ಲೂ ಕೋರ್ಸ್ ಕಲಿಯಬಹುದು. ಹೆಚ್ಚಿನ ಮಾಹಿತಿಗೆ ಈ ಲಿಂಕ್ ನೋಡಿ: https://fddiindia.com/school-of-footwear-design-production.php

ಗಾನವೆನುವ ಗಂಧ ಚೆಲ್ಲಿ...

• ವಿಶಾಖ ಎನ್.

ಮಹಾತ್ಮ ಗಾಂಧಿಯ ತುಂಡುಬಟ್ಟೆ, ರವೀಂದ್ರನಾಥ ಟ್ಯಾಗೋರರ ಉದ್ದನೆ ಗಡ್ಡ ಹೇಗೆ ಭಾರತದ ಸಮಷ್ಟಿ ಪ್ರಜ್ಞೆಯ ಅವಿಭಾಜ್ಯ ತುಣುಕುಗಳೋ ಹಾಗೆಯೇ ಲತಾ ಮಂಗೇಶ್ಕರ್ ಕಂಠ. ಭಾರತೀಯ ಜನಪ್ರಿಯ ಸಂಗೀತದ ಸಾಮ್ರಾಜ್ಞಿ ಲತಾ. 36 ಭಾಷೆಗಳಲ್ಲಿ ಅವರ ಕಂಠಮಾಧುರ್ಯ ಅನಾವರಣಗೊಂಡಿದೆ. ಹಿಂದಿಯಲ್ಲೇ 1000ಕ್ಕೂ ಹೆಚ್ಚು ಸಿನಿಮಾ ಗೀತೆಗಳನ್ನು ಹಾಡಿದ್ದಾರೆ. ಮರಾಠಿ, ಬಂಗಾಳಿ ಭಾಷೆಗಳ ಸಂಗೀತಕ್ಕೂ ಅವರ ಕಾಣ್ಕೆ ದೊಡ್ಡದು.

'ಕಿತಿ ಹಸಾಲ್' ಮರಾಠಿ ಚಿತ್ರಕ್ಕೆ 'ನಾಚೂ ಯಾ ಗಾಡೆ' ಲತಾ ಮೊದಲು ಹಾಡಿದ ಗೀತೆ. ಎಡಿಟಿಂಗ್ ಆದಮೇಲೆ ಆ ಹಾಡನ್ನೇ ಕಿತ್ತುಹಾಕಿದ್ದರು. ಆಗಿನ್ನೂ ಗಾಯಕಿಗೆ 13 ವರ್ಷ. ಆಮೇಲೆ 'ಪಹೀಲಿ ಮಂಗಲಾ ಗೌರ್' ಮರಾಠಿ ಸಿನಿಮಾಗೆ 'ನತಾಲಿ ಚೈತ್ರಾಚಿ ನವಲಾಯ್' ಎಂಬ ಹಾಡನ್ನು ಹಾಡಿದರು. 'ಮಾತಾ ಏಕ್ ಸಪೂತ್ ಕಿ ದುನಿಯಾ' ಧ್ವನಿಮುದ್ರಿಸಿದ ಮೊದಲ ಹಿಂದಿ ಗೀತೆ.

ವಿದ್ಯಾರ್ಥಿನಿ ಶಿಸ್ತು

1945ರಲ್ಲಿ ಇಂದೋರ್‌ನಿಂದ ಮುಂಬೈಗೆ ಸ್ಥಳಾಂತರಗೊಂಡ ಲತಾ, ಹಿಂದೂಸ್ತಾನಿ ಸಂಗೀತ ಕಲಿಯಲು ಸೇರಿದ್ದು ಉಸ್ತಾದ್ ಅಮನ್ ಅಲಿ ಖಾನ್ ಗರಡಿಗೆ. ಭೇಂಡಿ ಬಜಾರ್ ಘರಾಣದ ಅಮನ್ ಸಂಗೀತದ ಸೂಕ್ಷ್ಮಗಳನ್ನು ಹೃದಯಕ್ಕಿಳಿಸಿದರು. ಲತಾ ಸಿನಿಮಾ ನಂಟಿಗೆ ತಂತು ಆಗಿದ್ದವರು ವಿನಾಯಕ ದಾಮೋದರ್ ಕರ್ನಾಟಕಿ. ಅವರು 1948ರಲ್ಲಿ ನಿಧನರಾದರು. ಆಮೇಲೆ ಈ ಗಾನಪ್ರತಿಭೆಯ ವೃತ್ತಿಬದುಕಿಗೆ ಸಾಣೆಹಿಡಿಯಲಾರಂಭಿಸಿದ್ದು ಸಂಗೀತ ನಿರ್ದೇಶಕ ಗುಲಾಂ ಹೈದರ್.

ಸಶಧರ್ ಮುಖರ್ಜಿ ಎಂಬ ನಿರ್ಮಾಪಕರು 'ಶಹೀದ್' ಎಂಬ ಸಿನಿಮಾಗೆ ಹೊಸ ಗಾಯಕಿಯ ಶೋಧದಲ್ಲಿದ್ದರು. ಲತಾ ಅವರನ್ನು ಮುಖರ್ಜಿ ಬಳಿಗೆ ಕರೆದುಕೊಂಡು ಹೋದದ್ದು ಗುಲಾಂ. ಧ್ವನಿಪರೀಕ್ಷೆ ನಡೆಸಿದ ಮುಖರ್ಜಿ, 'ಇದು ತೆಳು ಕಂಠ. ನಮ್ಮ ಸಿನಿಮಾಗೆ ಹೊಂದುವುದಿಲ್ಲ' ಎಂದು ತಿರಸ್ಕರಿಸಿಬಿಟ್ಟರು. ಗುಲಾಂ ಅವರಿಗೋ ನಖಶಿಖಾಂತ ಕೋಪ. 'ಇವಳ ಕಂಠದ ಛಾಪು ಮುಂದೆ ಹೇಗಿರುತ್ತದೆ ಎಂದು ನೀವೇ ನೋಡುವಿರಂತೆ. ಇವಳಿಂದ ಹಾಡಿಸಲು ಕಾಲಿಗೆ ಬಿದ್ದು ಬೇಡಬೇಕಾದ ದಿನವೂ ಬಂದೀತು' ಎಂದು ಭಾವಾವೇಶದಲ್ಲಿ ಹೇಳಿದಾಗ ಉದಯೋನ್ಮುಖ ಗಾಯಕಿಯ ಕಣ್ಣುಗಳು ಪಿಳಿಗುಟ್ಟಿದ್ದವು. ಅಷ್ಟೇ ಅಲ್ಲ, ಅದನ್ನೊಂದು ಹೊಣೆಗಾರಿಕೆ ಎಂದೇ ಮನಸ್ಸು ಭಾವಿಸಿತು. ನದೀಂ ಪಾಣಿಪತಿ ಬರೆದಿದ್ದ 'ದಿಲ್ ಮೇರಾ ಥೋಡಾ, ಮುಝೆ ಕಹೀ ಕಾ ನಾ ಛೋಡಾ' ಎಂಬ ಹಾಡನ್ನು ಗುಲಾಂ ಹೈದರ್ ಅದೇ ವರ್ಷ ಹಾಡಿಸಿದರು. 'ಮಜ್‌ಬೂರ್' ಸಿನಿಮಾದ ಆ ಹಾಡು ಲತಾಗೆ ಮೊದಲ ಬ್ರೇಕ್. 'ಗುಲಾಂ ಹೈದರ್ ನನ್ನ ಗಾಡ್‌ಫಾದರ್. ನನ್ನಲ್ಲಿ ಅದಮ್ಯ ನಂಬಿಕೆ ಇಟ್ಟ ಮೊದಲ ಸಂಗೀತ ನಿರ್ದೇಶಕ' ಎಂದು ಲತಾ ಪದೇ ಪದೇ ಹೇಳಿದ್ದು ಇದೇ ಕಾರಣಕ್ಕೆ.

ಗಾಯಕಿಯಿಂದ ಕಿವಿಮಾತು

ನೂರ್ ಜಹಾನ್ ಅನುಕರಿಸುವ ಗಾಯಕಿ ಇವಳು ಎಂಬ ಆರೋಪ ಮೊದಲು ಲತಾ ಮೇಲೆ ಇತ್ತು. ಅದನ್ನು ಬಲು ಬೇಗ ಕಳಚಿದರು. ಆ ಕಾಲಘಟ್ಟದಲ್ಲಿ ಹಿಂದಿ ಸಿನಿಮಾದ ಸಂಭಾಷಣೆ, ಸಾಹಿತ್ಯದಲ್ಲಿ ಇದ್ದುದು ಉರ್ದು ಆತ್ಮ. ಲತಾ ಮರಾಠಿಗರಾದ್ದರಿಂದ ಅವರ ಉಚ್ಚಾರಣೆಯಲ್ಲಿ ಲೋಪಗಳಿವೆ ಎಂದು ನಟ ದಿಲೀಪ್ ಕುಮಾರ್ ಒಮ್ಮೆ ಟೀಕಿಸಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿದ ಗಾಯಕಿ, ಶಫಿ ಎಂಬ ಮೇಷ್ಟ್ರ

2019ರ ಆಗಸ್ಟ್ 18ರಂದು ಮುಂಬೈನಲ್ಲಿನ ಲತಾ ನಿವಾಸಕ್ಕೆ ಭೇಟಿ ನೀಡಿದ್ದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು, ಮಂಗೇಶಿ ದೇವಾಲಯದ ವರ್ಣಚಿತ್ರವನ್ನು ನೀಡಿದ ಕ್ಷಣ

ಬಳಿಗೆ ಹೋಗಿ ಉರ್ದು ಪಾಠವನ್ನೂ ಕಲಿತದ್ದು ಅವರೊಳಗಿನ ವಿದ್ಯಾರ್ಥಿಶಿಸ್ತಿಗೆ ಸಾಕ್ಷಿ. ಚಿಕ್ಕಂದಿನಲ್ಲಿ ತಾನು ಕೇಳಿ ಬೆಳೆದ ಗಾಯಕಿ ನೂರ್ ಜಹಾನ್ ಒಡನಾಟ ಸಿಕ್ಕಿದ್ದು ಬೋನಸ್ಸು. ವರ್ಷಗಟ್ಟಲೆ ಅವರಿಬ್ಬರ ನಡುವೆ ಸಂಗೀತದ ಚರ್ಚೆಗಳು ಗರಿಗೆದರಿದವು. ನೂರ್ ಜಹಾನ್ ಅನೇಕ ಸೂಕ್ಷ್ಮಗಳನ್ನು ಹೊಸ ಗಾಯಕಿಯ ಕಿವಿಯೊಳಗೆ ಹಾಕಿದರು. ಇವೆಲ್ಲ ಲತಾ ಬೆಳೆಯಲು ಅಗತ್ಯವಿದ್ದ ಗೊಬ್ಬರವಾದವು.

1949ರಲ್ಲಿ 'ಮಹಲ್' ಸಿನಿಮಾಗೆ ಖೇಮ್‌ಚಂದ್ ಪ್ರಕಾಶ್ ಹಾಡೊಂದನ್ನು ಸಂಯೋಜಿಸಿದರು. 'ಆಯೇಗಾ ಆನೇವಾಲಾ' ಎಂಬ ಆ ಹಾಡಿಗೆ ತುಟಿ ಚಲನೆ ಮಾಡಿದ ನಟಿ ಮಧುಬಾಲಾ. ಆ ಕಾಲದಲ್ಲಿ ಅಸಂಖ್ಯ ಅಭಿಮಾನಿಗಳ ಹೃದಯ ಕದ್ದ ನಟಿ. ಅವರ ಅಭಿನಯಕ್ಕೂ ಆ ಗೀತೆಗೂ ಸಂದ ಸಂಬಂಧ ಸಹೃದಯರ ಮನದಲ್ಲಿನ್ನೂ ಹಸಿರು. ಆ ಗೀತೆಯನ್ನು ಹಾಡಿದ ಲತಾ ಕಡೆಗೆ ಇಡೀ ಚಿತ್ರರಂಗದ ಕಣ್ಣು ಹೊರಳಿತು.

ಅನಿಲ್ ಬಿಸ್ವಾಸ್, ಸಿ. ರಾಮಚಂದ್ರ, ಹೇಮಂತ್ ಕುಮಾರ್, ಸಲೀಲ್ ಚೌಧರಿ, ದತ್ತಾ ನಾಯಕ್, ಸಜ್ಜದ್ ಹುಸೇನ್, ರೋಷನ್ ಹೀಗೆ ಹಲವು ಸಂಯೋಜಕರು ಲತಾ ಕಂಠವನ್ನು 1950ರ ದಶಕ ದಲ್ಲಿ ರೆಕಾರ್ಡಿಂಗ್ ಸ್ಟುಡಿಯೊಗೆ ಕರೆತಂದರು. ದೀದಾರ್, ಬೈಜು ಬಾವ್ರಾ, ಅಮರ್, ಮದರ್ ಇಂಡಿಯಾ ತರಹದ ಸಿನಿಮಾಗಳ ಹಾಡುಗಳಲ್ಲಿ ಬಗೆಬಗೆಯ ರಾಗಗಳಿದ್ದವು. ಬಹುತೇಕವು ಶಾಸ್ತ್ರೀಯ ಸಂಗೀತ ಪ್ರಧಾನ. ಅವೇ ಲತಾ ಪಾಲಿಗೆ ತಾಲೀಮು. ಬರ್ಸಾತ್, ಶ್ರೀ 420, ಚೋರಿ ಚೋರಿ ರೀತಿಯ ಸಿನಿಮಾಗಳಿಗೆ ಶಂಕರ್ ಜೈಕಿಶನ್ ಆಯ್ಕೆ ಮಾಡಿದ್ದು ಇವರದ್ದೇ ಕಂಠವನ್ನು. ಸಜಾ, ದೇವದಾಸ್ ಸಿನಿಮಾಗಳಿಗೆ ಎಸ್.ಡಿ. ಬರ್ಮನ್ ಅಗ್ರ ಗಾಯಕಿಯಾಗಿ ನೆಚ್ಚಿಕೊಂಡಿದ್ದೂ ಲತಾ ಅವರನ್ನೇ.

ಜೆಗಿತದ ದಶಕ

1960ರ ದಶಕದಲ್ಲಿ ಗಾಯಕಿಯಾಗಿ ಲತಾ ಅವರಿಗೆ ದೊಡ್ಡ ಜೆಗಿತ. 'ಮೊಘಲ್–ಎ–ಆಜಂ' ಚಿತ್ರದ 'ಪ್ಯಾರ್ ಕಿಯಾ ತೋ ಡರ್‌ನಾ ಕ್ಯಾ' ಹಾಡು ನೌಶಾದ್ ಮಟ್ಟು, ಲತಾ ಶಾರೀರದ ಅಪೂರ್ವ ಕೊಡುಗೆ. ಶಂಕರ್ ಜೈಕಿಶನ್ ಮಟ್ಟುಹಾಕಿದ 'ಅಜೀಬ್ ದಾಸ್ತಾ ಹೈ ಯೇ' ಅಂತೂ ನಿತ್ಯನೂತನ. ಈ ಎರಡೂ ಹಾಡುಗಳು ಹುಟ್ಟಿದ್ದು 1960ರಲ್ಲಿ. ಬರ್ಮನ್ ಅವರಿಗೆ ಸಹಾಯಕರಾಗಿದ್ದ ಜೈದೇವ್ ಸ್ವರ ಸಂಯೋಜಿಸಿದ 'ಅಲ್ಲಾ ತೇರೋ ನಾಮ್' ಭಜನೆ ಕೇಳದವರು ವಿರಳ. 1963ರಲ್ಲಿ ಇಂಡೊ–ಚೀನಾ ಯುದ್ಧದ ಹಿನ್ನೆಲೆಯಲ್ಲಿ ಕವಿ ಪ್ರದೀಪ್ ಬರೆದ 'ಯೇ ಮೇರೆ ವತನ್ ಕೆ ಲೋಗೋಂ' ಹಾಡಿಗೆ ಸಿ. ರಾಮಚಂದ್ರ ಮಟ್ಟು ಹಾಕಿದರು. ಲತಾ ಕಂಠದ ಆ ಹಾಡು ಇವತ್ತೂ ಸ್ವಾತಂತ್ರ್ಯ ದಿನಾಚರಣೆಯಂದು ಪ್ರತಿಧ್ವನಿಸುತ್ತದೆ. ಗೈಡ್ ಸಿನಿಮಾದ 'ಪಿಯಾ ತೋ ಸೆ ನೈನಾ ಲಾಗೆ ರೇ', 'ಜ್ಯುವೆಲ್ ಥೀಫ್'ನ 'ಹೋಟೋಂ ಮೆ ಐಸಿ ಬಾತ್' ಲತಾ ಕಂಠ–ಎಸ್.ಡಿ. ಬರ್ಮನ್ ಸಂಯೋಜನೆಯ ಮೋಡಿಗೆ ಕನ್ನಡಿ ಹಿಡಿದಿವೆ.

ಹತ್ತು ನಿಮಿಷ ಸಾಕು

1977ರಲ್ಲಿ 'ಸತ್ಯಂ ಶಿವಂ ಸುಂದರಂ' ಸಿನಿಮಾ ಗೀತೆಯ ರೆಕಾರ್ಡಿಂಗ್‌ಗೆ ಲತಾ ಸ್ಟುಡಿಯೊಗೆ ಬಂದರು. ಆಗಿನ್ನೂ ವಿದೇಶಿ ಪ್ರವಾಸ ಮುಗಿಸಿಕೊಂಡು ಬಂದಿದ್ದರಿಂದ 'ಜೆಟ್ ಲ್ಯಾಗ್' ಇತ್ತು. ಲಕ್ಷ್ಮೀಕಾಂತ್ ಪ್ಯಾರೆಲಾಲ್ ಹಾಡು ಗುನುಗಿದರು. 10 ನಿಮಿಷ ಕಿವಿಗೊಟ್ಟ ಲತಾ, ಸಾಹಿತ್ಯದ ಪ್ರತಿ ಹಿಡಿದುಕೊಂಡು ಮೈಕಿನ ಎದುರು ನಿಂತರು. ಒಂದೇ ಟೇಕ್‌ನಲ್ಲಿ ರೆಕಾರ್ಡಿಂಗ್ ಮುಗಿಯಿತು. 2 ವರ್ಷ ಆ ಹಾಡು 'ಟಾಪ್'.

ಸಂಭಾವನೆಯ ಗುಟ್ಟು

ಲತಾ ತಮ್ಮ ಸಂಭಾವನೆ ಎಷ್ಟೆಂದು ಹೇಳಿಕೊಳ್ಳುತ್ತಿರಲಿಲ್ಲ. ಒಂದು ಮೂಲದ ಪ್ರಕಾರ ವೃತ್ತಿ ಬದುಕಿನ ಮೊದಲ 5 ವರ್ಷ ಪ್ರತಿ ಹಾಡಿಗೆ ₹ 300 ಪಡೆಯುತ್ತಿದ್ದರು. ಆಮೇಲಿನ ಹತ್ತು ವರ್ಷ ಹಾಡೊಂದರ ದರ ₹ 2000. ಅದಾದ 13 ವರ್ಷ ₹ 5000. ಕೊನೆ ಕೊನೆಕೊನೆಗೆ ಕನಿಷ್ಠ 25 ಸಾವಿರ ರೂಪಾಯಿಗೆ ಒಂದು ಹಾಡು ಹಾಡುತ್ತಿದ್ದರು. ಅವರ ಕಂಠ ಸೋತಿದೆ ಎಂಬ ಟೀಕೆ ಹೊಮ್ಮಿದ ಸಂದರ್ಭದಲ್ಲೇ, 2012ರಲ್ಲಿ ಅಮೆರಿಕದಲ್ಲಿ ಅವರ 'ಸರ್‌ಗಮ್' ಸಂಗ್ರಹದ ಸಿ.ಡಿ.ಗಳ 25 ಸಾವಿರ ಪ್ರತಿಗಳು ಕೆಲವೇ ವಾರಗಳಲ್ಲಿ ಖರ್ಚಾಗಿದ್ದವು. ಗಾಯಕ–ಗಾಯಕಿಯರ ಸಂಭಾವನೆ, ಹಕ್ಕುಸ್ವಾಮ್ಯದ ಕುರಿತೂ ದನಿ ಎತ್ತಿದ್ದರು.

35 ವರ್ಷಗಳ ನಂಟು

ಲಕ್ಷ್ಮೀಕಾಂತ್–ಪ್ಯಾರೆಲಾಲ್ ಸಂಗೀತ ನಿರ್ದೇಶಕ ಜೋಡಿಯ ಸಾಹಚರ್ಯ ಸಿಕ್ಕಿದ್ದು 1963ರಲ್ಲಿ. ಅಲ್ಲಿಂದ 35 ವರ್ಷಗಳ ಅವಧಿಯಲ್ಲಿ ಏನಿಲ್ಲವೆಂದರೂ 700 ಹಾಡುಗಳಲ್ಲಿ ಈ ಮೂವರ ಸಂಬಂಧವಿದೆ. ಮಿಲನ್, ಅನಿತಾ, ಪಾರಸ್ಮಣಿ ತರಹದ ಸಿನಿಮಾಗಳು ಲತಾ ಜನಪ್ರಿಯತೆಗೆ ಅಗತ್ಯವಿದ್ದ ಹಾಡುಗಳನ್ನು ಕೊಟ್ಟವು.

ಮೀನಾ ಕುಮಾರಿ ಕಣ್ನೋಟದ ಮೋಹಪಾಶಕ್ಕೆ ಅರ್ಥ ಕಲ್ಪಿಸಿದ 'ಚಲ್ತೆ ಚಲ್ತೆ', 'ಇನ್ಹೀ ಲೋಗೋ ನೇ' ಹಾಡುಗಳು ಲತಾ ಕಂಠದಿಂದಲೇ ಜನಪ್ರಿಯ ವಾದವು. 'ಪಾಕೀಜಾ' ಚಿತ್ರದ ಈ ಹಾಡುಗಳ ಸಂಯೋಜಕ ಗುಲಾಂ ಮೊಹಮ್ಮದ್. 'ರಂಗೀಲಾ ರೇ', 'ಖಿಲ್ತೇ ಹೈ ಗುಲ್ ಯಹಾಂ', 'ಪಿಯಾ ಬಿನಾ' ಹಾಡುಗಳು ಇವತ್ತೂ 'ಕ್ಯಾರವಾನ್' ಮೂಲಕ ಸಹೃದಯರ ಕಿವಿತುಂಬುತ್ತಿವೆ. ಎಸ್.ಡಿ. ಬರ್ಮನ್ ಕಾಣ್ಕೆಗಳಿವು. 'ಚಾಂದಿನಿ' (ಸಂಗೀತ: ಶಿವಕುಮಾರ್ ಶರ್ಮ–ಹರಿಪ್ರಸಾದ್ ಚೌರಾಸಿಯಾ), 'ರಾಮ್ ಲಖನ್' ಚಿತ್ರದ ಹಾಡುಗಳಲ್ಲೂ ಲತಾ ಛಾಪು ಇತ್ತು. 'ಮೈನೆ ಪ್ಯಾರ್ ಕಿಯಾ', 'ಹಮ್ ಆಪ್ಕೆ ಹೈ ಕೌನ್' ಸಂಗೀತಮಯ ಚಿತ್ರಗಳ ಲತಾ ಹಾಡುಗಳನ್ನೂ ಸಹೃದಯರು ಸ್ವೀಕರಿಸಿದರು. ಆದರೆ ಅಷ್ಟು ಹೊತ್ತಿಗೆ ಅವರ ಕಂಠದಲ್ಲಿ ದಣಿವಿತ್ತು.

'ಉತ್ಸವ್', 'ಸಿಲ್‌ಸಿಲಾ' ಸಿನಿಮಾಗೀತೆಗಳನ್ನು ಕೊಂಡಾಡಿದವರಿಗೆ 'ವೀರ್ ಝರಾ', 'ಪುಕಾರ್' ಚಿತ್ರಗಳ ಲತಾ ಹೆಚ್ಚೇನೂ ಹಿಡಿಸಲಿಲ್ಲ. ಇದಕ್ಕೂ ಲತಾ ಕಂಠದಲ್ಲಿ ಆಗಿದ್ದ ವಯೋಸಹಜ ಬದಲಾವಣೆಯೇ ಕಾರಣ.

ಟೀಕೆಗೂ ಟಾಂಗ್

ಕೊನೆ ಕೊನೆಯಲ್ಲಿ ಲತಾ ಕಂಠವನ್ನು ಅನೇಕರು ಟೀಕಿಸಿದರು. ಸಂಯೋಜಕ ಸಿ. ರಾಮಚಂದ್ರ ಅಂತೂ, 'ಲತಾ ಕಂಠದ ಭೂತವಿದು, ವರ್ತಮಾನವಲ್ಲ' ಎಂದು ಗೇಲಿ ಮಾಡಿದ್ದರು. 'ಅವರೂ ಸಂಯೋಜಕರಾಗಿ ಈಗ ಭೂತವೇ' ಎಂದು ಲತಾ ತಿರುಗೇಟು ನೀಡಿದ್ದರು.

ಇಳಯರಾಜ ಸಂಯೋಜಿಸಿದ ತೆಲುಗು, ತಮಿಳು, ಹಿಂದಿ ಗೀತೆಗಳಿಗೂ ಶಾರೀರವಾಗಿರುವ ಲತಾ, ಎರಡು ವರ್ಷಗಳ ಹಿಂದೆ 'ಸೌಗಂಧ್ ಮುಝೆ ಇಸ್ ಮಿಟ್ಟಿ ಕೀ' ಎಂಬ ಮಯೂರೇಶ್ ಪೈ ಸ್ವರ ಹಾಕಿದ್ದ ಸೇನಾಗೀತೆಯನ್ನು ಹಾಡಿದ್ದರು. ಅದು ಅವರ ಗಾನಪಯಣದ ಕೊನೆಯ ನಿಲ್ದಾಣ. ಯಾವ ಗಾಯಕ–ಗಾಯಕಿಯೂ ಮೆರೆಯದಷ್ಟು, ಉಳಿಯದಷ್ಟು ಕಾಲ ಚಿತ್ರಸಂಗೀತದ ಮೂಲಕ ಲತಾ ಹೆಸರು ಚಿರಸ್ಥಾಯಿಯಾಗಿದೆ. ಅವರ ಮಂದ್ರ ಸ್ಥಾಯಿ, ಸ್ಪಷ್ಟ ಉಚ್ಚಾರ, ಪಲುಕುಗಳು, ಲಾಲಿತ್ಯ ಕಾಡುತ್ತಲೇ ಇರುತ್ತವೆ.

ಸಹೋದರಿಯರಾದ ಆಶಾ ಭೋಸ್ಲೆ ಹಾಗೂ ಉಷಾ ಮಂಗೇಶ್ಕರ್ ಜತೆಗೆ

1989ರಲ್ಲಿ ಅಂದಿನ ರಾಷ್ಟ್ರಪತಿ ಆರ್‌.ವೆಂಕಟರಾಮನ್ ಅವರು ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಿದ ಕ್ಷಣ

ವಿಷ ಪ್ರಾಶನ ಪ್ರಸಂಗ

1962ರಲ್ಲಿ ಲತಾ ಅನಾರೋಗ್ಯದಿಂದ ಆಸ್ಪತ್ರೆಗೆ ಹೋದರು. ಪರೀಕ್ಷಿಸಿದ ವೈದ್ಯರು ಯಾರೋ ನಿಧಾನವಾಗಿ ಕೊಲ್ಲುವಂಥ ವಿಷ ಉಣಬಡಿಸಿರುವುದನ್ನು ಪತ್ತೆಹಚ್ಚಿದರು. ಮೂರು ದಿನ ಲತಾ ಅವರಿಗೆ ಇಹಲೋಕದ ಪರಿವೆಯೇ ಇರಲಿಲ್ಲ. ಆಮೇಲೆ ಪೂರ್ತಿ ಚೇತರಿಸಿಕೊಳ್ಳಲು ಮೂರು ತಿಂಗಳು ಬೇಕಾಯಿತು. ಅವರ ಮನೆಯ ಅಡುಗೆಯವನು ದಿಢೀರನೆ ಕೆಲಸ ಬಿಟ್ಟಿದ್ದ. ಬಾಲಿವುಡ್‌ನ ಎಷ್ಟೋ ಜನರ ಸಂಪರ್ಕದಲ್ಲಿದ್ದ ಅವನು ಸಂಬಳ ಕೂಡ ಪಡೆಯದೆ ಜಾಗ ಖಾಲಿ ಮಾಡಿದ್ದು ಆಗ ಸುದ್ದಿಯಾಗಿತ್ತು. ಚಿತ್ರಸಾಹಿತಿ ಮಜರೂಹ್ ಸುಲ್ತಾನಪುರಿ ಆಗ ಲತಾ ಅವರ ಮನೆಗೆ ಹೋಗಿ ಮೊದಲು ತಾವು ಎರಡು ತುತ್ತು ಉಂಡು, ಪರೀಕ್ಷಿಸಿದ ಮೇಲೆ ಲತಾ ಅವರಿಗೆ ಉಣ್ಣುವಂತೆ ಸೂಚಿಸುತ್ತಿದ್ದರು. ಲತಾ ಲವಲವಿಕೆಯಿಂದ ಇರಲು ಸಹಾಯಕವಾಗುವಂಥ ಕತೆಗಳನ್ನು ಹೇಳುತ್ತಿದ್ದರು.

2018ರ ಸೆಪ್ಟೆಂಬರ್ 28ರಂದು ಅಂದಿನ ಲೋಕಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಅವರು ಲತಾ ಮಂಗೇಶ್ಕರ್ ಅವರನ್ನು ಭೇಟಿ ಮಾಡಿ ಹುಟ್ಟುಹಬ್ಬಕ್ಕೆ ಶುಭ ಕೋರಿದರು

ಆಶಾ ಭೋಂಸ್ಲೆ, ದೇವಾನಂದ್, ಜಯಾಬಚ್ಚನ್ ಜತೆಗೆ ಸಮಾರಂಭದಲ್ಲಿ

2004ರ ಅಕ್ಟೋಬರ್ 27ರಂದು ನಡೆದ ತಮ್ಮ ಹೃದಯನಾಥ್ ಮಂಗೇಶ್ಕರ್ ಅವರ 68ನೇ ಜನ್ಮದಿನ ಕಾರ್ಯಕ್ರಮದಲ್ಲಿ ಲತಾ ಮಂಗೇಶ್ಕರ್ ಅವರೊಂದಿಗೆ ಸಹೋದರಿಯರಾದ (ಎಡದಿಂದ ಬಲಕ್ಕೆ) ಉಷಾ ಮಂಗೇಶ್ಕರ್, ಆಶಾ ಭೋಂಸ್ಲೆ ಹಾಗೂ ಮೀನಾ ಖಡೀಕರ್ ಅವರು ಪಾಲ್ಗೊಂಡಿದ್ದರು

ಲತಾ ಮಂಗೇಶ್ಕರ್ ಅವರು ತಮ್ಮ 78ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ನಟಿ ರೇಖಾ ಅವರೊಂದಿಗೆ ಸಂಭ್ರಮಿಸಿದ್ದು ಹೀಗೆ

ಸಂಗೀತ ಸರಸ್ವತಿಯ ಕ್ರಿಕೆಟ್ ಪ್ರೀತಿ

ನವದೆಹಲಿ (ಪಿಟಿಐ): ಸ್ವರಸಾಮ್ರಾಜ್ಞಿ ಲತಾ ಮಂಗೇಶ್ಕರ್ ಅವರ ಗಾಯನದ ಮೋಡಿಗೆ ಶರಣಾದ ಲಕ್ಷಾಂತರ ಅಭಿಮಾನಿಗಳಿದ್ದಾರೆ.

ಆದರೆ, ಈ ಗಾನಸರಸ್ವತಿ ಕ್ರಿಕೆಟ್ ಆಟದ ಅಪ್ಪಟ ಅಭಿಮಾನಿಯಾಗಿದ್ದರು. ಕ್ರಿಕೆಟ್ ಮತ್ತು ಕ್ರಿಕೆಟಿಗರ ಬಗ್ಗೆ ಅವರಿಗೆ ಅದೇನೋ ಅಪಾರ ಪ್ರೀತಿ.

1983ರಲ್ಲಿ ಕಪಿಲ್ ದೇವ್ ಬಳಗವು ವಿಶ್ವಕಪ್ ಜಯಿಸಿ ಬಂದಾಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಆಟಗಾರರಿಗೆ ದೊಡ್ಡ ಮೊತ್ತದ ಬಹುಮಾನ ಕೊಡುವ ಯೋಚನೆ ಮಾಡಿತು. ಆದರೆ, ಆಗಿನ ಮಂಡಳಿ ಶ್ರೀಮಂತವಾಗಿರಲಿಲ್ಲ. ದುಡ್ಡು ಹೊಂದಿಸುವುದು ಹೇಗೆಂದು ಚಿಂತೆಯಲ್ಲಿದ್ದ ಮಂಡಳಿಗೆ ಅಭಯಹಸ್ತ ತೋರಿದ್ದು ಲತಾ ದೀದಿ.

ದೇಶದ ರಾಜಧಾನಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಲತಾ ಗಾಯನ ಕಾರ್ಯಕ್ರಮ ನಡೆಸಿದರು. ಕಿಕ್ಕಿರಿದು ಸೇರಿದ ಅಭಿಮಾನಿಗಳು ಉದಾರ ದೇಣಿಗೆ ನೀಡಿದರು. ತಂಡದ 14 ಆಟಗಾರರಿಗೆ ತಲಾ ಒಂದು ಲಕ್ಷ ರೂಪಾಯಿ ಬಹುಮಾನ ನೀಡುವಲ್ಲಿ ಬಿಸಿಸಿಐ ಸಫಲವಾಗಿತ್ತು.

ಆ ದಿನ ಲತಾ ವಿಶೇಷವಾಗಿ ಹಾಡಿದ್ದ 'ಭಾರತ್ ವಿಶ್ವವಿಜೇತಾ ಅಪ್ನಾ.. ಭಾರತ್ ವಿಶ್ವವಿಜೇತಾ.. ಅಪ್ನಾ ಸಂಗ್ ಹೈ ವಿಶ್ವ ವಿಜೇತಾ.. ಹರ್ ಏಕ್ ದಿಶಾ ಮೇ ವಿಜಯ್ ಮಿಲೆ.. ಏಕ್ ತರಫ್ ತಾ ಭಾರತ್ ಕೀ ಕಿಲಾಡಿ.. ಏಕ್ ತರಫ್ ತಾ ಸರಾ ಜಹಾಂ.. ಜಹಾ ಏಕತಾ ವಹಾ ವಿಜಯ್..' ಗೀತೆ ಎಲ್ಲರ ಮನ ಗೆದ್ದಿತ್ತು.

'ನಾವು ಅದೇ ಮೊದಲ ಸಲ ಒಂದು ಲಕ್ಷ ರೂಪಾಯಿ ಮೌಲ್ಯದ ಚೆಕ್ ನೋಡಿದ್ದು. ಅದಕ್ಕೆ ಕಾರಣರಾಗಿದ್ದು ಲತಾಜೀ. ನಾವು 1983ರ ವಿಶ್ವಕಪ್ ಜಯಿಸಿದಾಗ ಅವರೊಂದು ಕಾರ್ಯಕ್ರಮ ಮಾಡಿ ಹಣ ಸಂಗ್ರಹಿಸಿದರು. ತಂಡದ ಪ್ರತಿಯೊಬ್ಬರಿಗೂ ತಲಾ ಒಂದು ಲಕ್ಷ ರೂಪಾಯಿ ಚೆಕ್ ನೀಡಿದರು. ಅದೊಂದು ಅವಿಸ್ಮರಣೀಯ ಕ್ಷಣ. ಆಗೆಲ್ಲ ನಮಗೆ ಬಹಳ ದುಡ್ಡು ಸಿಗುತ್ತಿರಲಿಲ್ಲ. ಐದು, ಹತ್ತು ಸಾವಿರವೇ ಹೆಚ್ಚು' ಎಂದು ಕ್ರಿಕೆಟಿಗ ಸುನೀಲ್ ವಾಲ್ಸನ್ ನೆನಪಿಸಿಕೊಂಡಿದ್ದಾರೆ.

ಇದೇ ಮಾತನ್ನು ಹಿಂದೊಮ್ಮೆ ಕಪಿಲ್ ದೇವ್ ಕೂಡ ನೆನಪಿಸಿಕೊಂಡು ಭಾವುಕರಾಗಿದ್ದರು. ಇದರಿಂದಾಗಿ ಬಿಸಿಸಿಐ ಕೂಡ ದೇಶದ ಯಾವುದೇ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಪಂದ್ಯ ನಡೆದರೂ ಗಣ್ಯರ ಗ್ಯಾಲರಿಯಲ್ಲಿ ಎರಡು ಆಸನಗಳನ್ನು ಲತಾ ಅವರಿಗಾಗಿ ಕಾಯ್ದಿಡುವ ಗೌರವ ನೀಡಿತು. ಲತಾ ತಮ್ಮ ಸಹೋದರ, ಸಂಗೀತಗಾರ ಹೃದಯನಾಥ್ ಮಂಗೇಶ್ಕರ್ ಅವರೊಂದಿಗೆ ಮುಂಬೈನ ವಾಂಖೆಡೆ ಮತ್ತು ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಹಲವು ಪಂದ್ಯಗಳನ್ನು ವೀಕ್ಷಿಸಿದ್ದರು.

ಸಚಿನ್ ತೆಂಡೂಲ್ಕರ್ ಮತ್ತು ಲತಾ ಮಂಗೇಶ್ಕರ್

ಭಾರತದ ಗೆಲುವಿಗಾಗಿ ಉಪವಾಸ ವ್ರತ

ಲತಾ ಮಂಗೇಶ್ಕರ್ ಅವರು 2011ರಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಸಂದರ್ಭದಲ್ಲಿ ಭಾರತದ ಗೆಲುವಿಗಾಗಿ ಪ್ರಾರ್ಥಿಸಿ, ಉಪವಾಸ ವ್ರತ ಆಚರಿಸಿದ್ದರು.

ಅಂದು ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಅದಾಗಿತ್ತು. ಭಾರತವು ಜಯ ಗಳಿಸಿದ ಮೇಲಷ್ಟೇ ಅವರು ಉಪಾಹಾರ ತೆಗೆದುಕೊಂಡಿದ್ದರು.

'ನನ್ನ ಕುಟುಂಬದಲ್ಲಿ ಎಲ್ಲರೂ ಸಂಪ್ರದಾಯ ಪಾಲಿಸುತ್ತಾರೆ. ಪಂದ್ಯದ ದಿನ ನಾನು, ಸಹೋದರಿಯರಾದ ಮೀನಾ ಮತ್ತು ಉಷಾ ಉಪವಾಸ ಇರುತ್ತೇವೆ. ಏನೂ ತಿನ್ನುವುದಿಲ್ಲ ಮತ್ತು ಕುಡಿಯುವುದಿಲ್ಲ. ಭಾರತ ಗೆಲ್ಲಲು ಪ್ರಾರ್ಥನೆ ಮಾಡುತ್ತೇವೆ' ಎಂದು ಆಗ ಲತಾ ಅವರೇ ಹೇಳಿದ್ದರು.

ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್, ದಿಲೀಪ್ ವೆಂಗಸರ್ಕಾರ್ ಮತ್ತು ಸುನಿಲ್ ಗಾವಸ್ಕರ್ ಅವರು ಲತಾ ಅವರಿಗೆ ಆಪ್ತರಾಗಿದ್ದರು.

'ಸಚಿನ್ ನನ್ನನ್ನು ತಮ್ಮ ತಾಯಿಯಂತೆ ಗೌರವಿಸುತ್ತಾರೆ. ನಾನು ಕೂಡ ಅವರ ಯಶಸ್ಸಿಗಾಗಿ ಮಾತೆಯಂತೆಯೇ ಹಾರೈಸುತ್ತೇನೆ. ಅವರಂತಹ ಮಗನನ್ನು ಪಡೆಯಲು ನಾನೇ ಅದೃಷ್ಟವಂತಳು' ಎಂದು ಲತಾ ಅವರೇ ಹೇಳಿದ್ದರು.

ಹಿರಿಯ ನಟರಾದ ದಿಲೀಪ್ ಕುಮಾರ್ ಹಾಗೂ ಅಮಿತಾಭ್ ಬಚ್ಚನ್ ಜತೆಗೆ

2004ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ರಚಿಸಿದ ಗೀತೆಗಳ ಆಲ್ಬಮ್ 'ಅಂತ್–ನಾದ್' ಬಿಡುಗಡೆ ಸಮಾರಂಭಕ್ಕೆ ಲತಾ ಮಂಗೇಶ್ಕರ್ ಅವರನ್ನು ವಾಜಪೇಯಿ ಸ್ವಾಗತಿಸಿದರು. ಈ ಗೀತೆಗಳನ್ನು ಲತಾ ಮಂಗೇಶ್ಕರ್ ಹಾಡಿದ್ದಾರೆ

ಖ್ಯಾತ ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್ ಅವರು ಇಂಗ್ಲಿಷ್ ಚಿತ್ರಗಳ ಪೈಕಿ ಪ್ರಸಿದ್ಧ ಪತ್ತೆದಾರಿ ಪಾತ್ರ 'ಜೇಮ್ಸ್ ಬಾಂಡ್'ನ ಅಪ್ಪಟ ಅಭಿಮಾನಿಯಾಗಿದ್ದರು ಎಂಬುದು ಬಹುತೇಕರಿಗೆ ಗೊತ್ತಿಲ್ಲ ಎಂಬುದು ಅವರ ಆಪ್ತರ ಅನಿಸಿಕೆ.

'ಜೇಮ್ಸ್ ಬಾಂಡ್'ನ ಅಪ್ಪಟ ಅಭಿಮಾನಿ

ಮುಂಬೈ: ಖ್ಯಾತ ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್ ಅವರು ಇಂಗ್ಲಿಷ್ ಚಿತ್ರಗಳ ಪೈಕಿ ಪ್ರಸಿದ್ಧ ಪತ್ತೆದಾರಿ ಪಾತ್ರ 'ಜೇಮ್ಸ್ ಬಾಂಡ್' ಚಿತ್ರಗಳನ್ನು ಹೆಚ್ಚು ಇಷ್ಟಪಡುತ್ತಿದ್ದರು. 'ಜೇಮ್ಸ್ ಬಾಂಡ್'ನ ಅಪ್ಪಟ ಅಭಿಮಾನಿಯಾಗಿದ್ದರು ಎಂಬುದು ಬಹುತೇಕರಿಗೆ ಗೊತ್ತಿಲ್ಲ ಎಂಬುದು ಅವರ ಆಪ್ತರು ಹೇಳುತ್ತಾರೆ.

ಬ್ರಿಟನ್‌ನ 'ಎಂಐ6' ಪರ ಕೆಲಸ ಮಾಡುವ ಗೂಢಚಾರಿಕೆ ಏಜೆಂಟ್ ಆದ 'ಜೇಮ್ಸ್ ಬಾಂಡ್' ಎಂಬ ಕಾಲ್ಪನಿಕ ಪಾತ್ರದಲ್ಲಿ ಹಲವು ನಟರು ನಟಿಸಿದ್ದಾರೆ.



'ಜೇಮ್ಸ್ ಬಾಂಡ್' ಖ್ಯಾತಿಯ ಸೀನ್ ಕಾನರಿ (ಎಎಫ್‌ಪಿ ಚಿತ್ರ)

ಲತಾ ಮಂಗೇಶ್ಕರ್ ಅವರು ಜೇಮ್ಸ್ ಬಾಂಡ್‌ನ ಎಲ್ಲ ಚಿತ್ರಗಳನ್ನೂ ನೋಡಿದ್ದಾರೆ ಎಂದು ಅವರ ಆಪ್ತರು ನೆನಪಿಸಿಕೊಳ್ಳುತ್ತಾರೆ.

ಸೀನ್ ಕಾನರಿ, ಡೇವಿಡ್ ನಿವೆನ್, ಜಾರ್ಜ್ ಲೆಜೆನ್‌ಬಿ, ರೋಜರ್ ಮೂರ್, ಟಿಮೊಥಿ ಡಾಲ್ಟನ್, ಪೀಯರ್ಸ್ ಬ್ರಾಸನನ್ ಹಾಗೂ ಡ್ಯಾನಿಯಲ್ ಕ್ರೇಗ್ ಅವರು 'ಜೇಮ್ಸ್ ಬಾಂಡ್' ಪಾತ್ರಕ್ಕೆ ಜೀವ ತುಂಬಿ, ಪ್ರೇಕ್ಷಕರನ್ನು ರಂಜಿಸಿದ ನಟರು. ಇವರ ಪೈಕಿ ಸೀನ್ ಕಾನರಿ ಅವರು ಲತಾ ಅವರ ಅಚ್ಚುಮೆಚ್ಚಿನ ನಟ.

ಸೀನ್ ಕಾನರಿ ಅವರ ನಿಧನರಾದಾಗ ಲತಾ ಅವರು ಅತೀವ ಶೋಕ ವ್ಯಕ್ತಪಡಿಸಿದ್ದರು. 'ಸರ್ ಸೀನ್ ಕಾನರಿ ಅವರ ನಿಧನ ಸುದ್ದಿ ಕೇಳಿ ದುಃಖಿತಳಾಗಿದ್ದೇನೆ. ಮನರಂಜನಾ ಕ್ಷೇತ್ರದಲ್ಲಿ ಬಹು ವರ್ಚಸ್ವಿ ವ್ಯಕ್ತಿತ್ವ ಹೊಂದಿದ್ದ ಅವರು, ಬಾಂಡ್ ಪಾತ್ರಕ್ಕೆ ಜೀವ ತುಂಬಿ, ಪ್ರೇಕ್ಷಕರ ಮನ ಗೆದ್ದಿದ್ದರು. ಅವರೊಬ್ಬ ದಂತಕತೆ' ಎಂದು ಶೋಕಿಸಿದ್ದರು.

ವೈವಿಧ್ಯಮಯ ಖಾದ್ಯ ಇಷ್ಟ...

'ನಾನೊಬ್ಬ ಆಹಾರ ಪ್ರಿಯೆ. ವೈವಿಧ್ಯಮಯ ತಿನಿಸುಗಳೆಂದರೆ ನನಗೆ ಇಷ್ಟ' ಎಂದು ಲತಾ ಅವರು ಹಲವಾರು ಸಂದರ್ಭಗಳಲ್ಲಿ ಹೇಳಿದ್ದರು.

ಹೆಚ್ಚು ಮಸಾಲೆ ಹೊಂದಿದ ಆಹಾರಗಳೆಂದರೆ ಇಷ್ಟಪಡುತ್ತಿದ್ದ ಅವರಿಗೆ, ದಾಲ್, ಅನ್ನ, ಫುಲ್ಕಾ ನಿತ್ಯದ ಊಟದ ಭಾಗವಾಗಿರುತ್ತಿದ್ದವು. ಮೀನು ಸೇರಿದಂತೆ ಸೀ–ಫುಡ್ ಸಹ ಅವರಿಗೆ ಇಷ್ಟವಾಗುತ್ತಿತ್ತು.

'ನನಗೆ ಮೆಣಸಿನಕಾಯಿ ಹಾಕಿ ಮಾಡಿದ ಪದಾರ್ಥಗಳು ಬಹಳ ಇಷ್ಟ. ಮೊಸರು, ಉಪ್ಪಿನಕಾಯಿ ಬೇಕೇಬೇಕು' ಎಂದು ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದ ಅವರು, ಗಜ್ಜರಿ ಹಲ್ವಾ, ಪಾನಿಪೂರಿ, ಶಾಮಿ ಕಬಾಬ್‌ಗಳು ಇಷ್ಟ ಎಂದು ಹೇಳುತ್ತಿದ್ದರು. ಕೊಲ್ಹಾಪುರಿ ಮಟನ್ ತಯಾರಿಸುವುದು ಅವರಿಗೆ ಹೆಚ್ಚು ಖುಷಿ ತರುತ್ತಿತ್ತು.

ಹಾಡು ನಿಲ್ಲಿಸಿದ ಕೋಗಿಲೆ

ಲತಾ ಮಂಗೇಶ್ಕರ್ ಅವರ ಪಾರ್ಥಿವ ಶರೀರಕ್ಕೆ ಸೇನಾಧಿಕಾರಿಗಳು ರಾಷ್ಟ್ರಧ್ವಜ ಹೊದಿಸಿ ಗೌರವ ಸಲ್ಲಿಸಿದರು

ಲತಾ ಮಂಗೇಶ್ಕರ್ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಅಭಿಮಾನಿಗಳು ಪಿಟಿಐ ಚಿತ್ರ

ಲತಾ ದೀದಿ ಗೀತ ಯಾನ ಹಿಡಿದಿಟ್ಟ ಗುಲ್ಜಾರ್ ವಿರಚಿತ ಹಾಡು • 36 ಭಾಷೆಗಳಲ್ಲಿ ಗಾಯನ

'ಮೇರಿ ಆವಾಜ್ ಹಿ..ನನ್ನ ವ್ಯಕ್ತಿತ್ವ ಸಾರುತ್ತದೆ'

ನವದೆಹಲಿ (ಪಿಟಿಐ): ದೇಶದ 36 ಭಾಷೆಗಳಲ್ಲಿ ಸಾವಿರಾರು ಗೀತೆಗಳನ್ನು ಹಾಡಿ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದರೂ, ಲತಾ ಮಂಗೇಶ್ವರ್ ಅವರ ಹೆಸರು ಹೇಳಿದಾಕ್ಷಣ ಬಹುತೇಕರು ಥಟ್ಟನೇ ಗುನುಗುವ ಕೆಲವು ಹಾಡುಗಳಿವೆ. ಅನೇಕ ಹಾಡುಗಳು ಅವರ ಅಸ್ಮಿತೆಯಾಗಿ ನಿಲ್ಲುತ್ತವೆ.

'ಕೆಲ ಹಾಡುಗಳು ನನ್ನ ಗೀತ ಗಾಯನ ಯಾನವನ್ನೇ ವಿವರಿಸುತ್ತವೆ. ಆ ಹಾಡುಗಳೇ ನನಗೆ ಅಸ್ಮಿತೆ ನೀಡಿವೆ. ನನ್ನ ವ್ಯಕ್ತಿತ್ವ ರೂಪಿಸಿವೆ' ಎಂದು ಲತಾ ಮಂಗೇಶ್ವರ್ ಅವರು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಪಿಟಿಐಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

'ಗೀತೆ ರಚನೆಕಾರ ಗುಲ್ಜಾರ್ ನಿರ್ದೇಶನದ 'ಕಿನಾರಾ' (1977) ಚಿತ್ರದಲ್ಲಿ ಅವರೇ ಬರೆದ 'ನಾಮ್ ಗುಮ್ ಜಾಯೇಗಾ...' ಗೀತೆಯ 'ಮೇರಿ ಆವಾಜ್ ಹಿ ಪೆಹಚಾನ್ ಹೈ' ಎಂಬ ಸಾಲುಗಳು ಸಂಗೀತ ಕ್ಷೇತ್ರದ ನನ್ನ ಪಯಣವನ್ನು ಪ್ರತಿಬಿಂಬಿಸುತ್ತದೆ' ಎಂದು ಅವರು ಸಂದರ್ಶನದಲ್ಲಿ ಹೇಳಿದ್ದರು.

'ಗುಲ್ಜಾರ್ ಅವರು ಅದ್ಭುತವಾಗಿ ಬರೆಯುತ್ತಾರೆ ಎಂದು ದೇಶಕ್ಕೇ ಗೊತ್ತು. ಅವರು ಅದ್ಭುತವಾಗಿಯೂ ಮಾತನಾಡುತ್ತಾರೆ. ಒಮ್ಮೆ ನನ್ನ ಬಳಿ ಬಂದ ಅವರು, 'ಮೇರಿ ಆವಾಜ್ ಹಿ ಪೆಹಚಾನ್ ಹೈ ಔರ್ ಯೇ ಹೈ ಪೆಹಚಾನ್...' (ನನ್ನ ದನಿಯೇ ನನ್ನ ವ್ಯಕ್ತಿತ್ವ...ಮತ್ತು ಇದೇ ಆ ವ್ಯಕ್ತಿತ್ವ) ಎಂದು ಮೆಲುದನಿಯಲ್ಲಿ ಹೇಳಿದ್ದರು. ನಂತರ, ನಾನು ಸಹ ನನ್ನ ದನಿಯೇ ನನ್ನ ವ್ಯಕ್ತಿತ್ವ ಎಂದು ಹೇಳಲು ಆರಂಭಿಸಿದೆ. ಈಗ ಯಾರೇ ಈ ಹಾಡನ್ನು ಹಾಡಿದರೂ ಅಥವಾ ನನ್ನ ಕುರಿತು ಬರೆದರೆ ಇದೇ ಮಾತನ್ನು ಹೇಳುತ್ತಾರೆ' ಎಂದೂ ಅವರು ಹೇಳಿದ್ದರು.

ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರು ಲತಾ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾಡಿರುವ ಟ್ವೀಟ್‌ನಲ್ಲಿ 'ನಾಮ್ ಗುಮ್ ಜಾಯೇಗಾ' ಗೀತೆಯ ಸಾಲುಗಳನ್ನೇ ಬಳಸಿದ್ದಾರೆ.

'ದಿಲ್ ಅಪ್ನಾ ಔರ್ ಪ್ರೀತ್ ಪರಾಯಿ' (1960) ಚಿತ್ರದ 'ಅಜೀಬ್ ದಾಸ್ತಾ ಹೈ ಏ..' ಈಗಲೂ ಜನರ ನಾಲಿಗೆಯಲ್ಲಿ ನಲಿದಾಡುತ್ತಿರುವ ಗೀತೆ.

ಒಂಟಿತನದ ಬೇಗುದಿಯನ್ನು ತೆರೆದಿಡುವ 'ಲಗ್ ಜಾ ಗಲೆ..', ಪ್ರೇಮ- ಅದಕ್ಕಾಗಿನ ಹೋರಾಟವನ್ನು ಏಕಕಾಲಕ್ಕೆ ಕಟ್ಟಿಕೊಡುವ 'ಪ್ಯಾರ್ ಕಿಯಾ ತೊ ಡರ್ನಾ ಕ್ಯಾ..', ಪ್ರೀತಿಯೊಂದಿಗೆ ಬೆಸೆದ ತುಂಟತನವನ್ನು ಹೇಳುವ 'ಬಾಹೋಂ ಮೆ ಚಲೆ ಆ..' ಹಾಗೂ ಬಿಡುಗಡೆಗೆ ಹಾತೊರೆಯುವುದು, ಆಕಾಂಕ್ಷೆಯನ್ನು ವಿವರಿಸುವ 'ಆಜ್ ಫಿರ್ ಜೀನೆ ಕಿ ತಮನ್ನಾ ಹೈ..' – ಇವು ಈಗಲೂ, ಎಂದೆಂದಿಗೂ ಚಲನಚಿತ್ರ ಗೀತೆ ಪ್ರಿಯರನ್ನು ಕಾಡುವ, ಅವರು ಹಾಡುವ ಗೀತೆಗಳಾಗಿವೆ.

ಒಂದೇ ದಿನ ಶಾಲೆಗೆ ಹಾಜರಾಗಿದ್ದ ಲತಾ!

ನವದೆಹಲಿ: ಅನೇಕ ಭಾಷೆಗಳಲ್ಲಿ ಹಾಡಿದ್ದ ಲತಾ ಮಂಗೇಶ್ಕರ್ ಅವರು ಶಾಲೆಯಲ್ಲಿ ಕಳೆದದ್ದು ಕೇವಲ ಒಂದೇ ದಿನ!

ಶಾಲೆಯ ಮೊದಲ ದಿನದಂದು ತಮ್ಮ ತಂಗಿ, ಹತ್ತು ತಿಂಗಳ ಕೂಸು ಆಶಾ ಅವರನ್ನು ಎತ್ತಿಕೊಂಡೇ ತೆರಳಿದ್ದ ಲತಾ ಅವರನ್ನು ಕಂಡು ಶಿಕ್ಷಕರು, ಪುಟ್ಟ ಮಕ್ಕಳಿಗೆ ಇಲ್ಲಿ ಪ್ರವೇಶವಿಲ್ಲ ಎಂದು ಗದರಿದ್ದಂತೆ. ಆಗ ಕೋಪಗೊಂಡಿದ್ದ ಲತಾ, ತಂಗಿಯನ್ನು ಎತ್ತಿಕೊಂಡು ತರಗತಿಯಿಂದ ಹೊರ ನಡೆದವರು ಮತ್ತೆ ಶಾಲೆಗೆ ಹಿಂತಿರುಗಲಿಲ್ಲವಂತೆ.

ನಂತರ ಮನೆಯಲ್ಲೇ ಶಿಕ್ಷಣ ಪಡೆದ ಲತಾ ಅವರು, ತಮ್ಮ ಮನೆಯಲ್ಲಿದ್ದ ಕೆಲಸದಾಳು ವಿಠಲ್ ಅವರಿಂದ ಮರಾಠಿಯ ವರ್ಣಮಾಲೆಗಳನ್ನು ಕಲಿತರು. ತಮ್ಮ ಸೋದರ ಸಂಬಂಧಿ ಇಂದಿರಾ ಮತ್ತು ಲೇಖ್ರಾಜ್ ಶರ್ಮಾ ಅವರಿಂದ ಹಿಂದಿ ಭಾಷೆ ಕಲಿತ ಲತಾ ಅವರು ಉರ್ದು, ಬಂಗಾಳಿ ಹಾಗೂ ಅಲ್ಪಮಟ್ಟಿಗೆ ಪಂಜಾಬಿಯನ್ನೂ ಕಲಿತರು. ಸಂಸ್ಕೃತವನ್ನೂ ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ತಮಿಳು ಭಾಷೆಯನ್ನೂ ಕಲಿಯಲು ಪ್ರಯತ್ನಿಸಿದ್ದರು.

ಈ ಪ್ರಸಂಗವನ್ನು ಲತಾ ಅವರ ಆತ್ಮಚರಿತ್ರೆ 'ಲತಾ ಮಂಗೇಶ್ಕರ್... ಅವಳದೇ ದನಿಯಲ್ಲಿ' ಕೃತಿಯಲ್ಲಿ ಲೇಖಕಿ ನಸ್ರೀನ್ ಮುನ್ನಿ ಕಬೀರ್ ಅವರು ಉಲ್ಲೇಖಿಸಿದ್ದಾರೆ.

ಲಂಡನ್‌ನ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ ಪ್ರದರ್ಶನ ನೀಡಿದ ಮೊದಲ ಭಾರತೀಯ ಕಲಾವಿದೆ

ಲಂಡನ್ (ಪಿಟಿಐ): 'ಭಾರತದ ಕೋಗಿಲೆ' ಎಂಬ ಖ್ಯಾತಿ ಹೊಂದಿರುವ ಗಾಯಕಿ ಲತಾ ಮಂಗೇಶ್ಕರ್ ಅವರು ಲಂಡನ್‌ನ ಪ್ರತಿಷ್ಠಿತ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ ಪ್ರದರ್ಶನ ನೀಡಿದ ಮೊದಲ ಭಾರತೀಯ ಕಲಾವಿದೆಯಾಗಿದ್ದಾರೆ.

ಲತಾ ಮಂಗೇಶ್ಕರ್ ಅವರು 1974ರಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಪ್ರದರ್ಶನ ನೀಡಿದರು. ಆಯ್ದ ಸುಮಧುರ ಗೀತೆಗಳನ್ನು ಹಾಡುವ ಮೂಲಕ ವಿದೇಶಿಗರನ್ನು ರಂಜಿಸಿದರು.

'ಭಾರತದ ಹೊರಗೆ ಪ್ರದರ್ಶನ ನೀಡುತ್ತಿರುವ ಮೊದಲ ಕಾರ್ಯಕ್ರಮ ಇದಾಗಿದೆ. ಆತ್ಮೀಯವಾಗಿ ಬರಮಾಡಿಕೊಂಡಿದ್ದಕ್ಕೆ ಕೃತಜ್ಞಳು' ಎಂದು ವೇದಿಕೆಯಲ್ಲಿ ಚುಟುಕಾಗಿ ಹಿಂದಿಯಲ್ಲಿ ಹೇಳಿದ್ದರು.

2013ರಲ್ಲೇ ಮೋದಿ ಪ್ರಧಾನಿ ಆಗಬೇಕೆಂದು ಹೇಳಿದ್ದ ಲತಾ ದೀದಿ

ಮೋದಿ– ಲತಾ ಬಾಂಧವ್ಯ ಮೆಲುಕು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವೆಬ್‌ಸೈಟ್ ಭಾನುವಾರ ಮೋದಿ ಮತ್ತು ಲತಾ ಮಂಗೇಶ್ಕರ್ ಅವರ ನಡುವಿನ ಬಾಂಧವ್ಯವನ್ನು ಮೆಲುಕು ಹಾಕಿದೆ.

'ಮೋದಿ ಅವರ ಮೇಲೆ ಲತಾ ಅವರಿಗೆ ಅಪಾರವಾದ ಪ್ರೀತಿ ಇತ್ತು. ಇಬ್ಬರೂ ಒಂದೇ ತಿಂಗಳಲ್ಲಿ ಜನಿಸಿದ್ದನ್ನು ಗಮನಿಸಿದ್ದ ಲತಾ, 'ನರೇಂದ್ರ ಭಾಯ್' ಎಂದು ಸಂಬೋಧಿಸುತ್ತಿದ್ದರು' ಎಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

2013ರಲ್ಲಿ ಪುಣೆಯಲ್ಲಿ ತಮ್ಮ ತಂದೆ ದೀನನಾಥ್ ಮಂಗೇಶ್ಕರ್ ಅವರ ನೆನಪಿಗಾಗಿ ನಿರ್ಮಿಸಲಾದ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಲು ಲತಾ ಮತ್ತು ಅವರ ಕುಟುಂಬದವರು ಮೋದಿ ಅವರನ್ನು ಆಹ್ವಾನಿಸಿದ್ದರು. ಆಗ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು.

ಈ ಕಾರ್ಯಕ್ರಮದಲ್ಲಿ ಲತಾ ಅವರು, 'ನರೇಂದ್ರ ಭಾಯಿ ಅವರನ್ನು ಪ್ರಧಾನಿಯಾಗಿ ನೋಡಬೇಕೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ' ಎಂದು ಹೇಳಿದ್ದರು. ಈ ಮಾತುಗಳನ್ನು ನೆನಪಿಸಿಕೊಂಡಿರುವ ವೆಬ್‌ಸೈಟ್, 'ಲತಾ ದೀದಿ 2014ರ ಚುನಾವಣೆಗೆ ಮುಂಚೆಯೇ ಇದನ್ನು ಹೇಳಿದ್ದರು' ಎಂದು ತಿಳಿಸಿದೆ. ಈ ಕಾರ್ಯಕ್ರಮದ ವಿಡಿಯೊ ಕ್ಲಿಪ್ ಅನ್ನೂ ಹಂಚಿಕೊಳ್ಳಲಾಗಿದೆ.

'ತಮ್ಮ ಅಮೆರಿಕ ಪ್ರವಾಸಕ್ಕೆ ತೆರಳುವ ಮುನ್ನ ಲತಾ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದ ಪ್ರಧಾನಿ ಅವರು ತಮ್ಮ 'ಮನ್ ಕಿ ಬಾತ್'ನಲ್ಲಿ ಇಬ್ಬರ ನಡುವಿನ ಬಾಂಧವ್ಯವನ್ನು ಹಂಚಿಕೊಂಡಿದ್ದರು. ದೀದಿ ಅವರನ್ನು ಭೇಟಿ ಮಾಡಿದಾಗಲೆಲ್ಲ ಅವರು ಗುಜರಾತಿ ಭಕ್ಷ್ಯಗಳನ್ನು ಬಡಿಸಿ ಹೇಗೆ ಉಪಚರಿಸುತ್ತಿದ್ದರು ಎಂಬುದನ್ನು ಸ್ಮರಿಸಿಕೊಂಡಿದ್ದರು' ಎಂದೂ ಪ್ರಧಾನಿ ಅವರ ವೆಬ್‌ಸೈಟ್ ಉಲ್ಲೇಖಿಸಿದೆ.

ಮುಂಬೈಯ ಶಿವಾಜಿ ಪಾರ್ಕ್‌ನಲ್ಲಿ ಲತಾ ಮಂಗೇಶ್ಕರ್ ಅವರ ಅಂತ್ಯಕ್ರಿಯೆ ಸಂದರ್ಭದಲ್ಲಿ ಅವರ ಕುಟುಂಬದ ಸದಸ್ಯರಿಗೆ ಪ್ರಧಾನಿ ನರೇಂದ್ರ ಮೋದಿ ಸಾಂತ್ವನ ಹೇಳಿದರು ಪಿಟಿಐ ಚಿತ್ರ

ಕಿಶೋರ್ ದಾ ಏಕೈಕ ಸಂದರ್ಶನ ಮಾಡಿದ್ದು ಲತಾ ದೀದಿ!

ಪ್ರಜಾವಾಣಿ ವಾರ್ತೆ

ಮುಂಬೈ: ಲತಾ ಮಂಗೇಶ್ಕರ್ ಮತ್ತು ಕಿಶೋರ್ ಕುಮಾರ್ ಅವರ ನಡುವಿನ ಸಂಬಂಧ ಅತ್ಯಂತ ವಿಶಿಷ್ಟವಾದದ್ದು. ದೂರದರ್ಶನಕ್ಕಾಗಿ ಕಿಶೋರ್ ಕುಮಾರ್ ಅವರು ನೀಡಿದ್ದ ಏಕೈಕ ಟಿವಿ ಸಂದರ್ಶನವನ್ನು ನಡೆಸಿಕೊಟ್ಟಿದ್ದು ಬೇರೆ ಯಾರೂ ಅಲ್ಲ, ಇದೇ ಲತಾ ಮಂಗೇಶ್ಕರ್ ಅವರು.

ಲತಾ–ಕಿಶೋರ್ ನಡೆಸಿಕೊಡುತ್ತಿದ್ದ ಕಾರ್ಯಕ್ರಮಗಳು ಜಗತ್ತಿನಾದ್ಯಂತ ಅತ್ಯಂತ ಯಶಸ್ವಿ ಮತ್ತು ಸ್ಮರಣೀಯ ಎನಿಸಿಕೊಂಡಿವೆ.

1948ರ 'ಜಿದ್ದಿ' ಚಿತ್ರದ 'ಯೇ ಕೌನ್ ಆಯಾ ರೇ' ಹಾಡು ಲತಾ ಮತ್ತು ಕಿಶೋರ್ ಕುಮಾರ್ ಅವರ ಮೊದಲ ಯುಗಳ ಗೀತೆ (ಡುಯೆಟ್). ಈ ಚಿತ್ರ ದೇವಾನಂದ್, ಕಾಮಿನಿ ಕೌಶಲ್, ಪ್ರಾಣ್ ಅವರಂಥ ದಿಗ್ಗಜರನ್ನೂ ಚಿತ್ರರಂಗ ಪರಿಚಯಿಸಿತು.

ಕಿಶೋರ್ ಕುಮಾರ್ ಅವರ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಲತಾ ಅವರು, 'ಇಂದು ಕಿಶೋರ್ ಅವರ ಜಯಂತಿ. ಅವರು ಎಷ್ಟು ಒಳ್ಳೆಯ ಗಾಯಕರಾಗಿದ್ದರೋ, ಅಷ್ಟೇ ಒಳ್ಳೆಯ ವ್ಯಕ್ತಿಯೂ ಆಗಿದ್ದರು. ಕಿಶೋರ್ ಅವರ ಅನುಪಸ್ಥಿತಿ ನನ್ನನ್ನು ಯಾವಾಗಲೂ ಕಾಡುತ್ತದೆ' ಎಂದು ಬರೆದಿದ್ದರು.

ಲತಾ-ಕಿಶೋರ್ ಅವರ ಮೊದಲ ಭೇಟಿಯೂ ಆಸಕ್ತಿದಾಯಕ. ಅವರು ಬಾಂಬೆ ಟಾಕೀಸ್‌ನಲ್ಲಿ ಭೇಟಿಯಾಗಿದ್ದರು. ರಾಗ ಸಂಯೋಜಕ ಖೇಮಚಂದ್ ಪ್ರಕಾಶ್ ಅವರ ಗೀತೆಯ ಧ್ವನಿಮುದ್ರಣಕ್ಕಾಗಿ, ಲತಾ ಮಂಗೇಶ್ಕರ್ ಅವರು ಗ್ರಾಂಟ್ ರೋಡ್‌ನಿಂದ ಮಲಾಡ್‌ಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.

ಒಂದು ದಿನ, ಯುವಕನೊಬ್ಬ ಬಾಂಬೆ ಸೆಂಟ್ರಲ್‌ನಲ್ಲಿ (ಈಗ ಮುಂಬೈ ಸೆಂಟ್ರಲ್‌ನಲ್ಲಿ) ತಾವಿದ್ದ ಕಂಪಾರ್ಟ್‌ಮೆಂಟ್‌ಗೆ ಹತ್ತಿ, ತಮ್ಮೊಂದಿಗೆ ಮಲಾಡ್‌ಗೆ ಇಳಿದಿದ್ದನ್ನು ಲತಾ ಗಮನಿಸಿದ್ದರು. ಲತಾ ಅವರು ನಿಲ್ದಾಣದಿಂದ ಟಾಂಗಾ ಮೂಲಕ ಹೊರಟರು. ಆ ಯುವಕನೂ ಟಾಂಗಾದಲ್ಲಿ ಅವರು ಸಾಗಿದ ದಾರಿಯಲ್ಲೇ ಪ್ರಯಾಣಿಸಿದ್ದ. ಆ ಯುವಕ ತಮ್ಮನ್ನು ಹಿಂಬಾಲಿಸುತ್ತಿದ್ದಾನೆ ಎಂದೇ ಲತಾ ಭಾವಿಸಿದ್ದರು. ಖೇಮಚಂದ್ ಪ್ರಕಾಶ್ ಅವರು ಸ್ಟುಡಿಯೋದಲ್ಲಿ ಅವರಿಬ್ಬರನ್ನೂ ಪರಿಚಯಿಸಿದಾಗ, ಅವರಿಬ್ಬರು ಮನಸಾರೆ ನಕ್ಕಿದ್ದರು.

ರಕ್ಷಾ ಬಂಧನದ ದಿನ, ಕಿಶೋರ್ ದಾ ಅವರು ಮಂಗೇಶ್ಕರರ ಮನೆಯಾದ 'ಪ್ರಭುಕುಂಜ್'ಗೆ ಭೇಟಿ ನೀಡುತ್ತಿದ್ದರು.

'ಲತಾಜಿ ಒಮ್ಮೆ ಕಿಶೋರ್ ಕುಮಾರ್ ಬಗ್ಗೆ ಹೇಳಿದ್ದರು. ಲತಾ ಮತ್ತು ಆಶಾ ಅವರು ಕಿಶೋರ್ ದಾ ಅವರೊಂದಿಗೆ ಹಾಡುವುದನ್ನು ನಿಲ್ಲಿಸಿದ್ದರಂತೆ. 'ಕಿಶೋರ್ ಬಂದು ಮಾತನಾಡುತ್ತಿದ್ದರು. ಅವರ ಹಾಸ್ಯ ಚಟಾಕಿಗಳಿಂದ ನಕ್ಕು, ಧ್ವನಿಯೇ ಬರದಷ್ಟು ದಣಿಯುತ್ತಿದ್ದೆವು. ಆದರೆ, ಅವರು ಮಾತ್ರ ಹಾಡು ಹಾಡಿ ಹೊರಟು ಹೋಗುತ್ತಿದ್ದರು. ಹೀಗಾಗಿ ನಾವು ಅವರನ್ನು ಹಾಡಲು ಬಿಟ್ಟುಬಿಡುತ್ತಿದ್ದೆವು. ಆದರೆ, ಅವರೊಂದಿಗೆ ಹಾಡುತ್ತಿರಲಿಲ್ಲ ಎಂದು ಹೇಳಿದ್ದರು' ಎಂದು ಕಪಿಲ್ ಶರ್ಮಾ ಅವರ ಕಾರ್ಯಕ್ರಮದಲ್ಲಿ ಗೀತರಚನೆಕಾರ ಸಮೀರ್ ಅಂಜಾನ್ ಹೇಳಿದ್ದರು.

ಗಂಧರ್ವ ಸಂಪುಟದ ಅಂತ್ಯ

ಒಂದನೇ ಪುಟದಿಂದ

ಹಾಡುತ್ತ ಹಾಡುತ್ತ ಬದುಕು

ಲತಾ ಅವರಿಗೆ ಸಿನಿಮಾ ನಂಟು ಕೂಡ ಬಾಲ್ಯದಲ್ಲಿಯೇ ಒದಗಿಬಂತು. ಅವರ ತಂದೆ ನಾಟಕ ಕಂಪನಿಯನ್ನು ಸಿನಿಮಾ ತಂಡವನ್ನಾಗಿಸಿದರು. ಆದರೆ, ಬೆಳ್ಳಿತೆರೆ ಕೈಹತ್ತಲಿಲ್ಲ; ಕಂಪನಿ ನಷ್ಟಕ್ಕೊಳಗಾಯಿತು.

ಮಗಳ ಸಂಗೀತಪ್ರತಿಭೆಯ ಬಗ್ಗೆ ಹೆಮ್ಮೆಯಿದ್ದರೂ, ಲತಾ ಅವರು ಸಾರ್ವಜನಿಕವಾಗಿ ಹಾಡುವುದು ಅವರ ತಂದೆಗೆ ಇಷ್ಟವಿರಲಿಲ್ಲ. ಹೆಣ್ಣುಮಕ್ಕಳು ಸಾರ್ವಜನಿಕವಾಗಿ ಹಾಡುವುದು ದೀನಾನಾಥರಿಗೆ ಪ್ರಿಯವಾದ ಸಂಗತಿಯಾಗಿರಲಿಲ್ಲ. ಲತಾ ಮೊದಲ ಬಾರಿಗೆ ಸಿನಿಮಾಗೆ ಹಾಡಿದ ಸಂದರ್ಭದಲ್ಲಿ ಅವರ ತಂದೆಗೆ ತೀವ್ರ ಅನಾರೋಗ್ಯ. ಅದೊಂದು ಮರಾಠಿ ಸಿನಿಮಾ. ನಾಟಕ ಕಂಪನಿಯಲ್ಲಿ ಸಹೋದ್ಯೋಗಿಯಾಗಿದ್ದ ಸದಾಶಿವರಾವ್ ಎನ್ನುವವರೇ ಸಂಗೀತ ನಿರ್ದೇಶಕರಾದುದರಿಂದ, ಮಗಳಿಗೆ ಸಿನಿಮಾದಲ್ಲಿ ಹಾಡಲಿಕ್ಕೆ ಅನುಮತಿ ನೀಡಿದರು.

ಹದಿಮೂರರ ಬಾಲೆಗೆ ಆರಂಭದಲ್ಲಿ ಹಾಡುಗಾರಿಕೆಯ ಬಾಗಿಲು ಸುಲಭಕ್ಕೆ ತೆರೆದುಕೊಳ್ಳಲಿಲ್ಲ. ತಂದೆಯ ನಂತರ ಕುಟುಂಬದ ಪೋಷಣೆಯ ಜವಾಬ್ದಾರಿ ಹೆಗಲಿಗೇರಿದ್ದರಿಂದ, ಜೀವನೋಪಾಯಕ್ಕಾಗಿ ಸಿನಿಮಾಗಳಲ್ಲಿ ನಟಿಸಬೇಕಾಯಿತು. ಜೀವನದ ದಿಕ್ಕು ಬದಲಾದರೂ, ಸಂಗೀತದ ರಿಯಾಜ್ ನಿಲ್ಲಿಸಲಿಲ್ಲ. ಇಂದೋರ್, ಪುಣೆ, ಕೊಲ್ಲಾಪುರಗಳ ನಂತರ ಜೀವನ ನೆಲೆಗೊಂಡಿದ್ದು ಮುಂಬೈಯಲ್ಲಿ.

ದೇಶದ ವಿಭಜನೆಯ ಸಂದರ್ಭದಲ್ಲಿ, ಆ ವೇಳೆಗೆ ಖ್ಯಾತನಾಮರಾಗಿದ್ದ ಗಾಯಕಿಯರು ಪಾಕಿಸ್ತಾನದೊಂದಿಗೆ ಗುರ್ತಿಸಿಕೊಂಡಿದ್ದರಿಂದ, ಹೊಸ ಗಾಯಕಿಯರಿಗೆ ಒಂದಷ್ಟು ಅವಕಾಶಗಳು ತೆರೆದುಕೊಂಡವು. ಆ ಅವಕಾಶವನ್ನು ಲತಾ ಸಮರ್ಪಕವಾಗಿ ಬಳಸಿಕೊಂಡರು. ಪ್ರಖರ ಪ್ರತಿಭೆ ಜನಮನ್ನಣೆ ಗಳಿಸಲು ಹೆಚ್ಚು ಕಾಲ ಬೇಕಾಗಲಿಲ್ಲ. ಖ್ಯಾತನಾಮ ಸಂಗೀತ ಸಂಯೋಜಕರ ಪಾಲಿಗೆ ಲತಾ ಅಚ್ಚುಮೆಚ್ಚಾದರು. ಮೊಹಮ್ಮದ್ ರಫಿ, ಮುಖೇಶ್, ಹೇಮಂತ್ ಕುಮಾರ್, ಕಿಶೋರ್ ಕುಮಾರ್, ಮನ್ನಾ ಡೇ ಅವರಂಥ ಘಟಾನುಘಟಿಗಳ ಜೊತೆ ಹಾಡಿದರು. ಅವರ ಹಾಡುಗಾರಿಕೆಯ ಮೂಲಕ ನಾಯಕಿಯರ ಪಾತ್ರದ ವರ್ಚಸ್ಸಿನೊಂದಿಗೆ ಒಟ್ಟಾರೆ ಸಿನಿಮಾದ ಪ್ರಭಾವಳಿಯೇ ಹಿಗ್ಗತೊಡಗಿತು. ದಿನಕ್ಕೆ ಐದು ಗೀತೆಗಳ ರೆಕಾರ್ಡ್ ನಡೆಯುತ್ತಿದ್ದ ದಿನಗಳಲ್ಲೂ, ತಮ್ಮನ್ನು ಸಂಗೀತದ ವಿದ್ಯಾರ್ಥಿನಿಯೆಂದೇ ಭಾವಿಸಿದ್ದ ಅವರು ಶಾಸ್ತ್ರೀಯ ಸಂಗೀತದ ಅಭ್ಯಾಸವನ್ನು ನಿರಂತರವಾಗಿ ನಡೆಸಿದ್ದರು.

ರುಚಿ–ಅಭಿರುಚಿ

ಜನಪ್ರಿಯತೆಯ ಉತ್ತುಂಗದಲ್ಲಿದ್ದರೂ ಲತಾ ತಮ್ಮ ಹಾಡುಗಾರಿಕೆಯಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಒತ್ತಾಯಕ್ಕಾಗಿ ಕೆಲವೇ ಕೆಲವು ಕ್ಯಾಬರೆ ಗೀತೆಗಳನ್ನು ಹಾಡಿದರಾದರೂ, ಬಾಲಿವುಡ್‌ನ ರತಿ ವರ್ಚಸ್ಸಿನ ಕುಣಿತದ ಹಾಡುಗಳಿಂದ ಅಂತರ ಕಾಪಾಡಿಕೊಂಡರು. ಮರಾಠಿ ಸಿನಿಮಾಗಳ ಜನಪ್ರಿಯ ಲಾವಣಿ ಪ್ರಕಾರವೂ ಅವರಿಗೆ ಅಷ್ಟೇನೂ ಒಗ್ಗಿದಂತಿರಲಿಲ್ಲ. ಲತಾ ಅವರದು ಸಂಗೀತಗಾರರ ಕುಟುಂಬ. ಅವರ ಕಿರಿಯ ಸೋದರಿಯರಾದ ಆಶಾ ಭೋಂಸ್ಲೆ, ಉಷಾ ಮಂಗೇಶ್ಕರ್, ಮೀನಾ ಮಂಗೇಶ್ಕರ್ ಹಾಗೂ ಸೋದರ ಹೃದಯನಾಥ ಮಂಗೇಶ್ಕರ್ ಕೂಡ ಸಂಗೀತಕೋವಿದರೇ. ಆದರೆ, ಸಾಧನೆಯಲ್ಲಿ 'ಅಕ್ಕ'ನದೇ ಯಜಮಾನಿಕೆ.

ಸಂಗೀತವನ್ನು ಹೊರತುಪಡಿಸಿದರೆ ಲತಾ ಅವರಿಗೆ ಓದುವ ಹವ್ಯಾಸವಿತ್ತು. ಕಾದಂಬರಿಗಳ ಓದು, ಅಡುಗೆ ಮಾಡುವುದು ಹಾಗೂ ಛಾಯಾಗ್ರಹಣ–ಅವರ ಬಿಡುವಿನ ರುಚಿಯನ್ನು ಹೆಚ್ಚಿಸುತ್ತಿದ್ದವು.

ಎಪ್ಪತ್ತೈದು ವರ್ಷಗಳ ಲತಾ ಅವರ ಸಂಗೀತಯಾನ ಸಿನಿಮಾಕ್ಷೇತ್ರವನ್ನು ಮೀರಿ, ಭಾರತೀಯ ಸಂಸ್ಕೃತಿಯ ವಿಶಿಷ್ಟ ಅಧ್ಯಾಯವೊಂದಾಗಿದೆ. ಆ ಕಾರಣದಿಂದಲೇ, ಲತಾ ಅವರ ನಿಧನ ಚಲನಚಿತ್ರರಂಗಕ್ಕೆ ಮಾತ್ರವಲ್ಲ, ಒಟ್ಟಾರೆ ಭಾರತೀಯ ಕಲಾಪ್ರಪಂಚದಲ್ಲಿ ಉಂಟಾಗಿರುವ ಬಹುದೊಡ್ಡ ನಿರ್ವಾತ.

ಲತಾ ಮಂಗೇಶ್ಕರ್ ಇನ್ನಿಲ್ಲ

ಒಂದನೇ ಪುಟದಿಂದ

ತ್ರಿವರ್ಣ ಧ್ವಜ ಹೊದಿಸಿದ್ದ ಲತಾ ಅವರ ಮೃತದೇಹವನ್ನು ಅವರ ನಿವಾಸ 'ಪ್ರಭು ಕುಂಜ'ದಿಂದ ಶಿವಾಜಿ ಪಾರ್ಕ್‌ಗೆ ತರಲಾಯಿತು. ಮೃತ ದೇಹವನ್ನು ಹೊತ್ತಿದ್ದ ವಾಹನವು ಸಾಗಿದ ರಸ್ತೆಯ ಇಕ್ಕೆಲಗಳಲ್ಲಿಯೂ ಸಾವಿರಾರು ಜನರು ನಿಂತು ಖ್ಯಾತ ಗಾಯಕಿಯ ಅಗಲಿಕೆಗೆ ಕಂಬನಿ ಮಿಡಿದರು.

ಸುಮಾರು ಎಂಟು ದಶಕಗಳ ವೃತ್ತಿ ಜೀವನದಲ್ಲಿ 25 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದ ಲತಾ ಅವರ ಗೌರವಾರ್ಥ ಎರಡು ದಿನಗಳ ಶೋಕಾಚರಣೆಯನ್ನು ಕೇಂದ್ರ ಸರ್ಕಾರ ಘೋಷಿಸಿದೆ.

ಅಭಿಮಾನಿಗಳ ವಿದಾಯ

ಮುಂಬೈ: ಲತಾ ಮಂಗೇಶ್ಕರ್ ಅವರ ದಕ್ಷಿಣ ಮುಂಬೈನಲ್ಲಿರುವ ನಿವಾಸದಿಂದ ಶಿವಾಜಿ ಪಾರ್ಕ್‌ವರೆಗೆ ಭಾನುವಾರ ನಡೆದ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ನೂರಾರು ಅಭಿಮಾನಿಗಳು, 'ಲತಾ ದೀದಿ ಅಮರ್ ರಹೆ' ಎಂಬ ಘೋಷಣೆ ಕೂಗುತ್ತಾ, ಹಾಡು ಹಾಡುತ್ತಾ ತಮ್ಮ ನೆಚ್ಚಿನ ಗಾಯಕಿಗೆ ಭಾವಪೂರ್ಣ ವಿದಾಯ ಕೋರಿದರು.

ಚಿತ್ರ ಸಂಗೀತ ಉದ್ಯಮದಿಂದ ನಮನ

ನವದೆಹಲಿ (ಪಿಟಿಐ): ಲತಾ ಮಂಗೇಶ್ಕರ್ ಅವರ ನಿಧನದಿಂದ ಯುಗವೊಂದು ಅಂತ್ಯಗೊಂಡಂತಾಗಿದೆ ಎಂದು ಸಂಗೀತ ಕ್ಷೇತ್ರದಲ್ಲಿರುವವರು ಶೋಕಿಸಿದ್ದಾರೆ.

'ಲತಾಜಿ ಅವರಂತಹ ಮತ್ತೊಬ್ಬ ಕಲಾವಿದೆ ಸಿಗಲು ಸಾಧ್ಯವಿಲ್ಲ' ಎಂದು ಟಿಪ್ಸ್ ಫಿಲ್ಮ್ಸ್ ಆ್ಯಂಡ್ ಮ್ಯುಸಿಕ್ ಕಂಪನಿ ಮುಖ್ಯಸ್ಥ ಕುಮಾರ್ ಎಸ್.ತೌರಾನಿ ಹೇಳಿದ್ದಾರೆ.

ಸಂಗೀತ ಕ್ಷೇತ್ರದ ಹೆಸರಾಂತ ಉದ್ಯಮ ಸಮೂಹ ಸರೆಗಮ ಸಂಸ್ಥೆಯ ಮುಖ್ಯಸ್ಥ ಸಂಜೀವ್ ಗೋಯೆಂಕಾ ಅವರು, 'ಲತಾ ದೀದಿ ಹಾಡಿರುವ ಗೀತೆಗಳು ನಮ್ಮ ಹೃದಯ ಸೂರೆಗೊಳ್ಳುವುದನ್ನು ನಿಲ್ಲಿಸುವುದಿಲ್ಲ' ಎಂದು ಹೇಳಿದ್ದಾರೆ. ಸೋನಿ ಮ್ಯುಸಿಕ್ ಇಂಡಿಯಾ, ಟಿ–ಸಿರೀಜ್ ಉದ್ಯಮ ಸಂಸ್ಥೆಗಳು ಸಹ ಶೋಕಿಸಿದ್ದು, ಲತಾ ಅವರ ಕೊಡುಗೆಯನ್ನು ಸ್ಮರಿಸಿವೆ.

ಧ್ವನಿ ಸಮಸ್ಯೆಯಿಂದ ಗಾಯನದಿಂದ ಕೆಲಕಾಲ ದೂರ ಉಳಿದಿದ್ದ ದೀದಿ

ಇಂದೋರ್ (ಪಿಟಿಐ): ಸಾವಿರಾರು ಗೀತೆಗಳಿಗೆ ತಮ್ಮ ಮಧುರ ಕಂಠವನ್ನು ನೀಡಿದ ಗಾಯಕಿ ಲತಾ ಮಂಗೇಶ್ಕರ್ ಅವರು ತಮ್ಮ ಧ್ವನಿ ತಂತುಗಳ ಸಮಸ್ಯೆಯಿಂದ ಖ್ಯಾತ ಶಾಸ್ತ್ರೀಯ ಗಾಯಕ ಉಸ್ತಾದ್ ಅಮೀರ್ ಖಾನ್ ಅವರ ಸಲಹೆಯ ಮೇರೆಗೆ ಕೆಲವು ತಿಂಗಳುಗಳ ಕಾಲ ಗಾಯನದಿಂದ ದೂರ ಉಳಿದಿದ್ದರು.

ಇದು ಬಹುತೇಕ ಸಂಗೀತ ಪ್ರಿಯರಿಗೆ ತಿಳಿಯದ ಮಾಹಿತಿಯಾಗಿದೆ. ಈ ವೇಳೆ ಮಂಗೇಶ್ಕರ್ ಅವರು ಮೌನ ವ್ರತ ತಾಳುವ ಮೂಲಕ ಗಾಯನಕ್ಕೆ ವಿರಾಮ ನೀಡಿದ್ದರು. ನಂತರ ಧ್ವನಿವರ್ಧಕದ ಮೂಲಕ ತಮ್ಮ ಗಾಯನವನ್ನು ಮುಂದುವರೆಸಿದರು.

ಗಣ್ಯರಿಂದ ಭಾವಪೂರ್ಣ ನಮನ



ತಮ್ಮ ಹಾಡುಗಳ ಮೂಲಕ ಭಾರತದ ಶ್ರೇಷ್ಠತೆ ಹಾಗೂ ಸತ್ವವನ್ನು ಅದ್ಭುತವಾಗಿ ವ್ಯಕ್ತಪಡಿಸಿದ ಗಾಯಕಿ ಲತಾ ಮಂಗೇಶ್ಕರ್. ಸರಳ ಹಾಗೂ ಸ್ನೇಹಿ ಜೀವಿಯಾಗಿದ್ದರು. ಅವರ ಕುಟುಂಬದ ಸದಸ್ಯರಿಗೆ ಹಾಗೂ ಅಭಿಮಾನಿಗಳಿಗೆ ನನ್ನ ಸಂತಾಪಗಳು

ರಾಮನಾಥ ಕೋವಿಂದ್, ರಾಷ್ಟ್ರಪತಿ



ಲತಾ ಮಂಗೇಶ್ಕರ್ ಅವರ ನಿಧನದಿಂದ ದೇಶದ ಸಂಗೀತ ಲೋಕದಲ್ಲಿ ಶೂನ್ಯ ಸೃಷ್ಟಿಯಾಗಿದ್ದು, ಅದನ್ನು ತುಂಬುವುದು ಅಸಾಧ್ಯ. ಮುಂಬರುವ ಪೀಳಿಗೆಗಳು ಅವರನ್ನು ಭಾರತದ ಸಂಸ್ಕೃತಿಯ ಅಗ್ರಮಾನ್ಯ ವ್ಯಕ್ತಿ ಎಂದೇ ನೆನಪಿಸಿಕೊಳ್ಳುತ್ತವೆ. ಅವರೊಂದಿಗಿನ ನನ್ನ ಒಡನಾಟ ಸ್ಮರಣೀಯ

ನರೇಂದ್ರ ಮೋದಿ, ಪ್ರಧಾನಿ

ಇದು ನಮಗೆ ದುಃಖದ ದಿನ. ಲತಾ ಅವರಂತಹವರು ಭಾರತೀಯ ಸಂಗೀತ ಮತ್ತು ಕಾವ್ಯದ ಭಾಗ. ಈ ಶೂನ್ಯವು ಶಾಶ್ವತವಾಗಿ ಉಳಿಯಲಿದೆ

ಎ.ಆರ್ ರೆಹಮಾನ್, ಸಂಗೀತ ನಿರ್ದೇಶಕ

ದೇಶದ ಅಮೂಲ್ಯ ಆಸ್ತಿ ಲತಾ ಮಂಗೇಶ್ಕರ್ ಇನ್ನಿಲ್ಲ. ಅವರು ಹಾಡಿರುವ ಹಾಡುಗಳು ನಮ್ಮ ಬಾಳನ್ನು ಬೆಳಗುತ್ತವೆ. ನಾವು ದುಃಖದಲ್ಲಿದ್ದಾಗ ಸಾಂತ್ವನ ಹೇಳುತ್ತವೆ, ಧನ್ಯವಾದಗಳು ಲತಾಜಿ.. ನಿಮ್ಮ ಆತ್ಮಕ್ಕೆ ಶಾಂತಿ ಲಭಿಸಲಿ

ಶಬಾನಾ ಅಜ್ಮಿ, ನಟಿ

ಲತಾ ಮಂಗೇಶ್ಕರ್ ಅವರ ನಿಧನ ಸುದ್ದಿ ಕೇಳಿ ದಿಗ್ಭ್ರಮೆಯಾಗಿದೆ. ಅವರ ಸಾವಿನೊಂದಿಗೆ ಶಕೆಯೊಂದು ಅಂತ್ಯಗೊಂಡಿದೆ. ಅವರ ಶಾರೀರ, ಹಾಡಿರುವ ದೇಶಭಕ್ತಿ ಗೀತೆಗಳು, ಅವರ ಹೋರಾಟದ ಜೀವನ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕ

ಸೋನಿಯಾ ಗಾಂಧಿ, ಕಾಂಗ್ರೆಸ್ ಅಧ್ಯಕ್ಷೆ

ಲತಾ ಮಂಗೇಶ್ಕರ್ ಒಬ್ಬ ಅದ್ಭುತ ಗಾಯಕಿ. ಅವರ ದನಿ, ಅವರು ಹಾಡಿರುವ ಹಾಡುಗಳು ಅಜರಾಮರ. ನಮ್ಮೆಲ್ಲರ ಮನದಲ್ಲಿ 'ಭಾರತದ ಕೋಗಿಲೆ'ಯ ಕಂಠಸಿರಿಗೆ ಶಾಶ್ವತ ಸ್ಥಾನ ಇರಲಿದೆ.

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ



ಸಹಸ್ರಮಾನದ ಧ್ವನಿಯೊಂದು ನಮ್ಮಿಂದ ದೂರ ಹೋಗಿದೆ. ಲತಾ ಮಂಗೇಶ್ಕರ್ ನಮ್ಮನ್ನು ಅಗಲಿದ್ದಾರೆ. ಈಗ ಅವರ ಧ್ವನಿ ಸ್ವರ್ಗದಲ್ಲಿ ಅನುರಣಿಸುತ್ತದೆ. ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ

ಅಮಿತಾಭ್ ಬಚ್ಚನ್, ಬಾಲಿವುಡ್ ನಟ



ಲತಾ ಮಂಗೇಶ್ಕರ್ ಅದ್ಭುತ ವ್ಯಕ್ತಿ. ಶಬ್ದಗಳ ಚೌಕಟ್ಟಿನೊಳಗೆ ಅವರನ್ನು ವರ್ಣಿಸಲು ಸಾಧ್ಯವಿಲ್ಲ. ಅವರ ಬಗ್ಗೆ ಎಷ್ಟೇ ಮಾತನಾಡಿದರೂ, ಅದು ಕಡಿಮೆಯೇ ಅನಿಸುತ್ತದೆ. ಪದಗಳಿಗೆ ಮೀರಿದ ವ್ಯಕ್ತಿತ್ವ ಅವರದು

ಗುಲ್ಜಾರ್, ಕವಿ, ಚಿತ್ರಸಾಹಿತಿ, ನಿರ್ದೇಶಕ

ಸಂಗೀತ ದಿಗ್ಗಜರ ಕಂಬನಿ

ಸಂಗೀತ ಪ್ರಪಂಚಕ್ಕೆ ಕರಾಳ ದಿನ



ಭಾರತದ ಸಂಗೀತ ಪ್ರಪಂಚಕ್ಕೆ ಲತಾ ಅವರ ಅಗಲಿಕೆ ಕರಾಳ ದಿನ. ಅವರ ರಕ್ತ ಕೋಶಗಳನ್ನೆಲ್ಲಾ ಸಂಗೀತಕ್ಕೆ ಅರ್ಪಿಸಿದವರು. ಆಕಾಶವನ್ನು ಬಣ್ಣಿಸಲು ಶಬ್ದಗಳಲ್ಲಿ ಸಾಧ್ಯವೇ ಹೇಳಿ? ಎಲ್ಲ ಪ್ರಕಾರದ ಹಾಡುಗಳನ್ನು ಹಾಡಿದ್ದಾರೆ. ಲತಾ ಅವರ ಧ್ವನಿಗೇ ಸ್ವರ ಸೇರಿಸಬೇಕು. ಅಂಥ ಕಲಾವಿದೆ ಅವರು. ನನ್ನ ಗುರುಗಳಾದ ಭಾರತ ರತ್ನ ಭೀಮಸೇನ ಜೋಷಿ ಹಾಗೂ ಇನ್ನೊಬ್ಬ ಭಾರತ ರತ್ನ ಲತಾ ಮಂಗೇಶ್ಕರ್ ಸೇರಿ ಹಾಡಿದ ಭಜನ್‌ನ್ನು ಹಾಡಿದ್ದು ಜಗತ್ಪ್ರಸಿದ್ಧವಾಗಿದೆ. ಅವರನ್ನು ಕಳೆದುಕೊಂಡು ದೇಶ ಬಡವಾಗಿದೆ. ಇಂಥ ಕಲಾವಿದರು ಹುಟ್ಟುವುದು ಕಠಿಣ.

– **ಪಂ. ವಿನಾಯಕ ತೊರವಿ**, ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ

ಭಾವನೆಗಳಿಗೆ ಧ್ವನಿಯಾಗಿದ್ದ ಲತಾ ದೀದಿ

ಲತಾಮಂಗೇಶ್ಕರ್ ನಮ್ಮ ಎಲ್ಲ ಭಾವನೆಗಳಿಗೂ ಧ್ವನಿಯಾಗಿದ್ದರು. ಸತ್ಯಂ ಶಿವಂ ಸುಂದರಂ ಸಹಿತ ಅನೇಕ ಗೀತೆಗಳನ್ನು ಹಾಡಿ ವಿಶ್ವದಾದ್ಯಂತ ಮನೆ ಮನಗಳಲ್ಲಿಯೂ ನೆಲೆ ಕಂಡಂತಹ ಮಹಾ ಸಾಧಕಿ. ಅವರನ್ನು ಮಾತಿನಲ್ಲಿ ಕಟ್ಟಿಕೊಡಲಾಗದು. ಸೂರ್ಯ-ಚಂದ್ರರಿರುವವರೆಗೆ ಅವರ ಹೆಸರು ಅಜರಾಮರ. ಅವರಿಗೆ ನಮ್ಮ ಭಾವಪೂರ್ವಕ ಶ್ರದ್ಧಾಂಜಲಿ.

ಮಣಿಕಾಂತ್ ಕದ್ರಿ, ಸಂಗೀತ ನಿರ್ದೇಶಕ

ಸ್ಫೂರ್ತಿ ಕೊಟ್ಟ ಗಾನ ಸರಸ್ವತಿ

ಲತಾ ಮಂಗೇಶ್ಕರ್ ಎಂಬ ಹೆಸರೇ ಒಂದು ಹೊಸ ಕಂಪನವನ್ನು ಸೃಷ್ಟಿಸುತ್ತದೆ. ಭೌತಿಕವಾಗಿ ಲತಾ ಅವರನ್ನು ನಾವು ಕಳೆದುಕೊಂಡಿದ್ದೇವೆ. ಆದರೆ, ಅವರ ಅಮೋಘವಾದ ಸಂಗೀತದಿಂದ ಅವರು ಯಾವತ್ತೂ ನಮ್ಮ ಜೊತೆ ಇರುತ್ತಾರೆ. ಎಲ್ಲ ಸಂಗೀತ ಕಲಾವಿದರಿಗೂ ಸ್ಫೂರ್ತಿ ತಂದ ಗಾನ ಸರಸ್ವತಿ ಅವರು.

– **ಶಶಿಧರ ಕೋಟೆ**, ಗಾಯಕ

ಕನಸಾಗಿಯೇ ಉಳಿದ ಭೇಟಿ

ಲತಾ ಮಂಗೇಶ್ಕರ್ ಒಂದು ದೈವಿಕವಾದ ಶಕ್ತಿ. ತಮ್ಮ ಸಾವಿರಾರು ಹಾಡುಗಳು, ನಮ್ಮ ದೈನಂದಿನ ಚುಟುವಟಿಕೆಗಳು, ಎಲ್ಲ ಭಾವಗಳಲ್ಲೂ ಅವರು ನಮ್ಮೊಂದಿಗೆ ಜೀವಂತವಾಗಿ ಇರುತ್ತಾರೆ. ಅವರು ನಿತ್ಯ ನೂತನ. ಲತಾ ಅವರು ಹಾಡಿದ್ದನ್ನು ನಮ್ಮಂಥ ಗಾಯಕರು ಹಾಡಲು ಪ್ರಯತ್ನಿಸುವುದೇ ಸಾಧನೆ. ಅಂಥ ಪ್ರಯತ್ನ ಸಾಗಿದಲ್ಲಿ ಏನೂ ಗೊತ್ತಿಲ್ಲದವನೂ ಸಂಗೀತಗಾರ ಆಗಿಬಿಡಬಹುದು. ಅಂಥ ಬದ್ಧತೆ ಅವರ ಗಾಯನದಲ್ಲಿ ಇರುತ್ತಿತ್ತು. ಅವರನ್ನು ಭೇಟಿಯಾಗಲು ಹಲವಾರು ಬಾರಿ ಪ್ರಯತ್ನಿಸಿದ್ದೆ. ಆದರೆ ಸಾಧ್ಯವಾಗಲಿಲ್ಲ. ಅದೊಂದು ಕನಸಾಗಿಯೇ ಉಳಿಯಿತು. ಆದರೆ, ಅವರ ಹಾಡುಗಳಾದ 'ಏ ಮೇರೆವತನ್ ಕೇ ಲೋಗೋ.... ಭಜನ್...' ಇತ್ಯಾದಿಗಳು ತುಂಬಾ ಇಷ್ಟ. ಅವರ ಹಾಡುಗಳಿಗೆ ಚಿಕಿತ್ಸಕ ಶಕ್ತಿ ಇತ್ತು.

– **ಸಂಗೀತಾ ಕಟ್ಟಿ**, ಗಾಯಕಿ

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರೊಂದಿಗೆ ಮಂಗೇಶ್ಕರ್

ಉಷಾ ಮಂಗೇಶ್ಕರ್‌ಗೆ ಸಿಎಂ ಸಾಂತ್ವನ

ಬೆಂಗಳೂರು: ಗಾಯಕಿ ಲತಾ ಮಂಗೇಶ್ಕರ್ ನಿಧನದ ಕಾರಣ ಅವರ ಕುಟುಂಬಸ್ಥರಿಗೆ ದೂರವಾಣಿ ಕರೆ ಮಾಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಂತ್ವನ ಹೇಳಿದ್ದಾರೆ.

ಲತಾ ಸಹೋದರಿ ಉಷಾ ಮಂಗೇಶ್ಕರ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಲತಾ ಮಂಗೇಶ್ಕರ್ ಅವರು ಭಾರತದ ನೈಟಿಂಗೇಲ್ ಆಗಿದ್ದರು. ಹಲವು ತಲೆಮಾರುಗಳ ಜನರ ಉಸಿರಿನ ಜೊತೆ ಲತಾ ಮಂಗೇಶ್ಕರ್ ಜೀವಂತವಾಗಿರುತ್ತಾರೆ. ದೇಶದ ಜನರ ಮನಸ್ಸಿನಲ್ಲಿ ಲತಾ ಮಂಗೇಶ್ಕರ್ ವಿಶೇಷ ಸ್ಥಾನ ಪಡೆದಿದ್ದಾರೆ' ಎಂದಿದ್ದಾರೆ. 'ಇಂಥ ಮಹಾನ್ ಗಾಯಕಿಯನ್ನು ನಾವು ಕಳೆದುಕೊಂಡಿದ್ದೇವೆ. ಲತಾ ನಿಧನದ ಗೌರವಾರ್ಥ ಕರ್ನಾಟಕದಲ್ಲಿ ಶೋಕಾಚರಣೆಗೆ ಆದೇಶಿಸಲಾಗಿದೆ' ಎಂದು ಮುಖ್ಯಮಂತ್ರಿ ಸಾಂತ್ವನದ ನುಡಿಗಳನ್ನಾಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಮಸ್ಯೆಗಳು ಎದುರಾದಾಗ ಬೇರೆಯವರನ್ನು ಅವಲಂಬಿಸುವುದಕ್ಕಿಂತ ನೀವೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ. –ಗೌತಮ ಬುದ್ಧ

ಬಿಡಿಎ ಅಕ್ರಮ: ಸಮಗ್ರ ತನಿಖೆ ಆಗಲಿ ಭ್ರಷ್ಟಾಚಾರದ ಕೂಪದಿಂದ ಹೊರಬರಲಿ

ಬೆಂಗಳೂರು ನಗರದಲ್ಲಿ ವಸತಿ ಬಡಾವಣೆಗಳ ಅಭಿವೃದ್ಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಾತ್ರ ಮಹತ್ವದ್ದಾಗಿದೆ. ನಗರದ ಜನಸಂಖ್ಯೆ ಹೆಚ್ಚಿದಂತೆಲ್ಲಾ ಹೊಸ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡುವ ಹೊಣೆ ಬಿಡಿಎಯದು. ಬಿಡಿಎಯಿಂದ ನಿವೇಶನ ಖರೀದಿಸಿದರೆ ಸಮಸ್ಯೆ ಇರುವುದಿಲ್ಲ ಎಂಬ ವಿಶ್ವಾಸ ಸಾರ್ವಜನಿಕರಲ್ಲಿ ಮನೆಮಾಡಿತ್ತು. ಆದರೆ, ಈ ವಿಶ್ವಾಸಾರ್ಹತೆ ಕಳೆದುಹೋಗಿ ವರ್ಷಗಳೇ ಸಂದಿವೆ. ದಿನಕ್ಕೊಂದರಂತೆ ಬಯಲಿಗೆ ಬರುತ್ತಿರುವ ಹಗರಣಗಳು ಬಿಡಿಎ ಎಷ್ಟರಮಟ್ಟಿಗೆ ಭ್ರಷ್ಟಾಚಾರದ ಕೂಪವಾಗಿಬಿಟ್ಟಿದೆ ಎಂಬುದಕ್ಕೆ ಕನ್ನಡಿ. ಯಾವುದೋ ಬಡಾವಣೆಯಲ್ಲಿ ಯಾರಿಗೋ ಹಂಚಿಕೆ ಆಗಿರುವ ನಿವೇಶನವನ್ನು ಇನ್ಯಾರಿಗೋ ಶುದ್ಧ ಕ್ರಯಪತ್ರ ಮಾಡಿಕೊಡುವ ಭ್ರಷ್ಟ ಅಧಿಕಾರಿಗಳು ಪ್ರಾಧಿಕಾರದಲ್ಲಿದ್ದಾರೆ. ಮೂಲ ಬೆಲೆಯ ಮೂಲೆ ನಿವೇಶನಗಳನ್ನು ವಸತಿ ನಿವೇಶನಕ್ಕೆ ಬದಲಿಯಾಗಿ ಹಂಚಿಕೆ ಮಾಡುವುದಕ್ಕೆ ಬಿಡಿಎ ಕಾಯ್ದೆಯಲ್ಲಿ ಅವಕಾಶವೇ ಇಲ್ಲ. ಇವುಗಳನ್ನು ಹರಾಜಿನ ಮೂಲಕ ಹಂಚಿಕೆ ಮಾಡಬೇಕು. ಆದರೂ ಇಂತಹ ನಿವೇಶನಗಳನ್ನು ವಸತಿ ನಿವೇಶನಕ್ಕೆ ಬದಲಿ ನಿವೇಶನವಾಗಿ ಹಂಚಿಕೆ ಮಾಡಿರುವ ಉದಾಹರಣೆಗಳಿಗೇನೂ ಇಲ್ಲಿ ಕೊರತೆ ಇಲ್ಲ. ನಿವೇಶನದಾರರ ಗಮನಕ್ಕೇ ತಾರದೆ, ಅವರ ನಿವೇಶನದ ಹಂಚಿಕೆಯನ್ನೇ ರದ್ದುಪಡಿಸಿ ಬೇರೆ ಯಾರದೋ ಹೆಸರಿಗೆ ಅದನ್ನು ಬದಲಿ ನಿವೇಶನವಾಗಿ ನೀಡಿದ ಉದಾಹರಣೆಗಳು ಪ್ರಾಧಿಕಾರದಲ್ಲಿ ಬಹಳಷ್ಟಿವೆ. ಹೈಕೋರ್ಟ್ ಆದೇಶವನ್ನು ಧಿಕ್ಕರಿಸಿ ನಿವೇಶನವನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪ್ರಕರಣಗಳೂ ಇಲ್ಲಿ ನಡೆದಿವೆ. ನಕಲಿ ದಾಖಲೆಗಳನ್ನು ಸೃಷ್ಟಿಸುವಲ್ಲಿಯೂ ಇಲ್ಲಿನ ಅಧಿಕಾರಿಗಳದ್ದು ಎತ್ತಿದ ಕೈ. ನಿವೇಶನ ಹಂಚಿಕೆಯ ನೋಂದಣಿ ಪುಸ್ತಕಗಳ ಹಾಳೆಗಳನ್ನೇ ಬದಲಾಯಿಸುವ ಚಾಣಾಕ್ಷತೆಯನ್ನು ಇಲ್ಲಿನ ಕೆಲವು ಸಿಬ್ಬಂದಿ ಹೊಂದಿದ್ದಾರೆ. ಇದೇ ಮಾದರಿಯ 15ಕ್ಕೂ ಅಧಿಕ ಅಕ್ರಮ ಪ್ರಕರಣಗಳು ಬಿಡಿಎಯ ವಿಶೇಷ ಕಾರ್ಯಪಡೆ ಹಾಗೂ ಜಾಗೃತ ದಳ ನಡೆಸಿರುವ ಆಂತರಿಕ ತನಿಖೆಯಿಂದ ದೃಢಪಟ್ಟಿವೆ. ಕೆಎಎಸ್ ಅಧಿಕಾರಿಗಳು ಭಾಗಿಯಾಗಿದ್ದಾರೆ ಎನ್ನಲಾದ ಈ ಭ್ರಷ್ಟಾಚಾರದ ಪ್ರಕರಣಗಳನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅನುಮತಿ ನೀಡಬೇಕು. ಈ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ – 1988ರ ನಿಯಮ 17(ಎ) ಅನ್ವಯ ವಿಸ್ತೃತ ವಿಚಾರಣೆ ನಡೆಸಲು ಎಸಿಬಿಗೆ ಅನುಮತಿ ನೀಡಬಹುದು ಎಂದು ಬಿಡಿಎ ಆಯುಕ್ತರು ಶಿಫಾರಸು ಮಾಡಿದ್ದಾರೆ. ಇದಾಗಿ 10ಕ್ಕೂ ಹೆಚ್ಚು ದಿನಗಳು ಕಳೆದಿವೆ. ಈ ಭ್ರಷ್ಟಾಚಾರ ಪ್ರಕರಣಗಳನ್ನು ಎಸಿಬಿಯಿಂದ ತನಿಖೆಗೆ ಒಳಪಡಿಸಲು ಮುಖ್ಯಮಂತ್ರಿ ಇನ್ನೂ ಅನುಮತಿ ನೀಡಿಲ್ಲ.

ಬಿಡಿಎ ಅಕ್ರಮಗಳ ಸಮಗ್ರ ತನಿಖೆಗೆ ವಿಶೇಷ ತನಿಖಾ ತಂಡ ರಚನೆಯಾಗಲಿ

ಇದುವರೆಗೆ ಉಪಕಾರ್ಯದರ್ಶಿ ಹಾಗೂ ಭೂಸ್ವಾಧೀನಾಧಿಕಾರಿ ದರ್ಜೆಯ ಕೆಎಎಸ್ ಅಧಿಕಾರಿಗಳು ಹಾಗೂ ತಳಮಟ್ಟದ ಸಿಬ್ಬಂದಿಯನ್ನು ಮಾತ್ರ ಎಸಿಬಿಯಿಂದ ವಿಸ್ತೃತ ವಿಚಾರಣೆಗೆ ಒಳಪಡಿಸಲು ಶಿಫಾರಸು ಮಾಡಲಾಗಿದೆ. ಇವರಿಗಿಂತಲೂ ಉನ್ನತ ಸ್ಥಾನಗಳಲ್ಲಿರುವ ಅಧಿಕಾರಿಗಳ ಕೃಪಾಕಟಾಕ್ಷ ಇಲ್ಲದೆ ಇಷ್ಟೊಂದು ಪ್ರಮಾಣದಲ್ಲಿ ಅಕ್ರಮಗಳು ನಡೆಯುವುದಕ್ಕೆ ಸಾಧ್ಯವೇ ಇಲ್ಲ. ಇಂತಹ ಅನೇಕ ಭ್ರಷ್ಟಾಚಾರ ಪ್ರಕರಣಗಳಲ್ಲಿ ರಾಜಕಾರಣಿಗಳ ಪ್ರಭಾವವೂ ಕೆಲಸ ಮಾಡಿರುವುದು ಸ್ಪಷ್ಟ. ಈ ಬಗ್ಗೆ ಬಿಡಿಎ ಆಯುಕ್ತರ ವರದಿಯು ಮೌನ ವಹಿಸಿದೆ. ಎಸಿಬಿ ವಿಚಾರಣೆ ನಡೆಸಿದ ಒಟ್ಟು ಪ್ರಕರಣಗಳಲ್ಲಿ ಶೇ 3ರಷ್ಟು ಪ್ರಕರಣಗಳಲ್ಲೂ ಆರೋಪಿಗಳಿಗೆ ಶಿಕ್ಷೆ ಆಗಿಲ್ಲ. ಹಾಗಾಗಿ ಬಿಡಿಎಯ ಈ ಭ್ರಷ್ಟಾಚಾರ ಪ್ರಕರಣಗಳನ್ನು ಎಸಿಬಿಯಿಂದ ತನಿಖೆಗೆ ಒಳಪಡಿಸಿದರೆ ತಪ್ಪಿತಸ್ಥರಿಗೆ ಶಿಕ್ಷೆ ಆಗಲಿದೆ ಎಂಬ ಭರವಸೆ ಉಳಿದಿಲ್ಲ. ಇದರಿಂದ ಇನ್ನಷ್ಟು ಕಾಲಹರಣವಾಗಬಹುದು. ದೂರು ಬಂದ ಪ್ರಕರಣಗಳಿಗೆ ಸಂಬಂಧಿಸಿ ಆಯುಕ್ತರು ಅಧಿಕಾರಿಗಳನ್ನು ಎಸಿಬಿಯಿಂದ ತನಿಖೆಗೆ ಒಳಪಡಿಸಲು ಶಿಫಾರಸು ಮಾಡಿದ್ದಾರೆ. ಇಂತಹ ನೂರಾರು ಪ್ರಕರಣಗಳು ದೂರು ದಾಖಲಾಗದ ಕಾರಣಕ್ಕೆ ಮುಚ್ಚಿಹೋಗಿವೆ. ಇವೆಲ್ಲವೂ ಹೊರ ಬರಬೇಕಾದರೆ ಬಿಡಿಎಯಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಸಮಗ್ರ ತನಿಖೆಗೆ ವಿಶೇಷ ತನಿಖಾ ತಂಡವನ್ನೇ (ಎಸ್ಐಟಿ) ರಚಿಸಬೇಕು. ಪ್ರಾಧಿಕಾರದಲ್ಲಿ ನಡೆದಿರುವ ಎಲ್ಲ ರೀತಿಯ ಅಕ್ರಮಗಳನ್ನೂ ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸುವುದಕ್ಕೆ ಈ ವಿಶೇಷ ತನಿಖಾ ತಂಡಕ್ಕೆ ಸಂಪೂರ್ಣ ಅಧಿಕಾರವನ್ನು ನೀಡಬೇಕು.

ಬಿಡಿಎ ಅಧಿಕಾರಿಗಳು ಹಾಗೂ ನೌಕರರೇ ಮಧ್ಯವರ್ತಿಗಳ ಜೊತೆ ಸೇರಿ ಭಾರಿ ಅಕ್ರಮ ನಡೆಸುತ್ತಿರುವುದು ಗುಟ್ಟಿನ ವಿಚಾರವೇನಲ್ಲ. ನಿವೇಶನಗಳನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಿ ವಂಚಿಸುತ್ತಿದ್ದ ಆರೋಪದಡಿ, ಪ್ರಾಧಿಕಾರದ ನೌಕರರು ಸೇರಿ ಆರು ಮಂದಿಯನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ. ಈ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪವನ್ನು ಬಿಡಿಎಯ ಒಬ್ಬ ಪ್ರಥಮ ದರ್ಜೆ ಸಹಾಯಕ ಹಾಗೂ ಒಬ್ಬ ಕಂಪ್ಯೂಟರ್ ಆಪರೇಟರ್ ಕೂಡಾ ಎದುರಿಸುತ್ತಿದ್ದಾರೆ. ಬಿಡಿಎಯ ಮೂಲೆ ನಿವೇಶನಗಳ ಹರಾಜಿನ ವೇಳೆ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಅಕ್ರಮ ಕೂಟ ರಚಿಸಿ ಭ್ರಷ್ಟಾಚಾರ ನಡೆಸುವುದನ್ನು ತಪ್ಪಿಸಲು ಇ–ಹರಾಜು ಪ್ರಕ್ರಿಯೆಯನ್ನು ಆರಂಭಿಸಲಾಗಿತ್ತು. ಆದರೆ, ಇತ್ತೀಚೆಗೆ ಎಂಟು ಬಡಾವಣೆಗಳ ಮೂಲೆನಿವೇಶನಗಳ ಇ–ಹರಾಜು ಪ್ರಕ್ರಿಯೆಯಲ್ಲೂ ಅಕ್ರಮ ನಡೆದಿರುವುದು ಬಯಲಾಗಿದೆ. ಮೂಲೆ ನಿವೇಶನಗಳಿಗೆ ಗರಿಷ್ಠ ದರವನ್ನು ಕೂಗುವ ಮೂಲಕ ದಲ್ಲಾಳಿಗಳು ಅದನ್ನು ಬ್ಲಾಕ್ ಮಾಡುತ್ತಿದ್ದರು. ನಂತರ ಬ್ಯಾಂಕ್‌ನ ನಕಲಿ ಚಲನ್ ಒದಗಿಸಿ ಪೂರ್ತಿ ಮೌಲ್ಯ ಪಾವತಿಸಿದಂತೆ ತೋರಿಸಿ ಅದನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳುತ್ತಿದ್ದರು. ಇದರಿಂದ ಅರ್ಹ ಬಿಡ್ದಾರ್‌ಗಳಿಗೆ ಅನ್ಯಾಯವಾಗುತ್ತಿತ್ತು. ಬಿಡಿಎಯಲ್ಲಿ ನಡೆದಿರುವ ಅಕ್ರಮಗಳು ಬಯಲಿಗೆ ಬಂದ ಬಳಿಕವೂ ಅವುಗಳ ತನಿಖೆ ಹಳ್ಳಹಿಡಿದಿರುವುದೇ ಜಾಸ್ತಿ. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾದ ಪ್ರಕರಣಗಳು ವಿರಳಾತಿವಿರಳ. ಭ್ರಷ್ಟಾಚಾರ ಸಹಿಸುವುದಿಲ್ಲ ಎಂದು ಹೇಳುವ ಮುಖ್ಯಮಂತ್ರಿಯವರು ಪ್ರಾಧಿಕಾರವನ್ನು ಅಕ್ರಮಗಳ ಕೂಪದಿಂದ ಮೇಲಕ್ಕೆತ್ತುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ಅಪೂರ್ವ ಚೇತನ

ಅವರಂತೆ ಯಾರೂ ಇರಲಿಲ್ಲ. ಅವರಂತೆ ಆಗಲು ಯಾರಿಗೂ ಸಾಧ್ಯವಿಲ್ಲ. ಅವರ ಧ್ವನಿಯ ಮೂಲಕ ನಮ್ಮೊಂದಿಗೆ ಮಾತನಾಡಲು ದೇವರು ನಿರ್ಧರಿಸಿದ್ದ. ಲತಾ ಮಂಗೇಶ್ಕರ್ ನಿಮಗೆ ವಿದಾಯ. ನಮಗೆ ನೀಡಿದ ಹಾಡುಗಳಿಗಾಗಿ ಧನ್ಯವಾದ.

ಅಂಕುರ್ ಭಾರದ್ವಾಜ್, ಲೇಖಕ

ಕಿಡಿನುಡಿ

ವಾಣಿಜ್ಯ ಉದ್ದೇಶಕ್ಕಾಗಿ ಪಾಕಿಸ್ತಾನದಲ್ಲಿ ಹೂಡಿಕೆ ಮಾಡುವ ಅಥವಾ ಪಾಕಿಸ್ತಾನದಲ್ಲಿನ ಸಮೂಹಗಳ ಜೊತೆ ಸಹಭಾಗಿತ್ವ ಹೊಂದುವ ಅಂತರರಾಷ್ಟ್ರೀಯ ಕಂಪನಿಗಳು ಪಾಕಿಸ್ತಾನವು ತಮ್ಮನ್ನು, ತಮ್ಮ ಬ್ರ್ಯಾಂಡ್ ಅನ್ನು ಭಾರತದ ಕಾಶ್ಮೀರದ ವಿರುದ್ಧ ಒಂದು ಸಲಕರಣೆಯನ್ನಾಗಿ ಬಳಕೆ ಮಾಡಿಕೊಳ್ಳುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ಪ್ರಚಾರಾಂದೋಲನವು ಕೆಲಸ ಮಾಡುವುದಿಲ್ಲ. ಆದರೆ, ಅದು ಕಂಪನಿಗಳ ವಾಣಿಜ್ಯ ಚಟುವಟಿಕೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ.

ಅನ್ಮೋಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 7-2-1997

- **ಆಲಮಟ್ಟಿ ವಿವಾದ: ಮುಖ್ಯಮಂತ್ರಿಗಳ ಸಭೆ ಶೀಘ್ರ**

ನವದೆಹಲಿ, ಫೆ. 6– ಆಲಮಟ್ಟಿ ಅಣೆಕಟ್ಟು ವಿವಾದ ಕುರಿತಂತೆ ಕರ್ನಾಟಕ ಮತ್ತು ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಸಭೆಯೊಂದನ್ನು ಸದ್ಯದಲ್ಲಿಯೇ ಕರೆದು ಪರಸ್ಪರ ಮಾತುಕತೆ ಮೂಲಕ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡಲು ಕೇಂದ್ರ ಜಲ ಸಂಪನ್ಮೂಲ ಸಚಿವ ಜನೇಶ್ವರ ಮಿಶ್ರ ಅವರು ನಿರ್ಧರಿಸಿರುವುದಾಗಿ ವಿಶ್ವಸನೀಯ ಮೂಲಗಳು ತಿಳಿಸಿವೆ.

ಅಣೆಕಟ್ಟು ನಿರ್ಮಾಣ ಕಾಮಗಾರಿಗೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎ.ಎಂ. ಅಹಮದಿ ಅವರ ನೇತೃತ್ವದ ನ್ಯಾಯಪೀಠವು ಕಳೆದ ಸೋಮವಾರ ನೀಡಿದ ತೀರ್ಪು ಮತ್ತು ಸಂಯುಕ್ತ ರಂಗಗಳ ಚಾಲನಾ ಸಮಿತಿಯ ನಾಲ್ವರು ಮುಖ್ಯಮಂತ್ರಿಗಳ ಸಮಿತಿಯು ನೇಮಕ ಮಾಡಿದ್ದ ತಜ್ಞ ಸಮಿತಿಯು ನೀಡಿರುವ ವರದಿಯ ಹಿನ್ನೆಲೆಯಲ್ಲಿ ಜನೇಶ್ವರ ಮಿಶ್ರ ಅವರು ಈ ಕ್ರಮ ಕೈಗೊಂಡಿದ್ದಾರೆಂದು ಆ ಮೂಲಗಳು ಹೇಳಿವೆ.

50 ವರ್ಷಗಳ ಹಿಂದೆ

ಸೋಮವಾರ, 7-2-1972

- **ಭಾರತ– ಬಾಂಗ್ಲಾದೇಶ ಮೈತ್ರಿಬಾಂಧವ್ಯ ಶಾಶ್ವತ**

ನವದೆಹಲಿ, ಫೆ. 6– ಏಕರೀತಿಯ ಧ್ಯೇಯ ಆದರ್ಶಗಳನ್ನು ಹೊಂದಿರುವ ಭಾರತ–ಬಾಂಗ್ಲಾದೇಶ ನಡುವಣ ಸ್ನೇಹ ಬಾಂಧವ್ಯ ಚಿರಕಾಲ ಉಳಿಯುವುದೆಂದು ಷೇಖ್ ಮುಜೀಬುರ್ ರೆಹಮಾನ್ ಮತ್ತು ಇಂದಿರಾ ಗಾಂಧಿಯವರು ಘೋಷಿಸಿದರು.

- **ಮುಂದಿನ ಮುಖ್ಯಮಂತ್ರಿ?**

ಬೆಂಗಳೂರು, ಫೆ. 6– ಮೈಸೂರಿನ ಮುಂದಿನ ಮುಖ್ಯಮಂತ್ರಿ ಯಾರು?

ವರದಿಗಾರರ ಈ ಪ್ರಶ್ನೆಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ.ದೇವರಾಜ ಅರಸು ಅವರಿಂದ ಮೌನವೇ ಉತ್ತರ.

ಪಕ್ಷ ಬಿಡುವವರಿಗೆ ಮನವಿ ಸಲ್ಲಿಸಲು ಕರೆದಿದ್ದ ಅವಸರದ ಪತ್ರಿಕಾಗೋಷ್ಠಿಯಲ್ಲಿ ವರದಿಗಾರರ ಎಲ್ಲ ಊಹೆಗಳಿಗೂ ಕೇವಲ ನಗುವಿನ ಉತ್ತರ ನೀಡಿದ ಶ್ರೀ ಅರಸು ಅವರು, 'ನಮ್ಮ ಮುಂದಿರುವ ಕೆಲಸ ಮೊದಲು ಚುನಾವಣೆ ಗೆಲ್ಲುವುದು' ಎಂದರು.

ಗೋವಾದಲ್ಲಿ ರಾಜಕೀಯ ನಿಷ್ಠೆಯು ಮೀನು ಮಾರಾಟದಂತೆ ಆಗಿದೆ

ಪ್ರತಿಜ್ಞೆ, ಪ್ರಮಾಣಪತ್ರ, ಗೋವಾ ಚುನಾವಣೆ

ವಿಶ್ಲೇಷಣೆ

ಅರುಣ್ ಸಿನ್ಹಾ

ಬಿಜೆಪಿಯನ್ನು ಒಬ್ಬಂಟಿಯಾಗಿ ಸೋಲಿಸಲಾಗದು ಎಂದು ಮಮತಾ ಬ್ಯಾನರ್ಜಿ ಅವರು ಚುನಾವಣಾ ಕಣದ ಮಧ್ಯಭಾಗದಲ್ಲಿ ಅರಿತುಕೊಂಡಿದ್ದಾರೆ. ಕಾಂಗ್ರೆಸ್ ತಮ್ಮ ಜೊತೆ ಬರಲಿ ಎಂದು ಬಯಸುತ್ತಿದ್ದಾರೆ. ಪಶ್ಚಿಮ ಬಂಗಾಳದಿಂದ ಗೋವಾಕ್ಕೆ ತುಸು ಅಹಂಕಾರದಿಂದಲೇ ಬಂದ ಮಮತಾ, ತಮ್ಮ ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಿದಂತೆ ಗೋವಾದಲ್ಲಿಯೂ ಸೋಲಿಸಬಹುದು ಎಂದುಕೊಂಡಿದ್ದರು. ಅವರ ಮನವಿಯನ್ನು ಕಾಂಗ್ರೆಸ್ ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ವಿರೋಧಿ ಮತದಾರರ ನಡುವೆ ಟಿಎಂಸಿ ಪಾರಮ್ಯ ಸಾಧಿಸಿರುವಂತೆ, ಗೋವಾದಲ್ಲಿ ಬಿಜೆಪಿ ವಿರೋಧಿ ಮತದಾರರ ನಡುವೆ ಕಾಂಗ್ರೆಸ್ ತನಗೆ ಪಾರಮ್ಯವಿದೆ ಎನ್ನುತ್ತಿದೆ. ಅದು ಅಲ್ಲಿ ಟಿಎಂಸಿ ಬೆಳವಣಿಗೆಗೆ ಅವಕಾಶ ಕೊಡುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಕುಸಿಯುತ್ತಿದ್ದರೂ, ಅಲ್ಲಿ ಅದಕ್ಕೆ ಮತದಾರರ ನೆಲೆ ಇದೆ. ಆದರೆ, ಟಿಎಂಸಿಗೆ ಗೋವಾದಲ್ಲಿ ಯಾವ ನೆಲೆಯೂ ಇಲ್ಲ. ಮತ ತಂದುಕೊಡದ ಪಕ್ಷದ ಜೊತೆ ಹೊಂದಾಣಿಕೆ ಏಕೆ ಎಂಬುದು ಕಾಂಗ್ರೆಸ್ಸಿನ ವಾದ.

ಟಿಎಂಸಿಯು ಸ್ನೇಹಿತನೂ ಶತ್ರುವೂ ಏಕಕಾಲದಲ್ಲಿ ಆಗುವುದು ಹೇಗೆ ಎಂಬುದು ಕಾಂಗ್ರೆಸ್ಸಿನ ಪ್ರಶ್ನೆ. ಕಾಂಗ್ರೆಸ್ಸಿನ ಹಿರಿಯ ಹಾಗೂ ಮಧ್ಯಮ ಶ್ರೇಯಾಂಕದ ನಾಯಕರನ್ನು ಸೆಳೆಯುವ ಮೂಲಕ ಟಿಎಂಸಿ ಗೋವಾದಲ್ಲಿ ತನ್ನ ಪಯಣ ಆರಂಭಿಸಿತು. ಎರಡು ತಿಂಗಳು ಇದನ್ನು ಮುಂದುವರಿಸಿದ ಟಿಎಂಸಿ, ನಂತರ ಕಾಂಗ್ರೆಸ್ ಜೊತೆ ಹೊಂದಾಣಿಕೆಯ ಮಾತು ಶುರುಮಾಡಿತು. ತನ್ನನ್ನು ಒಡೆಯಲು ಬಂದ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್ಸಿಗೆ ಆಗಲಿಲ್ಲ.

ಜನವರಿ ಎರಡನೆಯ ಹಾಗೂ ಮೂರನೆಯ ವಾರಗಳಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಎಎಪಿ ತಮ್ಮ ಅಭ್ಯರ್ಥಿಗಳನ್ನು ಬಹುತೇಕ ಅಂತಿಮಗೊಳಿಸಿದ್ದವು. ಟಿಎಂಸಿಯು ಹಲವು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಗೊತ್ತುಮಾಡಲು ಹೆಣಗಾಟ ನಡೆಸಿತ್ತು. ಕಾಂಗ್ರೆಸ್ಸಿನಿಂದ ಟಿಎಂಸಿ ಕಡೆ ಬಂದ ಅಲೆಕ್ಸೊ ಲೊರೆಂಕೊ ಅವರು, ತಿಂಗಳು ತುಂಬುವ ಮೊದಲೇ ಟಿಎಂಸಿ ತೊರೆದರು. ಅವರ ಭಾವಚಿತ್ರವನ್ನು ಟಿಎಂಸಿಯು ಮಮತಾ ಅವರ ಭಾವಚಿತ್ರದ ಜೊತೆ ರಾಜ್ಯದಾದ್ಯಂತ ಪ್ರದರ್ಶಿಸಿತ್ತು.

ಫಟೋರ್ಡಾ ಕ್ಷೇತ್ರಕ್ಕೆ ಟಿಎಂಸಿಯು ಲೂಸಿಯಾನೊ ಫೆಲೆರೊ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. ಫೆಲೆರೊ ಅವರು ರಾಜ್ಯದ ಮಾಜಿ ಮುಖ್ಯಮಂತ್ರಿ, ಗೋವಾ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ. ತಮ್ಮನ್ನು ರಾಜ್ಯಸಭೆಗೆ ಆಯ್ಕೆ ಮಾಡಬೇಕು, ತಾವು ತಮ್ಮ ವಿಧಾನಸಭಾ ಕ್ಷೇತ್ರವನ್ನು ಟಿಎಂಸಿ ಅಭ್ಯರ್ಥಿಗೆ ಬಿಟ್ಟುಕೊಡುವುದು ಹಾಗೂ ಗೋವಾದಲ್ಲಿ ಟಿಎಂಸಿ ಚುನಾವಣಾ ಅಭಿಯಾನದ ನೇತೃತ್ವವನ್ನು ತಾವು ವಹಿಸುವುದು ಎಂಬ ಒಪ್ಪಂದವನ್ನು ಫೆಲೆರೊ ಅವರು ಮಮತಾ ಜೊತೆ ಮಾಡಿಕೊಂಡಿದ್ದರು ಎನ್ನಲಾಗಿದೆ. ಟಿಎಂಸಿಯು ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿಯೂ, ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿಯೂ ಮಾಡಿತು. ಆದರೆ, ಪಕ್ಷದ ನಾಯಕತ್ವವು ಫೆಲೆರೊ ಅವರಿಗೆ ಫಟೋರ್ಡಾ ಕ್ಷೇತ್ರದಿಂದ ಕಣಕ್ಕಿಳಿಯುವಂತೆ ಸೂಚಿಸಿತು. ಇದು ಮೊದಲ ಒಪ್ಪಂದದ ಭಾಗವಾಗಿರಲಿಲ್ಲ. ಇದು ಟಿಎಂಸಿಯ ಸ್ಥಿತಿಯನ್ನು ತೋರಿಸುತ್ತದೆ.

ಟಿಎಂಸಿಯ ಸಮಸ್ಯೆಗಳು ಅದರದೇ ಸೃಷ್ಟಿ. ಚುನಾವಣೆಗೆ ಸಿದ್ಧವಾಗಲು ಪಕ್ಷಕ್ಕೆ ಸಮಯವೇ ಇರಲಿಲ್ಲ. ತಳಮಟ್ಟದಿಂದ ಪಕ್ಷ ಕಟ್ಟುವ ಬದಲು, ಮೇಲಿನಿಂದ ಪಕ್ಷ ಕಟ್ಟಲು ಅದು ತೀರ್ಮಾನಿಸಿತು. ಬೇರೆ ಪಕ್ಷಗಳ ಪ್ರಮುಖ ನಾಯಕರನ್ನು ಸೆಳೆದು, ಅವರ ಪ್ರಭಾವ ಬಳಸಿ ರಾಜ್ಯದಲ್ಲಿ ವಿಸ್ತರಿಸಿಕೊಳ್ಳಲು ಆಲೋಚಿಸಿತು. ಈ ಕಾರ್ಯತಂತ್ರ ವಿಫಲವಾಗಿದೆ. ಫೆಲೆರೊ, ಲೊರೆಂಕೊ ಮತ್ತು ಚರ್ಚಿಲ್ ಅಲೆಮಾವೊ ಅವರಿಗೆ ಪಕ್ಷವು ಸೀಮಿತವಾಗಿದೆ. ಲೊರೆಂಕೊ ಟಿಎಂಸಿ ತೊರೆದಾಗಿದೆ. ಟಿಎಂಸಿಯು ಈಗ ಗೋವಾದಲ್ಲಿ ಕೆಲವು ಸ್ಥಾನಗಳನ್ನು ಮಾತ್ರ ಗೆಲ್ಲುವತ್ತ ಗಮನಹರಿಸಿದೆ. ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು, ಪಕ್ಷ ಕೆಲವು ಸ್ಥಾನಗಳನ್ನು ಗೆದ್ದರೂ ಅದು ದೊಡ್ಡ ಜಯ ಎನ್ನುತ್ತಿದ್ದಾರೆ.

ಕಾಂಗ್ರೆಸ್ಸಿಗೆ ಕ್ರೈಸ್ತರು ಹಾಗೂ ಮುಸ್ಲಿಮರ ಬೆಂಬಲ ಇದೆ. ಗೋವಾದಲ್ಲಿ ಕ್ರೈಸ್ತರ ಮತದಾನದ ಮೇಲೆ ಪ್ರಭಾವ ಬೀರುವಲ್ಲಿ ಚರ್ಚ್‌ನ ಪಾತ್ರವಿದೆ. 'ಜಾತ್ಯತೀತ' ಮತಗಳು ಒಡೆದುಹೋಗಬಾರದು ಎಂಬ ಸಂದೇಶವನ್ನು ಕ್ರೈಸ್ತರಿಗೆ ಚರ್ಚ್ ರವಾನಿಸುತ್ತಿದೆ. ಇದು ಕಾಂಗ್ರೆಸ್ಸಿಗೆ ಅನುಕೂಲಕರ. ಆಡಳಿತ ವಿರೋಧಿ ಮತಗಳ ದೊಡ್ಡ ಪಾಲನ್ನು ಸೆಳೆಯುವ ಅವಕಾಶವು ಹೆಚ್ಚಿರುವುದು ಕೂಡ ಕಾಂಗ್ರೆಸ್ಸಿಗೆ. ಹಿಂದಿನ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಎಪಿ ಒಂದೂ ಸ್ಥಾನ ಗೆದ್ದಿರಲಿಲ್ಲ. ಹಿಂದಿನ ಎರಡು ವರ್ಷಗಳಲ್ಲಿ ಹಣ ಖರ್ಚು ಮಾಡಿರುವ ಎಎಪಿ, ಪ್ರತೀ ಕುಟುಂಬಕ್ಕೆ ಉಚಿತವಾಗಿ ಆಹಾರಧಾನ್ಯ ನೀಡಿದೆ, ಮಾಧ್ಯಮಗಳ ಮೂಲಕ ತನ್ನ ಪರ ಪ್ರಚಾರಾಂದೋಲನ ನಡೆಸಿದೆ. ಆದರೆ ತಾನು ಬೇರೆ ಪಕ್ಷಗಳಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಲ್ಲ ಎಂಬುದನ್ನು ಸಾಬೀತುಮಾಡಿದೆ. ಬೇರೆ ಪಕ್ಷಗಳಿಂದ ಬಂದವರಿಗೆ ಟಿಕೆಟ್ ನೀಡಿದೆ.

ಗೋವಾದಲ್ಲಿ ರಾಜಕೀಯ ಪಕ್ಷಗಳು ವಿಮಾನ ನಿಲ್ದಾಣಗಳಂತೆ ಆಗಿವೆ. ಒಂದಿಷ್ಟು ಜನ ನಿಲ್ದಾಣಕ್ಕೆ ಬರುತ್ತಿರುತ್ತಾರೆ, ಇನ್ನೊಂದಿಷ್ಟು ಜನ ನಿಲ್ದಾಣದಿಂದ ತೆರಳುತ್ತ ಇರುತ್ತಾರೆ. ರಾಜಕೀಯ ನಿಷ್ಠೆಯು ಮೀನು ಮಾರಾಟದಂತೆ ಆಗಿದೆ. ಚುನಾವಣೆಯ ನಂತರದಲ್ಲಿ ಪಕ್ಷನಿಷ್ಠೆಯ ಮಾರಾಟ ನಿಲ್ಲುವುದೇ? ಇದಕ್ಕೆ ಉತ್ತರ 'ಇಲ್ಲ'.

ಬಿಜೆಪಿ ಕೂಡ ರಾಜ್ಯದಲ್ಲಿ ಬಹಳ ಸುಭದ್ರವಾಗಿಯೇನೂ ಇಲ್ಲ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು 40 ಸ್ಥಾನಗಳ ಪೈಕಿ 13ರಲ್ಲಿ ಮಾತ್ರ ಗೆಲುವು ಕಂಡಿತ್ತು. ಪಕ್ಷದ ಪರಿಸ್ಥಿತಿಯು ಅದಾದ ನಂತರ ಸುಧಾರಿಸಿಲ್ಲ. ಬದಲಿಗೆ, ಪ್ರಮೋದ್ ಸಾವಂತ್ ನೇತೃತ್ವದ ಸರ್ಕಾರದ ವೈಫಲ್ಯಗಳ ಕಾರಣದಿಂದಾಗಿ ಇನ್ನಷ್ಟು ಕುಸಿದಿದೆ. ಆದರೆ, ಪಕ್ಷವು ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಪಕ್ಷವು ಈಗ ಅಮಿತ್ ಶಾ ಅವರ 'ನಾವು ಗೆಲ್ಲಲಿ, ಸೋಲಲಿ; ಆಡಳಿತ ಮಾತ್ರ ನಮ್ಮದೇ ಆಗಿರುತ್ತದೆ' ಎಂಬ ತತ್ವವನ್ನು ಪಾಲಿಸುತ್ತಿದೆ.

ಕಾಂಗ್ರೆಸ್ ಪಕ್ಷವು ಜನವರಿ 22ರಂದು ತನ್ನ ಎಲ್ಲ ಅಭ್ಯರ್ಥಿಗಳನ್ನು ಪೂಜಾ ಸ್ಥಳಗಳಿಗೆ, ಪ್ರಾರ್ಥನಾ ಮಂದಿರಗಳಿಗೆ ಕರೆದೊಯ್ದಿತು. ಕಾಂಗ್ರೆಸ್ಸಿನ ಅಭ್ಯರ್ಥಿಗಳೆಲ್ಲ ದೇವರ ಸಾಕ್ಷಿಯಾಗಿ, ಚುನಾವಣೆಯ ನಂತರದಲ್ಲಿ ತಾವು ಬೇರೆ ಪಕ್ಷಗಳಿಗೆ ಹಾರುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದರು. ತನ್ನ ಅಭ್ಯರ್ಥಿಗಳು ಕೂಡ ಚುನಾವಣೆಯ ನಂತರ ಬೇರೆ ಪಕ್ಷಕ್ಕೆ ಹೋಗುವುದಿಲ್ಲ ಎಂದು ಪ್ರಮಾಣಪತ್ರವೊಂದಕ್ಕೆ ಸಹಿ ಹಾಕಿಸಿಕೊಳ್ಳಲಾಗುತ್ತದೆ ಎಂದು ಎಎಪಿ ಹೇಳಿದೆ.

ಆದರೆ, ದೇವರ ಮುಂದೆ ಮಾಡುವ ಪ್ರತಿಜ್ಞೆಯಾಗಲಿ, ಪ್ರಮಾಣಪತ್ರಕ್ಕೆ ಸಹಿ ಹಾಕುವುದಾಗಲಿ ಕೆಲಸಕ್ಕೆ ಬರಲಿಕ್ಕಿಲ್ಲ. ಗೋವಾದ ವಿಧಾನಸಭಾ ಕ್ಷೇತ್ರಗಳು ಸಣ್ಣದಾಗಿರುವುದೇ ಇದಕ್ಕೆ ಕಾರಣ. ಇಲ್ಲಿನ ವಿಧಾನಸಭಾ ಕ್ಷೇತ್ರಗಳ ಮತದಾರರ ಸರಾಸರಿ ಸಂಖ್ಯೆ 25 ಸಾವಿರ. ಇಲ್ಲಿನ ಹೆಚ್ಚೆಚ್ಚು ರಾಜಕಾರಣಿಗಳು ತಮ್ಮದೇ ಆದ ಮತಬ್ಯಾಂಕ್ ಕಟ್ಟಿಕೊಂಡಿದ್ದಾರೆ. ಮತದಾರರಿಗೆ ಸರ್ಕಾರಿ ಕೆಲಸ ಕೊಡಿಸಿ, ಅವರಿಗೆ ಹಣಕಾಸಿನ ನೆರವು ನೀಡಿ, ಅವರಿಗೆ ಹುಷಾರಿಲ್ಲದಿದ್ದರೆ ವಾಹನ ಸೌಕರ್ಯ ಕಲ್ಪಿಸಿ, ಅವರ ಮನೆಯಲ್ಲಿನ ಮದುವೆಗೆ ನೆರವು ಒದಗಿಸಿ ಅಥವಾ ಅವರ ಮಕ್ಕಳ ಶಾಲಾ ಶಿಕ್ಷಣದ ಶುಲ್ಕವನ್ನು ತಾವೇ ತುಂಬಿ ಮತದಾರರ ನಿಷ್ಠೆಯನ್ನು ಖರೀದಿಸಿದ್ದಾರೆ. ಈ ರಾಜಕಾರಣಿಗಳು ಪಕ್ಷಗಳಿಗಿಂತಲೂ ದೊಡ್ಡವರಾಗಿ ಬೆಳೆದಿದ್ದಾರೆ. ಅವರು ಯಾವ ಪಕ್ಷದಲ್ಲಿ ಇದ್ದಾರೆ ಎಂಬುದು ಇಲ್ಲಿ ಮುಖ್ಯವಲ್ಲ. ಮತದಾರರಿಗೂ ಅವರು ಯಾವ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ ಎಂಬುದು ಪ್ರಮುಖವಲ್ಲ. ರಾಜಕೀಯ ನಾಯಕರು ಹಾಗೂ ಮತದಾರರ ನಡುವೆ ಸಾಲ–ಬದ್ಧತೆಯ ವ್ಯವಸ್ಥೆಯೊಂದು ರೂಪುಗೊಂಡಿದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ತರ್ಕವಾದಿಗಳು

• ಸುಮಂಗಲಾ

ಬೆಕ್ಕಣ್ಣ ವಿಡಿಯೊ ಒಂದನ್ನು ನೋಡುತ್ತ ಪಕ್ಕೆ ಹಿಡಿದುಕೊಂಡು ನಗುತ್ತಿತ್ತು. 'ನೋಡಿಲ್ಲಿ, ಮಹಾರಾಷ್ಟ್ರದ ಮಾಜಿ ಸಿಎಂ ಫಡಣವೀಸ್ ಪತ್ನಿ ಉವಾಚ... ಅಲ್ಲಿ ಅಷ್ಟಕೊಂದು ಡೈವೋರ್ಸ್ ಆಗಕ್ಕೆ ಟ್ರಾಫಿಕ್ ಮತ್ತ ಹೊಂಡಗುಂಡಿ ರಸ್ತೆಗಳೇ ಕಾರಣ ಅಂತ'.

'ಹೆದರಿಸಬ್ಯಾಡಲೇ ನೀ... ಇದನ್ನ ನೋಡಿದ್ರ ಬೆಂಗಳೂರಿನಾಗೆ ಇರೂ ಯುವಜನರು ಮದುವಿನೇ ಬ್ಯಾಡ ಅಂದಾರು' ಎಂದೆ.

'ಬೆಂಗಳೂರಿನಾಗೆ ಸಿಲ್ಕ್ ಬೋರ್ಡ್, ಮೆಜೆಸ್ಟಿಕ್ ಹಿಂತಾ ಕಡಿಗಿ ದಿನಾ ಕೆಲಸಕ್ಕೆ ಓಡಾಡೂ ಮಂದಿಗೆ ಡೈವೋರ್ಸ್ ಆದರೆ, ಟ್ರಾಫಿಕ್, ಹೊಂಡಗುಂಡಿ ರಸ್ತೆಗೆ ಕಾರಣರಾದವರು, ಅಂದ್ರ ಬಿಬಿಎಂಪಿ, ಸರ್ಕಾರ ಹಿಂತವರು ದಂಪತಿಗೆ ಪರಿಹಾರ ಕೊಡಬೇಕು' ಎಂದು ಹೊಸ ತರ್ಕ ಮುಂದಿಟ್ಟಿತು.

'ಆಹಾ... ವರ್ಷದ ಮಹಾನ್ ತರ್ಕವಾದಿಗಳು ಅಂತ ಆಕಿಗಿ, ನಿನಗ ಕೂಡಿನೇ ಪ್ರಶಸ್ತಿ ಕೊಡಬಕು ಬಿಡು' ನಾನು ನಕ್ಕೆ.

'ಆ ಪ್ರಶಸ್ತಿಗೆ ಭಾಳ ಮಂದಿ ಅರ್ಜಿ ಹಾಕ್ಯಾರ. ಅವ್ರು ಹಿಜಾಬ್ ಹಾಕ್ಕಂಡರೆ ನಾವು ಕೇಸರಿ ಶಾಲು ಹಾಕ್ಕಂತೀವಿ ಅನ್ನೋ ಗುಂಪಿನಿಂದ ಹಿಡಿದು, ನಿಮಗ ಅವಾಗೇ ಬ್ಯಾರೆ ದೇಶ ಮಾಡಿಕೊಟ್ಟೀವಲ್ಲ, ಹಿಜಾಬ್ ಹಾಕ್ಕಳಂಗಿದ್ರೆ ಅಲ್ಲಿಗೇ ಹೋಗ್ರಿ ಅಂತ ಗುಡುಗಿದ ಮೈಸೂರಿನ ಸಿಂಹದವರೆಗೆ ಭಾಳ ಮಂದಿ ಮಹಾನ್ ತರ್ಕವಾದಿಗಳು ಪ್ರಶಸ್ತಿಗೆ ಅರ್ಹ ಇದ್ದಾರ... ಯಾರಿಗಿ ಕೊಡೂದು' ತಲೆ ಕೆರೆದುಕೊಂಡಿತು.

'ಎಲ್ಲಾ ಕಡಿಗಿ ಅಸಮಾನತೆ ಇದ್ದರೇನಾತು, ಮೋದಿಮಾಮಾರು ಹೈದರಾಬಾದಿನಾಗೆ 216 ಅಡಿ ಎತ್ತರದ ಸಮಾನತೆ ಪ್ರತಿಮೆ ಉದ್ಘಾಟನೆ ಮಾಡ್ಯಾರೆ. ಕೊನೇಪಕ್ಷ ಸ್ಥಾವರ ಸಮಾನತೆ ತರಾಕೆ ಹತ್ತೀವಿ' ವಿಷಯಾಂತರ ಮಾಡಿ ಹುಳ್ಳಗೆ ನಕ್ಕಿತು.

'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ಇಂಡಿಯಾ ಅಂತೆಲ್ಲ ಹೇಳತಿದ್ದಿ. ಆದ್ರ ಸಮಾನತೆ ಪ್ರತಿಮೆ ತಯಾರಿಸಿದ್ದು ಚೀನಾದ ಕಂಪನಿ... ಈ ಸ್ಥಾವರ ಸಮಾನತೆನೂ ಮೇಡ್ ಇನ್ ಚೈನಾ ಐಟಮ್ ಆತೇಳು' ಎಂದೆ.

'ನೀ ಮಹಾನ್ ಕುತರ್ಕವಾದಿ ಇದ್ದಿ' ಎಂದು ವಾಪಸು ನನಗೇ ಚುಚ್ಚಿತು.

ಸಂಗತ

ಬಿದಿರು... ನೀನಾರಿಗಲ್ಲವಾದೆ?

ಇದು, ಆರ್ಥಿಕ ಅಭಿವೃದ್ಧಿಯ ಹೆಬ್ಬಾಗಿಲನ್ನೂ ತೆರೆಯಬಲ್ಲದು

• ಪ.ರಾಮಕೃಷ್ಣಶಾಸ್ತ್ರಿ

ಕಳೆದ ವರ್ಷ ಮಲೆನಾಡಿನ ಕೆಲವು ಊರುಗಳಿಗೆ ತೆರಳಿದ್ದಾಗ, ದಾರಿಯುದ್ದಕ್ಕೂ ಉರುಳಿಬಿದ್ದಿದ್ದ ಒಣ ಬಿದಿರಿನ ಹಿಂಡಲುಗಳು ಕಂಡವು. ಕಾಡ್ಗಿಚ್ಚಿಗೂ ಕಾರಣವಾಗಬಲ್ಲ ಈ ನೈಸರ್ಗಿಕ ವನ್ಯಸಂಪತ್ತು ಅರಣ್ಯಾಧಿಕಾರಿಗಳ ನಿರ್ಲಕ್ಷ್ಯದ ಫಲವಾಗಿ ಬಳಕೆಯಾಗದೆ ಮಣ್ಣು ಸೇರುತ್ತಿದೆ ಅನಿಸಿತು.

ನಿಜ, ಭಾರತವು ಬಿದಿರು ಎಂಬ ಬಂಗಾರ ಬೆಳೆಯುವ ರಾಷ್ಟ್ರಗಳಲ್ಲಿ ಎರಡನೆಯ ಸ್ಥಾನದಲ್ಲಿದೆ. ಇಲ್ಲಿ ಅದರ ಬಳಕೆಯಾಗುತ್ತಿರುವುದು ಪ್ರತಿಶತ ನಾಲ್ಕು ಮಾತ್ರ. ಅರಣ್ಯದೊಳಕ್ಕೆ ಹೋಗಿ ಬಿದಿರನ್ನು ತಂದು ತಟ್ಟಿ, ಬುಟ್ಟಿ ಮಾಡುತ್ತಿದ್ದ ಬುಡಕಟ್ಟು ಜನಾಂಗಗಳಿಗೆ ಪ್ರವೇಶ ನಿರಾಕರಿಸಿದ್ದರ ಫಲವಾಗಿ ಅಂತಹ ಕಸುಬುಗಳು ದೂರ ಸರಿಯುತ್ತಿರುವುದು ಒಂದೆಡೆಯಾದರೆ, ಪ್ಲಾಸ್ಟಿಕ್ ಪರಿಕರಗಳು ಇದಕ್ಕಿಂತ ಅಗ್ಗ ಎಂಬ ಕಾರಣಕ್ಕೆ ಬಿದಿರಿನ ವಸ್ತುಗಳು ಬೇಡಿಕೆಯನ್ನೂ ಕಳೆದುಕೊಂಡಿವೆ.

ಭಾರತದ ಕರಾವಳಿಯಿಂದ ಹಿಮಾಚಲದ ತನಕ 125 ಜಾತಿಯ ಬಿದಿರುಗಳು ಬೆಳೆಯುತ್ತಿವೆ. ರಾಸಾಯನಿಕ, ಕೀಟನಾಶಕ ಬಳಸದೆ ನಿಸರ್ಗಕ್ಕೆ ಹಸಿರು ಹೊದೆಸುವ ಸಂಪನ್ಮೂಲವೂ ಹೌದು. ಮರಗಳಿಗಿಂತ ಪ್ರತಿಶತ 35ರಷ್ಟು ಅಧಿಕ ಆಮ್ಲಜನಕವನ್ನು ವಾತಾವರಣಕ್ಕೆ ಅದು ಕೊಡುತ್ತದೆ. ಒಂದೇ ವರ್ಷದಲ್ಲಿ ಗರಿಷ್ಠ ಎತ್ತರ ಬೆಳೆದು ಉಪಯೋಗಕ್ಕೆ ಸಿದ್ಧವಾಗುವ ಜಾತಿಗಳೂ ನಮ್ಮಲ್ಲಿವೆ. ಆದರೂ ಬಿದಿರಿನ ಮಹತ್ವಪೂರ್ಣ ಬಳಕೆಯ ಬಗೆಗೆ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆದಿಲ್ಲ.

ಪುಣೆಯ ಯೋಗೀಶ್ ಶಿಂಧೆ ತಮ್ಮ ಪತ್ನಿ ಅಶ್ವಿನಿ ಜತೆಗೂಡಿ ಆರು ವರ್ಷಗಳಿಂದ ಬಿದಿರಿನ ಸದ್ಬಳಕೆಯ ಉದ್ಯಮವನ್ನು ಆರಂಭಿಸಿದ್ದಾರೆ. ಭಾರತದಲ್ಲಿ ತಿಂಗಳಿಗೆ 3.5 ಕೋಟಿ ಹಲ್ಲುಜ್ಜುವ ಬ್ರಷ್‌ಗಳು ಬೀದಿ ಸೇರುತ್ತವೆ ಎಂಬ ಲೆಕ್ಕಾಚಾರ ಸಿಕ್ಕಿದ ಮೇಲೆ ಅವರು ಮೊದಲು ತಯಾರಿಸಿದ್ದು ಬಿದಿರಿನಿಂದ ಟೂತ್‌ಬ್ರಷ್ ಸರಣಿ. ಮಕ್ಕಳಿಗೆ, ವಯಸ್ಕರಿಗೆ ಬೇಕಾದ ಹದಿಮೂರು ಮಾದರಿಯ ಬ್ರಷ್‌ಗಳನ್ನು ಮಾರುಕಟ್ಟೆಗಿಳಿಸಿ ಗೆದ್ದಿದ್ದಾರೆ. ಇದರಿಂದಾಗಿ 17 ಲಕ್ಷ ಕಿಲೊ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಬೀದಿ ಸೇರುವುದನ್ನು ತಡೆಯಲು ಸಾಧ್ಯವಾಗಿದೆ ಎನ್ನುತ್ತಾರೆ ಅವರು.

ಶಿಂಧೆ ದಂಪತಿ ಬಿದಿರಿನಿಂದ ತಯಾರಿಸುವ ಬಹು ವಸ್ತುಗಳ ಬ್ಯಾಂಬೂ ಇಂಡಿಯಾ ಕಾರ್ಖಾನೆ ನೂರಾರು ಮಂದಿಗೆ ಉದ್ಯೋಗ ನೀಡಿದೆ. ತಟ್ಟೆ, ಬುಟ್ಟಿ, ಆಕಾಶದೀಪ, ಬಾಚಣಿಗೆ, ನಾಲಿಗೆ ಕ್ಲೀನರ್, ಕೀಚೈನ್, ಇಯರ್‌ಬಡ್, ಡೆಸ್ಕ್‌ಟಾಪ್ ಪರಿಕರಗಳು, ಲೇಖನಿಗಳು, ಟ್ರಾವೆಲ್ ಕಿಟ್, ರಟ್ಟು ಸೇರಿದಂತೆ ಹಲವಾರು ವಸ್ತುಗಳನ್ನು ಬಿದಿರಿನಿಂದ ತಯಾರಿಸುತ್ತಿದೆ. ಮುಂದಿನ ದಿನಗಳಲ್ಲಿ ಆಭರಣ ಮತ್ತು ಬಟ್ಟೆಗಳನ್ನೂ ಅದು ಬಿದಿರಿನಿಂದ ತಯಾರಿಸಲಿದೆ. ಎಲ್ಲವೂ ಪ್ಲಾಸ್ಟಿಕ್ ವಸ್ತುಗಳಿಗಿಂತ ಅಧಿಕ ದೃಢತೆ ಮತ್ತು ಗುಣಮಟ್ಟ ಹೊಂದಿವೆ. ಇವನ್ನೆಲ್ಲ ತಯಾರಿಸುವ ಯಂತ್ರಗಳು ಚೀನಾ, ತೈವಾನ್, ವಿಯೆಟ್ನಾಂ ಮುಂತಾದ ದೇಶಗಳಿಂದ ಬರಬೇಕಾಗಿತ್ತು. ಶಿಂಧೆ ಈಗ ಇಲ್ಲಿಯೇ ಅಂತಹ ಯಂತ್ರಗಳನ್ನು ತಯಾರಿಸುತ್ತಿದ್ದಾರೆ.

ಹಿರೋಷಿಮಾದಲ್ಲಿ ಪರಮಾಣು ದಾಳಿ ನಡೆದ ಸಂದರ್ಭದಲ್ಲಿ ಬದುಕುಳಿದ ಏಕೈಕ ಸಸ್ಯ ತಾನೆಂಬ ಹೆಮ್ಮೆಗೆ ಬಿದಿರು ಪಾತ್ರವಾಗಿದೆ. ಸಾಮಾಜಿಕ ಉದ್ಯಮಶೀಲತೆಗೆ ಮಹತ್ವದ ಕೊಡುಗೆಯಾಗಿರುವ ಅದು ಉಕ್ಕಿಗಿಂತಲೂ ದೃಢವಾದುದು ಎಂಬುದನ್ನು ಗುರುತಿಸಿದವರು ಜಪಾನ್ ತಂತ್ರಜ್ಞರು. ವಿಶ್ವಯುದ್ಧದ ಸಮಯದಲ್ಲಿ ಅಲ್ಲಿ ಬಿದಿರಿನಿಂದ ತಾತ್ಕಾಲಿಕ ರೈಲು ಸೇತುವೆ ನಿರ್ಮಿಸಿದ್ದರು.

ನಮ್ಮಲ್ಲಿ ಖಾಲಿ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯವರು ಸಿಲ್ವರ್, ಅಕೇಶಿಯಾದಂತಹ ಮರಗಳನ್ನು ಬೆಳೆದು ಅದರ ಆರೈಕೆಗಾಗಿ ಬಹಳಷ್ಟು ಹಣ ಖರ್ಚು ಮಾಡುತ್ತಾರೆ. ಇದರಿಂದ ಲಾಭ ಸಿಗಲು ದಶಕಗಳ ತನಕ ಕಾದರೂ ಅದು ಸರ್ಕಾರೀಕರಣದ ಯೋಜನೆಯಾದ ಕಾರಣ ಸಾಧಕ, ಬಾಧಕಗಳ ಗಣನೆ ಮಾಡುವುದಿಲ್ಲ. ಆದರೆ ವೆಚ್ಚವಿಲ್ಲದೆ ಶೀಘ್ರವಾಗಿ ಬೆಳೆಯಬಲ್ಲ ಬಿದಿರಿನ ಸಂವರ್ಧನೆಗೆ ಅರಣ್ಯ ಇಲಾಖೆ ನೀಡುತ್ತಿರುವ ಮಹತ್ವ ಅತ್ಯಲ್ಪವಾಗಿದೆ. ಕೇವಲ ಬೆಳೆದರೆ ಸಾಲದು, ಬಿದಿರು ಆಧಾರಿತ ಉತ್ಪನ್ನಗಳ ತಯಾರಿಕೆಗೆ ಗ್ರಾಮೀಣ ಭಾಗದ ಜನರಲ್ಲೂ ಜಾಗೃತಿ ಮೂಡಿಸಬೇಕು. ಯಾಂತ್ರಿಕವಾಗಿ ಸಲಕರಣೆಗಳು ತಯಾರಾಗುವ ಕಾರಣ ಪ್ಲಾಸ್ಟಿಕ್ ಪರಿಕರಗಳಿಗಿಂತ ಅಗ್ಗವಾಗಿ ಕೊಡುವ ಪ್ರಯತ್ನವೂ ನಡೆಯಬೇಕು. ಇದು ದೇಶದ ಆರ್ಥಿಕ ಅಭಿವೃದ್ಧಿಯ ಹೆಬ್ಬಾಗಿಲು ತೆರೆಯಬಹುದು ಎಂಬುದನ್ನು ಮೊದಲು ಅರಣ್ಯ ಇಲಾಖೆಯ ವರಿಷ್ಠರು ಮನಗಾಣಬೇಕು.

ಮೂಡುಬಿದಿರೆಯ ಸೋನ್ಸ್ ಸೇರಿದಂತೆ ನಾನಾ ಜಾತಿಯ ಬಿದಿರಿನ ಪ್ರಾಯೋಗಿಕ ಕೃಷಿ ಮಾಡಿದ ಹಲವರು ನಮ್ಮಲ್ಲಿದ್ದಾರೆ. ಬಿದಿರು ಕೂಡ ಹಣದ ಬೆಳೆಯಾಗುತ್ತದೆಂಬ ಕಲ್ಪನೆ ಜನರಿಗೆ ಮೂಡಬೇಕಿದ್ದರೆ ಪ್ರತೀ ಜಿಲ್ಲೆಯಲ್ಲೂ ಬಿದಿರು ಆಧಾರಿತ ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಮಲೆನಾಡಿನ ಕಾಡುಗಳಲ್ಲಿ ಹೂ ಬಿಟ್ಟು ಬಿದಿರಕ್ಕಿ ಉದುರಿಸಿ ಬುಡದಿಂದಲೇ ಕಳಚಿ, ಹಲವು ವರ್ಷಗಳ ಕಾಲ ಉಳಿದು ನಾಶವಾಗುವ ಬಿದಿರಿನ ಅವಗಣನೆ ನಿಲ್ಲಬೇಕು.

ಕರ್ನಾಟಕ ಸೇರಿದಂತೆ ಬಿದಿರು ಬೆಳೆಯುವ ರಾಜ್ಯಗಳ ಕುತೂಹಲದ ದೃಷ್ಟಿ ಅದರೆಡೆಗೆ ಹರಿದಿಲ್ಲ. ಅರಣ್ಯ ಇಲಾಖೆಯ ನಿರ್ಬಂಧಗಳ ಪರಿಣಾಮ ಗುಡಿ ಕೈಗಾರಿಕೆಗಳ ಪರಂಪರೆಯೇ ಅಗೋಚರವಾಗುತ್ತಿರುವ ಈ ದಿನಗಳಲ್ಲಿ, ಬಿದಿರಿಗೆ ನೀಡುವ ಅವಕಾಶ ಹೊಸದೊಂದು ಕೈಗಾರಿಕೆ ಕ್ರಾಂತಿಯ ಸೃಷ್ಟಿಗೆ ಕಾರಣವಾಗಬಹುದು.

ವಾಚಕರ ವಾಣಿ

ಸುತಾರ ಎಂಬ ಭಾವೈಕ್ಯದ ರೂವಾರಿ

'ಕನ್ನಡದ ಕಬೀರ' ಎಂದೇ ಖ್ಯಾತರಾದ ಇಬ್ರಾಹಿಂ ಸುತಾರ ಅವರ ನಿಧನವು ಕನ್ನಡ ನಾಡು, ನುಡಿಗೆ ಅಪಾರ ನಷ್ಟವನ್ನು ಉಂಟುಮಾಡಿದೆ. ಸದಾ ಶ್ವೇತವಸ್ತ್ರಧಾರಿ, ಮುಗುಳ್ನಗು, ಸಂತನ ಪ್ರಶಾಂತತೆ ಮತ್ತು ಸರಳ ವ್ಯಕ್ತಿಯಾಗಿ ಎಲ್ಲರ ಮನೆ ಮನಗಳಲ್ಲಿ ಅವರು ನೆಲೆಸಿದ್ದರು. ಗೀತೆ, ಉಪನಿಷತ್, ಕುರಾನ್, ವಚನ ಸಾಹಿತ್ಯ, ಸೂಫಿ ಸಂತರನ್ನು ಉದಾಹರಿಸಿ, ಪಕ್ಕಾ ಬಿಜಾಪುರ ಭಾಷೆಯಲ್ಲಿ, ಜನಸಾಮಾನ್ಯರಿಗೂ ಹಿಡಿಸುವ ಶೈಲಿಯಲ್ಲಿ ಪ್ರವಚನದ ಜೊತೆ ಹಾಸ್ಯರಸಾಯನವನ್ನೂ ಉಣಬಡಿಸಿ ಭಾವೈಕ್ಯದ ಸಂದೇಶ ಸಾರಿದ ಮಹಾನ್ ಮಾನವತಾವಾದಿ ಅವರು.

ಸುತಾರ ಅವರ ಜೀವನ, ಬದುಕು ನಿಜಕ್ಕೂ ಸಾರ್ಥಕ. ಅಂಥ ಮಹಾತ್ಮರನ್ನು ನಾವು ನೋಡಿದ್ದೇವೆ ಮತ್ತು ಅವರ ಅಮೃತವಾಣಿಯನ್ನು ಸವಿದಿದ್ದೇವೆ ಎಂಬುದೇ ನಮ್ಮ ಪುಣ್ಯ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಇಂದಿಗೂ ಇದೆ 'ಇಂಗ್ಲಿಷ್ ಕಾಟ'

ಶಿವಮೊಗ್ಗ, ಬೆಂಗಳೂರು ಮುಂತಾದ ನಗರಗಳ ಹೆಸರುಗಳನ್ನು ಇತ್ತೀಚಿನವರೆಗೆ ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿದ್ದಾಗ ಉಪಯೋಗಿಸುತ್ತಿದ್ದ ವಿಭಿನ್ನ ಪದ ರೂಪಗಳನ್ನು ಜನರು ಒಪ್ಪಿಕೊಂಡು ಬಳಸುತ್ತಿದ್ದ ರೀತಿಯನ್ನು ಗಿರೀಶ್ ಮತ್ತೇರ ಅವರು ಪ್ರಸ್ತಾಪಿಸಿದ್ದಾರೆ (ವಾ.ವಾ., ಫೆ. 4). ಕನ್ನಡ ಲಿಪಿ ಸುಧಾರಣೆ ಕುರಿತ ಚರ್ಚೆಯು ಇಂಗ್ಲಿಷ್‌ನತ್ತ ಗಮನ ಹರಿಸುವಂತೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ 'ಅಣ್ಣನ ನೆನಪು' ಪುಸ್ತಕದಲ್ಲಿ ಬರೆದ 'ಇಂಗ್ಲಿಷ್ ಕಾಟ' ಲೇಖನ ಜ್ಞಾಪಕಕ್ಕೆ ಬಂದಿತು. ಅದರಲ್ಲಿ ತಾವು ಮತ್ತು ತಮ್ಮ ಮಿತ್ರರು ಬಿ.ಎ. ಇಂಗ್ಲಿಷ್ ಭಾಷಾ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಉತ್ತರಿಸುವ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಗಳನ್ನು ತೇಜಸ್ವಿ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಇಂಗ್ಲಿಷ್‌ನಲ್ಲಿ ಬರವಣಿಗೆಗೂ ಆಡುವ ಭಾಷೆಗೂ ಇರುವ ವ್ಯತ್ಯಾಸ ಅವರಲ್ಲಿ ಮತ್ತು ಮಿತ್ರರಲ್ಲಿ ಮೂಡಿಸಿದ ಗೊಂದಲ ಇಂದಿಗೂ ವಿದ್ಯಾರ್ಥಿಗಳನ್ನು ಕಾಡುತ್ತಿರುವುದು ಸುಳ್ಳಲ್ಲ. 'ಎಲ್ಲರ ಕನ್ನಡ'ದ ಬಗ್ಗೆ ಪರ- ವಿರೋಧದ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ, ಇಂಗ್ಲಿಷ್ ಭಾಷೆಯ ಈ ಅಂಶದ ಬಗ್ಗೆಯೂ ನಾವು ಗಮನಹರಿಸಬೇಕಾಗುತ್ತದೆ.

ಡಾ. ಎಂ.ರವೀಂದ್ರ, ಬೆಂಗಳೂರು

ವಿಜ್ಞಾನ, ಅಧ್ಯಾತ್ಮದ ವಿಶಿಷ್ಟ ಜತೆಯಾಟ!

ಪ್ರಧಾನಿ ಶನಿವಾರ ಹೈದರಾಬಾದ್‌ಗೆ ಸಾಕ್ಷಾತ್ ಭೇಟಿ ನೀಡಿದರು. 'ಇಕ್ರಿಸ್ಯಾಟ್ 50'ಕ್ಕಿಂತ ಹೆಚ್ಚು ಮೀಡಿಯಾ ಕವರೇಜ್ ಸಿಕ್ಕಿದ್ದು ಅವರು ಮೇಲ್ಕೋಟೆ ನಾಮ ಧರಿಸಿ ಭಾಗವಹಿಸಿದ್ದ ಪ್ರತಿಮಾ ಅನಾವರಣದ ಕಾರ್ಯಕ್ರಮಕ್ಕೆ. ನನಗೆ ಅರ್ಥವಾಗದ ಸಂಗತಿಯೆಂದರೆ- ಹೈದರಾಬಾದಿಗೂ ರಾಮಾನುಜಾಚಾರ್ಯರಿಗೂ ಏನು ಸಂಬಂಧ? (ಅದನ್ನು ಭಾಗ್ಯನಗರ ಎಂದರೂ). ವಿಶಿಷ್ಟಾದ್ವೈತವನ್ನು ಪ್ರಚುರಗೊಳಿಸಿದ ಅವರು ಹುಟ್ಟಿದ್ದು ಶ್ರೀಪೆರುಂಬುದೂರು, ಹೋಗಿದ್ದು ಕಾಂಚೀಪುರಂಗೆ, ವಲಸೆ ಬಂದಿದ್ದು ಮೈಸೂರಿನತ್ತ, ಹೆಚ್ಚಾಗಿ ಇದ್ದದ್ದು ಶ್ರೀರಂಗಂನಲ್ಲಿ. ಸಮಾನತೆಯ ಬೃಹತ್ ಪುತ್ಥಳಿಯನ್ನು ಇಲ್ಲಿ ಸ್ಥಾಪಿಸಲು ಪ್ರೇರಣೆ ಏನು?

ಇಕ್ರಿಸ್ಯಾಟ್ ಸಮಾರಂಭದಲ್ಲಿ ವಸಂತ ಪಂಚಮಿ, ಸರಸ್ವತಿ ಪೂಜೆಗಳನ್ನು ಪ್ರಸ್ತಾಪಿಸಿದರು. ಕೃಷಿ ವಿದ್ಯಾರ್ಥಿಯಾಗಿ ನನಗನಿಸುವುದು- ಆ ಸಂಸ್ಥೆ ತೆಲಂಗಾಣಕ್ಕೆ ತನ್ನ ಗಮನ ಸೀಮಿತಗೊಳಿಸಿಕೊಳ್ಳದೆ ಅರೆ ಶುಷ್ಕ ಪ್ರದೇಶ ಇರುವ, ಕೆಲವು ಅದೇ ಫಸಲುಗಳನ್ನು ಬೆಳೆಯುವ ಪಕ್ಕದ ಕರ್ನಾಟಕ ರಾಜ್ಯಕ್ಕೂ ತನ್ನ ಚಟುವಟಿಕೆಗಳನ್ನು ವಿಸ್ತರಿಸುವ ಸಲಹೆ ನೀಡಬಹುದಾಗಿತ್ತು. ಒಟ್ಟಿನಲ್ಲಿ ಬೆಳಿಗ್ಗೆ ವಿಜ್ಞಾನ, ಸಂಜೆ ಅಧ್ಯಾತ್ಮ- ಒಂದು ವಿಶಿಷ್ಟ ಜತೆಯಾಟ. ಎರಡೂ ಕಡೆ ತಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಸಮಾರಂಭದ ಆಶಯಕ್ಕೆ ಜೋಡಿಸುವ ವಾಕ್ಚಾತುರ್ಯ! (ಉದಾ: 'ರಾಮಾನುಜಾಚಾರ್ಯರು ಉತ್ತರಪ್ರದೇಶದಲ್ಲೂ ಪರಿಚಿತರು').

ಎಚ್.ಎಸ್.ಮಂಜುನಾಥ, ಬೆಂಗಳೂರು

ಆಹಾ... ಅಸ್ತ್ರ!

ವಸ್ತ್ರಾಸ್ತ್ರ
ಮತಾಸ್ತ್ರ
ಬ್ರಹ್ಮಾಸ್ತ್ರ!

ಸರೋಜಿನಿ ನಾಯಕ್, ಹೊಸನಗರ

ನಿತ್ಯೋತ್ಸವದ ಕವಿಗೆ ಹೀಗೊಂದು ನಮನ

1974-75ರ ಆಸುಪಾಸು. ಆಗ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ 'ನವಸುಮ' ಎಂಬ, ಕನ್ನಡ ಭಾವಗೀತೆಗಳನ್ನು ಒಳಗೊಂಡ ಹೊಸ ಕಾರ್ಯಕ್ರಮ ಪ್ರತಿವಾರ ಪ್ರಸಾರವಾಗುತ್ತಿತ್ತು. ಕವಿ ನಿಸಾರ್ ಅಹಮದ್ ಅವರನ್ನು ಆಕಾಶವಾಣಿ ಕೇಂದ್ರದವರು ಅದರಲ್ಲಿ ಪ್ರಸಾರ ಮಾಡಲು ಒಂದು ಭಾವಗೀತೆಯನ್ನು ಬರೆದು ಕಳುಹಿಸುವಂತೆ ಕೋರಿದರು. ಆದರೆ, ಆ ಸಮಯದಲ್ಲಿ ಶಿವಮೊಗ್ಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಿಸಾರ್ ಅಹಮದ್ ಅವರು ರಜೆ ಸಮಯದಲ್ಲಿ ಬೆಂಗಳೂರಿಗೆ ಬಂದುಬಿಟ್ಟಿದ್ದರು. ಹಾಗಾಗಿ, ಆಕಾಶವಾಣಿಯವರು ಬರೆದ ಪತ್ರ ಅವರಿಗೆ ತಲುಪಿರಲಿಲ್ಲ. ನಂತರ ಅವರನ್ನು ಸಂಪರ್ಕಿಸಿ ಬೇಗ ಬರೆದುಕೊಡುವಂತೆ ಕೇಳಿಕೊಳ್ಳಲಾಯಿತಂತೆ.

ನಿಸಾರ್ ಅವರಿಗೆ ಆತಂಕ ಶುರು. ಯಾವುದರ ಬಗ್ಗೆ ಬರೆಯುವುದು? ಹೇಗಿದ್ದರೂ ನವೆಂಬರ್ ತಿಂಗಳು ಸಮೀಪಿಸುತ್ತಿದೆ. ರಾಜ್ಯೋತ್ಸವವನ್ನೇ ನಿಮಿತ್ತವಾಗಿಟ್ಟುಕೊಂಡು ಏಕೆ ಬರೆಯಬಾರದು ಎಂಬ ಜಿಜ್ಞಾಸೆಯ ಫಲವಾಗಿಯೇ ಮೂಡಿಬಂದ ಕವಿತೆ 'ನಿತ್ಯೋತ್ಸವ'. ಮನೆಯ ಮಹಡಿಯ ಮೇಲೆ ಓಡಾಡುತ್ತಾ ತಾವು ಶಿವಮೊಗ್ಗದ ಸುತ್ತಲೂ ನೋಡಿ ಆನಂದಿಸಿದ ಮಲೆನಾಡಿನ ಸೌಂದರ್ಯ ಮನನಕ್ಕಿಂತ ಬೇರೆ ಬೇಕೆ ಭಾವಗೀತೆಯ ಸಾಂಗತ್ಯಕ್ಕೆ? ಕನ್ನಡ ನಾಡಿನಲ್ಲಿ ಹುದುಗಿರುವ ಭವ್ಯತೆಯೆಲ್ಲಾ ಎರಕ ಹೊಯ್ದಂತೆ ಭಾಸವಾಗುವ ಈ ಕವಿತೆ ಪ್ರತಿಯೊಬ್ಬ ಕನ್ನಡಿಗನ ಭಾವ ಸ್ವರೂಪ ಎಂದು ವರ್ಣಿಸಲಾಗಿದೆ. ನಿಸಾರ್ ಅವರ ನಾಡು, ನುಡಿಯ ಪ್ರೇಮ ಹಲವು ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ. 'ಕನ್ನಡವೆಂದರೆ ಬರಿ ನುಡಿಯಲ್ಲ ಹಿರಿದಿದೆ ಅದರರ್ಥ' ಎಂದು ಕನ್ನಡದ ಶಕ್ತಿಯನ್ನು ಭೇದಿಸಿ ನೋಡಿದವರು. 'ಕನ್ನಡ ಬರಿ ಕರ್ನಾಟಕಲ್ಲ, ಅಸೀಮ, ಅದು ಅದಿಗಂತ' ಎಂದು ಪರಿಭಾವಿಸುವಂತೆ ಕರೆ ನೀಡಿದರು. ಎಲ್ಲಕ್ಕಿಂತ ಹೆಚ್ಚಾಗಿ, 'ಕನ್ನಡವೆಂದರೆ ಜೀವನಶೈಲಿ, ವಿಧಾನ' ಎಂದು ಭಾವ ದುಂದುಭಿಯನ್ನು ಕನ್ನಡಿಗರ ಮನದಲ್ಲಿ ತೇಲಿಬಿಟ್ಟರು. ಫೆ. 5 ನಿಸಾರ್ ಅವರ ಜನ್ಮದಿನ. ಅವರ ಕುಟುಂಬವರ್ಗ ಹಾಗೂ ಸನ್ಮಿತ್ರರು ಚಿಕ್ಕಬಳ್ಳಾಪುರದಲ್ಲಿ ನಿಸಾರ್ ಅಹಮದ್ ಎಜುಕೇಷನ್ ಟ್ರಸ್ಟ್‌ನ ಉದ್ಘಾಟನೆ ಹಾಗೂ ನಿಸಾರ್ ಅವರ ಪುತ್ಥಳಿ ಅನಾವರಣಕ್ಕೆ ಆಸ್ಥೆ ವಹಿಸಿದ್ದು ಒಂದು ಉತ್ತಮ ಬೆಳವಣಿಗೆಯೇ ಸರಿ.

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ನದಿ ಜೋಡಣೆ ಹಲವು ಅಡಚಣೆ

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ನದಿ ಜೋಡಣೆ ವಿಷಯ ಪ್ರಸ್ತಾಪಿಸಲಾಗಿದ್ದು, ಕೆನ್–ಬೆಟ್ವಾ ನದಿ ಜೋಡಣೆ ಯೋಜನೆಗೆ ಹಣ ತೆಗೆದಿರಿಸಲಾಗಿದೆ. ಜೊತೆಗೆ ದೇಶದ ಇತರ ಐದು ನದಿಗಳನ್ನು ಬೆಸೆಯುವ ನಿರ್ಧಾರ ಅಂತಿಮಗೊಂಡಿದೆ. ಪೆನ್ನಾರ್–ಕಾವೇರಿ, ಕೃಷ್ಣಾ–ಪೆನ್ನಾರ್, ಕೃಷ್ಣಾ–ಗೋದಾವರಿ, ಪಾರ್ ತಾಪಿ–ನರ್ಮದಾ ಹಾಗೂ ದಮನ್ ಗಂಗಾ ಪಿಂಜಾಲ್ ನದಿಗಳು ಜೋಡಣೆ ಆಗಲಿವೆ. ಕರ್ನಾಟಕಕ್ಕೆ ಸಂಬಂಧಪಟ್ಟಂತೆ, ಕಾವೇರಿ, ಕೃಷ್ಣಾ, ಪೆನ್ನಾರ್ ನದಿಗಳಿಗೆ ಸಂಪರ್ಕ ಕಲ್ಪಿಸುವುದರಿಂದ ರಾಜ್ಯಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ

ಕೆನ್–ಬೆಟ್ವಾ

ಮಧ್ಯಪ್ರದೇಶದ ಬರಪೀಡಿತ ಬುಂದೇಲ್‌ಖಂಡಕ್ಕೆ ನೀರುಣಿಸುವ ₹46 ಸಾವಿರ ಕೋಟಿ ವೆಚ್ಚದ ಕೆನ್–ಬೆಟ್ವಾ ನದಿ ಜೋಡಣೆ ಯೋಜನೆಯಿಂದ 9.05 ಲಕ್ಷ ಹೆಕ್ಟೇರ್ ಕೃಷಿ ಜಮೀನಿಗೆ ನೀರು ಲಭ್ಯವಾಗಲಿದೆ. ಇದರಿಂದ 65 ಲಕ್ಷ ಜನರಿಗೆ ಕುಡಿಯುವ ನೀರು ದೊರಕಲಿದೆ. ಕಳೆದ ಡಿಸೆಂಬರ್‌ನಲ್ಲಿ ಕೇಂದ್ರ ಸಂಪುಟವು ಈ ಯೋಜನೆಗೆ ಒಪ್ಪಿಗೆ ನೀಡಿತ್ತು. ಉತ್ತರ ಪ್ರದೇಶದ ಕೆಲವು ಜಿಲ್ಲೆಗಳೂ ನೀರು ಪಡೆಯಲಿವೆ. ಯೋಜನೆಯಿಂದ ಈ ಜಿಲ್ಲೆಗಳ ಜನರ ಸಾಮಾಜಿಕ–ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಕೃಷಿ ಚಟುವಟಿಕೆ ಹೆಚ್ಚಾಗಿ, ಉದ್ಯೋಗಾವಕಾಶ ಸೃಷ್ಟಿಯಾಗಲಿವೆ. ಜನರ ವಲಸೆ ತಪ್ಪುತ್ತದೆ. ಆದರೆ, ಈ ಪ್ರದೇಶದಲ್ಲಿನ ಅಳಿವಿನಂಚಿನಲ್ಲಿರುವ ಹುಲಿ ಸಂರಕ್ಷಣೆ ಕಾರ್ಯಕ್ರಮಗಳಿಗೆ ಯೋಜನೆಯಿಂದ ಅಡ್ಡಿಯಾಗಲಿದೆ ಎಂಬ ಕೂಗು ಎದ್ದಿದೆ. ಹುಲಿಗಳ ಆವಾಸಸ್ಥಾನಗಳ ನಡುವಿನ ಸಂಪರ್ಕ ಕಡಿತಗೊಳಿಸಿದರೆ, ಅವುಗಳ ಸಂತತಿ ಕ್ಷೀಣಿಸುವ ಅಪಾಯವಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಗೋದಾವರಿ–ಕೃಷ್ಣಾ ಹಾಗೂ ಪೆನ್ನಾರ್–ಕಾವೇರಿ

2020ರಲ್ಲಿ, ಆಗಿನ ಕೇಂದ್ರ ಜಲಸಂಪನ್ಮೂಲ ಸಚಿವರು ಗೋದಾವರಿ–ಕೃಷ್ಣಾ–ಕಾವೇರಿ ನದಿಗಳನ್ನು ಜೋಡಿಸಲು ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ ಎಂದು ಹೇಳಿದ್ದರು. ಗೋದಾವರಿಯಿಂದ 247 ಟಿಎಂಸಿ ಹೆಚ್ಚುವರಿ ನೀರನ್ನು ಕೃಷ್ಣಾ, ಕಾವೇರಿ ಮತ್ತು ಪೆನ್ನಾರ್ ಜಲಾನಯನ ಪ್ರದೇಶಗಳನ್ನು ಒಳಗೊಂಡ ದಕ್ಷಿಣದ ಪ್ರದೇಶಗಳಿಗೆ ತಿರುಗಿಸಬಹುದು ಎಂದು ಡಿಪಿಆರ್ ಹೇಳಿದೆ. ಈ ಯೋಜನೆ ಮೂರು ಹಂತಗಳಲ್ಲಿದೆ. ಈ ಯೋಜನೆಯ ಮೊದಲ ಹಂತದಲ್ಲಿ ತನ್ನ ಪಾಲಿನ 200 ಟಿಎಂಸಿ ಅಡಿ ನೀರನ್ನು ನೀಡುವಂತೆ ತಮಿಳುನಾಡು ಕೋರಿದೆ. ದಕ್ಷಿಣದ ರಾಜ್ಯಗಳಿಗೆ ಅನುಕೂಲವಾಗುವಂತೆ ಗೋದಾವರಿ-ಕಾವೇರಿ ನದಿ ಜೋಡಣೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸುವಂತೆ ತಮಿಳುನಾಡು ಕೇಂದ್ರವನ್ನು ಒತ್ತಾಯಿಸಿತ್ತು. ಆದರೆ, ತಮಿಳುನಾಡಿನ ಉದ್ದೇಶಿತ ಕಾವೇರಿ-ವೈಗೈ-ಗುಂಡಾರ್ ಅಂತರ್‌ರಾಜ್ಯ ನದಿ ಜೋಡಣೆ ಯೋಜನೆಯನ್ನು ಕರ್ನಾಟಕ ವಿರೋಧಿಸಿತ್ತು.

ಪೆನ್ನಾರ್–ಕೃಷ್ಣಾ

ಕರ್ನಾಟಕದಲ್ಲಿ ಕೇವಲ 20 ಕಿಲೋಮೀಟರ್ ಉದ್ದಕ್ಕೆ ಹರಿಯುವ ಪೆನ್ನಾರ್ ನದಿಯನ್ನು ಕೃಷ್ಣಾ ನದಿ ಜೊತೆ ಸಂಪರ್ಕಿಸುವ ನಿರ್ಧಾರವನ್ನು ಕೇಂದ್ರ ಪ್ರಕಟಿಸಿದೆ. ಈ ನದಿ ಮುಂದೆ ಆಂಧ್ರಪ್ರದೇಶ ಹಾಗೂ ತಮಿಳುನಾಡಿಗೆ ಹರಿಯುತ್ತದೆ. ಈ ಯೋಜನೆಯಿಂದ ಕರ್ನಾಟಕವು ಕೃಷ್ಣಾ ನದಿಯಿಂದ ಪಡೆಯುವ ನೀರಿನ ಪ್ರಮಾಣವು ಕಡಿಮೆಯಾಗಲಿದ್ದು, ಆಂಧ್ರಪ್ರದೇಶಕ್ಕೆ ಹೆಚ್ಚು ನೀರು ಹರಿದುಹೋಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಎರಡೂ ನದಿಗಳನ್ನು ಯಾವ ಸ್ಥಳದಲ್ಲಿ ಬೆಸೆಯಲಾಗುತ್ತದೆ ಎಂಬ ಮಾಹಿತಿ ಸ್ಪಷ್ಟವಾಗಿಲ್ಲ. ಯೋಜನೆಯ ಡಿಪಿಆರ್ ತಯಾರಿ ಹಂತದಲ್ಲೇ ಕರ್ನಾಟಕಕ್ಕೆ ಹಂಚಿಕೆಯಾಗುವ ನೀರಿನ ಪಾಲು ನಿರ್ಧಾರವಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಬೇಡಿಕೆಯನ್ನು ಮಂಡಿಸಿದ್ದಾರೆ. ಬಚಾವತ್ ತೀರ್ಪಿನಂತೆ, ರಾಜ್ಯಕ್ಕೆ ಕೃಷ್ಣಾ ನದಿಯಿಂದ 734 ಟಿಎಂಸಿ ಅಡಿ ನೀರು ಹಂಚಿಕೆಯಾಗಿದೆ. ನ್ಯಾ. ಬ್ರಿಜೇಶ್ ಕುಮಾರ್ ಆಯೋಗವು ಹೆಚ್ಚುವರಿಯಾಗಿ 130 ಟಿಎಂಸಿ ಅಡಿ ನೀರು ಹಂಚಿದ್ದು, ಈ ಬಗ್ಗೆ ಅಧಿಸೂಚನೆ ಪ್ರಕಟವಾಗುವುದು ಬಾಕಿಯಿದೆ.

ದಮನ್‌ಗಂಗಾ–ಪಿಂಜಾಲ್

ಮುಂಬೈ ನಗರಕ್ಕೆ ನೀರು ಒದಗಿಸಲು ದಮನ್‌ಗಂಗಾ ಜಲಾನಯನ ಪ್ರದೇಶದಿಂದ ಹೆಚ್ಚುವರಿ ನೀರನ್ನು ತಿರುಗಿಸಲು ದಮನ್‌ಗಂಗಾ-ಪಿಂಜಾಲ್ ನದಿಯನ್ನು ಸಂಪರ್ಕಿಸುವ ಗುರಿ ಹಾಕಿಕೊಳ್ಳಲಾಗಿದೆ. ದಮನ್‌ಗಂಗಾ ನದಿಗೆ ಅಡ್ಡಲಾಗಿ ಕಟ್ಟಿರುವ ಭುಗಡ್ ಜಲಾಶಯ ಮತ್ತು ಉಪನದಿ ವಾಘ್‌ಗೆ ಅಡ್ಡಲಾಗಿ ಕಟ್ಟಿರುವ ಖಾರ್ಗಿಹಿಲ್ ಜಲಾಶಯದಲ್ಲಿ ಲಭ್ಯವಾಗುವ ನೀರನ್ನು ವರ್ಗಾಯಿಸಲು ಉದ್ದೇಶಿಸಿದೆ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಪೇಂಟಲುಕಾದ ಭುಗಡ್ ಗ್ರಾಮದ ಬಳಿ ದಮನ್‌ಗಂಗಾ ನದಿಯ ಮೇಲೆ 826 ಮೀ ಉದ್ದದ ಅಣೆಕಟ್ಟು ನಿರ್ಮಿಸುವ ಪ್ರಸ್ತಾವವಿದೆ.

ಪಾರ್ ತಾಪಿ–ನರ್ಮದಾ

ಪಾರ್–ತಾಪಿ–ನರ್ಮದಾ ನದಿಗಳ ಜೋಡಣೆಯು ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ನೆಚ್ಚಿನ ಯೋಜನೆಯಾಗಿತ್ತು. ಇದರ ಅಂದಾಜು ವೆಚ್ಚ ₹16 ಸಾವಿರ ಕೋಟಿ. ಮಹಾರಾಷ್ಟ್ರ ಮತ್ತು ದಕ್ಷಿಣ ಗುಜರಾತ್‌ನಲ್ಲಿ ಹರಿಯುವ ಪಶ್ಚಿಮ ಘಟ್ಟಗಳ ನದಿಗಳ ಹೆಚ್ಚುವರಿ ನೀರನ್ನು ಈ ಯೋಜನೆಗಳು ಗುಜರಾತ್‌ನ ಬರಪೀಡಿತ ಕಛ್ ಹಾಗೂ ಸೌರಾಷ್ಟ್ರಕ್ಕೆ ವರ್ಗಾಯಿಸುತ್ತವೆ. ಯೋಜನೆಯಿಂದ ಬುಡಕಟ್ಟು ಜನರು ತಮ್ಮ ವಾಸಸ್ಥಾನಗಳನ್ನು ಕಳೆದುಕೊಳ್ಳಲಿದ್ದಾರೆ ಎಂಬ ಆತಂಕವಿದೆ. ಯೋಜನೆ ವಿರೋಧಿಸಿ ಕೆಲವು ವರ್ಷಗಳಿಂದ ಗುಜರಾತ್‌ನಲ್ಲಿ ದೊಡ್ಡ ಪ್ರತಿಭಟನೆಗಳೂ ನಡೆದಿವೆ.

ಲಾಭವಷ್ಟೇ ಅಲ್ಲ, ನಷ್ಟವೂ ಇದೆ

• ಟಿ.ಎಂ.ಶಿವಶಂಕರ್

ಹೆಚ್ಚು ನೀರು ಇರುವ ಪ್ರದೇಶಗಳಿಂದ ಕಡಿಮೆ ನೀರು ಇರುವ ಪ್ರದೇಶಗಳಿಗೆ ವೈಜ್ಞಾನಿಕವಾಗಿ ಮತ್ತು ವ್ಯವಸ್ಥಿತವಾಗಿ ನದಿಗಳ ಜೋಡಣೆಯಿಂದ ನೀರು ಹರಿಸಬಹುದು. ನದಿಗಳ ಜೋಡಣೆಯಿಂದ ಹೆಚ್ಚುವರಿ ನೀರಾವರಿ ಪ್ರದೇಶ ಅಭಿವೃದ್ಧಿ, ವಿದ್ಯುತ್ ಉತ್ಪಾದನೆ, ಕುಡಿಯುವ ನೀರಿನ ವ್ಯವಸ್ಥೆ, ಅಂತರ್ಜಲ ವೃದ್ಧಿ, ಜಲಸಂಚಾರ, ಪ್ರವಾಸೋದ್ಯಮ ಹೀಗೆ ಹಲವು ಅನುಕೂಲಗಳು ಇವೆ. ಆದರೆ, ಇಂತಹ ಯೋಜನೆಗಳು ಸಾಮಾಜಿಕ ಸಮಸ್ಯೆ ಸೃಷ್ಟಿಸಬಹುದು, ನೈಸರ್ಗಿಕ ವಿಕೋಪ, ರಾಜ್ಯಗಳ ನಡುವೆ ಮನಸ್ತಾಪ, ನೀರು ಹಂಚಿಕೆಯ ವಿವಾದ, ಪರಿಸರ ನಾಶ, ಅರಣ್ಯ ನಾಶಕ್ಕೂ ನದಿ ಜೋಡಣೆ ಕಾರಣ ಆಗಬಹುದು. ಯೋಜನೆಗಾಗಿ ಭೂಸ್ವಾಧೀನದ ವಿಚಾರದಲ್ಲಿ ತಾರತಮ್ಯ ಇಲ್ಲ ಎಂದು ಸರ್ಕಾರ ಹೇಳಿದರೂ ಸಣ್ಣ ಹಿಡುವಳಿ ಇರುವ ಬಡವರೇ ಹೆಚ್ಚು ತೊಂದರೆಗೆ ಒಳಗಾಗುತ್ತಾರೆ ಎಂಬುದು ಸತ್ಯ.

ಗಂಗಾನದಿಯ ಒಂದು ಶಾಖೆಯನ್ನು ಕಾವೇರಿಗೆ ಹರಿಸುವ ಯೋಜನೆ ಬಗ್ಗೆ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿ ಆಗಿದ್ದ ಕಾಲದಲ್ಲಿಯೇ ಮಾತು ಕೇಳಿ ಬಂದಿತ್ತು. ಗಂಗಾ ನದಿಯನ್ನು ಕರ್ನಾಟಕದತ್ತ ಹರಿಸುವ ಅಗತ್ಯವೇ ಇಲ್ಲ.

ಕರ್ನಾಟಕದಲ್ಲಿ ನೀರಿಗೆ ಕೊರತೆ ಇಲ್ಲ. ರಾಜ್ಯದಲ್ಲಿ 400ಕ್ಕೂ ಹೆಚ್ಚು ನದಿಗಳಿವೆ. ಅವುಗಳ ಪೈಕಿ 50ಕ್ಕೂ ಹೆಚ್ಚು ದೊಡ್ಡ ನದಿಗಳಿವೆ. ಪಾಲಾರ್, ದಕ್ಷಿಣ ಪಿನಾಕಿನಿ, ಉತ್ತರ ಪಿನಾಕಿನಿ, ಕಾವೇರಿ, ವೇದಾವತಿ, ತುಂಗಭದ್ರಾ, ಕೃಷ್ಣಾ, ಮಹಾದಾಯಿ ಮತ್ತು ಗೋದಾವರಿ ಜಲಾನಯನ ಪ್ರದೇಶಗಳಲ್ಲಿ ಹುಟ್ಟಿ ಹರಿಯುವ ನದಿಗಳಿಂದ 97,352 ದಶ ಲಕ್ಷ ಘನ ಮೀಟರ್ ನೀರು ದೊರೆಯುತ್ತದೆ. ರಾಜ್ಯದಲ್ಲಿ ಪ್ರತಿವರ್ಷ ಲಭ್ಯವಾಗುವ ನೀರಿನ ಪ್ರಮಾಣ 14,79,318 ಹೆಕ್ಟೋ ಮೀಟರ್. ಪಶ್ಚಿಮದತ್ತ ಹರಿಯುವ ನದಿಗಳಲ್ಲಿ ವರ್ಷಕ್ಕೆ 2,000 ಟಿಎಂಸಿ ಅಡಿ ನೀರು ದೊರೆಯುತ್ತದೆ.

ಸಮುದ್ರ ಸೇರುವ ನೀರಿನ ಶೇ 40ರಿಂದ ಶೇ 50ರಷ್ಟನ್ನು ರಾಜ್ಯದ ಪೂರ್ವ ಮತ್ತು ಉತ್ತರಕ್ಕೆ ತಿರುಗಿಸಿದರೂ ಬಯಲು ಸೀಮೆಯ ನೀರಿನ ಸಮಸ್ಯೆ ಪರಿಹಾರವಾಗುತ್ತದೆ. ಆದರೆ, ಇದು ಸುಲಭವಲ್ಲ. ಮಧ್ಯ ಇರುವ ಪಶ್ಚಿಮ ಘಟ್ಟವನ್ನು 80–100 ಕಿ.ಮೀ.ನಷ್ಟು ಕೊರೆದು ಅಥವಾ ಕಡಿದು ನೀರು ತರಬೇಕಾಗುತ್ತದೆ. ಇದರಿಂದ ಜೀವ ವೈವಿಧ್ಯ ಮತ್ತು ಅರಣ್ಯ ಅಪಾರ ಪ್ರಮಾಣದಲ್ಲಿ ನಾಶವಾಗುತ್ತದೆ.

ಬೆಂಗಳೂರಿನಲ್ಲಿ ಮೆಟ್ರೊ ಸುರಂಗ ಕೊರೆಯುವಂತಹ ಯಂತ್ರಗಳನ್ನು ಬಳಸಿಕೊಂಡು ಪಶ್ಚಿಮ ಘಟ್ಟವನ್ನು ಕೊರೆಯಬಹುದು. ಮೂರು ದಿನಕ್ಕೆ ಒಂದು ಮೀಟರ್ ಸುರಂಗ ಕೊರೆಯುವ ಸಾಮರ್ಥ್ಯ ಈ ಯಂತ್ರಕ್ಕೆ ಇದೆ. ಕಾಮಗಾರಿ ನಿಧಾನವಾದರೂ ಒಂದಲ್ಲ ಒಂದು ದಿನ ನೀರು ಹರಿಸಲು ಸಾಧ್ಯ. ಕರ್ನಾಟಕಕ್ಕೆ ಗಂಗಾ ನದಿಯನ್ನು ಹರಿಸುವ ಬದಲು ಈ ಬಗ್ಗೆ ಕೇಂದ್ರವು ಯೋಚಿಸಬೇಕು.

ನೀರಾವರಿಗಾಗಿ ಪ್ರತಿ ವರ್ಷವೂ ಲಕ್ಷಾಂತರ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಹಾಗಿದ್ದರೂ ನೀರಾವರಿಗೆ ಒಳಪಟ್ಟಿರುವ ಜಮೀನಿನ ಪ್ರಮಾಣ ಶೇ 25ರಷ್ಟನ್ನು ತಲುಪಿಲ್ಲ. ಈಜಿಪ್ಟ್‌ನಲ್ಲಿ ನೈಲ್ ನದಿಯ ನೀರನ್ನು 500–600 ಕಿ.ಮೀ. ದೂರಕ್ಕೆ ಹರಿಸಿ ಮರಳುಗಾಡಿನಲ್ಲಿಯೂ ಕೃಷಿ ಮಾಡುತ್ತಾರೆ. ನ್ಯೂಜಿಲೆಂಡ್, ಫ್ರಾನ್ಸ್, ಅಮೆರಿಕ, ರಷ್ಯಾದಲ್ಲಿ ಆಳದಲ್ಲಿ ಹರಿಯುವ ನದಿಯ ನೀರನ್ನು ಎತ್ತರಕ್ಕೆ ಹರಿಸಿ ಕೃಷಿಗೆ ಬಳಸುತ್ತಾರೆ. ಆದರೆ, ನಮ್ಮಲ್ಲಿ ಇಂತಹ ಪ್ರಯತ್ನಗಳು ಆಗಿಲ್ಲ.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಯಾವ ತಾಲ್ಲೂಕಿನಲ್ಲಿಯೂ ಕಾಲುವೆ ನೀರು ಹರಿಯುವುದಿಲ್ಲ. ಧಾರವಾಡ, ಬೆಳಗಾವಿ, ವಿಜಯಪುರ, ಬಳ್ಳಾರಿ, ರಾಯಚೂರು, ಕಲಬುರ್ಗಿ, ಬೀದರ್ ಜಿಲ್ಲೆಗಳ ಬಹಳಷ್ಟು ಭೂ ಪ್ರದೇಶ ಒಣ ಭೂಮಿಯಾಗಿಯೇ ಉಳಿದಿದೆ. ಆಲಮಟ್ಟಿ, ನಾರಾಯಣಪುರ, ತುಂಗಭದ್ರಾ ಜಲಾಶಯಗಳಿಂದಾಗಿ ರಾಯಚೂರು, ಕಲಬುರ್ಗಿ, ವಿಜಯಪುರ ಜಿಲ್ಲೆಗಳ ಸ್ವಲ್ಪ ಭಾಗಕ್ಕೆ ಮಾತ್ರ ನೀರು ಸಿಕ್ಕಿದೆ. ಗೋದಾವರಿ ನದಿಯನ್ನು ಕೃಷ್ಣಾ ನದಿಗೆ ಸೇರಿಸಿರುವುದರಿಂದ 22 ಟಿಎಂಸಿ ಅಡಿ ನೀರು ಹರಿದಿದೆ. ಆದರೆ, ಕೃಷ್ಣಾದಿಂದ ಕರ್ನಾಟಕಕ್ಕೆ ಹೆಚ್ಚಿನ ನೀರು ಸಿಕ್ಕಿಲ್ಲ.

ಬೇರೆ ರಾಜ್ಯಗಳಿಂದ ನೀರು ತಂದು ಕರ್ನಾಟಕದ ಒಣ ಜಮೀನು ಅಭಿವೃದ್ಧಿ ಸಾಧ್ಯವೇ ಇಲ್ಲ. ಇಂತಹ ಯೋಜನೆಗೆ ವೆಚ್ಚವಾಗುವ ಒಂದು ಭಾಗವನ್ನು ಕರ್ನಾಟಕಕ್ಕೆ ನೀಡಿ, ಒಣ ಭೂಮಿಯನ್ನು ಹಸಿರಾಗಿರುವ ಗುರಿ ನಿಗದಿ ಮಾಡಬೇಕು.

ಕಾವೇರಿ ಮತ್ತು ಪೆನ್ನಾರ್ ನದಿಗಳ ಜೋಡಣೆಯ ಸಮಗ್ರ ಯೋಜನೆಯನ್ನು 2022–23ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ, ಇದರಿಂದ ಕರ್ನಾಟಕಕ್ಕೆ ಲಭ್ಯವಾಗುವ ನೀರು ಎಷ್ಟು ಎಂಬ ನಿಖರ ಮಾಹಿತಿ ಇಲ್ಲ. ಈ ಯೋಜನೆ ಜಾರಿಯಾದರೆ ತಮಿಳುನಾಡಿಗೆ ಹೆಚ್ಚಿನ ಉಪಯೋಗ ಆಗಲಿದೆ. ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕೂ ಸ್ವಲ್ಪ ಲಾಭ ಆಗಬಹುದು. ಕರ್ನಾಟಕಕ್ಕೆ ಯಾವುದೇ ಲಾಭ ಆಗುವುದಿಲ್ಲ.

ನದಿ ಜೋಡಣೆಗೆ ಕರ್ನಾಟಕವು ಸಮ್ಮತಿ ನೀಡಬಾರದು. ನದಿ ಜೋಡಣೆಯು ಹೇಳಿದಷ್ಟು ಸುಲಭವೇನೂ ಅಲ್ಲ. ನದಿ ಜೋಡಣೆಯ ಸಾಧಕ ಬಾಧಕಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಬೇಕು. ನದಿ ಜೋಡಣೆಯು ಐತಿಹಾಸಿಕ ಪ್ರಮಾದವಾಗುವುದನ್ನು ತಡೆಯಬೇಕು.

ಲೇಖಕ: ನಿವೃತ್ತ ಹಿರಿಯ ಭೂಜಲ ವಿಜ್ಞಾನಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 38

ಶಿವಕ್ಷೇತ್ರಗಳ ಪುಣ್ಯಫಲಗಳು

ಈಗ ಸೂತಮುನಿ ಸಕಲ ಶಿವಕ್ಷೇತ್ರಗಳ ಆಗಮಗಳನ್ನು ವಿದ್ಯೇಶ್ವರಸಂಹಿತೆಯ ಹನ್ನೆರಡನೇ ಅಧ್ಯಾಯದಲ್ಲಿ ತಿಳಿಸುತ್ತಾನೆ.

ಭರತವರ್ಷದಲ್ಲಿ ಶಿವಕ್ಷೇತ್ರಗಳು ಶಿವನ ಆಜ್ಞೆಯಿಂದ ನೆಲೆನಿಂತಿವೆ. ಶಿವನ ಆಶೀರ್ವಾದಿಂದ ಜನರ ಜೀವನ್ಮುಕ್ತಿಗೆ ಸ್ಥಾಪಿತವಾದ ತೀರ್ಥಕ್ಷೇತ್ರಗಳಲ್ಲಿ ಸದಾ ಸ್ನಾನ, ದಾನ, ಜಪ ಮುಂತಾದ ಪುಣ್ಯಕೆಲಸಗಳನ್ನು ಮಾಡಬೇಕು. ಹಾಗೆ ಮಾಡದಿದ್ದರೆ ರೋಗ, ಬಡತನ, ಮೂಗತನ ಮುಂತಾದ ಪಾಪಗಳು ಬರುವುದು. ಶಿವಕ್ಷೇತ್ರದಲ್ಲಿ ಜಪ-ತಪ ಮಾಡಿದರೆ ಬ್ರಹ್ಮಲೋಕವನ್ನು ಸೇರಬಹುದು. ಅಲ್ಲಿ ಬಹುಕಾಲ ವಾಸವಾಗಿದ್ದು ಮತ್ತೆ ಮನುಷ್ಯರಾಗಿ ಜನಿಸುವರು ಅಥವಾ ಮತ್ತೆ ಯಾವ ಜನ್ಮವನ್ನು ತಳೆಯದೆ, ಮುಕ್ತರಾಗುವರು. ಪುಣ್ಯಕ್ಷೇತ್ರದಲ್ಲಿ ಪಾಪವನ್ನು ಮಾಡಿದವರಿಗೆ ಘನಘೋರ ಶಿಕ್ಷೆಯಾಗುವುದು. ಆದ್ದರಿಂದ ಪುಣ್ಯಕ್ಷೇತ್ರದಲ್ಲಿ ಯಾರೂ ಪಾಪವನ್ನು ಮಾಡಬಾರದು.

ಹಿಮಾಲಯದಿಂದ ಜನಿಸಿ, ಅನೇಕ ಮುಖವಾಗಿ ಹರಿಯುವ ಗಂಗಾನದಿಯು ಅತಿ ಪವಿತ್ರವಾದುದು. ಆ ನದಿಯ ತೀರದಲ್ಲಿ ಕಾಶಿಯಂಥ ಅನೇಕ ಪುಣ್ಯಕ್ಷೇತ್ರಗಳಿವೆ. ಮಾರ್ಗಶಿರಮಾಸದಲ್ಲಿ, ಮೃಗಶಿರಾನಕ್ಷತ್ರದಲ್ಲಿ ಗುರು ಇರುವ ಸಮಯದಲ್ಲಿ ಗಂಗೆಯಲ್ಲಿ ಸ್ನಾನ ಮಾಡುವುದು ಪರಮಪವಿತ್ರವಾಗಿರುತ್ತೆ. ಯಮುನಾ ಮತ್ತು ಶೋಣ ಈ ನದಿಗಳಲ್ಲಿ ಸೂರ್ಯನೂ ಗುರುವೂ ಕನ್ಯಾರಾಶಿಯಲ್ಲಿರುವಾಗ ಸ್ನಾನಮಾಡಿದರೆ ಯಮಲೋಕ ಮತ್ತು ವಿನಾಯಕಲೋಕದಲ್ಲಿ ಉತ್ತಮವಾದ ಭೋಗಗಳು ಲಭಿಸುವುದು. ಸಿಂಧುನದಿ ಮತ್ತು ಶತನದಿಗಳ ದಡದಲ್ಲಿ ಸಹ ಅನೇಕ ಕ್ಷೇತ್ರಗಳಿವೆ. ಸರಸ್ವತೀನದಿ ಮತ್ತು ಷಷ್ಠಿಮುಖಾ ಎಂಬ ನದಿಗಳದಡದಲ್ಲಿ ವಾಸಮಾಡಿದರೆ ಬ್ರಹ್ಮಲೋಕ ಲಭಿಸುವುದು. ವೃಶ್ಚಿಕಮಾಸದಲ್ಲಿ ಗುರುವೂ ವೃಶ್ಚಿಕದಲ್ಲಿರುವಾಗ ಇಪ್ಪತ್ತು ನಾಲ್ಕು ಮುಖಗಳುಳ್ಳ ನರ್ಮದಾನದಿಯಲ್ಲಿ ಸ್ನಾನಮಾಡಿದರೆ ವಿಷ್ಣುಪದವು ಲಭಿಸುವುದು. ಹನ್ನೆರಡು ಮುಖವಾಗಿ ಹರಿಯುವ ತಮಸಾನದಿಯೂ, ಹತ್ತು ಮುಖವಾಗಿ ಹರಿಯುವ ರೇವಾನದಿಗಳೂ ಪುಣ್ಯವಾದವು.

ಹಾಗೇ, ಇಪ್ಪತ್ತೊಂದು ಮುಖವಾಗಿ ಹರಿಯುವ ಗೋದಾವರೀನದಿಯಲ್ಲಿ ಸ್ನಾನ ಮಾಡಿದರೆ ರುದ್ರಪದ ಸಿಗುವುದು. ಸಿಂಹಮಾಸದಲ್ಲಿ ಗುರುವು ಸಿಂಹರಾಶಿಯಲ್ಲಿರುವಾಗ ಗೋದಾವರಿಯಲ್ಲಿ ಸ್ನಾನಮಾಡಿದರೆ ಶಿವಲೋಕವು ಲಭಿಸುವುದು ಎಂದು ಶಿವನೇ ಹೇಳಿರುವನು. ಹದಿನೆಂಟು ಮುಖವಾಗಿ ಹರಿವ ಕೃಷ್ಣವೇಣಿ ನದಿಯಿಂದ ವಿಷ್ಣುಪದ, ಹತ್ತು ಮುಖವಾಗಿ ಹರಿಯುವ ತಂಗಾಭದ್ರಾನದಿಯಿಂದ ಬ್ರಹ್ಮಲೋಕ, ಒಂಬತ್ತು ಮುಖವಾಗಿ ಹರಿಯುವ ಸುವರ್ಣಮುಖರಿ ಎಂಬ ನದಿಯಿಂದ ಬ್ರಹ್ಮಲೋವನ್ನನುಭವಿಸಿ, ಮತ್ತೆ ಆ ನದಿಯ ದಡದಲ್ಲಿಯೇ ಜನಿಸುವರು. ಸರಸ್ವತೀ, ಪಂಪಾ, ಕನ್ಯಾ, ಶ್ವೇತನದೀ ಸರಸ್ವತೀ ನದಿಗಳ ದಡದಲ್ಲಿ ವಾಸ ಮಾಡಿದರೆ ಇಂದ್ರಲೋಕ ಲಭಿಸುವುದು.

ಸಹ್ಯಪರ್ವತದಲ್ಲಿ ಜನಿಸಿ ಇಪ್ಪತ್ತೇಳು ಮುಖವಾಗಿ ಹರಿವ ಕಾವೇರೀನದಿಯು ಮಹಾಪುಣ್ಯವಾದ ಮಹಾನದಿ. ಸಕಲ ಇಷ್ಟಾರ್ಥಗಳನ್ನೂ ಈಡೇರಿಸುವ ಕಾವೇರಿಯ ಶಿವಕ್ಷೇತ್ರದಲ್ಲಿ ಸ್ನಾನ ಮಾಡುವುದರಿಂದ ಬ್ರಹ್ಮಲೋಕ, ವಿಷ್ಣುಲೋಕ ಮತ್ತು ಶಿವಲೋಕ ಲಭಿಸುವುದು. ತುಲಾಮಾಸದಲ್ಲಿ ಗುರುವೂ ತುಲಾರಾಶಿಯಲ್ಲಿರುವಾಗ ಕಾವೇರಿನದಿಯಲ್ಲಿ ಸ್ನಾನಮಾಡಿದರೆ ವಿಷ್ಣುವಚನ ಮಹಾತ್ಮೆಯಿಂದ ಸಕಲ ಇಷ್ಟಾರ್ಥಗಳು ಲಭಿಸುವುದು. ನೈಮಿಷಾರಣ್ಯದಲ್ಲಿರುವ ಬದರಿಕ್ಷೇತ್ರದಲ್ಲಿ ಗುರುವೂ, ಸೂರ್ಯನೂ ಮೇಷರಾಶಿಯಲ್ಲಿರುವಾಗ ಸ್ನಾನ ಮಾಡಿ ಪೂಜಿಸಿದರೆ ಬ್ರಹ್ಮಲೋಕ ಮತ್ತು ಕೇದಾರಕ್ಷೇತ್ರದಲ್ಲಿ ತೀರ್ಥಪಾನ ಮತ್ತು ಸ್ನಾನಗಳನ್ನು ಮಾಡಿದರೆ ಬ್ರಹ್ಮಜ್ಞಾನ ಉಂಟಾಗುವುದು. ಮೀನಮಾಸದಲ್ಲಿ ಗುರುವೂ ಮೀನಾರಾಶಿಯಲ್ಲಿರುವಾಗ ಕೃಷ್ಣವೇಣಿ ನದೀತೀರದಲ್ಲಿ ಸ್ನಾನಮಾಡಿದರೆ ಸ್ವರ್ಗ ಸಿಗುವುದು. ಗಂಗೆ ಅಥವಾ ಕಾವೇರೀತೀರದಲ್ಲಿ ವಾಸಮಾಡಿದರೆ ಎಲ್ಲಾ ಜನ್ಮದಲ್ಲಿ ಮಾಡಿದಂತಹ ಪಾಪವು ಸಂಪೂರ್ಣವಾಗಿ ನಷ್ಟವಾಗುವುದು. ತಾಮ್ರಪರ್ಣಿ, ವೇಗವತಿ ಎಂಬ ಎರಡು ನದಿಗಳು ಬ್ರಹ್ಮಲೋಕವನ್ನುಂಟುಮಾಡುತ್ತವೆ.

ಮಾಘಮಾಸದಲ್ಲಿ ರವಿಯು ಕುಂಭರಾಶಿಯಲ್ಲಿರುವಾಗ ಗಂಗಾತೀರದ ಪುಣ್ಯಕ್ಷೇತ್ರಗಳಲ್ಲಿ ಶ್ರಾದ್ಧ ಅಥವಾ ಪಿಂಡತರ್ಪಣಗಳನ್ನು ಮಾಡಿದವರ ಕೋಟಿಕುಲಗಳು ಉದ್ಧಾರವಾಗುವುದು. ವಾಚಿಕ ಅಂದರೆ, ಮಾತಿನಿಂದಾಚರಿಸಿದ ಪಾಪವು ಜಪಗಳಿಂದ; ಕಾಯಿಕ ಅಂದರೆ, ಶರೀರದಿಂದ ಆಚರಿಸಿದ ಪಾಪವು ವ್ರತೋಪವಾಸಾದಿಗಳಿಂದ ಹೋಗುವುದು. ಪುಣ್ಯಪಾಪಗಳಿಗೆ ಬೀಜಾಂಶ, ವೃದ್ಧ್ಯಂಶ, ಭೋಗಾಂಶಗಳೆಂದು ಮೂರು ಅಂಶಗಳಿರುತ್ತವೆ. ಬೀಜಾಂಶ(ಕಾರಣಾಂಶ)ವು ಜ್ಞಾನದಿಂದ, ವೃದ್ಧ್ಯಂಶವು ಧ್ಯಾನದಿಂದ, ಭೋಗಾಂಶವು ಅನುಭವದಿಂದ ನಾಶವಾಗುವುದು. ಆದುದರಿಂದ ಉತ್ತಮವಾಗಿ ಬದುಕಬೇಕೆನ್ನುವವರು ಯಾವ ಪಾಪವನ್ನು ಮಾಡದೆ, ಒಳ್ಳೆಯ ಕೆಲಸಗಳನ್ನು ಮಾಡಬೇಕು ಎಂದು ಸೂತಮುನಿ ತಿಳಿಸುತ್ತಾನೆ.

ಫ್ಯಾಕ್ಟ್ ಚೆಕ್

ಪಿವಿ

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಎಲ್ಲ ಪಕ್ಷಗಳು ಬಿರುಸಿನ ತಯಾರಿ ನಡೆಸುತ್ತಿವೆ. ಆದರೆ ಲಖನೌ ಮೆಟ್ರೊ ನಿಲ್ದಾಣದಲ್ಲಿ ಹಾಕಲಾಗಿದೆ ಎನ್ನಲಾಗಿರುವ ಬಿಎಸ್‌ಪಿ ಫಲಕದ ಚಿತ್ರ ವೈರಲ್ ಆಗಿದೆ. ರಾಜ್ಯದಲ್ಲಿ ಬಿಎಸ್‌ಪಿ ಮುಂದಿನ ಸರ್ಕಾರ ರಚಿಸಲಿದೆ ಎಂದು ಇದರಲ್ಲಿ ಹೇಳಲಾಗಿದೆ. ‘ಬಿಎಸ್‌ಪಿಯ ಆಡಳಿತದಿಂದ ಇಂದಿನಿಂದ ಮಹಿಳೆಯರು ಸುರಕ್ಷಿತವಾಗಿದ್ದಾರೆ’ ಎಂದು ಫಲಕದಲ್ಲಿ ಉಲ್ಲೇಖಿಸಲಾಗಿದೆ. ಈ ಚಿತ್ರಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಹಲವು ಜನರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವೈರಲ್ ಆಗಿರುವ ಚಿತ್ರ ತಿರುಚಿದ್ದು ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, Llllline.com ಹೆಸರಿನ ವೆಬ್‌ಸೈಟ್‌ನಲ್ಲಿ ಇದೇ ರೀತಿಯ ಚಿತ್ರ ಅಪ್‌ಲೋಡ್ ಆಗಿದೆ. ಈ ವೆಬ್‌ಸೈಟ್, ಇಂತಹ ಡಿಜಿಟಲ್ ಚಿತ್ರಗಳನ್ನು ಮಾರಾಟ ಮಾಡುತ್ತದೆ. ಪಿಕ್‌ಬೆಸ್ಟ್ ಎಂಬ ವೆಬ್‌ಸೈಟ್‌ನಲ್ಲೂ ಇದೇ ರೀತಿಯ ಚಿತ್ರವಿದೆ. ಎಡಿಟಿಂಗ್ ಸಾಫ್ಟ್‌ವೇರ್ ಬಳಸಿ ಈ ಚಿತ್ರವನ್ನು ರಚಿಸಲಾಗಿದ್ದು, ಬಿಎಸ್‌ಪಿ ಈ ಜಾಹೀರಾತು ನೀಡಿಲ್ಲ ಎಂಬುದು ಸ್ಪಷ್ಟಗೊಂಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 7, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮಕರ ಮಾಸದ 24 ನೇ ದಿನ
ತಿಥಿ: (ಮಾಘ ಶುಕ್ಲ) ಸಪ್ತಮಿ ಗಂ. 30-17 ನಕ್ಷತ್ರ: ಅಶ್ವಿನಿ ಗಂ. 18-59 ಯೋಗ: ಶುಭ ಗಂ. 16-43, ಕರಣ: ಗರಜೆ ಗಂ. 17-22. ರಾಹುಕಾಲ: ಬೆಳಿಗ್ಗೆ 07:30–09:00
ಸೂರ್ಯೋದಯ : 06-59 ಸೂರ್ಯಾಸ್ತ : 06-30 ಮುಸ್ಲಿಂ ದಿನಾಂಕ : 05 ರಜಬ್ ದಿನ ವಿಶೇಷ : ರಥಸಪ್ತಮಿ (ಪೂರ್ವರುಣೋದಯ), ವಿಧಾನ ಸಪ್ತಮಿ, ಆರೋಗ್ಯ ಸಪ್ತಮಿ
ಅದೃಷ್ಟ ಸಂಖ್ಯೆ: 7, 21

ಮೇಷ: ಈ ದಿನದ ಕಾರ್ಯಕ್ಕೆ ನಿಮ್ಮ ಪ್ರಯತ್ನಬಲವೆಷ್ಟಿದ್ದರೂ, ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯ. ಹೋಟೆಲ್ ಉದ್ದಿಮೆಯವರಿಗೆ ಕ್ಲೇಶ ಕಂಡುಬರಲಿದೆ. ಧಾನ್ಯ ಮಾರಾಟಗಾರರಿಗೆ ಉತ್ತಮ ಲಾಭ.

ವೃಷಭ: ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರಗಳು ದೊರೆಯಲಿದೆ. ರಾಜಕೀಯದಲ್ಲಿ ವಿಶೇಷ ಪ್ರಭಾವ ಗಳಿಸಿಕೊಳ್ಳುವಿರಿ. ಕಲಾವಿದರಿಗೆ ಸಂತಸದ ದಿನ. ಅನಾವಶ್ಯಕ ಮಾತುಗಳಿಂದ ದೂರವಿರಿ.

ಮಿಥುನ: ವಿದ್ಯುನ್ಮಾನ ಕ್ಷೇತ್ರದ ಸಿಬ್ಬಂದಿಗಳಿಗೆ ಹೆಚ್ಚಿನ ವೇತನ ಸಿಗಲಿದೆ. ನಿಮ್ಮ ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ನಿಮ್ಮ ಮೇಲಿನ ವಿಶ್ವಾಸ ಹೆಚ್ಚಲಿದೆ. ಆಟಿಕೆ ವಸ್ತುಗಳನ್ನು ಮಾರಾಟ ಮಾಡುವವರಿಗೆ ಶುಭದಿನ.

ಕರ್ಕಾಟಕ: ಹಳೆಯ ಯೋಜನೆಗಳಿಗೆ ಮರು ಜೀವ ಕೊಡಲು ನಿಶ್ಚಯಿಸುವಿರಿ. ಆದರೆ ಮನೆಯವರಿಂದ ವಿರೋಧಾಭಾವ ವ್ಯಕ್ತವಾಗಬಹುದು. ಕಾಗದದ ಉದ್ಯಮದವರಿಗೆ ಅಧಿಕ ಲಾಭ. ವರ್ತಕ ವರ್ಗಕ್ಕೆ ಸ್ವಲ್ಪ ಬಿಡುವು ಸಿಕ್ಕೀತು.

ಸಿಂಹ: ಮುಕ್ತಾಯ ಹಂತದ ಯೋಜನೆಗಳು ನಿಮ್ಮ ಗಡಿಬಿಡಿಯಿಂದಾಗಿ ವ್ಯತ್ಯಾಸವಾಗಬಹುದು. ಇಂತಹ ತಪ್ಪುಗಳಿಗೆ ನೇರ ಹೊಣೆಗಾರಿಕೆ ನಿಮ್ಮದಾಗಿರುತ್ತದೆ. ಹಲವು ದಿನಗಳಿಂದ ಇರುವ ಋಣಭಾದೆಗೆ ಅಂತ್ಯ ಕಾಣಿಸುವ ಕಾಲ.

ಕನ್ಯಾ: ವೃತ್ತಿಯಲ್ಲಿ ಸುಸಂದರ್ಭಗಳು ಎದುರಾಗಬಹುದು. ನಿಮ್ಮೊಳಗಿನ ಧನಾತ್ಮಕ ಮನೋಭಾವ ನಿಮ್ಮ ವ್ಯವಹಾರವನ್ನು ಹಾಳುಮಾಡಲಿದೆ. ಜೀವನದಲ್ಲಿ ಹಣಕ್ಕಿಂತ ಸ್ನೇಹ ಸಂಬಂಧಗಳು ಮುಖ್ಯ ಎಂದು ತಿಳಿವುದು.

ತುಲಾ: ಜೀವನದಲ್ಲಿ ಶುಭ ದಿನಗಳು ಪ್ರಾರಂಭವಾಗುವ ಲಕ್ಷಣ. ಸಂಸಾರದಲ್ಲಿ ಹೆಚ್ಚಿನ ನೆಮ್ಮದಿ ತೋರಿ ಬಂದು ಒಳ್ಳೆಯ ವಾತಾವರಣ ನಿಮ್ಮನ್ನು ಶಾಂತಚಿತ್ತರನ್ನಾಗಿಸುತ್ತದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಮುನ್ನಡೆ.

ವೃಶ್ಚಿಕ: ನಿಮ್ಮ ವೃತ್ತಿರಂಗದಲ್ಲಿ ವಿಚಾರಗಳನ್ನು ಅವಲೋಕಿಸಿ ಮುಂದಿನ ಹೆಜ್ಜೆ ಇಡುವಿರಿ. ರಾಜಕೀಯ ವ್ಯಕ್ತಿಗಳಿಗೆ ಬಿಡುವಿಲ್ಲದ ಓಡಾಟ. ಆರ್ಥಿಕ ವಿಚಾರದಲ್ಲಿ ಧನಾಗಮನದಿಂದ ಕಾರ್ಯಾನುಕೂಲಕ್ಕೆ ಹೆಚ್ಚಿನ ಬಲ ಸಿಗುವುದು.

ಧನು: ಬದುಕನ್ನು ಅರ್ಥಪೂರ್ಣವಾಗಿ ನಡೆಸುವ ಬಗ್ಗೆ ನಿಮ್ಮ ಯೋಚನೆಗಳಿರಲಿ. ವಿವಾಹ ಭಾಗ್ಯ ಒದಗಿ ಬರಲಿದೆ. ವಾಹನದ ಖರೀದಿಯ ಯೋಗವಿದ್ದು ನಿಮ್ಮಾಸೆಯಂತೆಯೇ ದೊಡ್ಡ ವಾಹನವನ್ನು ಕೊಳ್ಳಬಹುದು.

ಮಕರ: ಕೌಟುಂಬಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವಿರಿ. ಕೆಲಸದಲ್ಲಿನ ಅಡೆತಡೆಗಳ ನಿವಾರಣೆಯಾಗಿ ಹೆಚ್ಚಿನ ಸಮಯ ಉಳಿತಾಯವಾಗಲಿದೆ. ಸ್ನೇಹಿತರ ಮನೆಯ ಔತಣಕ್ಕೆ ಭೇಟಿ.

ಕುಂಭ: ಮೇಲಧಿಕಾರಿಗಳಿಗೆ ಜವಾಬ್ದಾರಿಯುತ ನಡೆಯಿಂದಾಗಿ ನಿಮ್ಮ ಮೇಲಿನ ನಂಬಿಕೆ ಹೆಚ್ಚಾಗಲಿದೆ. ಪ್ರವಾಸಿಗರಿಂದ ಹೆಚ್ಚಿನ ಸಂಪಾದನೆ. ಸಂಸಾರದಲ್ಲಿ ಕೆಲವೊಂದು ಬದಲಾವಣೆಗಳನ್ನು ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯತೆ.

ಮೀನ: ಉತ್ತಮ ಸಂಸ್ಕೃತಿಯನ್ನು ಪಡೆದಿರುವ ನಿಮಗೆ ಕೆಲಸ ಕಾರ್ಯಗಳಲ್ಲಿ ಜಯ ಸಿಗುವುದು. ರಾಜಕಾರಣಿಗಳಿಗೆ ಈ ದಿನ ತಮ್ಮ ಪಕ್ಷದ ಬಗೆಗಿನ ಪ್ರಚಾರಕ್ಕಾಗಿ ಉತ್ತಮ ಭಾಷಣ ನಡೆಸಿ ಜನರ ಮನಗೆಲ್ಲುವ ಒಂದು ಸದವಕಾಶ.

ಬೆರಗಿನ ಬೆಳಕು

ಗುರುರಾಜ ಕರಜಗಿ

ತೆರೆಯಬೇಕಾದ ಕಿಟಕಿ

ಅಂತರಂಗದ ಗವಾಕ್ಷಗಳ ತೆರೆದಿಡಲಲ್ಲಿ |
ಚಿಂತೆ ಕುಮುಲದು, ಹೊಗೆಗಳೊತ್ತವಾತ್ಮವನು ||
ಶಾಂತಿ ಬೇಳ್ಪೊಡೆ ಮನೆಗೆ ಗೋಡೆವೊಲೆ ಕಿಟಕಿಯುಂ|
ಸಂತತದಪೇಕ್ಷಿತವೊ – ಮಂಕುತಿಮ್ಮ || 557 ||

ಪದ-ಅರ್ಥ: ಗವಾಕ್ಷ = ಕಿಟಕಿ, ತೆರೆದಿಡಲಲ್ಲಿ- = ತೆರೆದಿಡಲು + ಅಲ್ಲಿ, ಕುಮುಲದು = ಹೊಗೆ ತುಂಬಿಕೊಳ್ಳದು, ಹೊಗೆಗಳೊತ್ತವಾತ್ಮವನು = -ಹೊಗೆಗಳು + ಒತ್ತವು + ಆತ್ಮವನು, ಬೇಳ್ಪೊಡೆ- = ಬೇಕಾದರೆ, ಗೋಡೆವೊಲೆ = ಗೋಡೆಯಂತೆ, ಸಂತತದಪೇಕ್ಷಿತವೊ = ಸಂತತದ(ನಿರಂತರವಾದ) + ಅಪೇಕ್ಷಿತವೊ.

ವಾಚ್ಯಾರ್ಥ: ನಮ್ಮ ಅಂತರಂಗದ ಕಿಟಕಿಗಳನ್ನು ತೆರೆದಿಟ್ಟಾಗ ಚಿಂತೆಗಳ ಹೊಗೆಸುತ್ತು ಕವಿಯದು, ಚಿಂತೆಯ ಹೊಗೆಗಳು ಆತ್ಮವನ್ನು ಗಾಸಿ ಮಾಡುವುದಿಲ್ಲ, ಶಾಂತಿ ಬೇಕಾದರೆ, ಮನೆಗೆ ಗೋಡೆಗಳು ಹೇಗೋ, ಕಿಟಕಿಗಳೂ ಬೇಕು. ನಿರಂತರವಾದ ಅಪೇಕ್ಷೆ ಸಫಲವಾಗಲು ಆ ಕಿಟಕಿಗಳು ಬೇಕು.

ವಿವರಣೆ: ವಿಜಯದಾಸರ ಒಂದು ಅದ್ಭುತ ರಚನೆ ಹೀಗಿದೆ.

ಅಂತರಂಗದ ಕದವು ತೆರೆಯಿತಿಂದು |
ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ ||
ಏಸುದಿನವಾಯಿತೊ ಬೀಗಮುದ್ರೆಯ ಮಾಡಿ |
ವಾಸವಾಗಿದ್ದರೊ ದುರುಳರಿಲ್ಲಿ ||
ಮೋಸವಾಯಿತು ಇಂದಿನ ತನಕ ತಮಸಿನ |
ರಾಶಿಯೊಳಗೆ ಹೊಳಿ ಕಾಣಿಸುತ್ತಿರಲಿಲ್ಲ || ....

ವಿಜಯದಾಸರು ಮನೆಯ ಬಾಗಿಲಿನ ಬಗ್ಗೆ ಮಾತನಾಡುತ್ತಿಲ್ಲ, ತಮ್ಮ ಅಂತರಂಗದ ಬಾಗಿಲು ತೆರೆದದ್ದರ ಬಗ್ಗೆ ಬೆರಗಾಗಿ ಹೇಳುತ್ತಾರೆ. ಅದು ಪುಣ್ಯದ ಫಲದಿಂದಲೇ ತೆರೆದ ಬಾಗಿಲು. ಮುಂದಿನ ನಾಲ್ಕು ಸಾಲು ಏನನ್ನೋ ಧ್ವನಿಸುತ್ತವೆ. ಮನೆಯ ಬಾಗಿಲಿಗೆ ಬೀಗವನ್ನು ಜಡಿದು ಅದೆಷ್ಟು ಕಾಲವಾಯಿತೋ? ಯಾರೂ ಅದನ್ನು ಗಮನಿಸಿಯೇ ಇಲ್ಲ. ಹಾಗೆ ಯಾರೂ ಗಮನಿಸದೆ ಇದ್ದಾಗ ಇನ್ನೇನಾಗುತ್ತದೆ? ದುರುಳರು ಬಂದು ಒಳಗೆ ನಿರಾಳವಾಗಿ ಸೇರಿಕೊಂಡಿದ್ದಾರೆ. ಇಂದಿನ ತನಕ, ಎಂದರೆ ಬಾಗಿಲು ತೆರೆಯುವ ತನಕ ತಮಸಿನ, ಅಂಧಕಾರದ, ಅಜ್ಞಾನದ ರಾಶಿಯೊಳಗೆ ಬೆಳಕೇ ಕಾಣುತ್ತಿರಲಿಲ್ಲ. ಬಾಗಿಲು ತೆರೆದು ಪರಮಾತ್ಮ ತತ್ವದ ಹೊಸಗಾಳಿ ನುಗ್ಗಿದಾಗ ದುರುಳರೆಲ್ಲ ಪಲಾಯನಮಾಡಿದರು. ಇದೊಂದು ಸಂಕೇತದ ಮಾತು.

ಭೌತಿಕದ ಮನೆಯನ್ನೇ ಬಾಗಿಲು ಹಾಕಿ ಕೆಲವರ್ಷವಿದ್ದರೆ ಹಾಳು ಬಿದ್ದು ಹೋಗುತ್ತದೆ. ಹಾಗಿದ್ದಾಗ ಅಂತರಂಗದ ಬಾಗಿಲನ್ನು ಮುಚ್ಚಿ ಕುಳಿತರೆ ಹೊಸ ಯೋಚನೆಗಳು ಬರದೆ ಹಳೆಯ ಚಿಂತೆಗಳು ತುಂಬಿಕೊಂಡು, ಕಮಟು ವಾಸನೆಯನ್ನು ಹುಟ್ಟಿಸುತ್ತವೆ. ಅವು ಹೊಗೆಗಳಂತೆ ತುಂಬಿಕೊಂಡು ಆತ್ಮಪ್ರಜ್ಞೆಯನ್ನು ಮುಸುಕು ಮಾಡುತ್ತವೆ. ನಮಗೆ ಅಂತರಂಗದ ಸ್ವಚ್ಛತೆ ಮತ್ತು ಶಾಂತಿ ಬೇಕಾದರೆ ಮನಸ್ಸಿನ ಕಿಟಕಿಗಳನ್ನು ತೆರೆದಿಟ್ಟು ಹೊಸ ಚಿಂತನೆಯ ಗಾಳಿ ಒಳಗೆ ಬರುವಂತೆ ಮಾಡಬೇಕು.

ವಸಂತಮಾಸ ಬಂದಾಗ ಪ್ರಕೃತಿ ಹೊಸತನದಿಂದ ನಲಿಯುತ್ತದೆ. ಭರದಿಂದ ಬೀಸುವ ಗಾಳಿ ಪ್ರಕೃತಿಯ ಮೇಲಿನ ಧೂಳನ್ನು ಓಡಿಸುತ್ತದೆ. ಭೂಮಿ ಹೊಸತನವನ್ನು ಪಡೆಯುತ್ತದೆ. ಪ್ರಕೃತಿಯ ಈ ಚೈತ್ರಜೀವನ ಮನುಷ್ಯನಿಗೊಂದು ಅಪೂರ್ವವಾದ ಪಾಠವನ್ನು ಹೇಳುತ್ತದೆ. ಪ್ರಕೃತಿಯಂತೆ ಮನುಷ್ಯನೂ ತನ್ನ ಮನಸ್ಸಿನ ಕಿಟಕಿಯನ್ನು ನಿತ್ಯವೂ ತೆರೆದಿಟ್ಟು ನಾವೀನ್ಯತೆಯನ್ನು ಪಡೆಯುವುದು ನಿರಂತರದ ಅಪೇಕ್ಷೆ.

ಪದಬಂಧ 4862

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಅದೇ ತಾನೆ ಹುಟ್ಟಿದುದು (4)
5.ಮಣಿ ಧರಿಸಿರುವ ಸುಂದರಿ! (3)
6.ಲೋಪದೋಷಗಳನ್ನು ಸರಿಪಡಿಸುವವನು (4)
8.ಸಮದಲ್ಲಿಯೇ ಸೇರುವಿಕೆ! (4)
12.ಓಟನ್ನು ನೀಡುವಿಕೆ (4)
14.ಯುದ್ಧಕ್ಕೆ ಅಂಜುವವನು (4)
15.ಧಾನ್ಯ ಸಂಗ್ರಹಿಸುವ ಸ್ಥಳ (3)
16.ತಳವಾರನಿಗುಂಟಾದ ಕಳವಳ! (4)

ಮೇಲಿಂದ ಕೆಳಕ್ಕೆ
1.ಶ್ರೇಷ್ಠವರ್ಗದ ಸನ್ಯಾಸಿ (5)
2.ಅಂತಃಪುರವನ್ನು ಹೀಗೂ ಹೇಳುವರು (4)
3.ಅದೇ ತಾನೆ ಅರಳಿದ ಹೂ (4)
4.ಅತಿಯಾದ ಕಾತರ (3)
7.ಒಂದು ಪ್ರದೇಶದಿಂದ ಹೊರಗೆ ಕಳಿಸುವ ವಸ್ತು (2)
9.ಗಣಿಯ ಧಣಿ ಹೇಳಿಕೊಟ್ಟಿರುವ ಲೆಕ್ಕ ಶಾಸ್ತ್ರ (3)
10.ಏನೇನೂ ಪ್ರಯೋಜನಕ್ಕೆ ಬಾರದವನೀತ! (5)
11.ಕರಣದಲ್ಲಿರುವ ಅತ್ಯಂತ ಚಿಕ್ಕ ಚೂರು (2)
12.ಬಟ್ಟೆಗಳನ್ನು ಮಡಿ ಮಾಡುವ ಅಗಸ (4)
13.ಹೊಸ ಶೈಲಿಯ ಕವಿ (4)
14.ತವರಲ್ಲಿರುವ ಲೋಹ ಉಲ್ಟಾ ಆಗಿದೆಯಲ್ಲಾ (3)



4861ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಾಟಿಮದ್ದು 3.ಹಯಗ್ರೀವ 5.ಡಿರಜ 7.ಪಡಪೋಸಿ 9.ಮೂಗ 10.ಡಿಕ್ರಿ 11.ತಲೋದರಿ 13.ಗಡಿಗೆ 16.ತರಾತುರಿ 17.ಅಪಖ್ಯಾತಿ

ಮೇಲಿಂದ ಕೆಳಕ್ಕೆ:
1.ನಾಡಾಡಿ 2.ಮನುಜ 3.ಹಳವಂಡ 4.ವಪೆ 6.ರಕ್ತಗತ 7. ಪರಾರಿ 8.ಸಿಡಿಮಿಡಿ 12.ದಸ್ತಗಿರಿ 13.ಗಣಪ 14.ಗೆಳತಿ 15.ಜ್ಞಾತ

ಸುಡೊಕು 5248

9		3		6				2
							5	
	1	2		5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5247 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

362 ಅಭ್ಯರ್ಥಿಗಳ ಆಯ್ಕೆ • 'ಒತ್ತಡ'ಕ್ಕೆ ಮಣಿದು ಕೋರ್ಟ್ ತೀರ್ಪು ಬದಿಗಿಟ್ಟ ಸರ್ಕಾರ

ಕೆಪಿಎಸ್‌ಸಿ: ಅಕ್ರಮ 'ಸಕ್ರಮ'ಕ್ಕೆ ಮಸೂದೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಹೈಕೋರ್ಟ್ ರದ್ದುಪಡಿಸಿದ್ದ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಿ, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ನಿರ್ಧರಿಸಿದೆ. ಈ ಉದ್ದೇಶದಿಂದ ರಾಜ್ಯ ಸರ್ಕಾರ, 'ಕರ್ನಾಟಕ ನಾಗರಿಕ ಸೇವೆಗಳು (ಆಯ್ಕೆಯ ಊರ್ಜಿತಗೊಳಿಸುವಿಕೆ ಮತ್ತು 2011ರ ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿ) ಮಸೂದೆ-2022' ಸಿದ್ಧಪಡಿಸಿದೆ.

ಆ ಮೂಲಕ, ಅಕ್ರಮವಾಗಿ ನೇಮಕಗೊಂಡವರೆಂದು ಸಿಐಡಿ ತನಿಖೆಯಲ್ಲಿ ಗುರುತಿಸಿಕೊಂಡವರಿಗೂ ಹುದ್ದೆ ನೀಡಿ, ಇಡೀ ಪಟ್ಟಿಯನ್ನು 'ಸಕ್ರಮ'ಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಅಕ್ರಮ ಸಾಬೀತಾಗಿದೆ ಎಂಬ ಕಾರಣಕ್ಕೆ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿ 2018ರ ಮಾರ್ಚ್ 9 ರಂದು ಹೈಕೋರ್ಟ್ ನೀಡಿದ್ದ ತೀರ್ಪನ್ನೇ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಅಲ್ಲದೆ, ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗಳನ್ನೂ ವಜಾಗೊಳಿಸಿತ್ತು.

'ಸರ್ಕಾರವು ಕೋರ್ಟ್ ತೀರ್ಪು ಪಾಲಿಸಿತ್ತು'

ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ವಿಧಾನ ಪರಿಷತ್‌ನಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗೆ ಲಿಖಿತ ಉತ್ತರ ನೀಡಿದ್ದ ಮುಖ್ಯಮಂತ್ರಿ, 'ಕೆಪಿಎಸ್‌ಸಿ ವಾರ್ಷಿಕ ವರದಿ ಮಂಡಿಸುವ ವೇಳೆ ಸರ್ಕಾರವು 2011ನೇ ಸಾಲಿನ ನೇಮಕಾತಿ ಅಧಿಸೂಚನೆ ಹಿಂತೆಗೆದುಕೊಂಡಿದ್ದ ಆದೇಶವು ಕಾನೂನಾತ್ಮಕವಾಗಿ ಸಿಂಧು ಆಗಿರಲಿಲ್ಲ. ಹೀಗಾಗಿ ಆಯೋಗದ ಪ್ರಸ್ತಾವನೆಯನ್ನು ಒಪ್ಪದಿರುವ ಕಾರಣಗಳೊಂದಿಗೆ ವಿವರಣಾ ಪತ್ರ ಸಲ್ಲಿಸುವ ಸನ್ನಿವೇಶ ಉದ್ಭವಿಸುವುದಿಲ್ಲ. ಕೆಪಿಎಸ್‌ಸಿಯ ಆಯ್ಕೆ ಪಟ್ಟಿಯನ್ನು ಸರ್ಕಾರವು ಸ್ವಯಂ ತಿರಸ್ಕರಿಸಿಲ್ಲ. ಹೀಗಾಗಿ, ಇದು ಅನುಚ್ಛೇದ 323 (2) ಅಡಿ ಒಳಪಡುವುದಿಲ್ಲ ಮತ್ತು ಅನುಚ್ಛೇದ ಉಲ್ಲಂಘನೆ ಆಗಿಲ್ಲ. ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಕೆಪಿಎಸ್‌ಸಿಯ ಆಯ್ಕೆ ಪಟ್ಟಿಯನ್ನು ತಿರಸ್ಕರಿಸಲಾಗಿದೆ. ಹೈಕೋರ್ಟ್ ತೀರ್ಪು ಅನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದೆ. ಸರ್ಕಾರವು ಕೋರ್ಟ್ ತೀರ್ಪುಗಳನ್ನು ಪಾಲಿಸಿದೆ' ಎಂದು ತಿಳಿಸಿದ್ದರು.

ಆಯ್ಕೆ ಪಟ್ಟಿ ರದ್ದುಗೊಂಡಿದ್ದರಿಂದ ಆಗ ಆಯ್ಕೆಯಾಗಿದ್ದವರಿಗೆ ಅನ್ಯಾಯವಾಗಿದ್ದು, ನ್ಯಾಯ ಒದಗಿಸಬೇಕೆಂಬ ಬೇಡಿಕೆ ವಿಧಾನಮಂಡಲದ ಒಳಗೆ, ಹೊರಗೆ ವ್ಯಕ್ತವಾಗಿತ್ತು. ವಿವಿಧ ಸಮುದಾಯಗಳ ಸ್ವಾಮೀಜಿಗಳು, ದೇವೇಗೌಡರು, ಸಿದ್ದರಾಮಯ್ಯ ಸೇರಿ ಪಕ್ಷಾತೀತವಾಗಿ ನಾಯಕರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು.

ಇದೀಗ, ಕಾನೂನು ಮತ್ತು ಸಂಸದೀಯ ಇಲಾಖೆ ಸಿದ್ಧಪಡಿಸಿರುವ ಮಸೂದೆಗೆ ಇದೇ 9ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅಂಗೀಕಾರ ಸಿಗುವ ಸಾಧ್ಯತೆ ಇದೆ. ಇದೇ 14 ರಿಂದ ನಡೆಯಲಿರುವ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲು ಸರ್ಕಾರ ಮುಂದಾಗಿದೆ.

ಶಾಸಕರ ಹಕ್ಕುಚ್ಯುತಿ ಪ್ರಸ್ತಾವ: ಈ ಮಧ್ಯೆ, 'ಈ ಸಾಲಿನ ನೇಮಕಾತಿ ಅಧಿಸೂಚನೆಯನ್ನು ಈ ಹಿಂದೆ ಸರ್ಕಾರ ವಾಪಸು ಪಡೆದಿದ್ದ ಪ್ರಕರಣದಲ್ಲಿ ಸಂವಿಧಾನದ ಅನುಚ್ಛೇದ 323 (2) ಉಲ್ಲಂಘನೆಯಾಗಿದ್ದು, ಹಕ್ಕುಬಾಧ್ಯತೆ ಪ್ರಶ್ನೆಗಳು ಉದ್ಭವಿಸಿವೆ. ಶಾಸಕರ ಹಕ್ಕುಚ್ಯುತಿ ಉಂಟಾಗಿದೆ' ಎಂದು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಸೇರಿ ಒಂಬತ್ತು ಸದಸ್ಯರು ವಿಧಾನ ಪರಿಷತ್ ಕಾರ್ಯದರ್ಶಿಗೆ ಸೂಚನಾ ಪತ್ರ ನೀಡಲು ಮುಂದಾಗಿದ್ದಾರೆ.

ಸೂಚನಾಪತ್ರದ ಪ್ರತಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಸದಸ್ಯರಾದ ನಜೀರ್ ಅಹ್ಮದ್, ಎಸ್. ರವಿ, ಯು.ಬಿ. ವೆಂಕಟೇಶ್, ಮೋಹನ್ ಕುಮಾರ್ ಕೊಂಡಜ್ಜಿ, ಸಲೀಂ ಅಹ್ಮದ್, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಭೋಜೇಗೌಡ ಸಹಿ ಹಾಕಿದ್ದಾರೆ.

'ಸಂವಿಧಾನದ ಅನುಚ್ಛೇದ 323 (2) ಅನ್ನು ಪಾಲಿಸಲಾಗಿದೆ ಎಂದು ಅಡ್ವೊಕೇಟ್ ಜನರಲ್ ನೀಡಿದ್ದ ತಪ್ಪು ಹೇಳಿಕೆ ಆಧರಿಸಿ, ಈ ಸಾಲಿನ ಆಯ್ಕೆ ರದ್ದುಪಡಿಸಿ ಹೈಕೋರ್ಟ್ ತೀರ್ಪು ನೀಡಿತ್ತು. ಇಲ್ಲಿ ಶಾಸಕಾಂಗದ ಸದಸ್ಯರ ಹಕ್ಕುಚ್ಯುತಿ ಆಗಿದೆ. ಅಲ್ಲದೆ, ಸಂವಿಧಾನಾತ್ಮಕ ಮತ್ತು ಶಾಸಕಾಂಗದ ನಿಂದನೆಯೂ ಆಗಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಸರ್ಕಾರವು ಸಂವಿಧಾನದ ಅನುಚ್ಛೇದ 323 (2)ರಂತೆ ಭಾಗಶಃ ಅಂದರೆ, ಕೇವಲ 2014–15ನೇ ಸಾಲಿನ ಕೆಪಿಎಸ್‌ಸಿಯ ವಾರ್ಷಿಕ ವರದಿಯನ್ನು ಮಾತ್ರ ವಿಧಾನಸಭೆಯಲ್ಲಿ ಮಂಡಿಸಿದೆ. ವರದಿಯ ಭಾಗವಾದ ಟಿಪ್ಪಣಿಯಲ್ಲಿ ಪ್ರಕರಣವು ಕೆಎಟಿ ವಿಚಾರಣೆಯಲ್ಲಿದೆ ಎಂದು ಮಾತ್ರ ವಿವರಿಸಲಾಗಿದೆ. ಈ ಅನುಚ್ಛೇದದ ಪ್ರಕಾರ, ಕೆಪಿಎಸ್‌ಸಿಯ ಸಲಹೆಯನ್ನು (ಆಯ್ಕೆ ಪಟ್ಟಿ) ಸರ್ಕಾರ ಒಪ್ಪದೇ ಇದ್ದರೆ ಅದಕ್ಕೆ ಕಾರಣವೇನೆಂದು ವಿವರಿಸುವ ವಿವರಣಾ ಪತ್ರದೊಂದಿಗೆ ಎರಡೂ ಸದನಗಳಲ್ಲಿ ವಾರ್ಷಿಕ ವರದಿ ಮಂಡಿಸಬೇಕಿತ್ತು. ಈ ಅನುಚ್ಛೇದದ ಮಹತ್ವವನ್ನು ಹಲವು ನ್ಯಾಯಾಲಯಗಳು ಒತ್ತಿ ಹೇಳಿವೆ. ಆದರೆ, ವಿಧಾನಸಭೆಯಲ್ಲಿ 2017ರಲ್ಲಿ ಮಂಡಿಸಿದ್ದ ವರದಿಯನ್ನು 2019ರಲ್ಲಿ ವಿಧಾನಪರಿಷತ್‌ನಲ್ಲಿ ಕಾಟಾಚಾರಕ್ಕೆ ಎಂಬಂತೆ ಮಂಡಿಸಲಾಗಿದೆ. ಇದರಿಂದ ಶಾಸಕ ಹಕ್ಕುಚ್ಯುತಿ ಆಗಿದೆ' ಎಂದು ಸೂಚನಾ ಪತ್ರದಲ್ಲಿ ವಾದಿಸಲಾಗಿದೆ.

'ಅನುಚ್ಛೇದನ ಉಲ್ಲಂಘನೆಯ ಬಗ್ಗೆ ಎರಡೂ ಸದನಗಳ ಶಾಸಕರು ಈ ಹಿಂದೆ ಬರೆದಿದ್ದ ಪತ್ರವನ್ನು ಪರಿಗಣಿಸಿದ್ದ ರಾಜ್ಯಪಾಲರು, ಈ ವಿಷಯದಲ್ಲಿ ಗಮನಹರಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಆದರೆ, ನಾವು ಅನೇಕ ಬಾರಿ ಮನವಿ ಸಲ್ಲಿಸಿದರೂ ಮುಖ್ಯ ಕಾರ್ಯದರ್ಶಿ ಸ್ಪಂದಿಸಿಲ್ಲ. ಆಯ್ಕೆ ಪಟ್ಟಿ ರದ್ದುಪಡಿಸಿ, ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸುವ ಮೊದಲು ಅನುಚ್ಛೇದ 323 (2) ಪಾಲನೆ ಕಡ್ಡಾಯ ಅಲ್ಲವೇ? ತಪ್ಪು ಮಾಹಿತಿ ಪಡೆದ ಹೈಕೋರ್ಟ್ ತೀರ್ಪು ಅನ್ನು ಸರ್ಕಾರ ಜಾರಿ ಮಾಡಬಹುದೇ? ಹೀಗೆ ಹಲವು ಪ್ರಶ್ನೆಗಳನ್ನು ಸೂಚನಾ ಪತ್ರದಲ್ಲಿ ಕೇಳಲಾಗಿದೆ.

ಸುದ್ದಿ 2 ನಿಮಿಷ

ಸಮವಸ್ತ್ರ: ಆದೇಶ ಪಾಲಿಸದಿದ್ದರೆ ಕ್ರಮ –ಸಚಿವ ಬಿ.ಸಿ.ನಾಗೇಶ್

ಮೈಸೂರು: 'ಸಮವಸ್ತ್ರ ಕಡ್ಡಾಯ ಆದೇಶವನ್ನು ಎಲ್ಲಾ ಶಾಲಾ-ಕಾಲೇಜುಗಳು ಪಾಲಿಸಬೇಕು. ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರಿಗೆ ಯಾವುದೇ ಕಾರಣಕ್ಕೂ ಪ್ರವೇಶ ಇಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಪುನರುಚ್ಚರಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಮವಸ್ತ್ರ ಕುರಿತು ಸರ್ಕಾರದ ಆದೇಶ ಸ್ಪಷ್ಟವಾಗಿದೆ. ಪಾಲನೆ ಮಾಡದಿದ್ದರೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. ವಿದ್ಯಾರ್ಥಿನಿಯರು ಓದಿನ ಕಡೆಗೆ ಗಮನಹರಿಸಬೇಕು' ಎಂದರು.



'ಯಾವುದೇ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ದುರುದ್ದೇಶ ಸರ್ಕಾರಕ್ಕೆ ಇಲ್ಲ. 1983ರ ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಈ ಆದೇಶ ಹೊರಡಿಸಲಾಗಿದೆ. ಈ ಕಾಯ್ದೆಯನ್ನು ಬಿಜೆಪಿ ಸರ್ಕಾರ ಮಾಡಿದ್ದಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗಿನಿಂದಲೂ ಇದೆ' ಎಂದು ಸ್ಪಷ್ಟಪಡಿಸಿದರು.

'ಇಷ್ಟು ದಿನ ಈ ಸಮಸ್ಯೆ ಇರಲಿಲ್ಲ. ಕೆಲವರು ಮಕ್ಕಳನ್ನು ಪ್ರಚೋದಿಸಿದರು. ಧರ್ಮಪಾಲನೆ ಹೆಸರಿನಲ್ಲಿ ವಿಷಬೀಜ ಬಿತ್ತಿದರು. ಉಡುಪಿಯ ಶಾಲೆಯಲ್ಲಿ ಕಲಿಯತ್ತಿರುವ 92 ಮುಸ್ಲಿಂ ಮಕ್ಕಳಲ್ಲಿ 6 ಮಂದಿ ಮಾತ್ರ ಹಿಜಾಬ್‌ಗೆ ಹಟ ಹಿಡಿದರು. ಇದರಿಂದ ಗೊಂದಲ ಸೃಷ್ಟಿಯಾಯಿತು' ಎಂದು ಸಚಿವರು ಹೇಳಿದರು.

'ಸಮವಸ್ತ್ರ ನಿಯಮ: ಎಂದಿನಂತೆ ಇರಲಿ'

ಕೆ.ಆರ್.ನಗರ: 'ಹೆಣ್ಣು ಸುಂದರಿ ಮತ್ತು ಪ್ರಕೃತಿ. ಪುರುಷರು ಪ್ರಕೃತಿಯನ್ನು ಆಸ್ವಾದಿಸುವಾಗ ಅನಾಹುತವಾದೀತು ಎಂದು ಮಹಿಳೆ ಬುರ್ಕಾ ತೊಡುತ್ತಾಳೆ ಹೊರತು ಇದಕ್ಕೆ ಬೇರೆ ಅರ್ಥ ಕಲ್ಪಿಸಿಕೊಳ್ಳಬೇಕಾಗಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

'ಶಾಲಾ ಸಮವಸ್ತ್ರ ವಿಷಯದಲ್ಲಿ ಈ ಹಿಂದೆ ಹೇಗೆ ನಡೆದುಕೊಂಡು ಬಂದಿದೆಯೋ ಹಾಗೇ ಮುಂದುವರಿಯಲಿ. ಇದರಲ್ಲಿ ಬದಲಾವಣೆ ಅಗತ್ಯವಿಲ್ಲ. ಗುಣಮಟ್ಟದ ಶಿಕ್ಷಣ ನೀಡುವ ಬಗ್ಗೆ ಗಮನ ಹರಿಸಬೇಕೇ ಹೊರತು, ಹಿಜಾಬ್, ಬುರ್ಕಾ, ಕೇಸರಿ ಶಾಲಿನ ಬಗ್ಗೆ ಅಲ್ಲ' ಎಂದು ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಸಲಹೆ ನೀಡಿದರು.

'ದೇಶ ಬಿಟ್ಟು ಹೋಗಿ ಎಂದು ಸಂಸದ ಪ್ರತಾಪಸಿಂಹ ಹೇಳಿಕೆ ನೀಡಿದ್ದಾರೆ. ಯಾರೀ ಇದು, ಎಲ್ಲಿದ್ದೀರಾ ನೀವೆಲ್ಲಾ? ಸಂಸದರಾಗಿರುವುದು ಇದಕ್ಕೇನಾ' ಎಂದು ಪ್ರಶ್ನಿಸಿದರು.

ದೆಹಲಿಗೆ ಸಿಎಂ ಇಂದು

ಬೆಂಗಳೂರು: 'ಸೋಮವಾರ (ಫೆ.7) ಬೆಳಿಗ್ಗೆ ದೆಹಲಿಗೆ ಹೋಗುತ್ತಿದ್ದೇನೆ. ಮುಂದಿನ ತಿಂಗಳು ರಾಜ್ಯದ ಬಜೆಟ್ ಇರುವುದರಿಂದ ಹಲವು ಯೋಜನೆಗಳಿಗೆ ಸಂಬಂಧಿಸಿ ರಾಜ್ಯದ ಎಲ್ಲ ಸಂಸದರನ್ನು ಭೇಟಿ ಮಾಡುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಪಕ್ಷದ ವರಿಷ್ಠರ ಭೇಟಿಗೂ ಸಮಯ ಕೇಳಿದ್ದೇನೆ. ಆದರೆ, ಅವರೆಲ್ಲರೂ ಉತ್ತರಪ್ರದೇಶ ಚುನಾವಣೆ ಮತ್ತು ಸಂಸತ್ ಅಧಿವೇಶನದಲ್ಲಿ ನಿರತರಾಗಿದ್ದಾರೆ. ಪ್ರಧಾನಿ ಭೇಟಿಗೆ ಸಮಯ ಕೇಳಿಲ್ಲ' ಎಂದರು.

ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ನಡೆಸುತ್ತೀರಾ ಎಂಬ ಪ್ರಶ್ನೆಗೆ, 'ಭೇಟಿಗೆ ಸಮಯ ಸಿಕ್ಕಿದರೆ, ಆ ಸಮಯ, ಸಂದರ್ಭಯಾವರೀತಿ ಇರುತ್ತದೆ ಎಂದು ಊಹಿಸಲು ಆಗಲ್ಲ' ಎಂದಷ್ಟೆ ಹೇಳಿದರು.

'ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಅವರ ಭೇಟಿಗೂ ಸಮಯ ಕೋರಿದ್ದೇನೆ. ಅವರ ಜೊತೆ ರಾಜ್ಯ ಬಜೆಟ್, ಹಣಕಾಸಿನ ಪರಿಸ್ಥಿತಿ, ಜಿಎಸ್‌ಟಿ ಮತ್ತಿತರ ವಿಷಯಗಳ ಬಗ್ಗೆ ಚರ್ಚಿಸಲು ಉದ್ದೇಶಿಸಿದ್ದೇನೆ. ಅಲ್ಲದೆ, ಅಂತರರಾಜ್ಯ ಜಲವಿವಾದವನ್ನು ಪ್ರತಿನಿಧಿಸುತ್ತಿರುವ ರಾಜ್ಯದ ವಕೀಲರ ತಂಡದ ಜೊತೆಗೂ ಚರ್ಚಿಸಿ, ಮುಂದಿನ ಕ್ರಮಗಳ ಬಗ್ಗೆ ಹಲವು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು' ಎಂದರು.

'ನಿಗದಿಯಂತೆ ಎಸ್ಸೆಸ್ಸೆಲ್ಸಿ ಪರೀಕ್ಷೆ'

ಚಾಮರಾಜನಗರ: ರಾಜ್ಯದಲ್ಲಿ ಈ ಬಾರಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ನಿಗದಿಯಂತೆ ನಡೆಯುತ್ತದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಭಾನುವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಗವಂತನ ಆಶೀರ್ವಾದದಿಂದ ನಮ್ಮಲ್ಲಿ ಶೇ 99ರಷ್ಟು ಶಾಲೆಗಳು ತೆರೆದಿವೆ. ಮಕ್ಕಳ ಹಾಜರಾತಿಯೂ ಚೆನ್ನಾಗಿದೆ. ಹೀಗಾಗಿ, ಒಂದು ದಿನವೂ ಹೆಚ್ಚು ಕಡಿಮೆಯಾಗದೆ ಪರೀಕ್ಷೆ ನಡೆಯಲಿದೆ' ಎಂದರು.

ಕನ್ನಡ ವಿ.ವಿ.: ಲೋಕಾಯುಕ್ತದಿಂದ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಕೆ

ಕಾಯ್ದೆ ಮೀರಿ ₹50 ಕೋಟಿ ಕಾಮಗಾರಿ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಮಲ್ಲಿಕಾ ಎಸ್.ಘಂಟಿ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಅವಧಿಯಲ್ಲಿ (2015ರಿಂದ 2019) ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ₹50.86 ಕೋಟಿ ಮೊತ್ತದ ಕಾಮಗಾರಿ, ಖರೀದಿ ಮಾಡಿದ್ದರು ಎಂದು ಲೋಕಾಯುಕ್ತ ಸರ್ಕಾರಕ್ಕೆ ಸಲ್ಲಿಸಿರುವ ಅಂತಿಮ ವರದಿಯಲ್ಲಿ ತಿಳಿಸಿದೆ.

ಲೋಕಾಯುಕ್ತವು ಉನ್ನತ ಶಿಕ್ಷಣ ಇಲಾಖೆಗೆ ಬರೆದ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ. 2017ರ ದೂರಿನ ಮೇರೆಗೆ ವಿಸ್ತೃತ ತನಿಖೆ ನಡೆಸಿ ಅಂತಿಮ ವರದಿ ಸಲ್ಲಿಸಿರುವ ಲೋಕಾಯುಕ್ತದ ಪ್ರಕಾರ, ಸರ್ಕಾರದಿಂದ ಬಿಡುಗಡೆಯಾದ ₹77.84 ಕೋಟಿ ಅನುದಾನದಲ್ಲಿ ₹50.86 ಕೋಟಿ ಮೊತ್ತದ ಕಾಮಗಾರಿ ಮತ್ತು ಖರೀದಿಗಳಲ್ಲಿ ಕೆಟಿಪಿಪಿ ಕಾಯ್ದೆ, ನಿಯಮಗಳ ಉಲ್ಲಂಘನೆಯಾಗಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ

2017ರಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ₹36 ಕೋಟಿ ಭ್ರಷ್ಟಾಚಾರ ನಡೆದಿದ್ದು, ಅಂದಿನ ಕುಲಪತಿ ಮಲ್ಲಿಕಾ ಘಂಟಿ, ಕುಲಸಚಿವ ಡಿ.ಪಾಂಡುರಂಗಬಾಬು ಮತ್ತಿತರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಮತ್ತು ಕೆಟಿಪಿಪಿ ಕಾಯ್ದೆ ಅಡಿ ಕ್ರಮ ಕೈಗೊಳ್ಳಬೇಕೆಂದು ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದ ಸೂಪರಿಟೆಂಡೆಂಟ್ ಎಚ್.ಎಂ. ಸೋಮನಾಥ ಎಂಬುವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಸೋಮನಾಥ ಕೊಟ್ಟಿರುವ ದೂರಿಗಿಂತ ಹೆಚ್ಚು ಅನುದಾನ ದುರುಪಯೋಗವಾಗಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಜಾಹೀರಾತು ನೀಡದೇ, ಇ-ಟೆಂಡರ್ ಕರೆಯದೇ ಕಟ್ಟಡ ಕಾಮಗಾರಿ, ವಸ್ತುಗಳನ್ನು ಖರೀದಿಸಿದ್ದರು. ಕೋಟ್ಯಂತರ ಮೌಲ್ಯದ ಕಾಮಗಾರಿಗಳಿಗೆ ಟೆಂಡರ್ ಕರೆಯದೇ ತುರ್ತು ಕಾಮಗಾರಿ ಎಂದು ನೆಪವೊಡ್ಡಿ ₹5 ಲಕ್ಷದ ಬಿಡಿ ಬಿಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರು.

> ಅನ್ನ ನೀಡಿದ ಸಂಸ್ಥೆಗೆ ದ್ರೋಹ ಬಗೆದು, ಪ್ರಾಮಾಣಿಕರೆಂಬ ಸೋಗಿನಲ್ಲಿ ಭ್ರಷ್ಟಾಚಾರ ಎಸಗಿದವರ ಮುಖವಾಡವು ಲೋಕಾಯುಕ್ತ ವರದಿಯಲ್ಲಿ ಬಯಲಾಗಿದೆ.
> **ಎಚ್.ಎಂ.ಸೋಮನಾಥ,** ದೂರುದಾರ

> ಎಲ್ಲ ಖರೀದಿ, ಕಾಮಗಾರಿಗಳನ್ನು ಸರ್ಕಾರದ ಅಂಗ ಸಂಸ್ಥೆಗಳಿಂದ ಮಾಡಿಸಲಾಗಿದೆ. ನಿಯಮ ಮೀರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.
> **ಮಲ್ಲಿಕಾ ಎಸ್.ಘಂಟಿ,** ವಿಶ್ರಾಂತ ಕುಲಪತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ

ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದೂ ದೂರಿನಲ್ಲಿ ತಿಳಿಸಿದ್ದರು.

ನಿಯಮ ಉಲ್ಲಂಘಿಸಿದ್ದಕ್ಕೆ ಕಾರ್ಯಕಾರಿ ಸಮಿತಿ ಸದಸ್ಯರು, ಕಟ್ಟಡ ಸಲಹಾ ಸಮಿತಿ ಸದಸ್ಯರು, ತಾಂತ್ರಿಕ ವಿಭಾಗದ ಎ.ಇ.ಇ., ಜೆ.ಇ, ಹಣಕಾಸು ಅಧಿಕಾರಿ ಸಂಪೂರ್ಣ ಜವಾಬ್ದಾರರಾಗುತ್ತಾರೆ. ಈ ಬಗ್ಗೆ ಆಡಳಿತಾತ್ಮಕ ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ನಷ್ಟದ ಹಣವನ್ನು ವಸೂಲಿ ಮಾಡಬೇಕೆಂದು ಆಗ್ರಹಿಸಿದ್ದರು.

ಕೆಪಿಟಿಸಿಎಲ್ ವಿವಿಧ ಹುದ್ದೆ: ಕನ್ನಡ ಪರೀಕ್ಷೆ ಉತ್ತೀರ್ಣ ಕಡ್ಡಾಯ

ಒಂದನೇ ಪುಟದಿಂದ

ಈಗ ಕನ್ನಡಿಗರು ಅವಕಾಶ ವಂಚಿತರಾಗದಂತೆ ಎಚ್ಚರಿಕೆ ವಹಿಸಲು ಸಚಿವ ವಿ.ಸುನೀಲ್ ಕುಮಾರ್ ಸೂಚಿಸಿದ್ದರು. ಹೀಗಾಗಿ, ಕಡ್ಡಾಯ ಕನ್ನಡ ಪರೀಕ್ಷೆ ಅಳವಡಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಕನ್ನಡ ಪರೀಕ್ಷೆ ಕಡ್ಡಾಯ: ಎಸ್ಸೆಸ್ಸೆಲ್ಸಿ, ಪಿಯುಸಿ ಅಥವಾ ಮೇಲ್ಪಟ್ಟ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ, ದ್ವಿತೀಯ ಅಥವಾ ಐಚ್ಛಿಕ ಭಾಷೆಯಾಗಿ ಕಲಿತಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೆ, ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಅಥವಾ ಡಿಪ್ಲೊಮಾ ಉತ್ತೀರ್ಣರಾಗಿದ್ದರೆ ಅಂಥ ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆಯಿಂದ ವಿನಾಯಿತಿ ಸಿಗಲಿದೆ. ಕನ್ನಡ ಭಾಷೆ ಅಧ್ಯಯನ ಮಾಡದ ಅಭ್ಯರ್ಥಿಗಳು ಹುದ್ದೆಗೆ ಆಯ್ಕೆಗೆ ಅರ್ಹರಾಗಲು ನಡೆಸುವ ಅಪ್ಟಿಟ್ಯೂಡ್ ಪರೀಕ್ಷೆಗೂ ಮೊದಲು ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆದು ಉತ್ತೀರ್ಣರಾಗಲೇಬೇಕು. ಕಡ್ಡಾಯ ಕನ್ನಡ ಪರೀಕ್ಷೆ ಎಸ್ಸೆಸ್ಸೆಲ್ಸಿ ಪ್ರಥಮ ಭಾಷೆ ಮಟ್ಟದಲ್ಲಿ ಇರಲಿದೆ. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸಿದವರು ಕಡ್ಡಾಯ ಕನ್ನಡದ ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಸಾಕು ಎಂದೂ ಮೂಲಗಳು ಹೇಳಿವೆ.

ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯಲ್ಲಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಅವರ ಪುತ್ರ ಎಂ.ಎಸ್.ಸಿದ್ದಪ್ಪನವರ ವಿವಾಹದ ಅಂಗವಾಗಿ ಭಾನುವಾರ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡಿದ್ದ ಜೋಡಿಗಳು

ಶಾಸಕರ ಪುತ್ರನ ವಿವಾಹ: 151 ಜೋಡಿ ಮದುವೆ

ಪ್ರಜಾವಾಣಿ ವಾರ್ತೆ

ಸಿರುಗುಪ್ಪ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ತೆಕ್ಕಲಕೋಟೆಯ ಸರ್ಕಾರಿ ಪದವಿ ಕಾಲೇಜು ಆವರಣದಲ್ಲಿ ಭಾನುವಾರ ಶಾಸಕ ಎಂ.ಎಸ್.ಸೋಮಲಿಂಗಪ್ಪ ಅವರ ಪುತ್ರ ಎಂ.ಎಸ್.ಸಿದ್ದಪ್ಪ ಅವರ ವಿವಾಹದೊಂದಿಗೆ 151 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ವಧು-ವರರನ್ನು ಆಶೀರ್ವದಿಸಿದರು.

'ಬಡವರು, ಶ್ರಮಿಕರು ಮತ್ತು ಸಾಮಾನ್ಯರ ಮದುವೆಯೊಂದಿಗೆ ಶಾಸಕ ಎಂ.ಎಸ್.ಸೋಮಲಿಂಗಪ್ಪ ತಮ್ಮ ಪುತ್ರನ ಕಲ್ಯಾಣ ನಡೆಸಿದ್ದು ಪ್ರಶಂಸನೀಯ' ಎಂದರು.

ಬಾಗವಾಡಿ ಗ್ರಾಮ ಪಂಚಾಯ್ತಿ ಸದಸ್ಯ ಪಂಪಯ್ಯ ವಿವಾಹವಾಗಿದ್ದು ಗಮನಸೆಳೆಯಿತು. ವಿವಿಧ ಮಠಾಧೀಶರು, ವಿವಿಧ ಪಕ್ಷಗಳ ಗಣ್ಯರು, ಸಚಿವರು, ಶಾಸಕರು ಪಾಲ್ಗೊಂಡಿದ್ದರು.

'ದೇಶದ್ರೋಹ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

ಹೊನ್ನಾಳಿ: 'ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಯೇ ಕಾಲೇಜಿಗೆ ಬರಬೇಕು ಎಂದು ಪ್ರಚೋದಿಸಿ ಕೋಮು ಸಂಘರ್ಷಕ್ಕೆ ಕುಮ್ಮಕ್ಕು ನೀಡುತ್ತಿರುವ ಸಿ.ಎಂ. ಇಬ್ರಾಹಿಂ, ಜಮೀರ್ ಅಹ್ಮದ್, ತನ್ವೀರ್ ಸೇಠ್ ಮತ್ತು ಯು.ಟಿ.ಖಾದರ್ ವಿರುದ್ಧ ದೇಶದ್ರೋಹದಡಿ ಪ್ರಕರಣ ದಾಖಲಿಸಬೇಕು' ಎಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಮುಖ್ಯಮಂತ್ರಿಯನ್ನು ಒತ್ತಾಯಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕುಂದಾಪುರದಲ್ಲಿ 6 ವಿದ್ಯಾರ್ಥಿನಿಯರಿಂದ ಪ್ರಾರಂಭವಾದ ಹಿಜಾಬ್ ಪ್ರಕರಣ ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡೆಯುತ್ತಿದೆ. ಇದರ ಹಿಂದೆ ಅಂತರರಾಷ್ಟ್ರೀಯ ಮಟ್ಟದ ಉಗ್ರಗಾಮಿ ಸಂಘಟನೆಗಳ ಕೈವಾಡವಿದೆ. ಕರ್ನಾಟಕವನ್ನು ತಾಲಿಬಾನ್ ಆಗಲು ಬಿಡುವುದಿಲ್ಲ. ಅಮಾಯಕ ವಿದ್ಯಾರ್ಥಿನಿಯರನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡಲು ಹೊರಟಿರುವ ಇಂಥವರು ದೇಶದಲ್ಲೇ ಇರಬಾರದು' ಎಂದರು.

'ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಸಚಿವರಾಗಿದ್ದ ಅಜೀಜ್ ಸೇಠ್ ಅವರು ಕೋಮುಗಲಭೆ ಸೃಷ್ಟಿಸಿದ್ದರಿಂದ ಅವರು ಅಧಿಕಾರ ಕಳೆದುಕೊಳ್ಳಬೇಕಾಯಿತು. ಈಗ ಅವರ ಮಗ ತನ್ವೀರ್ ಸೇಠ್ ಕೂಡಾ ಅದೇ ಹಾದಿಯಲ್ಲಿ ಸಾಗುತ್ತಿದ್ದಾರೆ. ಕೋಮುಸಂಘರ್ಷಕ್ಕೆ ಸಂಚು ನಡೆಸಿದ್ದಾರೆ' ಎಂದು ಆರೋಪಿಸಿದರು.

'ಶಾಲಾ-ಕಾಲೇಜುಗಳಲ್ಲಿ ಧರ್ಮ, ಜಾತಿ ನುಸುಳಿರಲಿಲ್ಲ. ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿ ಬರುತ್ತಿದ್ದರು. ಹಿಜಾಬ್ ಧರಿಸಲು ಕುಮ್ಮಕ್ಕು ಕೊಟ್ಟಿದ್ದರಿಂದ ಪರಿಸ್ಥಿತಿ ಬಿಗಡಾಯಿಸಿದೆ. ಕೋಮುಸಂಘರ್ಷ ನಡೆಸಿದರೆ ರಾಜಕೀಯ ಲಾಭ ಪಡೆದುಕೊಳ್ಳಬಹುದು ಎಂದು ಕೆಲವರು ಲೆಕ್ಕಾಚಾರ ಹಾಕಿದ್ದಾರೆ' ಎಂದು ಆರೋಪಿಸಿದರು.

> ಇದು ನಮ್ಮ ತಾತನದ್ದೇ ದೇಶ. ಶಾಸಕ ತನ್ವೀರ್ ಸೇಠ್ ತಾತ ಕೂಡ ಹಿಂದೂ ಆಗಿದ್ದರು. ಅವರು ಮಕ್ಕಾ, ಮದೀನದಿಂದ ಬಂದವರಲ್ಲ
> **ಪ್ರತಾಪಸಿಂಹ,** ಸಂಸದ

ಪತ್ರ ವೈರಲ್

ಉಡುಪಿ: ಉಡುಪಿ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಪ್ರವೇಶಾತಿ ಪಡೆಯುವಾಗ ಕಾಲೇಜಿನ ನಿಯಮಾವಳಿ ಪತ್ರಕ್ಕೆ ಮುಸ್ಲಿಂ ವಿದ್ಯಾರ್ಥಿನಿ ಸಹಿ ಹಾಕಿದ್ದಾರೆ ಎನ್ನಲಾದ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಕಾಲೇಜು ನಿಯಮಾವಳಿ ಪಾಲನೆಯ ತಿಳಿವಳಿಕೆ ಪತ್ರದಲ್ಲಿ ಸಮವಸ್ತ್ರ ಹಾಗೂ ಗುರುತಿನ ಚೀಟಿ ಧರಿಸಿ ಬರುವುದು ಕಡ್ಡಾಯ ಸೇರಿದಂತೆ 10 ನಿಯಮಗಳು ಇವೆ. ವಿದ್ಯಾರ್ಥಿನಿ ರೇಷಮ್ ಎಂಬುವರು ಪತ್ರಕ್ಕೆ ಸಹಿ ಮಾಡಿದ್ದಾರೆ. ಈ ಪತ್ರ ಜಾಲತಾಣದಲ್ಲಿ ಸುದ್ದಿಯಾಗಿದೆ.

ಪತ್ರದ ಬಗ್ಗೆ ಕಾಲೇಜು ಅಭಿವೃದ್ಧಿ ಸಮಿತಿಯಾಗಲಿ, ಪ್ರಾಂಶುಪಾಲರಾಗಲಿ ಪ್ರತಿಕ್ರಿಯೆ ನೀಡಿಲ್ಲ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಕೇಂದ್ರ ಬಜೆಟ್: ಕರ್ನಾಟಕಕ್ಕೆ ಸಿಕ್ಕಿದ್ದೇನು?
ಭಾಗವಹಿಸುವವರು
ಪ್ರೊ.ಬಿ.ಆರ್.ಕೇಶವ್, ಅರ್ಥಶಾಸ್ತ್ರ ಪ್ರಾಧ್ಯಾಪಕರು, ಬೆಂಗಳೂರು ವಿ.ವಿ. ಕೆ.ಪಿ. ಸುರೇಶ್, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಜ್ಞರು, ಮೈಸೂರು.
ಸಿಎ ರುದ್ರಮೂರ್ತಿ, ಲೆಕ್ಕಪತ್ರ ಪರಿಶೋಧಕರು, ಬೆಂಗಳೂರು.
ಡಾ. ದಾಕ್ಷಾಯಿಣಿ ಎಂ ಡೋಂಗ್ರೆ, ಅರ್ಥಶಾಸ್ತ್ರ ಸಹ ಪ್ರಾಧ್ಯಾಪಕರು, ಸರ್.ಎಂ.ವಿ ಸರ್ಕಾರಿ ಪದವಿ ಕಾಲೇಜು, ಭದ್ರಾವತಿ
ಸಂವಾದ ಸಂಜೆ 4ರಿಂದ 5ರವರೆಗೆ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

'ಯಾರು... ಯಾವ ಕುಮಾರಸ್ವಾಮಿ?'

ಬೆಂಗಳೂರು: 'ಯಾರು... ಯಾವ ಕುಮಾರಸ್ವಾಮಿ ? ನಾನು ಅವರ ಬಗ್ಗೆ ಮಾತನಾಡಲ್ಲ ರೀ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವ್ಯಂಗ್ಯವಾಗಿ ಹೇಳಿದರು.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಆಗುವ ಹುಚ್ಚು. ಅದಕ್ಕೆ ಮುಸ್ಲಿಮರನ್ನು ಓಲೈಸುತ್ತಾರೆ' ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಯ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ, 'ನೋ ರಿಯಾಕ್ಷನ್ ಟು ಮಿಸ್ಟರ್ ಕುಮಾರಸ್ವಾಮಿ' ಎಂದರು.

ಸಿದ್ದರಾಮಯ್ಯ

'ನಾನು ಕುಮಾರಸ್ವಾಮಿ ಬಗ್ಗೆ ಮಾತನಾಡಿಲ್ಲ. ಅವರು ರಾಜಕೀಯ ಪಕ್ಷದ ನಾಯಕರು. ನನ್ನ ಪಾಡಿಗೆ ನಾನು ಮಾತನಾಡುತ್ತೇನೆ' ಎಂದರು.

ಶಾಸಕ ಜಮೀರ್ ಅಹ್ಮದ್, 'ಇಬ್ರಾಹಿಂ ಕಾಂಗ್ರೆಸ್ ಬಿಡುವುದಿಲ್ಲ ಎಂಬ ವಿಶ್ವಾಸ ಇದೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿ ಅಲ್ಪಸಂಖ್ಯಾತರನ್ನು ಮಾಡುತ್ತಾರೆ ಎಂದು ನಾವು ನಿರೀಕ್ಷೆ ಇಟ್ಟುಕೊಂಡಿದ್ದೆವು' ಎಂದರು.

ನಾಲ್ವರು ಮಕ್ಕಳು, ಮಹಿಳೆಯ ಹತ್ಯೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಗ್ರಾಮದಲ್ಲಿ ಶನಿವಾರ ತಡರಾತ್ರಿ ಒಂದೇ ಕುಟುಂಬದ ನಾಲ್ವರು ಮಕ್ಕಳು ಹಾಗೂ ಮಹಿಳೆಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಕಾರಣ ನಿಗೂಢವಾಗಿದ್ದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಗ್ರಾಮದ ಬಜಾರ್ ಲೈನ್ ಬಡಾವಣೆಯ ವ್ಯಾಪಾರಿ ಗಂಗಾರಾಂ ಅವರ ಪತ್ನಿ ಲಕ್ಷ್ಮಿ (30), ಅವರ ಮಕ್ಕಳಾದ ರಾಜು (10), ಕೋಮಲ್ (7), ಕುನಾಲ್ (4), ಗಂಗಾರಾಂ ಸೋದರನ ಮಗ ಗೋವಿಂದ (13) ಅವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಈ ಸಾಮೂಹಿಕ ಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಲಕ್ಷ್ಮಿ ಅವರ ಪತಿ ಗಂಗಾರಾಂ ವ್ಯಾಪಾರ ನಿಮಿತ್ತ 2 ದಿನಗಳ ಹಿಂದೆ ಹೊರಗೆ ಹೋಗಿದ್ದಾಗ ಈ ಕೃತ್ಯ ನಡೆದಿದೆ. ಲಕ್ಷ್ಮಿ ತಮ್ಮ ಮೂವರು ಮಕ್ಕಳ ಜೊತೆ ಮಲಗಿದ್ದರು. ಗೋವಿಂದ ಪಕ್ಕದ ಮಂಚದ ಮೇಲೆ ಮಲಗಿದ್ದ. ಬಲವಾದ ಆಯುಧದಿಂದ ತಲೆಗೆ ಹೊಡೆದು ಕೊಲೆ ಮಾಡಲಾಗಿದ್ದು ಎಲ್ಲರೂ ಮಲಗಿದ ಸ್ಥಿತಿಯಲ್ಲೇ ಶವವಾಗಿದ್ದಾರೆ.

ದಕ್ಷಿಣ ಭಾರತದಲ್ಲಿ ಬಹುತೇಕ ಅಳಿವಿನಂಚಿನಲ್ಲಿರುವ ಪ್ರಾಣಿ

ಯಡಹಳ್ಳಿ ವನ್ಯಧಾಮ: ಚಿಂಕಾರ ಸಂಖ್ಯೆ ಹೆಚ್ಚಳ

• ವೆಂಕಟೇಶ ಜಿ.ಎಚ್

ಬಾಗಲಕೋಟೆ: ಇಲ್ಲಿನ ಬೀಳಗಿ ತಾಲ್ಲೂಕು ಯಡಹಳ್ಳಿ ವನ್ಯಧಾಮದಲ್ಲಿ ಚಿಂಕಾರಗಳ (Indian gazelle) ಸಂಖ್ಯೆ ಹೆಚ್ಚಳಗೊಂಡಿದೆ. ದಕ್ಷಿಣ ಭಾರತದಲ್ಲಿ ಬಹುತೇಕ ಅಳಿವಿನಂಚಿನಲ್ಲಿರುವ ಈ ಮುದ್ದು ಮಿಕದ ಸಂಖ್ಯೆ ವೃದ್ಧಿಯಾಗಿರುವುದು ಅರಣ್ಯ ಇಲಾಖೆ ಸಂತಸಕ್ಕೆ ಕಾರಣವಾಗಿದೆ.

ಕೊಯಮತ್ತೂರಿನಲ್ಲಿರುವ ಕೇಂದ್ರ ಸರ್ಕಾರದ ಡಾ.ಸಲೀಂ ಅಲಿ ಪಕ್ಷಿಶಾಸ್ತ್ರ ಹಾಗೂ ಪ್ರಾಕೃತಿಕ ಇತಿಹಾಸ ಅಧ್ಯಯನ ಸಂಸ್ಥೆಯ ವಿಜ್ಞಾನಿ, ಚಿಕ್ಕಮಗಳೂರಿನ ಡಾ.ಎಚ್.ಎನ್.ಕುಮಾರ್ ನೇತೃತ್ವದ ತಂಡ ಯಡಹಳ್ಳಿ ವನ್ಯಧಾಮದಲ್ಲಿ ಮೂರು ತಿಂಗಳು ಅಧ್ಯಯನ ನಡೆಸಿ ಚಿಂಕಾರಗಳ ವಂಶಾಭಿವೃದ್ಧಿ ಗುರುತಿಸಿದೆ. ಅರಣ್ಯ ಇಲಾಖೆ ಮನವಿ ಮೇರೆಗೆ ಈ ತಂಡ ಗಣತಿ ನಡೆಸಿತ್ತು.

ಬೀಳಗಿ, ಮುಧೋಳ ತಾಲ್ಲೂಕುಗಳ 9,636 ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿರುವ ಯಡಹಳ್ಳಿ ವನ್ಯಜೀವಿಧಾಮದಲ್ಲಿ 72 ಕಡೆ ವೀಕ್ಷಣಾ ಗೋಪುರ ನಿರ್ಮಿಸಿ, ತಲಾ ಐದು ಕ್ಯಾಮೆರಾ ಅಳವಡಿಸಿ ಟ್ರ್ಯಾಪಿಂಗ್ ಮಾಡಲಾಗಿದೆ. ಅವುಗಳ ಹೆಜ್ಜೆ, ಹಿಕ್ಕೆ ಗುರುತು, ಚಲನವಲನ ಆಧರಿಸಿ ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿದೆ.

ಏಳು ಚಿಂಕಾರ ಹೆಚ್ಚಳ: ಕೃಷ್ಣಾ ತೀರದಲ್ಲಿ ಕಾಣಸಿಕ್ಕಿದ ಈ ಅಪರೂಪದ ಪ್ರಾಣಿಗಳ ರಕ್ಷಣೆಗೆ ಸರ್ಕಾರ 2016ರಲ್ಲಿ ಯಡಹಳ್ಳಿ ವನ್ಯಜೀವಿ ಧಾಮಕ್ಕೆ ಅಧಿಸೂಚನೆ ಹೊರಡಿಸಿದ್ದು, ಆಗ 85 ಚಿಂಕಾರಗಳ ಗುರುತಿಸಲಾಗಿತ್ತು. ಈಗ ಆ ಸಂಖ್ಯೆ 92ಕ್ಕೆ ಹೆಚ್ಚಳವಾಗಿದೆ. ಗಂಡು ಹಾಗೂ ಹೆಣ್ಣು ಚಿಂಕಾರ ಅನುಪಾತ 1:0.83ರಷ್ಟು ಕಂಡುಬಂದಿದೆ.

ಬೀಳಗಿ ತಾಲ್ಲೂಕು ಯಡಹಳ್ಳಿಯ ವನ್ಯಜೀವಿ ಧಾಮದಲ್ಲಿ ಕ್ಯಾಮೆರಾಗೆ ಸೆರೆಸಿಕ್ಕ ಚಿಂಕಾರ ಜೋಡಿ –ಚಿತ್ರ: ಹಣಮಂತ ಡೋಣಿ

ಕತ್ತೆಕಿರುಬದ ಹೆಜ್ಜೆ ಗುರುತು...

ಯಡಹಳ್ಳಿ ವನ್ಯಜೀವಿ ಧಾಮದಲ್ಲಿ ಚಿಂಕಾರ ಅಧ್ಯಯನಕ್ಕೆ ನಡೆಸಿದ ಕ್ಯಾಮೆರಾ ಟ್ರ್ಯಾಪಿಂಗ್ ವೇಳೆ ನಿಸರ್ಗದಲ್ಲಿ ಇರುಳ ಹಾದಿಯ ಜಾಡಮಾಲಿ ಕತ್ತೆಕಿರುಬ (Hyna) ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಕ್ಕಿವೆ.

ತೋಳ, ನರಿ, ಗುಳ್ಳೆ ನರಿ, ಮುಳ್ಳುಹಂದಿ, ಕಾಡುಹಂದಿ, ಚಿಪ್ಪು ಹಂದಿ, ಮೊಲ ಕೂಡ ಕ್ಯಾಮೆರಾದಲ್ಲಿ ಸೆರೆಯಾಗಿವೆ.

'ನೀಲಗಾಯ್, ಕೃಷ್ಣಮೃಗದ ರೀತಿ ಚಿಂಕಾರವು ಗೊರಸುಳ್ಳ ಪ್ರಾಣಿ. ಉತ್ತರ ಭಾರತದಲ್ಲಿ ರಾಜಸ್ಥಾನ, ಗುಜರಾತ್‌ನಲ್ಲಿ ಕಾಣಸಿಗುತ್ತದೆ. ಕುರುಚಲು ಅರಣ್ಯ-ಪ್ರದೇಶದ ಗುಡ್ಡ-ಬೆಟ್ಟಗಳ ತುದಿಯಲ್ಲಿ (Table top) ವಾಸ ಮಾಡುವ ಚಿಂಕಾರ, ನಾಚಿಕೆ ಸ್ವಭಾವದ ಪ್ರಾಣಿ. ಕಿ.ಮೀಗಟ್ಟಲೇ ದೂರದಿಂದ ಮನುಷ್ಯರ ವಾಸನೆ ಗ್ರಹಿಸಿ ದೂರಸರಿಯುತ್ತದೆ. ಹೀಗಾಗಿ ಜನರಿಗೆ ಗೋಚರಿಸುವುದು ಅಪರೂಪ' ಎಂದು ಬೀಳಗಿ ವಲಯ ಅರಣ್ಯಾಧಿಕಾರಿ ಹಣಮಂತ ಡೋಣಿ ಹೇಳುತ್ತಾರೆ.

ರಾಜ್ಯದಲ್ಲಿ ಯಡಹಳ್ಳಿ ವನ್ಯಧಾಮ ಬಿಟ್ಟರೆ ತುಮಕೂರು ಜಿಲ್ಲೆಯ ಬುಕ್ಕಾಪಟ್ಟಣ ಭಾಗದಲ್ಲಿ ಬೆರಳೆಣಿಕೆಯಷ್ಟು ಚಿಂಕಾರ ಕಂಡುಬಂದಿವೆ. ಯಡಹಳ್ಳಿ ವನ್ಯಜೀವಿಧಾಮ ಘೋಷಣೆ ನಂತರ ಅರಣ್ಯ ಇಲಾಖೆ ಈ ಭಾಗದಲ್ಲಿ ಬೇಟೆ ನಿಷೇಧಿಸಿತ್ತು. ಸುತ್ತಲಿನ 12 ಹಳ್ಳಿಗಳ ಜನರು ಕಟ್ಟಿಗೆಗೆ ಕಾಡಿಗೆ ಹೋಗುವುದನ್ನು ತಪ್ಪಿಸಲು ಅವರ ಮನೆಗಳಿಗೆ ಇಲಾಖೆಯಿಂದಲೇ ಎಲ್‌ಪಿಜಿ ಸಿಲಿಂಡರ್ ಸೌಲಭ್ಯ ಕಲ್ಪಿಸಲಾಗಿತ್ತು.

> ಚಿಂಕಾರಗಳ ಸಂಖ್ಯೆ ತೀರಾ ಜಾಸ್ತಿ ಆಗಿಲ್ಲ. ಆದರೆ ಯಡಹಳ್ಳಿ ವನ್ಯಜೀವಿಧಾಮದ ಧಾರಣಾ ಸಾಮರ್ಥ್ಯಕ್ಕೆ ಆ ವೃದ್ಧಿ ದರ ಪೂರಕ ಹಾಗೂ ಸಕಾರಾತ್ಮಕವಾಗಿದೆ.
> **ಡಾ.ಎಚ್.ಎನ್.ಕುಮಾರ್,** ವಿಜ್ಞಾನಿ, ಸಲೀಂ ಅಲಿ ಪಕ್ಷಿಶಾಸ್ತ್ರ ಹಾಗೂ ಪ್ರಾಕೃತಿಕ ಇತಿಹಾಸ ಅಧ್ಯಯನ ಸಂಸ್ಥೆ

ಒಳನೋಟ

ಹೈನುಗಾರಿಕೆಗೆ ಸಂಕಷ್ಟ

ಬೆಂಗಳೂರು: 'ಸವಾಲಿನ ಸುಳಿಯಲ್ಲಿ ಹೈನೋದ್ಯಮ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಫೆ.6) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಮಾರುಕಟ್ಟೆಯಲ್ಲಿ ಹಿನ್ನಡೆ'



ಗ್ರಾಮೀಣ ಜನರ ಆರ್ಥಿಕ ವ್ಯವಸ್ಥೆ ಸುಧಾರಿಸುವಲ್ಲಿ ಹೈನುಗಾರಿಕೆ ಮುಖ್ಯ ಪಾತ್ರ ವಹಿಸಿದೆ. ಕೆಎಂಎಫ್ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದರೂ ಸೂಕ್ತ ಮಾರುಕಟ್ಟೆ ಕೊರತೆಯಿಂದಾಗಿ ಗ್ರಾಹಕರನ್ನು ಆಕರ್ಷಿಸಲು ವಿಫಲಗೊಂಡಿವೆ. ಈ ವಿಚಾರಕ್ಕೆ ಗಮನ ನೀಡಬೇಕು. ನಕಲಿ ಉತ್ಪನ್ನಗಳಿಗೆ ಕಡಿವಾಣ ಹಾಕಿ, ಶಿಕ್ಷೆಗೆ ಒಳಪಡಿಸಬೇಕು.

ಕೆ.ಪಿ.ಲಕ್ಷ್ಮೀಕಾಂತ ರಾಜೇ ಅರಸು, ತುಮಕೂರು

'ಪ್ರೋತ್ಸಾಹಧನ ಹೆಚ್ಚಿಸಿ'



ಹತ್ತಾರು ವರ್ಷಗಳು ಕಳೆದರೂ ಹಾಲು ಉತ್ಪಾದಕರ ಸ್ಥಿತಿ ಬದಲಾಗಿಲ್ಲ. ಕೆಎಂಎಫ್‌ನಂತಹ ದೊಡ್ಡ ಸಂಸ್ಥೆಯ ನೆರಳಿನಲ್ಲಿದ್ದರೂ ರೈತರ ಬಾಳು ಹಸನಾಗಿಲ್ಲ.

ಹಾಲು ಒಕ್ಕೂಟಗಳಲ್ಲಿ ನಡೆಯುವ ಅವ್ಯವಹಾರಗಳನ್ನು ತಡೆಯುವಲ್ಲಿ ಸರ್ಕಾರ ವಿಫಲವಾಗಿದೆ. ಹಾಲು ಉತ್ಪಾದಕರನ್ನು ಪ್ರಸ್ತುತ ಸಂಕಷ್ಟದಿಂದ ಪಾರು ಮಾಡಬೇಕಾದರೆ ಪ್ರೋತ್ಸಾಹಧನ ಹೆಚ್ಚಿಸಬೇಕು.

ಆರ್.ಶ್ರೀಧರ, ಶ್ರೀರಂಗಪಟ್ಟಣ

'ಮಿತಿ ಮೀರಿದ ಕಲಬೆರಕೆ'



ತುಪ್ಪ, ಬೆಣ್ಣೆ, ಮೊಸರು ಸೇರಿದಂತೆ ಹಾಲಿನ ಉತ್ಪನ್ನಗಳು ಇತ್ತೀಚಿನ ದಿನಗಳಲ್ಲಿ ಯಥೇಚ್ಛವಾಗಿ ಕಲಬೆರಕೆಯಾಗುತ್ತಿವೆ. ರಾಸಾಯನಿಕಗಳ ಬಳಕೆಯಿಂದಾಗಿ ಜನರ ಆರೋಗ್ಯದ ಮೇಲೂ ಪ್ರಭಾವ ಬೀರುತ್ತಿದೆ. ಹಾಲಿನ ಗುಣಮಟ್ಟ ಪರಿಶೀಲಿಸಲು ಸರ್ಕಾರ ಅತ್ಯಾಧುನಿಕ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಹೈನುಗಾರಿಕೆ ಅವಲಂಬಿಸಿರುವವರಿಗೆ ವಿಶೇಷ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು. ಈ ಮೂಲಕ ಹೈನುಗಾರಿಕೆಗೆ ಆದ್ಯತೆ ನೀಡಬೇಕು.

ವಿರೂಪಾಕ್ಷ ಗೌಡ, ಹಂಪಿ

'ನಕಲಿ ಉತ್ಪನ್ನಗಳನ್ನು ತೊಲಗಿಸಿ'



ನಕಲಿ ತುಪ್ಪ, ಕಳಪೆ ಹಾಲಿನ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ನಂದಿನಿ ತುಪ್ಪದ ನಕಲಿ ಪ್ರಕರಣಗಳು ಗ್ರಾಹಕರನ್ನು ಆತಂಕಗೊಳಿಸಿವೆ. ಉತ್ಪನ್ನಗಳನ್ನು ನಕಲು ಮಾಡದಂತೆ ತಡೆಯಲು ಅವುಗಳ ವಿನ್ಯಾಸ ಮತ್ತು ಪ್ಯಾಕಿಂಗ್ ವ್ಯವಸ್ಥೆಯಲ್ಲಿ ಬದಲಾವಣೆ ತರುವುದು ಅಗತ್ಯ. ಅಸಲಿ ಗುಣಮಟ್ಟ ಸಾಬೀತುಪಡಿಸಿಕೊಳ್ಳಲು 'ಕ್ಯೂಆರ್ ಕೋಡ್'ನಂತಹ ತಾಂತ್ರಿಕ ಬದಲಾವಣೆ ಒಳ್ಳೆಯ ಕ್ರಮ.

ಕೆ.ಎಸ್.ಸಿದ್ದರಾಜು, ನಂಜನಗೂಡು

'ಹೈನುಗಾರಿಕೆಗೆ ಪೂರಕ ಬೆಂಬಲವಿಲ್ಲ'



ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುವುದರಿಂದ ಹೈನುಗಾರಿಕೆಗೆ ತೀವ್ರ ಹಿನ್ನಡೆಯಾಗಿದೆ. ಲಭ್ಯವಿರುವ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲೂ ವಿಫಲತೆ ಕಾಣುತ್ತಿದೆ. ಪಶು ಸಂಗೋಪನೆಗೆ ರೈತರು ಒಲವು ತೋರುತ್ತಿದ್ದರೂ, ಮಾರ್ಗದರ್ಶನ, ವೈದ್ಯಕೀಯ ಸೇವೆಗಳ ಕೊರತೆ ಇದೆ. ಹೀಗಾಗಿ, ಮುನ್ನಡೆ ಸಾಧಿಸುತ್ತಿಲ್ಲ.

ಸಂತೋಷ್ ಕುಮಾರ್, ಬಳ್ಳಾರಿ

ನ್ಯಾಯಾಲಯಗಳ ಅಧಿಕೃತ ಕಾರ್ಯಕ್ರಮಗಳಲ್ಲಿ ಅಂಬೇಡ್ಕರ್ ಭಾವಚಿತ್ರ: ಗೊಂದಲಕ್ಕೆ ಹೈಕೋರ್ಟ್ ತೆರೆ

‘ಅಂಬೇಡ್ಕರ್ ಆಶಯಗಳು ಮುಕ್ಕಾಗದಿರಲಿ’

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರವನ್ನು ಕೋರ್ಟ್‌ಗಳಲ್ಲಿನ ಅಧಿಕೃತ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಇರಿಸುವ ಕುರಿತಾದ ಗೊಂದಲಗಳಿಗೆ ಹೈಕೋರ್ಟ್ ಕಡೆಗೂ ತೆರೆ ಎಳೆದಿದೆ.

‘ರಾಯಚೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರು ಕಳೆದ ತಿಂಗಳು 26 ಗಣರಾಜ್ಯೋತ್ಸವ ದಿನದಂದು ಜಿಲ್ಲಾ ಕೋರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರ ಇರಿಸಲು ಅವಕಾಶ ಕೊಡಲಿಲ್ಲ’ ಎಂದು ಕೇಳಿಬಂದ ಆಕ್ಷೇಪಗಳು ಮತ್ತು ನಂತರ ಈ ಬಗ್ಗೆ ನಡೆದ ಪ್ರತಿಭಟನೆಗಳ ಬಗ್ಗೆ ನ್ಯಾಯಾಂಗ ತಜ್ಞರು ‘ಪ್ರಜಾವಾಣಿ’ಗೆ ಜತೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಹೈಕೋರ್ಟ್‌ನ ಹಿರಿಯ ವಕೀಲ ಅಶೋಕ ಹಾರನಹಳ್ಳಿ, ‘ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ತಪ್ಪು ಮಾಡಿದ್ದಾರೆ ಎಂದೆನಿಸಿದಾಗ ಅವರ ವಿರುದ್ಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ದೂರು ನೀಡಬಹುದಿತ್ತು. ಇಂತಹ ವಿಷಯವನ್ನು ರಸ್ತೆಗಿಳಿದು ಚರ್ಚಿಸಿದರೆ ಅದು ನ್ಯಾಯಾಂಗದ ಘನತೆಯನ್ನು ಕುಗ್ಗಿಸುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು.

ಹೈಕೋರ್ಟ್‌ನ ಸಿಬಿಐ ವಕೀಲ ಪಿ. ಪ್ರಸನ್ನಕುಮಾರ್, ‘ನ್ಯಾಯಾಂಗದ ಪಾರಮ್ಯ ಮತ್ತು ಅದು ಹೊಂದಿರುವ ಸ್ವಾತಂತ್ರ್ಯ ಸಂವಿಧಾನಾತ್ಮಕ ಅಧಿಕಾರಗಳನ್ನು ಪಡೆದಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸದಾ ಪ್ರತ್ಯೇಕವಾಗಿಯೇ ಕಾರ್ಯ ನಿರ್ವಹಿಸುತ್ತವೆ. ಒಬ್ಬರ ಅಧಿಕಾರ ವ್ಯಾಪ್ತಿಯಲ್ಲಿ ಇನ್ನೊಬ್ಬರು ತಲೆ ಹಾಕಲು ಬರುವುದಿಲ್ಲ.ಮೂರೂ ಅಂಗಗಳು ಒಂದಕ್ಕೊಂದು ಪೂರಕವಾಗಿ ನಡೆದುಕೊಳ್ಳಬೇಕು. ಈ ಅಧಿಕಾರ ವಿಂಗಡಣೆ ತತ್ವ 1973ರಲ್ಲಿ ಸುಪ್ರೀಂಕೋರ್ಟ್‌ನ 13 ಜನರ ಪೂರ್ಣಪೀಠದ ಕೇಶವಾನಂದ ಭಾರತೀ ಪ್ರಕರಣದಲ್ಲಿಯೇ ಸ್ಪಷ್ಟವಾಗಿದೆ’ ಎಂದು ಹೇಳಿದರು.

ಹೈಕೋರ್ಟ್‌ನ ಹಿರಿಯ ವಕೀಲ ಕೆ.ದಿವಾಕರ, ‘ಕೇಂದ್ರ ಅಥವಾ ರಾಜ್ಯ ಸರ್ಕಾರದ ನಿರ್ಧಾರಗಳನ್ನು ಕೋರ್ಟ್ ನೇರವಾಗಿ ಅಳವಡಿಸಿಕೊಳ್ಳಲು ಬರುವುದಿಲ್ಲ. ನ್ಯಾಯಾಂಗ ತನ್ನದೇ ಆದ ಕಾರ್ಯಶೈಲಿ ಮತ್ತು ವೈಖರಿಯನ್ನು ಹೊಂದಿದೆ. ಹೀಗಾಗಿ ಯಾವ ಕಾರ್ಯಕ್ರಮದಲ್ಲಿ ಯಾರ ಫೋಟೊ ಇಡಬೇಕು. ಇಡಬಾರದು ಎಂಬ ಸುತ್ತೋಲೆಯನ್ನು ಹೈಕೋರ್ಟ್ ಹೊರಡಿಸುತ್ತದೆ. ಅದರಂತೆ ರಾಜ್ಯದ ಅಧೀನ ಕೋರ್ಟ್‌ಗಳು ನಡೆಯುತ್ತವೆ. ಈ ವಿಷಯದಲ್ಲಿ ಫುಲ್ ಕೋರ್ಟ್ ಮೀಟಿಂಗ್‌ನ ನಿರ್ಣಯವೇ ಅಂತಿಮ’ ಎನ್ನುತ್ತಾರೆ.

‘ನ್ಯಾಯಾಧೀಶರು ತಪ್ಪು ಮಾಡಿದ್ದಾರೆ ಎನಿಸಿದರೆ ಮುಖ್ಯ ನ್ಯಾಯಮೂರ್ತಿಗೆ ದೂರು ನೀಡಬಹುದು. ಅಂತಹ ದೂರು ಅಥವಾ ಮನವಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. ಅಷ್ಟಕ್ಕೂ ಈಗಾಗಲೇ ಹೈಕೋರ್ಟ್ ಈ ಸಂಬಂಧ ಸಾರ್ವಜನಿಕರ ಭಾವನೆಗಳನ್ನು ಗೌರವಿಸಿದೆ. ಆದರೆ, ಈ ಪ್ರಕರಣದ ಕಿಡಿ ಕಾಣಿಸಿಕೊಂಡ ದಿನ, ಕೆಲವೇ ಗಂಟೆಗಳಲ್ಲಿ ಹಲವರು ತಕ್ಷಣವೇ ದಾಂಧಲೆ ಎಬ್ಬಿಸಿದರು, ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ನಡೆಸಿದರು. ಇವೆಲ್ಲಾ ಒಂದು ರಾಜಕೀಯ ಆಟವಷ್ಟೇ. ನಾವು ಯಾರೂ ಅಂಬೇಡ್ಕರ್ ಅವರ ಆಶಯಗಳಿಗೆ ಮಸಿ ಬಳಿಯಬಾರದು’ ಎಂದು ರಾಜ್ಯ ವಕೀಲರ ಪರಿಷತ್ ಸದಸ್ಯ ಎಸ್.ಹರೀಶ್ ಹೇಳಿದರು.

ಪ್ರಜಾವಾಣಿ ವಿಶೇಷ

ಹೈಕೋರ್ಟ್ ಅಧಿಸೂಚನೆ

ಆಗಸ್ಟ್ 15ರ ಸ್ವಾತಂತ್ರ್ಯ ದಿನ, ನವೆಂಬರ್ 26ರ ಸಂವಿಧಾನ ದಿನ ಹಾಗೂ ಜನವರಿ 26 ರ ಗಣರಾಜ್ಯೋತ್ಸವ ಆಚರಣೆಯ ದಿನಗಳಂದು ಹೈಕೋರ್ಟ್ ಬೆಂಗಳೂರು ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿ ಪೀಠಗಳೂ ಸೇರಿದಂತೆ ರಾಜ್ಯದ ಎಲ್ಲ ಅಧೀನ ನ್ಯಾಯಾಲಯಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇರಿಸಲು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ.ಶಿವಶಂಕರೇಗೌಡ ಅಧಿಸೂಚನೆ ಹೊರಡಿಸಿದ್ದಾರೆ.

‘ಇನ್ನು ಮುಂದೆ ರಾಜ್ಯದಾದ್ಯಂತ ಎಲ್ಲ ಕೋರ್ಟ್‌ಗಳಲ್ಲಿ ನಡೆಸಲಾಗುವ ಅಧಿಕೃತ ಕಾರ್ಯಕ್ರಮಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇರಿಸಲು ಕ್ರಮ ವಹಿಸುವಂತೆ ನಿರ್ದೇಶಿಸಲಾಗಿದೆ’ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಬ್ರಿಟನ್ ರಾಣಿಯಾಗಲಿದ್ದಾರೆ ರಾಜಕುಮಾರಿ ಕೆಮಿಲಾ

ಲಂಡನ್ (ಪಿಟಿಐ): ವೇಲ್ಸ್‌ನ ರಾಜಕುಮಾರಿ ಅಥವಾ ಡಚ್ಚಸ್ ಆಫ್ ಕಾರ್ನ್‌ವಾಲ್ ಆಗಿರುವ ಕೆಮಿಲಾ ಅವರು ಬ್ರಿಟನ್‌ನ ರಾಣಿ ಆಗಲಿದ್ದಾರೆ. ರಾಜಕುಮಾರ ಚಾರ್ಲ್ಸ್ ಅವರು ರಾಜನ ಪಟ್ಟಕ್ಕೆ ಏರುತ್ತಿದ್ದಂತೆ ರಾಜಕುಮಾರಿ ಕೆಮಿಲಾ ರಾಣಿಯಾಗಲಿದ್ದಾರೆ ಎಂದು ಬ್ರಿಟನ್‌ನ ರಾಣಿ ಎರಡನೇ ಎಲಿಜಬೆತ್ (95) ಪ್ರಕಟಿಸಿದ್ದಾರೆ.

ರಾಣಿಯಾಗಿ ಅಧಿಕಾರ ವಹಿಸಿ 70 ವರ್ಷಗಳು ಸಂದಿರುವ ಸಂದರ್ಭದಲ್ಲಿ ಎರಡನೇ ಎಲಿಜಬೆತ್ ಅವರು ಕೆಮಿಲಾ ಅವರನ್ನು ರಾಣಿಯಾಗಿ ಘೋಷಿಸಿರುವ ಸಂದೇಶ ನೀಡಿದ್ದಾರೆ.

ತಮ್ಮ ಸೊಸೆ ಕೆಮಿಲಾ (74) ಮೇಲೆ ನಿರೀಕ್ಷೆ ವ್ಯಕ್ತಪಡಿಸಿರುವ ಎಲಿಜಬೆತ್, ‘ಚಾರ್ಲ್ಸ್ ರಾಜನಾಗುತ್ತಿದ್ದಂತೆ ಕೆಮಿಲಾ ರಾಣಿಯ ಸ್ಥಾನ (ಕ್ವೀನ್ ಕನ್ಸರ್ಟ್) ಅಲಂಕರಿಸಲಿದ್ದಾರೆ’ ಎಂದು ಹೇಳಿದ್ದಾರೆ.

ಈ ಸಂಬಂಧ ಲಿಖಿತ ಸಂದೇಶ ಪ್ರಕಟಿಸಿರುವ ರಾಣಿ ಎರಡನೇ ಎಲಿಜಬೆತ್, ‘ನಿಮ್ಮೆಲ್ಲರ ಸಹಕಾರಕ್ಕೆ ನನ್ನ ಧನ್ಯವಾದಗಳು. ಮುಂದೆ ನನ್ನ ಮಗ ಚಾರ್ಲ್ಸ್ ರಾಜನಾದ ನಂತರ, ಅವರು ಮತ್ತು ಅವರ ಪತ್ನಿ ಕೆಮಿಲಾ ಅವರಿಗೆ ನೀವು ಪೂರ್ಣ ಸಹಕಾರ ನೀಡುವ ನಂಬಿಕೆ ಇದೆ; ಹಾಗೆಯೇ ರಾಜ ಕಾರ್ಯಗಳಲ್ಲಿ ನಿರತರಾಗಿರುವ ಕೆಮಿಲಾ ಅವರು ರಾಣಿಯಾಗಲಿದ್ದಾರೆ’ ಎಂದು ತಿಳಿಸಿದ್ದಾರೆ.

ವಿಶಿಷ್ಟ ಹೆಗ್ಗಳಿಕೆ: ಎರಡನೇ ಎಲಿಜಬೆತ್ ಅವರು 70 ವರ್ಷ ರಾಣಿಯಾಗಿ ಮೆರೆದ ಮೊದಲ ರಾಜವಂಶಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಕಾಲೇಜ್ ಕಟ್ಟಡ ನಿರ್ಮಾಣಕ್ಕೆ ನೆರವಾದ ಲತಾದೀದಿ

• ಚಂದ್ರಕಾಂತ ಮಸಾನಿ

ಬೀದರ್: ಸಂಗೀತ ಸಾಮ್ರಾಜ್ಞೆ ಲತಾ ಮಂಗೇಶ್ಕರ್ ಇಹಲೋಕ ತ್ಯಜಿಸಿದ ನಂತರ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ನೀಲಂಗಾ ತಾಲ್ಲೂಕಿನ ಷಹಜಾನಿ ಔರಾದ್ ಗ್ರಾಮದಲ್ಲಿ ಸಂಪೂರ್ಣ ಮೌನ ಆವರಿಸಿದೆ. ಬೀದರ್ ಜಿಲ್ಲೆಯ ಹುಲಸೂರು ತಾಲ್ಲೂಕು ಕೇಂದ್ರದಿಂದ 10 ಕಿ.ಮೀ ಅಂತರದಲ್ಲೇ ಈ ಗ್ರಾಮ ಇದೆ. ಷಹಜಾನಿ ಔರಾದ್ ಗ್ರಾಮದಲ್ಲಿ ಲತಾ ಮಂಗೇಶ್ಕರ್ ಅವರು ಕಾಲೇಜು ಕಟ್ಟಿಸಿ ಗಡಿಭಾಗದ ಜನರ ಮನದಲ್ಲಿ ಅಚ್ಚಳಿಯದಂತೆ ಉಳಿದಿದ್ದಾರೆ.

ಔರಾದ್ ಷಹಜಾನಿ ಗ್ರಾಮದ ಮುಖಂಡರು 1970ರಲ್ಲಿ ಕಾಲೇಜನ್ನು ಸ್ಥಾಪಿಸಲು ಅನೇಕ ಸಭೆಗಳನ್ನು ನಡೆಸಿ ಹೊಸ ಕಾಲೇಜಿಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿದವರ ಹೆಸರು ಇಡಲು ತೀರ್ಮಾನಿಸಿದರು.

ಗ್ರಾಮಸ್ಥರೆಲ್ಲ ಗಾಯಕ ಮತ್ತು ಸಂಗೀತಗಾರ ಮಾಸ್ಟರ್ ದೀನಾನಾಥ್ ಮಂಗೇಶ್ಕರ್ ಅವರ ಹೆಸರನ್ನೇ ಇಡಬೇಕು ಎಂದು ಒಕ್ಕೊರಲಿನಿಂದ ನಿರ್ಧರಿಸಿದರು. ನಂತರ ಗ್ರಾಮದ ಮುಖಂಡರ ನಿಯೋಗವೊಂದು ಕೊಲ್ಹಾಪುರದ ಪನ್ಹಾಳಾದಲ್ಲಿ ಇದ್ದ ಲತಾ ಮಂಗೇಶ್ಕರ್ ಅವರನ್ನು ಭೇಟಿ ಮಾಡಿದರು. ದೀನಾನಾಥ್ ಮಂಗೇಶ್ಕರ್ ಅವರ ಹೆಸರನ್ನು ಕಾಲೇಜಿಗೆ ಇಡಲು ಅವಕಾಶ ನೀಡಬೇಕು ಎಂದು ಎಲ್ಲರೂ ಮನವಿ ಮಾಡಿದರು. ತಮ್ಮ ತಂದೆಯ ಹೆಸರಿನಲ್ಲಿ ಕಾಲೇಜು ಸ್ಥಾಪನೆಯಾಗುತ್ತಿರುವ ಸುದ್ದಿ ಕೇಳಿ ಮಂಗೇಶ್ಕರ್ ಕುಟುಂಬದವರೂ ಖುಷಿಯಾದರು.

1970ರಲ್ಲಿ ಕಾಲೇಜು ಕಟ್ಟಡಕ್ಕೆ ಶಂಕುಸ್ಥಾಪನೆಯನ್ನೂ ನೆರವೇರಿಸಲಾಯಿತು. ಮಾಯಿ ಮಂಗೇಶ್ಕರ್ ಮತ್ತು ಗ.ದಿ.ಮದ್ಗುಲ್ಕರ್ ಮೊದಲಾದವರು ಪಾಲ್ಗೊಂಡಿದ್ದರು. 1976ರಲ್ಲಿ ನಡೆದ ಕಾಲೇಜು ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿ ಶಂಕರರಾವ್ ಚವ್ಹಾಣ, ಲತಾ ಮಂಗೇಶ್ಕರ್, ಶಾಸಕ ಶಿವರಾಜ್ ಪಾಟೀಲ ಚಾಕೂರಕರ್ ಭಾಗವಹಿಸಿದ್ದರು.

ಇದೇ ವೇಳೆಯಲ್ಲಿ ಹಣಕಾಸಿನ ಕೊರತೆಯಿಂದಾಗಿ ಕಾಲೇಜು ಕಟ್ಟಡದ ಕಾಮಗಾರಿ ಅಪೂರ್ಣವಾಗಿರುವ ವಿಷಯ ತಿಳಿದ ಲತಾ ಮಂಗೇಶ್ಕರ್ ಅವರು ಔರಾದ್ ಷಹಜಾನಿಯಲ್ಲಿ ‘ಲತಾ ಮಂಗೇಶ್ಕರ್ ಸಂಗೀತ ಕಾರ್ಯಕ್ರಮ’ ಆಯೋಜಿಸಲು ತೀರ್ಮಾನಿಸಿದರು. ಫೆಬ್ರುವರಿ 1981 ರಲ್ಲಿ ಲತಾ ಮಂಗೇಶ್ಕರ್ ಅವರು ತಮ್ಮ ಒಡಹುಟ್ಟಿದವರೊಂದಿಗೆ ಗ್ರಾಮಕ್ಕೆ ಬಂದು ಕಾರ್ಯಕ್ರಮವನ್ನೂ ನೀಡಿದರು.

ಕಾರ್ಯಕ್ರಮಕ್ಕೆ ಕಲಾಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ದೊರಕಿತು. ನಿರೀಕ್ಷೆಗೂ ಮೀರಿ ಜನರಿಂದ ದೇಣಿಗೆ ಸಂಗ್ರಹವಾಯಿತು. ಎಲ್ಲ ಹಣವನ್ನೂ ಕಾಲೇಜಿಗೆ ನೀಡಿದರು. ನಂತರ ಸುಸಜ್ಜಿತ ಕಟ್ಟಡ ನಿರ್ಮಾಣವಾಯಿತು.

‘ಲತಾ ಮಂಗೇಶ್ವರ ಅವರು ಶಿಕ್ಷಣ ಪ್ರೇಮಿಯೂ ಆಗಿದ್ದರು. ಸಾರಿಗೆ ಸಂಪರ್ಕದ ಸಮಸ್ಯೆ ಇದ್ದರೂ ಪ್ರಯಾಸಪಟ್ಟು ಖಾಸಗಿ ವಾಹನದಲ್ಲಿ ಬಂದು ಗ್ರಾಮದ ಜನರಿಗೆ ನೆರವಾದರು. ಅವರ ಸೇವಾಭಾವನ್ನು ಗ್ರಾಮದ ಜನತೆ ಇಂದಿಗೂ ಮರೆತಿಲ್ಲ’ ಎಂದು ಹಿರಿಯ ಪತ್ರಕರ್ತ ರವಿಕುಮಾರ ದೇಶಮುಖ ಹೇಳುತ್ತಾರೆ.

ಬೀದರ್ ಜಿಲ್ಲೆಗೆ ಹೊಂದಿಕೊಂಡಿರುವ ಲಾತೂರ್ ಜಿಲ್ಲೆಯ ಷಹಜಾನಿ ಔರಾದ್ ಗ್ರಾಮಕ್ಕೆ ಭೇಟಿ ನೀಡಿದ್ದ ಸಂಗೀತ ಸಾಮ್ರಾಜ್ಞೆ ಲತಾ ಮಂಗೇಶ್ಕರ್

ಲತಾ ಮಂಗೇಶ್ಕರ್ ಜೀವನದ ಪ್ರಮುಖ ಅಂಶಗಳು



- ಲತಾ ಮಂಗೇಶ್ಕರ್ 1929ರ ಸೆಪ್ಟೆಂಬರ್ 28ರಂದು ಮಧ್ಯ ಪ್ರದೇಶದ ಇಂದೋರ್‌ನಲ್ಲಿ ಜನನ
- ತಂದೆ ಹೆಸರಾಂತ ಮರಾಠಿ ನಟ ಹಾಗೂ ರಂಗಕರ್ಮಿ ದೀನನಾಥ ಮಂಗೇಶ್ಕರ್ ಮತ್ತು ತಾಯಿ ಸೇವಂತಿ
- ಜನ್ಮನಾಮ ಹೇಮಾ ಎಂದು ಇಡಲಾಗಿತ್ತು. ಬಳಿಕ ತಮ್ಮ ತಂದೆಯ ನಾಟಕ ಭಾವ ಬಂಧನದಲ್ಲಿನ ಲತಿಕಾ ಪಾತ್ರ ನಿರ್ವಹಣೆ ನಂತರ ಲತಾ ಎಂದು ನಾಮಕರಣವಾಯಿತು.
- ಐದನೇ ವಯಸ್ಸಿನಲ್ಲೇ ತಮ್ಮ ತಂದೆಯ ಸಂಗೀತ ನಾಟಕಗಳಲ್ಲಿ ನಟಿಯಾಗಿ ವೃತ್ತಿ ಪ್ರಾರಂಭ.
- ಮುಂಬೈನ ಭೆಂಡಿ ಬಜಾರ್ ಘರಾನಾದಲ್ಲಿ ಸಂಗೀತ ತರಬೇತಿ
- ಲತಾ ಅವರು 1942ರಲ್ಲಿ ಕಿತಿ ಹಸಾಲ್ ಎಂಬ ಮರಾಠಿ ಚಿತ್ರಕ್ಕೆ ತಮ್ಮ ಮೊದಲ ಗೀತೆ ಹಾಡಿದರು. ಆದರೆ ಕಾರಣಾಂತರಗಳಿಂದ ಚಿತ್ರ ಬಿಡುಗಡೆಯಾಗಲಿಲ್ಲ.
- 1943ರಲ್ಲಿ ಬಿಡುಗಡೆಯಾದ ಮರಾಠಿ ಚಿತ್ರ ಗಜಾಭಾವುಗಾಗಿ ‘ಮಾತಾ ಏಕ್ ಸಪೂತಿ ಕಿ ದುನಿಯಾ ಬಾದಲ್ ದೇ ತು’ ಎಂಬ ತಮ್ಮ ಮೊದಲ ಹಿಂದಿ ಗೀತೆಯ ಧ್ವನಿ ಮುದ್ರಣ.
- ಲತಾ ಅವರ ಧ್ವನಿಯು ತುಂಬಾ ತೆಳುವಾಗಿದೆ ಎಂದು ಪ್ರಸಿದ್ಧ ನಿರ್ಮಾಪಕ ಶಶಾಧರ್ ಮುಖರ್ಜಿ ಅವರು ಲತಾ ಅವರ ಧ್ವನಿಯನ್ನು ನಿರಾಕರಿಸಿದ್ದರು.
- 1942–2015ರವರೆಗೂ ಸುದೀರ್ಘ 73 ವರ್ಷಗಳ ಕಾಲ ಹಾಡಿದ ಲತಾ ಮಂಗೇಶ್ಕರ್ ಅವರು ಹಿಂದಿ ಮತ್ತು ಇತರ ಭಾಷೆಗಳಲ್ಲಿ 28 ರಿಂದ 30 ಸಾವಿರ ಹಾಡುಗಳನ್ನು ಹಾಡಿದ್ದಾರೆ.
- 1999-2005ರಲ್ಲಿ ರಾಜ್ಯಸಭೆಗೆ ನಾಮನಿರ್ದೇಶನ

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav

10 ಮತ್ತು 13 ವರ್ಷ ಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹4,000.00 **ಕೋಟಿ** ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹುದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (**ಈ-ಕುಬೇರ್**) ವ್ಯವಸ್ಥೆಯ ಮೂಲಕ 08 **ಫೆಬ್ರವರಿ** 2022 (**ಮಂಗಳವಾರ**) ರಂದು ನಡಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ (**https://rbiretaildirect.org.in**) ನಾನ್-ಕಾಂಪಿಟಿಟಿವ್ ಸ್ಕೀಮ್ ಅನುಸಾರವೈ ಯಕ್ತಿಕ ವಿನಿಯೋಜಕರು ಕೂಡಾ ಬಿಡ್ ಮಾಡಬಲ್ಲರು.

ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ 04 **ಫೆಬ್ರವರಿ** 2022 (**ಶುಕ್ರವಾರ**) ದಿನಾಂಕದ ಪತ್ರಿಕಾ ಪ್ರಕಟಣೆ ಆರ್‌ಬಿಐ ವೆಬ್ ತಾಣ (**www.rbi.org.in**) ವನ್ನು ನೋಡಿ.

“ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್‌ಎಂಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ”

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂರವಾಣಿ: 080–22220436, ಇ–ಮೇಲ್: aigrcomp@karnataka.gov.in
ಪೋರ್ಟಲ್ : https://igr.karnataka.gov.in
ಸಂಖ್ಯೆ: ಕಾಂಪ್/100/2020–21 ದಿನಾಂಕ: 05.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ **ಕಛೇರಿಗಳಲ್ಲಿ ಹೊಸದಾಗಿ ಅಳವಡಿಸಲಾಗಿರುವ ಆನ್‌ಲೈನ್ ಯು.ಪಿ.ಎಸ್ ಮತ್ತು ಬ್ಯಾಟರಿಗಳ ತಪಾಸಣೆ ಮಾಡಲು ಥರ್ಡ್ ಪಾರ್ಟಿ ಏಜೆನ್ಸಿ ಆಯ್ಕೆ ಮಾಡಲು** ಆಸಕ್ತಿ ಹೊಂದಿರುವ ಏಜೆನ್ಸಿಗಳು ಟೆಂಡರುಗಳನ್ನು ಸಲ್ಲಿಸಲು ಈ ಮೂಲಕ ಆಹ್ವಾನ ನೀಡಲಾಗಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **21–02–2022ರ ಸಂಜೆ 5.30 ಗಂಟೆಯವರೆವಿಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ **ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ)** (ಇ–ಮೇಲ್: **aigrcomp@karnataka.gov.in**) ಇವರನ್ನು ಸಂಪರ್ಕಿಸಿ.
ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು
DIPR/DDU/YC/3226/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ ಚಿಕ್ಕಮಗಳೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು
Emall-dinochikmagaur@gmail.com Ph:08262-2220429
ಸಂಖ್ಯೆ :ಜಿಆಕುಕ:ಸಿವಿ(5)34/2021-22 ದಿನಾಂಕ : 03–02–2022

:: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಇವರ ಅಧೀನದ ಆರೋಗ್ಯ ಸಂಸ್ಥೆಗಳಿಗೆ 2022–23 ನೇ ಸಾಲಿಗೆ 166 ಗ್ರೂಪ್ ’ಡಿ’ 30 ಫಾರ್ಮಾಸಿಸ್ಟ್ ಮತ್ತು 05 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗೆ ಹೊರ ಸಂಪನ್ಮೂಲದಿಂದ ಒದಗಿಸುವುದಕ್ಕಾಗಿ ಅರ್ಹ ಸಂಸ್ಥೆಗಳಿಂದ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು http//eproc.karnataka.gov.inರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು

ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ** (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ದೂರವಾಣಿ: 080-23407011-25, ಫ್ಯಾಕ್ಸ್:91-080-23208970, ವೆಬ್‌ಸೈಟ್:www.kssidc.co.in
ಸಂಖ್ಯೆ: ವಾಣಿಜ್ಯ/ಕಸಾ:/ಸಾಗಣೆ/4ನೇ ಕರೆ ಟೆಂಡರ್/2021–23 ದಿನಾಂಕ:07.02.2022

ಇ–ಪೋರ್ಟಲ್ ಮುಖಾಂತರ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ಸಾಗಣೆಗಾಗಿ 4ನೇ ಕರೆ ಟೆಂಡರ್ ಪ್ರಕಟಣೆ.

ಹ್ಯಾಂಡಲಿಂಗ್ / ನಿರ್ವಹಣೆ, ಲೋಡಿಂಗ್, ಅನ್ ಲೋಡಿಂಗ್ ಮತ್ತು ಸ್ಟಾಕಿಂಗ್ ಒಳಗೊಂಡಂತೆ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ರಸ್ತೆ ಮೂಲಕ ಸಾಗಣೆ ಮಾಡುವ ಸಲುವಾಗಿ ಎರಡು (2) ವರ್ಷಕ್ಕೆ ಅರ್ಹ ಗುತ್ತಿಗೆದಾರರನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಆಹ್ವಾನಿಸಲಾಗಿದೆ. ವರ್ಷಕ್ಕೆ ಅಂದಾಜು 1500 ರಿಂದ 2000 ಮೆ.ಟನ್ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ಮತ್ತು ಸುರುಳಿಗಳು, ಇಚ್ಛೆಯುಳ್ಳ ಅರ್ಹ ಸಾಗಣೆ ಗುತ್ತಿಗೆದಾರರು ತಮ್ಮ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಬಹುದಾಗಿದೆ. ನಿಗಮದ ವೆಬ್‌ಸೈಟ್ www.kssidc.co.in ಮೂಲಕ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್ ಸಂಖ್ಯೆ 8884415756, 8884415758, 8884415855 ಹಾಗೂ 9113033505 ಸಂಪರ್ಕಿಸಬಹುದಾಗಿದೆ.

ಇ–ಪೋರ್ಟಲ್‌ನಲ್ಲಿ ನೋಂದಾಯಿಸಲು ಹಾಗೂ ಹೆಚ್ಚಿನ ವಿವರಗಳನ್ನು (ಟೆಂಡರ್ ಷರತ್ತು ಮತ್ತು ನಿಬಂಧನೆಗಳಿಗಾಗಿ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ https:e.proc.karnataka.gov.in ದಿನಾಂಕ **07.02.2022ರ ನಂತರ** ಪಡೆಯಬಹುದಾಗಿದೆ ಮತ್ತು ಟೆಲಿಫೋನ್ ಸಂಖ್ಯೆ 080–46010000/ 080–68948777 ಸಂಪರ್ಕಿಸಬಹುದಾಗಿದೆ ಹಾಗೂ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **23.02.2022 ಸಂಜೆ 4.00.ಗಂಟೆಯವರೆಗೆ.**
ಸಹಿ/– ಪ್ರಧಾನ ವ್ಯವಸ್ಥಾಪಕರು(ವಾ)
ವಾಸಾಸಂಇ/ಬೆಂ.ನ/ಜಿಎ/3234/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

INNOVATE KARNATAKA K-tech

ಪ್ರಸ್ತಾವನೆಗಾಗಿ ಕರೆ

ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ಪ್ರಕಟಣೆ ಸಂಖ್ಯೆ : KITS/IT/SUCE/6/2021-IT-KITS

ಕಿಟ್ಸ್‌ನಿಂದ ಪ್ರತ್ಯೇಕವಾಗಿ ಮಹಿಳೆಯರ ನೇತೃತ್ವದಲ್ಲಿರುವ ನವೋದ್ಯಮಗಳಿಗಾಗಿ ಇನ್ಕ್ಯುಬೇಷನ್ ಹಾಗೂ ಆಕ್ಸಲರೇಷನ್ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅರ್ಹ ಲಾಭಕ್ಕಾಗಿ ಅಲ್ಲದ ಸಂಸ್ಥೆಗಳಿಂದ (Not-for-profit Organisations) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಇನ್ಕ್ಯುಬೇಟರ್ಸ್ ಹಾಗೂ ಆಕ್ಸಲರೇಟರ್ಸ್‌ಗಳು ಅವಶ್ಯವಿರುವ ದಾಖಲೆಗಳನ್ನು ಲಗತ್ತಿಸಿ ನಿಗಧಿತ ನಮೂನೆಯಲ್ಲಿ ತಮ್ಮ ಅರ್ಜಿಯನ್ನು ಆನ್‌ಲೈನ್ ಪೋರ್ಟಲ್ https://www.missionstartupkarnataka.org/elevate-women?en ಮೂಲಕ ಸಲ್ಲಿಸುವುದು ಮತ್ತು ವಿಷಯ “Elevate Women” ಎಂದು ಸೂಚಿಸಿ kitsgok@karnataka.gov.in ಗೆ ಇ–ಮೇಲ್ ಕಳುಹಿಸುವುದು.

ಪ್ರಸ್ತಾವನೆಗಾಗಿ ಈ ಕರೆಯು ಮಾಹಿತಿಯು https://www.missionstartupkarnataka.org/elevate-women?en ನಲ್ಲಿ ಸಹ ಲಭ್ಯವಿರುವುದು.

ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ 24.02.2022 ರಂದು ಸಂಜೆ 5.00 ಗಂಟೆಗೆ ಅಥವಾ ಮುಂಚಿತವಾಗಿ ಎಂದು ನಿಗಧಿ ಪಡಿಸಲಾಗಿದೆ. ಪೂರ್ವಾರ್ಹತೆ ಅಗತ್ಯತೆಗಳಿಗೆ ಹಾಗೂ ಉಳಿದ ನಿಬಂಧನೆಗಳಿಗೆ Call for Proposals ಅನ್ನು ವೀಕ್ಷಿಸುವುದು.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ ‘ಬಿ’ ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in
ವಾ.ಸಾ.ಸಂ.ಇ/ಬೆಂ.ನಗರ/3246/ಆಕಾರ್/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ ರೋಡಲಬಂಡಾ–584127, ತಾ: ಲಿಂಗಸುಗೂರು ಜಿ: ರಾಯಚೂರು

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/21–22/4685 ದಿನಾಂಕ:– 1.2.2022
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/21–22/4688 ದಿನಾಂಕ:– 1.2.2022
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/21–22/4694 ದಿನಾಂಕ:– 1.2.2022
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/21–22/4696 ದಿನಾಂಕ:– 1.2.2022

ಅಲ್ಪಾವಧಿ ಟೆಂಡರ ಪ್ರಕಟಣೆ (Through eprocurement portal only)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನೋಂದಾಯಿಸಿದ ಇಲೆಕ್ಟ್ರಿಕಲ್ 1ನೇ ದರ್ಜೆ, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ 1ನೇ ದರ್ಜೆ, ಕೃಭಾಜನಿನಿ ಕೆಟಗರಿ–3 ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯ ಅಡಿಯಲ್ಲಿ ಬರುವ ಬೋರ್‌ವೆಲ್,ಸಿ.ಸಿ.ರಸ್ತೆ ಮತ್ತು ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳಿಗೆ (4+2+2+2=10 ಸಂಖ್ಯೆ) ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರು ದಿನಾಂಕ 2.2.2022 ರಿಂದ 21.2.2022ರ ಸಾಯಂಕಾಲ 4.00 ಗಂಟೆಯವರೆಗೆ www.eproc.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 23.2.2022 ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರಮೆಂಟ್‌ನ ವೆಬ್‌ಸೈಟ್ www.eproc.kamataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಕೃಭಾಜನಿನಿ, ನಾಎದಂಕಾ ವಿಭಾಗ, ರೋಡಲಬಂಡಾ.
ವಾ.ಸಾ.ಸಂ.ಇ/ರಾಯಚೂರು/593/ಎಂ.ಸಿ.&ಎ/2021–22

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–52
Ph: 080-22374832, 22374834 Fax: 080-22374833, e-mail: md.dbcdc@gmail.com, visit at: www.karnatka.gov.in/dbcdc
ಸಂಖ್ಯೆ:ದೇಹಿನಿ/ಗಂ.ಕ/ಸಿಆರ್–06/2021–22 **ಪ್ರಕಟಣೆ** ದಿನಾಂಕ: 05.02.2022

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2021–22ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ಪ್ರವರ್ಗ–1. 2ಎ, 3ಎ ಮತ್ತು 3ಬಿ ರಲ್ಲಿ ಒಳಪಡುವ (ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಕಾಡುಗೊಲ್ಲ / ಹಟ್ಟಿಗೊಲ್ಲ. ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳು, ಒಕ್ಕಲಿಗ, ಲಿಂಗಾಯತ, ಮರಾಠ ಮತ್ತು ಇದರ ಉಪ ಸಮುದಾಯಗಳು ಹೊರತುಪಡಿಸಿ) ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಕೆಳಕಂಡಂತೆ ಅರ್ಹತೆ ಹೊಂದಿರಬೇಕಾಗಿರುತ್ತದೆ.

ಕನಿಷ್ಠ 2 ಎಕರೆ ಹಾಗೂ ಗರಿಷ್ಠ 5 ಎಕರೆ ಜಮೀನು ಹೊಂದಿದ್ದು, ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿಲ್ಲದೆ ಇರುವ ಸಣ್ಣ ಹಾಗೂ ಅತಿ ಸಣ್ಣ ರೈತರಾಗಿದ್ದು, ವಾರ್ಷಿಕ ವರಮಾನ ರೂ. 40,000/–ಗಳ ಮಿತಿಯಲ್ಲಿರಬೇಕು. **ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ** ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.

24 ಜಿಲ್ಲೆಗಳಿಗೆ ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳಿಗೆ ಘಟಕ ವೆಚ್ಚ ರೂ.2.50 ಲಕ್ಷ ನಿಗಧಿಪಡಿಸಿದ್ದು, ಇದರಲ್ಲಿ ರೂ.2.00 ಲಕ್ಷ ಸಹಾಯ ಧನ ಹಾಗೂ ರೂ. 50,000/– ಗಳ ಶೇ. 4 ರ ಬಡ್ಡಿ ದರದ ಸಾಲ ಒಳಗೊಂಡಿರುತ್ತದೆ. **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಿಗೆ** ಘಟಕ ವೆಚ್ಚ ರೂ. 4.00 ಲಕ್ಷ ನಿಗಧಿಪಡಿಸಿದ್ದು. ಇದರಲ್ಲಿ ರೂ. 3.50 ಲಕ್ಷ ಸಹಾಯಧನ ಹಾಗೂ ರೂ. 50,000/– ಗಳ ಶೇ.4 ರ ಬಡ್ಡಿ ದರದ ಸಾಲ ಒಳಗೊಂಡಿದ್ದು, ನಿಗಧಿತ ಘಟಕ ವೆಚ್ಚದಿಂದ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಒದಗಿಸಲಾಗುವುದು. ವೈಯಕ್ತಿಕ ನೀರಾವರಿ ಕೊಳವೆ ಬಾವಿ ಘಟಕಕ್ಕೆ ನಿಗಧಿಪಡಿಸಿದ ಘಟಕ ವೆಚ್ಚದಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದ ಬಾವಿ ಮೂಲಕ ನೀರಾವರಿ ಸೌಲಭ್ಯ ಒದಗಿಸಲು ಅವಕಾಶ ಇರುತ್ತದೆ.

ಗಂಗಾ ಕಲ್ಯಾಣ ಯೋಜನೆ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗದ ಫಲಾಪೇಕ್ಷಿಗಳು ನಿಗಮದ ವೆಬ್‌ಸೈಟ್ **www.dbcdc.karnatka.gov.in** ಇಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ಸಹಾಯವಾಣಿ ಸಂಖ್ಯೆ 080–22374832 ಅಥವಾ ಆಯಾ ಜಿಲ್ಲಾ ಕಛೇರಿ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಅದರಂತೆ ಸಂಪರ್ಕಿಸಬಹುದು. **ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸಲು ಕಡೆಯ ದಿನಾಂಕ: 07.03.2022.**
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ವಾಸಾಸಂಇ/ಬೆಂನ/ಜಿಎ/3223/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ
ಸಂಖ್ಯೆ:ಕಾಇಂ/ಲೋವಿಚಿ/ಜೆಇ–3/ಟೆಂಡರ್–102/2021–22 ದಿನಾಂಕ:03.02.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್: **www.eproc.karnataka.gov.in/eportal/index.seam** ನಲ್ಲಿ ಭಾಗವಹಿಸಬಹುದು.

ಕ್ರ.ಸಂ.	ಕಾಮಗಾರಿಗಳ ವಿವರ	ಟೆಂಡರಿಗಿಟ್ಟ ಮೊತ್ತ(ರೂ.ಲಕ್ಷಗಳಲ್ಲಿ)
	ಇ–ಪ್ರೊಕ್ಯೂರ್‌ಮೆಂಟ್ ಮೂಲಕ–ದ್ವಿ–ಲಕೋಟೆ ಪದ್ಧತಿ	
	ಲೆಕ್ಕ ಶೀರ್ಷಿಕೆ: 5054–04–337–0–01–422 ಜಿಲ್ಲಾ ಮತ್ತು ಇತರೆ ರಸ್ತೆಗಳು–ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ).	
1	ಪ್ಯಾಕೇಜ್:1: 1) ಹಿರಿಯೂರು ತಾಲ್ಲೂಕು ಬೆನಕನಹಳ್ಳಿ ಎಸ್.ಸಿ ಕಾಲೋನಿಯಿಂದ ಉಪ್ಪಾರಹಟ್ಟಿ ಕಾಲೋನಿವರೆಗೆ ಹಾಗೂ ಹರಿಯಬ್ಬೆ ಎಸ್.ಸಿ.ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ 2) ಹಿರಿಯೂರು ತಾಲ್ಲೂಕು ಹೂವಿನಹೊಳೆ ಲಂಬಾಣಿ ತಾಂಡದ ಮುಖ್ಯ ರಸ್ತೆ ಹಾಗೂ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ 3) ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಶ್ರೀ ರೇಣುಕಾ ಪರಮೇಶ್ವರಿ ದೇವಸ್ಥಾನ ಹತ್ತಿರ ಆಯ್ದ ಭಾಗಗಳಲ್ಲಿ ಸಿ.ಸಿ. ರಸ್ತೆ ನಿರ್ಮಾಣ 4) ಹಿರಿಯೂರು ತಾಲ್ಲೂಕು ನಂದಿಹಳ್ಳಿ ಎಸ್.ಸಿ. ಕಾಲೋನಿಯಿಂದ ಶ್ರೀ ರಂಗನಾಥಸ್ವಾಮಿ ದೇವಸ್ಥಾನ ವರೆಗೆ ಆಯ್ದ ಭಾಗಗಳಲ್ಲಿ ಸಿ.ಸಿ. ರಸ್ತೆ ನಿರ್ಮಾಣ.	400/–
	ಲೆಕ್ಕ ಶೀರ್ಷಿಕೆ: 5054–04–337–0–01–423 ಜಿಲ್ಲಾ ಮತ್ತು ಇತರೆ ರಸ್ತೆಗಳು–ಗಿರಿಜನ ಉಪಯೋಜನೆ (ಟಿ.ಎಸ್.ಪಿ)	
2	ಪ್ಯಾಕೇಜ್:1: 1) ಹಿರಿಯೂರು ತಾಲ್ಲೂಕು ದೇವರಕೊಟ್ಟ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ, ಹಳೆಯಳನಾಡು ಗ್ರಾಮದ ಎಸ್.ಟಿ.ಕಾಲೋನಿಯಲ್ಲಿ ಹಾಗೂ ಹೊಸಯಳನಾಡು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. 2) ಹಿರಿಯೂರು ತಾಲ್ಲೂಕು ಅಂಬಲಗೆರೆ ರಂಗನಾಥಸ್ವಾಮಿ ದೇವಸ್ಥಾನ ಹತ್ತಿರ ಮತ್ತು ಚಿನ್ನಮ್ಮನಹಳ್ಳಿ ಗ್ರಾಮದ ಆಯ್ದ ಭಾಗಗಳಲ್ಲಿ ಸಿ.ಸಿ. ರಸ್ತೆ ನಿರ್ಮಾಣ.	200/–

1) ಟೆಂಡರ್ ಬಗ್ಗೆ ವಿಚಾರಿಸಲು / ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: **11.02.2022ರ 17:30 ಗಂಟೆಗೆ.** 2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: **14.02.2022ರ 16:00 ಗಂಟೆಗೆಯವರೆಗೆ. 3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **16.02.2022ರಂದು 16:01 ಗಂಟೆಗೆ. 4)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **19.02.2022ರಂದು 11:00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂ. ಸಂಖ್ಯೆ: 08194–222446) ಹಾಗೂ ಹೆಚ್.ಪಿ. ಕಂಪನಿಯಿಂದ ಸಹಾಯಕ ದೂ. ಸಂಖ್ಯೆ: 080–25501216 ಮತ್ತು 080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ವಾಸಾಸಂಇ/ಚಿತ್ರದುರ್ಗ/ಜಿಎ/876/2021–22

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ, (ಪೂರ್ವ) 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ.ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ ಪಿ.ಬಿ/2143/2021–22, ದಿನಾಂಕ: 31.01.2022		57,20,726.87 / 1,14,415/–	14.02.2022ರ ಸಂಜೆ 4:00 ಗಂಟೆಯವರೆಗೆ	16.02.2022ರ ಸಂಜೆ 5:00 ಗಂಟೆಯ ನಂತರ
2	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ ಪಿ.ಬಿ/2145/2021–22, ದಿನಾಂಕ: 31.01.2022	1	26,82,482/– / 53,650/–	14.02.2022ರ ಸಂಜೆ 4:00 ಗಂಟೆಯವರೆಗೆ	16.02.2022ರ ಸಂಜೆ 5:00 ಗಂಟೆಯ ನಂತರ
3			2	28,50,488.50 / 57,110/–		
4			3	33,24,359.00 / 66,500/–		
5			4	36,47,511.30 / 73,000/–		
6			5	28,18,609.24 / 56,400/–		
		ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ)–1				
7	ದಕ್ಷಿಣ	ಬೆಂಜಮಂ/ಕಾನಿಅ(ದ)/ಸಅ/2856/ 2021–22, ದಿನಾಂಕ: 01.02.2022		12,50,266/– / 31,300/–	24.02.2022ರ ಸಂಜೆ 4:00 ಗಂಟೆಯವರೆಗೆ	28.02.2022ರ ಮಧ್ಯಾಹ್ನ 3:00 ಗಂಟೆಯ ನಂತರ
8	ದಕ್ಷಿಣ	ಬೆಂಜಮಂ/ಕಾನಿಅ(ಸ)/ಸಅ/2857/ 2021–22, ದಿನಾಂಕ: 01.02.2022		36,74,538/– / 73,500/–	15.02.2022ರ ಸಂಜೆ 4:00 ಗಂಟೆಯವರೆಗೆ	17.02.2022ರ ಮಧ್ಯಾಹ್ನ 3:00 ಗಂಟೆಯ ನಂತರ
9	ದಕ್ಷಿಣ	ಬೆಂಜಮಂ/ಕಾನಿಅ(ದ)/ಸಅ/2859/ 2021–22, ದಿನಾಂಕ: 01.02.2022		48,17,533/– / 96,400/–	17.02.2022ರ ಸಂಜೆ 4:00 ಗಂಟೆಯವರೆಗೆ	19.02.2022ರ ಮಧ್ಯಾಹ್ನ 3:00 ಗಂಟೆಯ ನಂತರ
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)				
		ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
10	ಎಂಐಎಸ್	ಬೆಂಜಮಂ/ಇಎಂಎಸ್/ಟಿಇ/ಎಂಎಸ್2/ಎಇ/ 319/2021–22, ದಿನಾಂಕ: 01.02.2022		58.19 ಲಕ್ಷಗಳು / 1.16 ಲಕ್ಷ	16.02.2022ರ ಸಂಜೆ 4:00 ಗಂಟೆಯೊಳಗೆ	18.02.2022ರ ಸಂಜೆ 4:00 ಗಂಟೆಗೆ
		ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಂಐಎಸ್)				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/DDU/BCPL/3224/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಉತ್ತರ ಪ್ರದೇಶ | ಉತ್ತರಾಖಂಡ | ಗೋವಾ | ಮಣಿಪುರ | ಪಂಜಾಬ್

ಪ್ರಜಾ ಮತ 2022

ಜನತಂತ್ರದ ಹಬ್ಬ

ಕಾಂಗ್ರೆಸ್ ಗೆದ್ದರೆ ಗೋವಾದಲ್ಲಿ ಗಣಿಗಾರಿಕೆ: ಚಿದಂಬರಂ

ಪಣಜಿ (ಪಿಟಿಐ): ಗೋವಾ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷವು ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದೆ. ಪಕ್ಷವು ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಗಣಿಗಾರಿಕೆಯನ್ನು ಮತ್ತೆ ಆರಂಭಿಸಲಾಗುವುದು ಎಂದು ಪಕ್ಷದ ಮುಖಂಡ ಪಿ.ಚಿದಂಬರಂ ಭರವಸೆ ಕೊಟ್ಟಿದ್ದಾರೆ. ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಣಿಗಾರಿಕೆಯು ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು. ಆದರೆ, 88 ಗಣಿಗಾರಿಕೆ ಗುತ್ತಿಗೆಗಳನ್ನು ಸುಪ್ರೀಂ ಕೋರ್ಟ್ 2018ರಲ್ಲಿ ರದ್ದು ಮಾಡಿತ್ತು. ಇದರೊಂದಿಗೆ ರಾಜ್ಯದಲ್ಲಿ ಗಣಿಗಾರಿಕೆಯು ಸಂಪೂರ್ಣ ಸ್ಥಗಿತವಾಗಿತ್ತು.

ಸಂಪನ್ಮೂಲಗಳನ್ನು ಶೋಧಿಸುವುದು ರಾಜ್ಯದ ಸಮಸ್ಯೆ ಅಲ್ಲ. ಬದಲಿಗೆ, ಅದರ ಹಂಚಿಕೆಯೇ ಸಮಸ್ಯೆ. ವಿವೇಕಯುತ ಮತ್ತು ಯೋಚನೆ ಮಾಡಬಲ್ಲ ಜನರ ಕೈಗೆ ಅಧಿಕಾರ ಸಿಕ್ಕರೆ ಎಲ್ಲದಕ್ಕೂ ಸಂಪನ್ಮೂಲ ಹಂಚಿಕೆ ಸಾಧ್ಯ. ಹಾಗಾದರೆ, ಪ್ರಣಾಳಿಕೆಯ ಎಲ್ಲ ಭರವಸೆಗಳನ್ನು ಐದು ವರ್ಷದಲ್ಲಿ ಈಡೇರಿಸಬಹುದು ಎಂದು ಚಿದಂಬರಂ ಹೇಳಿದರು.

ಚಿದಂಬರಂ ಅವರು ಗೋವಾ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನ ಹಿರಿಯ ವೀಕ್ಷಕರಾಗಿದ್ದಾರೆ.

ಗೋವಾ ರಾಜ್ಯವು ಮಾಹಿತಿ ತಂತ್ರಜ್ಞಾನ ಮತ್ತು ಔಷಧ ತಯಾರಿಕಾ ಕೇಂದ್ರವಾಗಿ ಮಾರ್ಪಟ್ಟರೆ ಸಂಪನ್ಮೂಲಕ್ಕೆ ಕೊರತೆಯೇ ಇರುವುದಿಲ್ಲ. ಸಂಪನ್ಮೂಲಗಳು ದುಪ್ಪಟ್ಟಾಗುತ್ತಾ ಹೋಗುತ್ತವೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿಫಲವಾದರೆ ವರಮಾನವೂ ಕುಗ್ಗುತ್ತದೆ ಎಂದು ಚಿದಂಬರಂ ವಿವರಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಅನುಗುಣವಾಗಿಯೇ ಕಾನೂನುಬದ್ಧವಾಗಿ ಸುಸ್ಥಿರ ರೀತಿಯಲ್ಲಿ ಗಣಿಗಾರಿಕೆ ನಡೆಸಬಹುದು. ಆದರೆ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ಗೋವಾದಲ್ಲಿ ಪಕ್ಷಾಂತರದ ರೋಗ ಕೊನೆಯಾಗಬೇಕು. ಪಕ್ಷಾಂತರಿಗಳನ್ನು ಉಪ ಚುನಾವಣೆಗಳಲ್ಲಿ ಸೋಲಿಸುವ ನಿರ್ಧಾರಕ್ಕೆ ಜನರು ಬಂದರೆ ಇದು ಸಾಧ್ಯ ಎಂದು ಚಿದಂಬರಂ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಬಿ.ಎಂ ಜಯರಾಮು, ಶ್ರೀರಂಗ ಸ್ಟೋರ್
ಇವರು ದಿ. 28.01.2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧವಾಗಿ ದಿ. 08.02.2022ನೇ ಮಂಗಳವಾರ ಹಾಲು–ತುಪ್ಪ ಕಾರ್ಯ, ಸಸ್ಯಹಾರ ಭೋಜನ ಮಧ್ಯಾಹ್ನ 12:30ಕ್ಕೆ, ಹಾಗೂ ದಿ. 09.02.2022 ಬುಧವಾರ ವೈಕುಂಠ ಸಮಾರಾಧನೆಯನ್ನು ಬಸವನಮತ್ತಿಕೆರೆ, ಗೌಡಗೆರೆ ಅಂಚೆ, ಯಡಿಯೂರು ಹೋ, ಕುಣಿಗಲ್ ತಾ॥ ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಭೋಜನ ಮಧ್ಯಾಹ್ನ 12:30ಕ್ಕೆ.
ಇಂತಿ ದುಃಖತಪ್ತರು
ಪತ್ನಿ ಶ್ರೀಮತಿ ಟಿ. ಜಯಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸಹೋದರರು ಹಾಗೂ ಕುಟುಂಬವರ್ಗ

ಭಾವಪೂರ್ಣ ಶ್ರದ್ಧಾಂಜಲಿ

ಕೆ. ಎ. ಕೋದಂಡರಾಮ್, ಕೆ.ಆರ್.ಪುರ
ಜನನ: 11–9–1953 – ನಿಧನ: 06–02–2022
ಇವರು ದಿನಾಂಕ 06–02–2022 (ಭಾನುವಾರ) ದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 07–02–2022 (ಸೋಮವಾರ) ದಂದು ಮಧ್ಯಾಹ್ನ 12:00 ಗಂಟೆಗೆ ಕೃಷ್ಣರಾಜಪುರದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಮಕ್ಕಳು ಮತ್ತು ಕುಟುಂಬವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಂ.ರೇವಣ್ಣ
ಜನನ–23.02.1922 ಮರಣ–28.01.2022
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ. ಪ್ರಾಂಶುಪಾಲರು, ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು–560055

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

GRT JEWELLERS Since 1964
ಉದ್ಯೋಗ ಅವಕಾಶಗಳು
1964 ರಿಂದ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವ GRT ಜ್ಯುವೆಲ್ಲರ್ಸ್
ಕೆ.ಆರ್. ಪುರಂ, ಬೆಂಗಳೂರು
ಷೋರೂಂಗಳಿಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ. ಹೊಸದಾಗಿ ಕೆಲಸವನ್ನು ಹುಡುಕುತ್ತಿರುವ ಹಾಗೂ ಅನುಭವವಿರುವ ಅಭ್ಯರ್ಥಿಗಳು ತಮ್ಮ ಸ್ವವಿವರಗಳು ಹಾಗೂ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನಕಲು ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಪದವೀಧರರು ಅಥವಾ PUC ಉತ್ತೀರ್ಣತೆ ಪಡೆದವರು (ಹೊಸಬರು ಅಥವಾ ಆಭರಣ ಮಾರಾಟ ಹಾಗೂ ಇತರೆ ರೀಟೈಲ್ ವಿಭಾಗದಲ್ಲಿ ಅನುಭವವಿರುವವರು)
ವಯೋಮಿತಿ : 22 ರಿಂದ 27 ವರ್ಷಗಳ ವರೆಗೆ
ಸೇಲ್ಸ್ ಅಸಿಸ್ಟೆಂಟ್ಸ್
PUC ಮತ್ತು 10ನೇ ತರಗತಿ (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು).
ವಯೋಮಿತಿ : 18 ರಿಂದ 22 ವರ್ಷಗಳ ವರೆಗೆ
ದಿನಾಂಕ ಮತ್ತು ಸಮಯ
07-02-2022, ಸೋಮವಾರ ; 08-02-2022, ಮಂಗಳವಾರ
(ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
ಕೆಆರ್ ಇನ್, ಕೃಷ್ಣರಾಜಪುರಂ
ನಂ. 16-17, ಎನ್.ಹೆಚ್-75, ಹಳೆಯ ಮದ್ರಾಸ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು - 560 036.
ಸಂಪರ್ಕ ಸಂಖ್ಯೆಗಳು :
96869 05786
96867 99888
ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ನಿಮ್ಮ ಸ್ವವಿವರಗಳನ್ನು (Resume) recruitment@grtjewels.comಗೆ ಕಳುಹಿಸಬಹುದು.

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

Skilled Labour

DELIVERY PERSON and Electrician Age: 20 to 35 for Reputed Co Contact: 9845054158

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ-ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ-ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ:9591580089.

ಪ್ರವಾಸ

Travel

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್, ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಪೆಬ್ರವರಿ, ಮಾರ್ಚ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

29.03.2022 10 ದಿನಗಳು ಆಗ್ರಾ, ಮಥುರಾ, ಅಲಹಾಬಾದ್, ಗಯ, ಕಾಶಿ, ಸೀತಾಮಡಿ, ವಿಂದ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್.(ರಿ) 9945445809/ 9902433500

CONNECT

MAHATHMA GANDHI B.ED COLLEGE
Sathagalli, Mysuru.
ACADEMIC YEAR : 2021-2022
ADMISSION FOR B.Ed
Contact :
0821-2420374, 93438 28203
Email: mahatmagandhitrust@gmail.com

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
Om Durga Anjanam Astro & Vastu Centre

ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಾಯ ದೇವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿಧ್ವಾನ್
ಗುರು ಶ್ರೀದೇವಾನಂದನ್ ರವರಿಂದ
ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ-ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ-ಪುರುಷ, ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವ ಮನಇಚ್ಛ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ಘಾಟನೆ ಮತ್ತು ಶತೃ ಸಂಬಂದಿತ ಮಾಟ ದೃಷ್ಟಿ ಶಾಪಗಳಿಗೆ ಇಲ್ಲೇ ಇಂದೇ ಪರಿಹಾರಕ್ಕೆ ಸಂಪರ್ಕಿಸಿ. ನಿಮ್ಮ ಇಚ್ಛೆಗೆ 24 ಘಂಟೆ ಮಾತ್ರ.
8217437023 / 9845005009

★ಶ್ರೇಯಸ್ ಟೂರ್ಸ್★ 21.03.2022 10ದಿನಗಳು (ಎಲ್ಲಾ ವಿಮಾನದಲ್ಲಿ) ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ ಸಹಿತ).,21.03.2022, 21.04.2022 11ದಿನಗಳು ಕಾಶಿ,ನೈಮಿಷ್ಯಾರಣ್ಯ,ಚಿತ್ರಕೂಟ, ಅಲಹಾಬಾದ್, ವಿಂದ್ಯಾವಾಸಿನಿ, ಗಯಾ,ರಾಜ್‌ಗಿರ್,ದೇವಘರ್. 9743351212, 9206979202, 6366322639

19.2.2022 ಮಧ್ಯಪ್ರದೇಶ, ಗುಜರಾಜ್ 10.3.2022 ನೇಪಾಳ, ಮುಕ್ತಿನಾಥ್ 15.3.2022 ಕಾಶಿ, ಗಯಾ, ಅಲಹಾಬಾದ್ 1.5.2022 ಗಂಗೋತ್ರಿ, ಯಮುನೋತ್ರಿ, ಕೇದಾರ್ನಾಥ್, ಬದರಿನಾಥ್, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

★ಶ್ರೇಯಸ್ ಟೂರ್ಸ್★ ದಿನಾಂಕ:15.04.2022, 08.05.2022 23/15/12/06ದಿನಗಳು ಈಶಾನ್ಯಭಾರತ ರಾಜ್ಯಗಳ (ಸೆವೆನ್ ಸಿಸ್ಟರ್ಸ್)ಪ್ರವಾಸ.ಅಸ್ಸಾಂ, ಅರುಣಾಚಲ,ಮೇಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ,02.06.2022, 12.06.2022 8ದಿನಗಳು ಗ್ಯಾಂಗಟಕ್,ಡಾರ್ಜಲಿಂಗ್, ನಾಂಚಿ,ಮಿರಿಕ್,ಚಾಂಗುಲೇಖ, ಬಾಬಾಮಂದಿರ,ಲಾಚೆನ್. 9743351212, 9206979202, 6366322639

ಮಹಾಶಿವರಾತ್ರಿ, ಪ್ರಯುಕ್ತ ರಾಮೇಶ್ವರ, ಅಘೋರೇಶ್ವರ, ಮಧುಕೇಶ್ವರ, ಸಹಸ್ರಲಿಂಗ, ಕಮಲಶಿಲೆ, ಮಂದಾರ್ತಿ, ಶಂಕರನಾರಾಯಣ ದೇಗುಲಗಳ 2 ದಿನಗಳ ಪ್ರವಾಸ ಅನುಗ್ರಹಯಾತ್ರ: 9880079351

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಒಳಾಂಗಣ, ಹೊರಾಂಗಣ ಪ್ರಚಾರ ಸಭೆಗಳಲ್ಲಿ ಹೆಚ್ಚು ಜನರು ಸೇರಲು ಅವಕಾಶ

ರೋಡ್‌ಶೋ ನಿಷೇಧ ವಿಸ್ತರಣೆ

ನವದೆಹಲಿ (ಪಿಟಿಐ): ರೋಡ್ ಶೋ, ಪಾದಯಾತ್ರೆ, ಸೈಕಲ್ ಮತ್ತು ವಾಹನ ರ‍್ಯಾಲಿಗಳ ಮೇಲಿನ ನಿಷೇಧವನ್ನು ಚುನಾವಣಾ ಆಯೋಗವು ವಿಸ್ತರಿಸಿದೆ. ಆದರೆ, ಒಳಾಂಗಣ ಮತ್ತು ಹೊರಾಂಗಣ ಭೌತಿಕ ಪ್ರಚಾರಕ್ಕೆ ಕೆಲವು ವಿನಾಯಿತಿಗಳನ್ನು ನೀಡಿದೆ.

ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ, ಪಂಜಾಬ್ ಮತ್ತು ಮಣಿಪುರ ವಿಧಾನಸಭಾ ಚುನಾವಣೆಯ ಭೌತಿಕ ಪ್ರಚಾರಕ್ಕಾಗಿ ದೊಡ್ಡ ಕಾರ್ಯಕ್ರಮಗಳನ್ನು ನಡೆಸಲು ಆಯೋಗವು ಅವಕಾಶ ನೀಡಿದೆ.

ಉತ್ತರ ಪ್ರದೇಶದಲ್ಲಿ ಫೆಬ್ರುವರಿ 10ರಂದು ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಫೆಬ್ರುವರಿ 8ರಂದು (ಮಂಗಳವಾರ) ಪ್ರಚಾರ ಕೊನೆಗೊಳ್ಳಲಿದೆ.

ಚುನಾವಣೆ ನಡೆಯಲಿರುವ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಕೇಂದ್ರ ಆರೋಗ್ಯ ಕಾರ್ಯದರ್ಶಿ, ಚುನಾವಣಾ ವೀಕ್ಷಕರು ನೀಡಿದ ಅಭಿಪ್ರಾಯದ ಆಧಾರದಲ್ಲಿ ಭೌತಿಕ ಪ್ರಚಾರಕ್ಕೆ ವಿನಾಯಿತಿ ನೀಡಲಾಗಿದೆ. ದೇಶದಲ್ಲಿ ವರದಿಯಾಗುತ್ತಿರುವ ಕೋವಿಡ್‌ನ ಒಟ್ಟು ಪ್ರಕರಣಗಳಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳ ಪಾಲು ಬಹಳ ಸಣ್ಣದು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿಯು ಮಾಹಿತಿ ನೀಡಿದ್ದರು.

ಒಳಾಂಗಣ ಮತ್ತು ಹೊರಾಂಗಣ ಪ್ರಚಾರ ಸಭೆಗಳಲ್ಲಿ ಸೇರಬಹುದಾದ ಜನರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಒಳಾಂಗಣ ಸಭಾಂಗಣದ ಸಾಮರ್ಥ್ಯದ ಶೇ 50ರಷ್ಟು ಮತ್ತು ಮೈದಾನಗಳ ಸಾಮರ್ಥ್ಯದ ಶೇ 30ರಷ್ಟು ಜನ ಸೇರಲು ಅವಕಾಶ ಕೊಡಲಾಗಿದೆ. ಆದರೆ, ಜಿಲ್ಲಾ ಚುನಾವಣಾಧಿಕಾರಿಯು ನಿಗದಿ ಮಾಡಿದ ಪ್ರಮಾಣವು ಇನ್ನೂ ಕಡಿಮೆ ಇದ್ದರೆ ಅದನ್ನು ಪಾಲಿಸಬೇಕು ಎಂದು ಆಯೋಗದ ಹೇಳಿಕೆಯು ತಿಳಿಸಿದೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎಸ್‌ಡಿಎಂಎ) ಜನ ಸೇರುವ ಮಿತಿಯನ್ನು ಇನ್ನಷ್ಟು ತಗ್ಗಿಸಿದ್ದರೆ ಅದನ್ನು ಅನುಸರಿಸಬೇಕು ಎಂದೂ ಆಯೋಗವು ಸೂಚಿಸಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ತಾವು ಸ್ಪರ್ಧಿಸುತ್ತಿರುವ ವಿಧಾನಸಭಾ ಕ್ಷೇತ್ರವಾದ ಕರ್ಹಾಲ್‌ನಲ್ಲಿ ಭಾನುವಾರ ಚುನಾವಣಾ ರ‍್ಯಾಲಿ ನಡೆಸಿದರು —ಚಿತ್ರ ಪಿಟಿಐ

ಮುಖ್ಯಾಂಶಗಳು

- ಮೈದಾನಗಳಲ್ಲಿ ಪ್ರವೇಶ ಮತ್ತು ನಿರ್ಗಮನಕ್ಕೆ ಹಲವು ದ್ವಾರಗಳಿರಬೇಕು
- ಎಲ್ಲ ಪ್ರವೇಶದ್ವಾರಗಳಲ್ಲಿಯೂ ಕೈ ಸ್ವಚ್ಛ ಮಾಡಲು ವ್ಯವಸ್ಥೆ ಇರಬೇಕು
- ಜನರ ದೇಹದ ಉಷ್ಣತೆಯನ್ನು ಅಳೆಯುವ ವ್ಯವಸ್ಥೆ ಮಾಡಬೇಕು

ಹೊರಾಂಗಣ ಸಭೆಗಳನ್ನು ಜಿಲ್ಲಾಡಳಿತವು ನಿಗದಿ ಮಾಡಿದ ಮೈದಾನಗಳಲ್ಲಿ ಮಾತ್ರ ನಡೆಸಬೇಕು. ಜತೆಗೆ, ಎಸ್‌ಡಿಎಂಎ ಸೂಚಿಸಿರುವ ಎಲ್ಲ ನಿಯಮಗಳನ್ನು ಪಾಲಿಸಬೇಕು ಎಂದು ಆಯೋಗವು ಹೇಳಿದೆ.

ಜಿಲ್ಲಾಡಳಿತವು ಮೈದಾನಗಳನ್ನು ಸಮಾನವಾಗಿ ಹಂಚಿಕೆ ಮಾಡಬೇಕು. ಇದಕ್ಕಾಗಿ ಎ-ಸುವಿಧಾ ಪೋರ್ಟಲ್ ಅನ್ನು ಬಳಸಬೇಕು. ಮೊದಲು ಅರ್ಜಿ ಹಾಕಿದವರಿಗೆ ಆದ್ಯತೆ ಇರಬೇಕು. ಮೈದಾನಗಳ ಸಾಮರ್ಥ್ಯವನ್ನು ಜಿಲ್ಲಾಡಳಿತವು ನಿಗದಿ ಮಾಡಿ ಪಕ್ಷಗಳಿಗೆ ಅದರ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ.

ಆಯೋಗವು ಪ್ರಚಾರ ನಿರ್ಬಂಧಗಳ ಬಗ್ಗೆ ಜನವರಿ 31ರಂದು ಪರಿಶೀಲನೆ ನಡೆಸಿತ್ತು. ಹೊರಾಂಗಣ ಸಭೆಗಳಲ್ಲಿ 500 ಜನರ ಬದಲಿಗೆ ಗರಿಷ್ಠ 1000 ಜನ ಸೇರಲು ಅವಕಾಶ ಕೊಟ್ಟಿತ್ತು. ಒಳಾಂಗಣ ಸಭೆಯಲ್ಲಿ ಸೇರಬಹುದಾದ ಜನರ ಸಂಖ್ಯೆಯನ್ನು 300ರಿಂದ 500ಕ್ಕೆ ಹೆಚ್ಚಿಸಿತ್ತು.

ಮನೆ ಮನೆ ಪ್ರಚಾರಕ್ಕೆ ಹೋಗಬಹುದಾದ ಜನರ ಸಂಖ್ಯೆಯನ್ನು 20ಕ್ಕೆ ನಿಗದಿ ಮಾಡಲಾಗಿತ್ತು. ರಾತ್ರಿ 8ರಿಂದ ಬೆಳಿಗ್ಗೆ 8ರವರೆಗೆ ಪ್ರಚಾರಕ್ಕೆ ನಿಷೇಧ ಇದೆ. ಈ ನಿರ್ಬಂಧ ಹೀಗೆಯೇ ಮುಂದುವರಿಯಲಿದೆ.

ತಾರಾ ಪ್ರಚಾರಕರಿಗೆ ಭದ್ರತೆಗೆ ಸೂಚನೆ

ವಿಧಾನಸಭೆ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳ ತಾರಾ ಪ್ರಚಾರಕರಿಗೆ ಅಗತ್ಯ ಭದ್ರತೆ ಒದಗಿಸಬೇಕು ಎಂದು ಚುನಾವಣಾ ಆಯೋಗವು ರಾಜ್ಯಗಳಿಗೆ ಸೂಚಿಸಿದೆ. ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರು ಉತ್ತರ ಪ್ರದೇಶದಲ್ಲಿ ಪ್ರಚಾರ ಮುಗಿಸಿ ಹಿಂದಿರುಗುತ್ತಿದ್ದಾಗ ಅವರ ಕಾರಿನ ಮೇಲೆ ಇತ್ತೀಚೆಗೆ ಗುಂಡಿನ ದಾಳಿ ಆಗಿತ್ತು.

ತಾರಾ ಪ್ರಚಾರಕರು ಚುನಾವಣಾ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಅವರ ಭದ್ರತೆಗೆ ಅತ್ಯಂತ ಮಹತ್ವ ನೀಡಬೇಕು. ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಯಲು ಇದು ಅಗತ್ಯ ಎಂದು ರಾಜ್ಯಗಳಿಗೆ ಬರೆದ ಪತ್ರದಲ್ಲಿ ಆಯೋಗವು ಹೇಳಿದೆ.

ಒವೈಸಿ ಅವರ ಕಾರಿನ ಮೇಲೆ ಗುಂಡಿನ ದಾಳಿ ನಡೆದ ವಿಚಾರವನ್ನು ಪತ್ರದಲ್ಲಿ ಉಲ್ಲೇಖಿಸಲಾಗಿಲ್ಲ. ಆದರೆ, ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಒವೈಸಿ ಅವರು ಎಐಎಂಐಎಂ ತಾರಾ ಪ್ರಚಾರಕರಾಗಿದ್ದಾರೆ.

ಸಂಬಂಧಪಟ್ಟ ತಾರಾ ಪ್ರಚಾರಕರು ಪ್ರವಾಸದ ವಿವರ, ಸಂಚರಿಸುವ ಮಾರ್ಗ ಮತ್ತು ಇತರ ಅಗತ್ಯ ಮಾಹಿತಿಯನ್ನು ಮುಖ್ಯ ಚುನಾವಣಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗೆ ನೀಡಬೇಕು. ತಾರಾ ಪ್ರಚಾರಕರ ಭದ್ರತೆಯ ಉಸ್ತುವಾರಿಯನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು ನೋಡಿಕೊಳ್ಳಬೇಕು. ನೋಡಲ್ ಅಧಿಕಾರಿಗಳನ್ನು ರಾಜ್ಯ ಸರ್ಕಾರಗಳು ನೇಮಿಸಬೇಕು ಎಂದು ಆಯೋಗವು ಸೂಚಿಸಿದೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಯೋಗಿ ಮುಖ್ಯಮಂತ್ರಿ; ಮೋದಿ ಸುಳಿವು

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ ಯೋಗಿ ಆದಿತ್ಯನಾಥ ಅವರೇ ಮುಂದಿನ ಮುಖ್ಯಮಂತ್ರಿ (ಸಿ.ಎಂ) ಎಂಬ ಸುಳಿವನ್ನು ಪ್ರಧಾನಿ ನರೇಂದ್ರ ಮೋದಿ ನೀಡಿದ್ದಾರೆ. ಯೋಗಿ ಅವರೇ ಮುಂದಿನ ಮುಖ್ಯಮಂತ್ರಿಯಾದರೆ, ಕೋವಿಡ್ ಸಾಂಕ್ರಾಮಿದಿಂದ ಆಗಿರುವ ನಷ್ಟವನ್ನು ಸರಿದೂಗಿಸಲಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಚರ್ಚೆಗೆ ಮೋದಿ ಅವರ ಹೇಳಿಕೆಯು ತೆರೆ ಎಳೆದಿದೆ.

ಮೋದಿ ಅವರು ಭಾನುವಾರ ವರ್ಚುವಲ್ ಭಾಷಣದ ಮೂಲಕ ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಪ್ರಚಾರ ನಡೆಸಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಮಾಡಿದ ಸಾಧನೆಗಳನ್ನು ಮೋದಿ ಬಣ್ಣಿಸಿದರು. ಇದೇ 10ರಂದು ಮೊದಲ ಹಂತದ ಮತದಾನ ನಡೆಯಲಿದೆ. ಈವರೆಗೆ ಮೋದಿ ಅವರು ಮೂರು ವರ್ಚುವಲ್ ರ‍್ಯಾಲಿ ಉದ್ದೇಶಿಸಿ ಮಾತನಾಡಿದ್ದಾರೆ.

2017ರಲ್ಲಿ ಯೋಗಿ ಅಧಿಕಾರಕ್ಕೆ ಬರುವ ಮೊದಲು ಸಮಾಜವಾದಿ ಪಕ್ಷದ ಸರ್ಕಾರ ಇತ್ತು. ಆಗ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿತ್ತು ಎಂದು ಮೋದಿ ಟೀಕಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕ ಬಾರದೇ ಇರುತ್ತಿದ್ದರೆ ಉತ್ತರ ಪ್ರದೇಶದ ಬಿಜೆಪಿ ಸರ್ಕಾರವು ಇನ್ನಷ್ಟು ಕೆಲಸಗಳನ್ನು ಮಾಡುತ್ತಿತ್ತು ಎಂದರು.

'ಯೋಗಿ ಅವರು ಮತ್ತೆ ಸರ್ಕಾರ ರಚಿಸಿದರೆ ಬಡವರಿಗೆ ಮನೆ ನಿರ್ಮಿಸಿ ಕೊಡುವ ಕೆಲಸ ಇನ್ನಷ್ಟು ವೇಗ ಪಡೆಯಲಿದೆ. ಯೋಗಿ ನೇತೃತ್ವದ ಸರ್ಕಾರವು ಕೋವಿಡ್‌ನಿಂದ ಜನರ ಜೀವ ರಕ್ಷಿಸಲು ಪ್ರಯತ್ನಿಸಿದೆ. ಕೋವಿಡ್ ಇಲ್ಲದಿರುತ್ತಿದ್ದರೆ ರಾಜ್ಯವು ಬೇರೆಯೇ ಎತ್ತರಕ್ಕೆ ಏರುತ್ತಿತ್ತು' ಎಂದು ಮೋದಿ ಹೇಳಿದ್ದಾರೆ.

ಯೋಗಿ ಆದಿತ್ಯನಾಥ ಅವರಿಗೆ ಇನ್ನೂ ಐದು ವರ್ಷ ಅಧಿಕಾರ ನೀಡುವುದಕ್ಕಾಗಿ ಉತ್ತರ ಪ್ರದೇಶದ ಜನರು ಬಿಜೆಪಿಗೆ ಭಾರಿ ಬಹುಮತದ ಗೆಲುವು ನೀಡಲಿದ್ದಾರೆ. ಉತ್ತರ ಪ್ರದೇಶದ ಮಹಿಳೆಯರು ಕೂಡ ಬಿಜೆಪಿ ಗೆದ್ದು ಯೋಗಿ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಬಯಸಿದ್ದಾರೆ ಎಂದು ಹೇಳಿದರು.

ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಆದಿತ್ಯನಾಥ ಅವರ ಬದಲಿಗೆ ಬೇರೊಬ್ಬರು ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಚರ್ಚೆ ಕೆಲ ತಿಂಗಳ ಹಿಂದೆ ಬಿಜೆಪಿಯಲ್ಲಿ ನಡೆದಿತ್ತು. ಆದರೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂತಹ ವಾದವನ್ನು ಅಲ್ಲಗಳೆದಿದ್ದರು. ಮೋದಿ ಅವರು 2024ರಲ್ಲಿ ಮತ್ತೆ ಪ್ರಧಾನಿ ಆಗಬೇಕಿದ್ದರೆ 2022ರಲ್ಲಿ ಆದಿತ್ಯನಾಥ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಅಮಿತ್ ಶಾ ಅವರು ಕಳೆದ ಅಕ್ಟೋಬರ್‌ನಲ್ಲಿ ಹೇಳಿದ್ದರು. ಮಥುರಾ, ಆಗ್ರಾ ಮತ್ತು ಬುಲಂದ್‌ಶಹರ್‌ನ ಮತದಾರರನ್ನು ಉದ್ದೇಶಿಸಿ ಮೋದಿ ಅವರು ಮಾತನಾಡಿದರು. ಅಭಿವೃದ್ಧಿಯೇ ಅತ್ಯಂತ ದೊಡ್ಡ ಚುನಾವಣಾ ವಿಷಯ ಎಂದು ಉತ್ತರ ಪ್ರದೇಶದ ಜನರು ನಿರ್ಧರಿಸಿದ್ದಾರೆ ಎಂದರು.

ಪಂಜಾಬ್: ದಲಿತ ಮತಗಳ ಮೇಲೆ ಕಾಂಗ್ರೆಸ್ ಕಣ್ಣು; ಹಾಲಿ ಮುಖ್ಯಮಂತ್ರಿಗೆ ಮಣೆ

ಕಾಂಗ್ರೆಸ್ ಸಿ.ಎಂ. ಅಭ್ಯರ್ಥಿ ಚನ್ನಿ: ರಾಹುಲ್ ಘೋಷಣೆ

ಪ್ರಜಾವಾಣಿ ವಾರ್ತೆ

ಚಂಡೀಗಡ: ಫೆಬ್ರುವರಿ 20ರಂದು ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಯಾರನ್ನು ಹೆಸರಿಸಲಿದೆ ಎಂಬ ಬಗ್ಗೆ ಕೆಲವು ದಿನಗಳಿಂದ ಇದ್ದ ಕುತೂಹಲಕ್ಕೆ ತೆರೆಬಿದ್ದಿದೆ. ಚರಣ್‌ಜಿತ್ ಸಿಂಗ್ ಚನ್ನಿ (48) ಅವರನ್ನು ರಾಜ್ಯದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಅಧಿಕೃತವಾಗಿ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿದ್ದ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರಿಗಿಂತ, ಹಾಲಿ ಮುಖ್ಯಮಂತ್ರಿ ಚನ್ನಿ ಅವರಿಗೇ ಕಾಂಗ್ರೆಸ್ ಮಣೆ ಹಾಕಿದೆ. ಚುನಾವಣೆ ಸಮಯದಲ್ಲಿ ಆಂತರಿಕ ಬೇಗುದಿ ಎದುರಿಸುತ್ತಿರುವ ಪಕ್ಷಕ್ಕೆ ಚನ್ನಿ ಅವರ ಆಯ್ಕೆಯು ಮತಗಳನ್ನು ತಂದುಕೊಡಲಿದೆಯೇ ಎಂಬುದು ಪಕ್ಷದ ಎದುರಿಗಿರುವ ದೊಡ್ಡ ಪ್ರಶ್ನೆಯಾಗಿದೆ.

ಚನ್ನಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ರಾಜ್ಯದ ಬೃಹತ್ ದಲಿತ ಸಮುದಾಯದ ಪ್ರಾಬಲ್ಯವನ್ನು ಗಣನೆಗೆ ತೆಗೆದುಕೊಂಡಿದೆ. ಅತಿಹೆಚ್ಚು ದಲಿತರನ್ನು (ಶೇ 33) ಹೊಂದಿರುವ ಪಂಜಾಬ್‌ನಲ್ಲಿ, ಸಮುದಾಯದ ಮತಗಳನ್ನು ಕ್ರೋಡೀಕರಿಸಲು ಪಕ್ಷ ಮುಂದಾಗಿರುವುದು ಸ್ಪಷ್ಟವಾಗಿದೆ.

ಪಂಜಾಬ್‌ನಲ್ಲಿ ಎಎಪಿ ಹೊಂದಿರುವ ಗಟ್ಟಿನೆಲೆಗೆ ಪೆಟ್ಟು ನೀಡಲು ಮುಂದಾಗಿರುವ ಕಾಂಗ್ರೆಸ್, ಚನ್ನಿ ಅವರನ್ನು 'ಆಮ್ ಆದ್ಮಿ' ಎಂದು ಬಿಂಬಿಸುತ್ತಿದೆ. ಚನ್ನಿ ಅವರು ಬಡ ಕುಟುಂಬದಿಂದ ಬಂದಿದ್ದು, ಬಡವರ ಕಷ್ಟಗಳನ್ನು ಅರ್ಥಮಾಡಿಕೊಳ್ಳಬಲ್ಲರು ಎಂಬುದಾಗಿ ರಾಹುಲ್ ಗಾಂಧಿ ಅವರು ಹೇಳಿರುವುದು ಇದೇ ಅರ್ಥವನ್ನು ಧ್ವನಿಸುತ್ತದೆ. 'ಪಂಜಾಬ್ ಜನರು, ಯುವಕರು, ಕಾರ್ಯಕಾರಿ ಸಮಿತಿಯ ಸದಸ್ಯರ ಬಳಿ ನಾನು ಚರ್ಚಿಸಿದ್ದೇನೆ.

ಲುಧಿಯಾನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ರಾಜ್ಯದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ರಾಹುಲ್ ಗಾಂಧಿ ಘೋಷಿಸಿದರು. ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಚಿತ್ರದಲ್ಲಿದ್ದಾರೆ

ನಮಗೆ ಬಡವರನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿ ಬೇಕು ಎಂದು ಜನರು ಹೇಳಿದರು. ಚನ್ನಿ ಆಯ್ಕೆಯು ರಾಜ್ಯದ ಜನರ ನಿರ್ಧಾರವೇ ಹೊರತು ರಾಹುಲ್ ಗಾಂಧಿ ನಿರ್ಧಾರವಲ್ಲ. ಪಂಜಾಬ್‌ನ ಜನರು 'ಗರೀಬ್ ಘರ್ ಕಾ ಸಿಎಂ' ಬೇಕು ಎಂದು ಇಚ್ಛಿಸಿದರು. ನಾನು ಅದನ್ನು ಒಪ್ಪಿಕೊಂಡಿದ್ದೇನೆ' ಎಂದು ವರ್ಚುವಲ್ ಸಭೆ ಉದ್ದೇಶಿಸಿ ರಾಹುಲ್ ಹೇಳಿದರು.

ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಚನ್ನಿ ಅವರ ಸಂಬಂಧಿಯನ್ನು ಜಾರಿ ನಿರ್ದೇಶನಾಲಯ ಇತ್ತೀಚೆಗೆ ಬಂಧಿಸಿರುವುದು, ಚನ್ನಿ ಹಾಗೂ ಕಾಂಗ್ರೆಸ್‌ಗೆ ಇರಿಸುಮುರಿಸು ಉಂಟುಮಾಡಿದೆ. ಈ ವಿಚಾರ ಇಟ್ಟುಕೊಂಡು ಪ್ರತಿಪಕ್ಷಗಳು ಚನ್ನಿ ವಿರುದ್ಧ ಮುಗಿಬಿದ್ದಿವೆ.

ಹುದ್ದೆಗಾಗಿ ಬದುಕಿಲ್ಲ: ಸಿಧು

ಚನ್ನಿ ಅವರನ್ನು ರಾಜ್ಯದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿರುವ ಪಕ್ಷದ ನಿರ್ಧಾರವನ್ನು ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಶ್ಲಾಘಿಸಿದ್ದು, ತಾವು ಯಾವುದೇ ಹುದ್ದೆಯನ್ನು ನಂಬಿಕೊಂಡಿಲ್ಲ ಎಂದು ಹೇಳಿದ್ದಾರೆ.

'17 ವರ್ಷಗಳ ರಾಜಕೀಯ ಜೀವನದಲ್ಲಿ ನಾನು ಯಾವುದೇ ಹುದ್ದೆಗಾಗಿ ಬದುಕಿಲ್ಲ. ಯಾವಾಗಲೂ ಪಂಜಾಬ್‌ನ ಸುಧಾರಣೆ ಮತ್ತು ಜನರ ಜೀವನದಲ್ಲಿ ಸುಧಾರಣೆ ತರಲು ಬಯಸಿದ್ದೇನೆ' ಎಂದು ಸಿಧು ಹೇಳಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ: ಐದನೇ ಸಲ ಪ್ರಶಸ್ತಿ ಗೆದ್ದ ಭಾರತ ಯುವಪಡೆ

ಭವಿಷ್ಯದ ಕ್ರಿಕೆಟ್ ತಾರೆಗಳ ಹೊಳಪು

ನಾರ್ತ್ ಸೌಂಡ್, ಆ್ಯಂಟಿಗಾ (ಪಿಟಿಐ): ಭಾನುವಾರ ಬೆಳಿಗ್ಗೆ ನಿದ್ದೆಯಿಂದ ಎದ್ದವರಿಗೆಲ್ಲ ಸಿಹಿ ಸುದ್ದಿ ಕೊಟ್ಟವರು ಭಾರತದ 19 ವರ್ಷದೊಳಗಿನವರ ಕ್ರಿಕೆಟ್ ತಂಡದ ಆಟಗಾರರು. ಶನಿವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ 4 ವಿಕೆಟ್‌ಗಳಿಂದ ಇಂಗ್ಲೆಂಡ್ ಎದುರು ಗೆದ್ದ ಯಶ್ ಧುಳ್ ತಂಡವು ಸಂಭ್ರಮಿಸಿತು. ಭಾರತಕ್ಕೆ ಇದು ಐದನೇ ವಿಶ್ವಕಪ್. 1998ರಲ್ಲಿ ಜಯಿಸಿದ್ದ ಇಂಗ್ಲೆಂಡ್ ತಂಡಕ್ಕೆ ಮತ್ತೊಂದು ಟ್ರೋಫಿಯನ್ನು ಗೆಲ್ಲುವ ಆಸೆಗೆ ಯಶ್ ಧುಳ್ ಪಡೆಯುವ ಅಡ್ಡಗಾಲು ಹಾಕಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡವು 44.5 ಓವರ್‌ಗಳಲ್ಲಿ 189 ರನ್ ಗಳಿಸಿತು. ರಾಜ್ ಬಾವಾ (31ಕ್ಕೆ5) ಮತ್ತು ರವಿಕುಮಾರ್ (34ಕ್ಕೆ4) ಇಂಗ್ಲೆಂಡ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಗುರಿ ಬೆನ್ನತ್ತಿದ ಭಾರತ ತಂಡವು 47.4 ಓವರ್‌ಗಳಲ್ಲಿ6 ವಿಕೆಟ್‌ಗಳಿಗೆ 195 ರನ್ ಗಳಿಸಿತು. ಶೇಖ್ ರಶೀದ್ (50; 84ಎ), ನಿಶಾಂತ್ ಸಿಂಧು (ಔಟಾಗದೆ 50) ಮತ್ತು ರಾಜ್ ಬಾವಾ (35; 34ಎ) ತಂಡವನ್ನು ಗೆಲುವಿನ ದಡ ಸೇರಿಸಿದರು.ಸಂಭ್ರಮ ಕುಡಿಯೊಡೆಯಿತು. ಭಾರತ ಕ್ರಿಕೆಟ್‌ನ ಭವಿಷ್ಯದ ತಾರೆಗಳು ಉದಯಿಸಿದರು.

ಪ್ರಶಸ್ತಿ ಗೆದ್ದ ನಂತರ ಭಾರತ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಇಂಗ್ಲೆಂಡ್ 19 ವರ್ಷದೊಳಗಿನವರು 189 (44.5 ಓವರ್)

ಜಾರ್ಜ್ ಸಿ ಧುಳ್ ಬಿ ಬಾವಾ 27 (30 ಎ 4x4, 6x1), ಜೇಕಬ್ ಎಲ್‌ಬಿಡಬ್ಲ್ಯು ರವಿ 2 (5 ಎ), ಟಾಮ್ ಬಿ ರವಿ 0 (4 ಎ), ಜೇಮ್ಸ್ ಸಿ ತಾಂಬೆ ಬಿ ರವಿ 95 (116 ಎ, 4x12), ವಿಲಿಯಂ ಸಿ ಬನ ಬಿ ಬಾವಾ 4 (8 ಎ), ಜಾರ್ಜ್ ಸಿ ಬನ ಬಿ ಬಾವಾ 0 (1 ಎ), ರೆಹಾನ್ ಸಿ ತಾಂಬೆ ಬಿ ಬಾವಾ 10 (12 ಎ, 4x1), ಅಲೆಕ್ಸ್ ಸಿ ಧುಳ್ ಬಿ ತಾಂಬೆ 10 (21 ಎ, 4x2), ಜೇಮ್ಸ್ ಔಟಾಗದೆ 34 (65 ಎ, 4x2), ಥಾಮಸ್ ಸಿ ಬನ ಬಿ ರವಿ 0 (2 ಎ), ಜೋಶುವಾ ಸಿ ಬನ ಬಿ ಬಾವಾ 1 (5 ಎ)

ಇತರೆ (ಲೆಗ್‌ಬೈ 1, ವೈಡ್ 5) 6

ವಿಕೆಟ್ ಪತನ: 1-4 (ಜೇಕಬ್ ಬೆಥೆಲ್, 1.5), 2-18 (ಟಾಮ್ ಪ್ರೆಸ್ಟ್, 3.3), 3-37 (ಜಾರ್ಜ್ ಥಾಮಸ್, 10.1), 4-47 (ವಿಲಿಯಂ ಲುಕ್ಸ್‌ಟನ್, 12.5), 5-47 (ಜಾರ್ಜ್ ಬೆಲ್, 12.6), 6-61 (ರೆಹಾನ್ ಅಹಮ್ಮದ್, 16.2), 7-91 (ಅಲೆಕ್ಸ್ ಹಾರ್ಟನ್, 24.3), 8-184 (ಜೇಮ್ಸ್ ರಿಯು, 43.1), 9-185 (ಥಾಮಸ್ ಆ್ಯಸ್ಪಿನ್‌ವಾಲ್, 43.4), 10-189 (ಜೋಶುವಾ ಬಾಯ್ಡನ್, 44.5)

ಬೌಲಿಂಗ್: ರಾಜ್ಯವರ್ಧನ್ ಹಂಗರಗೇಕರ್ 7-1-36-0, ರವಿಕುಮಾರ್ 9-1-34-4, ರಾಜ್ ಬಾವಾ 9.5-1-31-5, ನಿಶಾಂತ್ ಸಿಂಧು 6-1-19-0, ವಿಕ್ಕಿ ಓಸ್ತವಾಲ್ 6-0-31-0, ಕೌಶಲ್ ತಾಂಬೆ 5-0-29-1, ಅಂಗ ಕೃಷ್ ರಘುವಂಶಿ 2-0-8-0

ಭಾರತ 19 ವರ್ಷದೊಳಗಿನವರು 6ಕ್ಕೆ 195 (47.4 ಓವರ್)

ಅಂಗಕ್ರಿಷ್ ಸಿ ಹಾರ್ಟನ್ ಬಿ ಬಾಯ್ಡನ್ 0 (2 ಎ), ಹರ್ನೂರ್ ಸಿ ಹಾರ್ಟನ್ ಬಿ ಆ್ಯಸ್ಪಿನ್‌ವಾಲ್ 21 (46 ಎ, 4x3), ರಶೀದ್ ಸಿ ರಯೂ ಬಿ ಸೇಲ್ಸ್ 50 (84 ಎ, 4x6), ಯಶ್ ಸಿ ಬೆಲ್ ಬಿ ಸೇಲ್ಸ್ 17 (32 ಎ, 4x1), ನಿಶಾಂತ್ ಔಟಾಗದೆ 50 (54 ಎ, 4x5, 6x1), ಬಾವ ಸಿ ಪ್ರೆಸ್ಟ್ ಬಿ ಬಾಯ್ಡನ್ 35 (54 ಎ, 4x2, 6x1), ಕೌಶಲ್ ಸಿ ರೆಹಾನ್ ಬಿ ಆ್ಯಸ್ಪಿನ್ ವಾಲ್ 1 (9 ಎ), ಬನ ಔಟಾಗದೆ 13 (5ಎ, 6x2)

ಇತರೆ (ವೈಡ್ 8) 8

ವಿಕೆಟ್ ಪತನ: 1-0 (ಅಂಗಕ್ರಿಷ್ ರಘುವಂಶಿ, 0.2), 2-49 (ಹರ್ನೂರ್ ಸಿಂಗ್, 17.3), 3-95 (ಶೇಕ್ ರಶೀದ್, 26.6), 4-97 (ಯಶ್ ಧುಳ್, 28.2), 5-164 (ರಾಜ್ ಬಾವ, 42.6), 6-176 (ಕೌಶಲ್ ತಾಂಬೆ, 46.2)

ಬೌಲಿಂಗ್: ಜೋಶುವಾ ಬಾಯ್ಡನ್ 7-1-24-2, ಜೇಮ್ಸ್ ಸೇಲ್ಸ್ 7.4-0-51-2, ಟಾಮ್ ಪ್ರೆಸ್ಟ್ 10-1-29-0, ರೆಹಾನ್ ಅಹಮ್ಮದ್ 10-2-32-0, ಥಾಮಸ್ ಆ್ಯಸ್ಪಿನ್‌ವಾಲ್ 9-0-42-2, ಜೇಕಬ್ ಬೆಥೆಲ್ 4-0-17-0

ಫಲಿತಾಂಶ: ಭಾರತ ತಂಡಕ್ಕೆ 4 ವಿಕೆಟ್ ಜಯ; ವಿಶ್ವಕಪ್ ಪ್ರಶಸ್ತಿ

ಯಶ್ ಧುಳ್ (ನಾಯಕ)

ತಂಡದ ನಾಯಕ ಯಶ್ ದೆಹಲಿಯ ಜನಕಪುರಿಯವರು. ಮಧ್ಯಮ ಕ್ರಮಾಂಕದ ಬ್ಯಾಟರ್. ಟೂರ್ನಿಯ ಮಧ್ಯದಲ್ಲಿಯೇ ಕೋವಿಡ್‌ನಿಂದಾಗಿ ಐಸೋಲೇಷನ್‌ಗೆ ಒಳಗಾದರು. ಚೇತರಿಸಿಕೊಂಡು ಮರಳಿದ ಅವರು ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಶತಕ ಬಾರಿಸಿ, ಗೆಲುವಿನ ರೂವಾರಿಯಾದರು. 16 ವರ್ಷದೊಳಗಿನವರ ವಿನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ 302 ರನ್ ಗಳಿಸಿದ್ದ ಅವರ ಕೌಶಲ ಮತ್ತು ಆಕ್ರಮಣಶೀಲ ಗುಣವನ್ನು ಮನಗಂಡು ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿತ್ತು. ಭಾರತ ತಂಡದ ವಿರಾಟ್ ಕೊಹ್ಲಿ ಜನಿಸಿ ಬೆಳೆದ ಉತ್ತರ ದೆಹಲಿಯವರು ಯಶ್.

ಶೇಖ್ ರಶೀದ್

ವಿನೂ ಮಂಕಡ್ ಟ್ರೋಫಿ ಟೂರ್ನಿಯ ಆರು ಇನಿಂಗ್ಸ್‌ಗಳಲ್ಲಿ 376 ರನ್‌ಗಳನ್ನು ಹರಿಸಿದ್ದ ರಶೀದ್, ಚಾಲೆಂಜರ್ ಟ್ರೋಫಿ ಟೂರ್ನಿಯಲ್ಲಿ ಶತಕ ಬಾರಿಸಿದ್ದರು. ಏಷ್ಯಾಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಾಂಗ್ಲಾ ಎದುರು 90 ರನ್ ಬಾರಿಸಿದ್ದರು. ಸೆಮಿಫೈನಲ್‌ನಲ್ಲಿ ಯಶ್ ಜೊತೆಗೆ ಅಮೋಘ ಜೊತೆಯಾಟವಾಡಿ ತಂಡದ ಜಯಕ್ಕೆ ಕಾಣಿಕೆ ನೀಡಿದ್ದರು.

ಹರ್ನೂರ್ ಸಿಂಗ್ ಪನ್ನು

ಎಡಗೈ ಬ್ಯಾಟ್ಸ್‌ಮನ್ ತಂಡದ ಆರಂಭಿಕ ಆಟಗಾರ. ಏಷ್ಯಾಕಪ್ ಟೂರ್ನಿಯಲ್ಲಿ ಐದು ಇನಿಂಗ್ಸ್‌ಗಳ‌ಲ್ಲಿ 251 ರನ್ ಗಳಿಸಿದ್ದರು. ಭಾರತ ತಂಡದ ಆಲ್‌ರೌಂಡರ್ ಯುವರಾಜ್ ಸಿಂಗ್ ಅವರ ಕೋಚ್ ಸುಖ್ವಿಂದರ್ ಸಿಂಗ್ ಅವರು ಹರ್ನೂರ್‌ಗೆ ಕೋಚ್ ಮಾಡಿದ್ದರು. ಜಲಂಧರ್‌ನ ಹರ್ನೂರ್ ಮನೆ ಪಕ್ಕದ ಖಾಲಿಜಾಗದಲ್ಲಿ ಆಡುತ್ತಿದ್ದರು. ಅಜ್ಜ ರಾಜೇಂದರ್ ಸಿಂಗ್ ಅವರು ಕ್ರಿಕೆಟ್ ತರಬೇತಿಗೆ ಹಾಕಿದ್ದರು.

ಒಲಿಂಪಿಯನ್ ಮೊಮ್ಮಗ ರಾಜ್ ಬಾವಾ

ಕ್ರೀಡಾಕುಟುಂಬದ ಕುಡಿ ರಾಜ್ ಬಾವಾ. 1948ರ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತ ಹಾಕಿ ತಂಡದಲ್ಲಿ ಆಡಿದ್ದ ತಾರಲೋಚನ್ ಬಾವಾ ಅವರ ಮೊಮ್ಮಗ ರಾಜ್. ಯುವರಾಜ್ ಸಿಂಗ್‌ಗೆ ಕೋಚ್ ಆಗಿದ್ದ ಸುಖ್ವಿಂದರ್ ಸಿಂಗ್ ಅವರ ಮಗ ರಾಜ್ ಪ್ರತಿಭೆಯಿಂದಲೇ ಗುರುತಿಸಿಕೊಂಡವರು.

ಅಂಗಕ್ರಿಷ್ ರಘುವಂಶಿ

ಬಲಗೈ ಬ್ಯಾಟರ್ ಅಂಗಕ್ರಿಷ್ ಏಷ್ಯಾಕಪ್ ಫೈನಲ್‌ನಲ್ಲಿ ಅರ್ಧಶತಕ ಬಾರಿಸಿದ್ದರು. ತಂದೆ ಅವನೀಶ್ ಭಾರತ ಟೆನಿಸ್ ತಂಡದಲ್ಲಿ ಆಡಿದ್ದರು. ತಾಯಿ ಮಲ್ಲಿಕಾ ಭಾರತ ಬ್ಯಾಸ್ಕೆಟ್‌ಬಾಲ್ ತಂಡದ ಆಟಗಾರ್ತಿಯಾಗಿದ್ದರು. ಮಗನ ಕ್ರಿಕೆಟ್ ಪ್ರೀತಿಗೆ ಬೆಂಬಲವಾಗಿ ನಿಂತರು. ದೆಹಲಿಯಲ್ಲಿದ್ದ ಅವರು ಅಂಗಕ್ರಿಷ್ 11 ವರ್ಷದವನಿದ್ದಾಗ ಮುಂಬೈಗೆ ಸ್ಥಳಾಂತರಗೊಂಡರು.

ರಾಜವರ್ಧನ್ ಹಂಗರಗೇಕರ್

ಎರಡು ವರ್ಷಗಳ ಹಿಂದೆ ಕೋವಿಡ್ ಕಾಯಿಲೆಯಿಂದಾಗಿ ತಂದೆ ತೀರಿ ಹೋದಾಗ ರಾಜವರ್ಧನ್ ಕುಗ್ಗಿದ್ದರು. ಆದರೆ, ಅಪ್ಪನ ಕನಸು ಈಡೇರಿಸಲು ಪಣತೊಟ್ಟರು. ಮಧ್ಯಮವೇಗಿ–ಆಲ್‌ರೌಂಡರ್ ರಾಜವರ್ಧನ್ ಏಷ್ಯಾ ಕಪ್ ಟೂರ್ನಿಯಲ್ಲಿ 8 ವಿಕೆಟ್ ಮತ್ತು 97 ರನ್ ಗಳಿಸಿದರು.

ಫೈನಲ್‌ನಲ್ಲಿ ಐದು ವಿಕೆಟ್ ಸಾಧನೆ				
ಬೌಲರ್	ದೇಶ	ವಿಕೆಟ್	ಎದುರಾಳಿ	ತಾಣ
ಅನ್ವರ್ ಅಲಿ	ಪಾಕಿಸ್ತಾನ	35ಕ್ಕೆ5	ಭಾರತ	ಕೊಲಂಬೊ
ರಾಜ್ ಬಾವಾ	ಭಾರತ	31ಕ್ಕೆ5	ಇಂಗ್ಲೆಂಡ್	ನಾರ್ತ್‌ಸೌಂಡ್

ಭಾರತದ ಐದು ವಿಶ್ವಕಪ್ ವಿಜಯ (ಫೈನಲ್)		
ಎದುರಾಳಿ	ಅಂತರ	ತಾಣ
ಶ್ರೀಲಂಕಾ	6 ವಿಕೆಟ್	ಕೊಲಂಬೊ
ದ.ಆಫ್ರಿಕಾ	12 ರನ್	ಕೌಲಾಲಂಪುರ
ಆಸ್ಟ್ರೇಲಿಯಾ	6 ವಿಕೆಟ್	ಟೌನ್ಸ್‌ವಿಲ್
ಆಸ್ಟ್ರೇಲಿಯಾ	8 ವಿಕೆಟ್	ಮೌಂಟ್ ಮಾಂಗನೂಯಿ
ಇಂಗ್ಲೆಂಡ್	4 ವಿಕೆಟ್	ನಾರ್ತ್ ಸೌಂಡ್

ಕೌಶಲ್ ತಾಂಬೆ

ಬಲಗೈ ಬ್ಯಾಟರ್ ಮತ್ತು ಆಫ್‌ಸ್ಪಿನ್ನರ್ ಕೌಶಲ್ ಪುಣೆ ಜಿಲ್ಲೆಯ ಊಟೂರು ಗ್ರಾಮದ ಪ್ರತಿಭೆ. ಅವರು ಪುಣೆಯಲ್ಲಿ ಎಸ್‌ಪಿ ಕಾಲೇಜಿನಲ್ಲಿ ಓದುತ್ತಿದ್ದಾರೆ. ತಂದೆ ಸುನೀಲ್ ತಾಂಬೆ ಭಯೋತ್ಪಾದನ ನಿಗ್ರಹ ಪಡೆಯಲ್ಲಿ ಎಸಿಪಿ ಆಗಿದ್ದಾರೆ.

ವಿಕಿ ಓಸ್ವಾಲ್

ಪುಣೆ ಜಿಲ್ಲೆಯ ಸುಂದರ ಪ್ರವಾಸಿ ತಾಣ ಲೊನಾವಾಳದವರು. ಎಡಗೈ ಸ್ಪಿನ್ನರ್ ವಿಕಿ ಏಷ್ಯಾಕಪ್ ಟೂರ್ನಿಯಲ್ಲಿ ಎಂಟು ವಿಕೆಟ್ ಗಳಿಸಿದರು. ಫೈನಲ್‌ನಲ್ಲಿ ಅವರು 11ಕ್ಕೆ 3 ವಿಕೆಟ್ ಗಳಿಸಿ ಮಿಂಚಿದರು. ತೇರಗಾಂವ್ ಚಿಂಚವಾಡದಲ್ಲಿತರಬೇತಿ ಪಡೆಯುತ್ತಿದ್ದಾರೆ.

ನಿಶಾಂತ್ ಸಿಂಧು

ವಿಶ್ವಕಪ್ ಫೈನಲ್‌ನಲ್ಲಿ ಅರ್ಧಶತಕ ಸಿಡಿಸಿ ತಂಡದ ಜಯಕ್ಕೆ ಕಾಣಿಕೆ ನೀಡಿದ ನಿಶಾಂತ್ ಹರಿಯಾಣದ ರೋಹ್ಟಕ್‌ನವರು. ಎಡಗೈ ಸ್ಪಿನ್ನರ್ ಕೂಡ ಆಗಿದ್ದಾರೆ. ವಿನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ ಹರಿಯಾಣ ತಂಡದ ನಾಯಕರಾಗಿದ್ದರು. 16 ವರ್ಷದೊಳಗಿನವರ ವಿಜಯ್ ಮರ್ಚಂಟ್ ಟ್ರೋಫಿ ಜಯಿಸಲೂ ಅವರ ನಾಯಕತ್ವ ಕಾರಣವಾಗಿತ್ತು. ಅವರ ತಂದೆ ರಾಜ್ಯಮಟ್ಟದ ಬಾಕ್ಸಿಂಗ್ ಪಟುವಾಗಿದ್ದರು. ವಿಶ್ವಕಪ್ ಟೂರ್ನಿಯಲ್ಲಿ ಯಶ್ ಜೊತೆಗೆ ಕೋವಿಡ್‌ನಿಂದ ಬಳಲಿದವರಲ್ಲಿ ಇವರೂ ಒಬ್ಬರು.

ಆರಾಧ್ಯ ಯಾದವ್

ಉತ್ತರಪ್ರದೇಶ ಗಾಜಿಯಾಬಾದ್‌ನ ವಿಕೆಟ್‌ಕೀಪರ್ ಆರಾಧ್ಯ. ವಿನೂ ಮಂಕಡ್ ಟ್ರೋಫಿಯಲ್ಲಿ 295 ರನ್ ಗಳಿಸಿದ್ದರು. ಅದರಲ್ಲಿ ಒಂದು ಶತ ಕವೂ ಇತ್ತು.

ರವಿಕುಮಾರ್

ಫೈನಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿ ಮಿಂಚಿದ ಬೌಲರ್ ರವಿಕುಮಾರ್ ಪಶ್ಚಿಮ ಬಂಗಾಳದವರು. ವಿನೂ ಮಂಕಡ್ ಟ್ರೋಫಿಯಲ್ಲಿ 11 ವಿಕೆಟ್ ಗಳಿಸಿದ್ದರು. ಏಷ್ಯಾ ಕಪ್ ಟೂರ್ನಿಯಲ್ಲಿಯೂ ಮಿಂಚಿದ್ದರು. ಇದೀಗ ಬಂಗಾಳ ರಣಜಿ ತಂಡದಲ್ಲಿದ್ದಾರೆ.

ದಿನೇಶ್ ಬಾನಾ

ಸಚಿನ್ ತೆಂಡೂಲ್ಕರ್ ಅವರ ಕಟ್ಟಾ ಅಭಿಮಾನಿ ದಿನೇಶ್ ಹರಿಯಾಣದ ಹಿಸಾರ್‌ನವರು. ಚಾಲೆಂಜರ್ ಟ್ರೋಫಿಯ ನಾಲ್ಕು ಪಂದ್ಯಗಳಲ್ಲಿ 255 ರನ್ ಗಳಿಸಿದ್ದರು. ಅದರಲ್ಲಿ ಶತಕ (170) ಕೂಡ ಸೇರಿದೆ. ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್‌ನಲ್ಲಿ ದೊಡ್ಡ ಹೊಡೆತಗಳ ಮೂಲಕ ಗಮನ ಸೆಳೆದಿದ್ದರು.

ಸಿದ್ಧಾರ್ಥ್ ಯಾದವ್

ಉತ್ತರ ಪ್ರದೇಶದ ಗಾಜಿಯಾಬಾದ್‌ನವರು. ಅವರ ತಂದೆಯ ಕಿರಾಣಿ ಅಂಗಡಿಯಿದೆ. ವಿನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ ಏಳು ಇನಿಂಗ್ಸ್‌ಗಳಲ್ಲಿ 258 ರನ್ ಗಳಿಸಿದ್ದರು. ಅದರಲ್ಲಿ ಎರಡು ಅರ್ಧಶತಕಗಳಿದ್ದವು.

ಗರ್ವ ಸಂಗ್ವಾನ್

ಹರಿಯಾಣದ ಬಿವಾನಿಯ ಗರ್ವ್ ಬಲಗೈ ಸ್ಪಿನ್ನರ್. ಬಾಕ್ಸಿಂಗ್ ಮತ್ತು ಕುಸ್ತಿಪಟುಗಳ ನಡುವೆ ಬೆಳೆದ ಗರ್ವ್ ವಿನೂ ಮಂಕಡ್ ಟ್ರೋಫಿ ಗೆದ್ದ ಹರಿಯಾಣ ತಂಡದಲ್ಲಿದ್ದರು.

ಆಟಗಾರರಿಗೆ ತಲಾ ₹40 ಲಕ್ಷ

ನವದೆಹಲಿ (ಪಿಟಿಐ): ಭಾರತ 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಗೆದ್ದ ಭಾರತ ತಂಡದ ಅಟಗಾರರಿಗೆ ತಲಾ ₹ 40 ಲಕ್ಷ ನಗದು ಬಹುಮಾನ ನೀಡಲು ಬಿಸಿಸಿಐ ನಿರ್ಧರಿಸಿದೆ.

ನೆರವು ಸಿಬ್ಬಂದಿಗೆ ₹ 25 ಲಕ್ಷ ನೀಡುವುದಾಗಿ ಘೋಷಿಸಿದೆ. ತಂಡವು ಮರಳಿದ ಕೂಡಲೇ ಅಹಮದಾಬಾದಿನಲ್ಲಿ ಎಲ್ಲ ಆಟಗಾರರನ್ನು ಸನ್ಮಾನಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

ಬೆಂಗಾಲ್ ವಾರಿಯರ್ಸ್‌ನ ಆಲ್‌ರೌಂಡರ್ ಮೊಹಮ್ಮದ್ ನಬಿ ಭಕ್ಷ್ ಅವರು ಪಾಯಿಂಟ್ ಗಳಿಸಲು ಯತ್ನಿಸಿದರು

ಕಬಡ್ಡಿ: ಬೆಂಗಳೂರು ಬುಲ್ಸ್‌ಗೆ ನಿರಾಶೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬುಲ್ಸ್ ತಂಡದ ನಾಯಕ ಪವನ್ ಕುಮಾರ್ ಶೆರಾವತ್ ಅವರಿಗೆ ಅದೃಷ್ಟ ಕೈಕೊಟ್ಟಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ತಾವು ಆಡಿದ ಎಲ್ಲ ಪಂದ್ಯಗಳಲ್ಲಿಯೂ ಪವನ್ ಮಿಂಚಿದ್ದಾರೆ. ಭಾನುವಾರ ನಡೆದ ಗುಜರಾತ್ ಜೈಂಟ್ಸ್ ವಿರುದ್ಧವೂ 12 ಅಂಕ ಗಳಿಸಿದರು.

ಆದರೆ, ಪ್ರದೀಪ್ ಕುಮಾರ್ 14 ಅಂಕ ಗಳಿಸಿ ಗುಜರಾತ್ ತಂಡಕ್ಕೆ ಜಯದಮಾಲೆ ಹಾಕಿದರು. ಬುಲ್ಸ್ ತಂಡವು 36–40ರಿಂದ ಗುಜರಾತ್ ಎದುರು ಸೋತಿತು.

ಬುಲ್ಸ್ ತಂಡದ ಭರತ್ 11 ಮತ್ತು ಅಮನ್ ನಾಲ್ಕು ಅಂಕಗಳನ್ನು ಗಳಿಸಿದರು. ಗುಜರಾತ್ ತಂಡದ ಅಜಯಕುಮಾರ್ (8) ಮತ್ತು ಸುನೀಲ್ ಕುಮಾರ್ (5) ಪ್ರದೀಪ್ ಜೊತೆಗೆ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೆಟ್ಸ್ ತಂಡವು 38–29ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಿಸಿತು.

ಸಚಿನ್ (11) ಗುಮಾನ್ ಸಿಂಗ್ (7) ಅವರ ಆಟದ ಬಲದಿಂದ ಪಟ್ನಾ ತಂಡವು ಜಯಭೇರಿ ಬಾರಿಸಿತು. ಬೆಂಗಾಲ್ ತಂಡದ ಮನೋಜ್ ಗೌಡ (9) ಮತ್ತು ಮೊಹಮ್ಮದ್ (8) ಕೂಡ ಮಿಂಚಿದರು. ಆದರೆ ತಂಡಕ್ಕೆ ಜಯ ಒಲಿಯಲಿಲ್ಲ.

ಇಂದಿನ ಪಂದ್ಯ (ರಾತ್ರಿ)

ಗುಜರಾತ್ ಜೈಂಟ್ಸ್ – ಜೈಪುರ್ ಪಿಂಕ್ ಪ್ಯಾಂಥರ್ಸ್ 7.30

ಬೆಂಗಾಳ್ ವಾರಿಯರ್ಸ್ – ತೆಲುಗು ಟೈಟನ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ					
ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೆಟ್ಸ್	16	11	4	1	60
ದಬಂಗ್ ಡೆಲ್ಲಿ	17	9	5	3	57
ಬೆಂಗಳೂರು ಬುಲ್ಸ್	19	9	8	2	55
ಹರಿಯಾಣ ಸ್ಟೀಲರ್ಸ್	17	8	6	3	53
ಯು ಮುಂಬಾ	16	6	5	5	48
ಯು ಪಿ ಯೋಧಾ	17	6	8	3	47
ಜೈಪುರ ಪಿಂಕ್ ಪ್ಯಾಂಥರ್ಸ್	16	7	7	2	46
ತಮಿಳ್ ತಲೈವಾಸ್	16	5	5	6	45
ಗುಜರಾತ್ ಜೈಂಟ್ಸ್	16	6	7	3	43
ಪುಣೇರಿ ಪಲ್ಟನ್	15	8	7	-	42
ಬೆಂಗಾಲ್ ವಾರಿಯರ್ಸ್	17	7	9	1	41
ತೆಲುಗು ಟೈಟನ್ಸ್	16	1	12	3	23

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಐಎಸ್‌ಎಲ್ ಫುಟ್‌ಬಾಲ್: ಗೋಲು ಗಳಿಸಿದ ವಿಕ್ರಂ ಸಿಂಗ್

ಮುಂಬೈಗೆ ಮಣಿದ ಚೆನ್ನೈಯಿನ್

ಫತೋರ್ಡ, ಗೋವಾ (ಪಿಟಿಐ): ವಿಕ್ರಂ ಸಿಂಗ್ ಗಳಿಸಿದ ಏಕೈಕ ಗೋಲಿನ ಬಲದಿಂದ ಮುಂಬೈ ಸಿಟಿ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಚೆನ್ನೈಯಿನ್ ಎಫ್‌ಸಿಯನ್ನು ತಂಡ 1–0ಯಿಂದ ಮಣಿಸಿತು. ವಿಕ್ರಂ ಸಿಂಗ್ ಅವರು 85ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು.

ಒಡಿಶಾ–ಈಸ್ಟ್ ಬೆಂಗಾಲ್ ಮುಖಾಮುಖಿ: ವಾಸ್ಕೊದ ತಿಲಕ್ ಮೈದಾನದಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ತಂಡ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು ಸೆಣಸಲಿದೆ.

ಚೆನ್ನೈಯಿನ್ ಎಫ್‌ಸಿಯ ನೆರಿಜಸ್ ವಲ್‌ಸ್ಕಿಸ್ ಅವರು ಚೆಂಡಿನೊಂದಿಗೆ ಮುನ್ನುಗ್ಗಿದ ರೀತಿ

ಟೂರ್ನಿಯಲ್ಲಿ ಈ ವರೆಗೆ ಏಕೈಕ ಜಯ ಸಾಧಿಸಿರುವ ಈಸ್ಟ್ ಬೆಂಗಾಲ್ ಕಳೆದ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಎದುರು ಡ್ರಾ ಸಾಧಿಸಿ ಭರವಸೆಯಲ್ಲಿದೆ. ಹಿಂದಿನ ಮೂರು ಪಂದ್ಯಗಳಲ್ಲಿ ಜಯ ಕಾಣದೇ ಇರುವ ಒಡಿಶಾ ಮತ್ತೆ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿದೆ. ಆದ್ದರಿಂದ ಪಂದ್ಯ ರೋಚಕವಾಗುವ ಸಾಧ್ಯತೆ ಇದೆ.

ಚೆನ್ನೈಯಿನ್ ಎದುರು ಆರಂಭದಲ್ಲೇ ಎರಡು ಗೋಲುಗಳನ್ನು ಬಿಟ್ಟುಕೊಟ್ಟಿದ್ದ ಈಸ್ಟ್ ಬೆಂಗಾಲ್ ನಂತರ ತಿರುಗೇಟು ನೀಡಿತ್ತು.

18 ವರ್ಷದ ಲಾಲ್‌ರಿಂಗ್ಲ್ಯಾನ ನಾಮ್ತೆ ಸಬಲದ ಗೋಲು ಗಳಿಸಿದ್ದರು. ಡ್ಯಾರೆನ್ ಸಿಡೋಲ್ ಕೂಡ ಮಿಂಚಿದ್ದರು. ಒಟ್ಟು 15 ಪಂದ್ಯಗಳನ್ನು ಆಡಿರುವ ತಂಡದ ಬಳಿ ಈಗ 10 ಪಾಯಿಂಟ್‌ಗಳಿವೆ. ಒಡಿಶಾ 14 ಪಂದ್ಯಗಳಿಂದ ಐದು ಜಯದೊಂದಿಗೆ 18 ಪಾಯಿಂಟ್ ಗಳಿಸಿದೆ.

ಎಕ್ಸಿಟ್ ಲೋಡ್, ಎನ್‌ಎಫ್‌ಒ, ಇಂಡೆಕ್ಸ್ ಫಂಡ್

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಎಕ್ಸಿಟ್ ಲೋಡ್, ಎನ್‌ಎಫ್‌ಒ ಮತ್ತು ಇಂಡೆಕ್ಸ್ ಫಂಡ್ ಬಗ್ಗೆ ತಿಳಿಯುವುದು ಬಹಳ ಮುಖ್ಯ. ಈ ಮೂರು ಪರಿಕಲ್ಪನೆಗಳ ಬಗ್ಗೆ ಹೆಚ್ಚು ಕಲಿತುಕೊಳ್ಳೋಣ.

ಮ್ಯೂಚುವಲ್ ಫಂಡ್ ಎಕ್ಸಿಟ್ ಲೋಡ್: ಅವಧಿಗೆ ಮುನ್ನ ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಹಿಂಪಡೆದರೆ ಸ್ವತ್ತು ನಿರ್ವಹಣಾ ಕಂಪನಿಗಳು (ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಗಳು) ಹೂಡಿಕೆದಾರರಿಗೆ ವಿಧಿಸುವ ಶುಲ್ಕ ಎಕ್ಸಿಟ್ ಲೋಡ್.

ಹೂಡಿಕೆದಾರರು ಅವಧಿಗೆ ಮುನ್ನ ಹೂಡಿಕೆ ಮೊತ್ತ ಹಿಂಪಡೆದುಕೊಳ್ಳುವುದನ್ನು ತಡೆಯಲು ಎಕ್ಸಿಟ್ ಲೋಡ್ ಶುಲ್ಕವನ್ನು ಸ್ವತ್ತು ನಿರ್ವಹಣಾ ಕಂಪನಿಗಳು ವಿಧಿಸುತ್ತವೆ. ಮ್ಯೂಚುವಲ್ ಫಂಡ್‌ಗಳಿಂದ ನಿರ್ಗಮಿಸಲು ಹೂಡಿಕೆದಾರ ತೆರುವ ಶುಲ್ಕ ಎಂದು ಸರಳವಾಗಿ ಇದನ್ನು ಕರೆಯಬಹುದು. ಒಂದು ಫಂಡ್‌ನಿಂದ ಮತ್ತೊಂದು ಫಂಡ್‌ಗೆ ಹೂಡಿಕೆ ವರ್ಗಾಯಿಸುವ ಸಂದರ್ಭದಲ್ಲಿಯೂ ಎಕ್ಸಿಟ್ ಲೋಡ್ ಅನ್ವಯಿಸುತ್ತದೆ. ಹಾಗಾಗಿ ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಕ್ಸಿಟ್ ಲೋಡ್ ಎಷ್ಟು ಎಂದು ತಿಳಿದು ಮುಂದುವರಿಯುವುದು ಒಳ್ಳೆಯದು. ನಿರ್ದಿಷ್ಟ ಅವಧಿಗಿಂತ ಹೆಚ್ಚಿನ ಅವಧಿಗೆ ನೀವು ಹೂಡಿಕೆ ಮಾಡಿದರೆ ಎಕ್ಸಿಟ್ ಲೋಡ್ ಶುಲ್ಕ ಇರುವುದಿಲ್ಲ.

ಮ್ಯೂಚುವಲ್ ಫಂಡ್ 'ಎನ್‌ಎಫ್‌ಒ': ನ್ಯೂ ಫಂಡ್ ಆಫರ್ ಎನ್ನುವುದು 'ಎನ್‌ಎಫ್‌ಒ'ದ ವಿಸ್ತೃತ ರೂಪ. ಮ್ಯೂಚುವಲ್ ಫಂಡ್ ಹೌಸ್‌ಗಳು ಹೊಸದಾಗಿ ಮ್ಯೂಚುವಲ್ ಫಂಡ್ ಒಂದನ್ನು ಆರಂಭಿಸುವ ಸಲುವಾಗಿ ಹೂಡಿಕೆದಾರರಿಂದ ಪಡೆಯುವ ಹೂಡಿಕೆಯನ್ನು ಸರಳವಾಗಿ ನ್ಯೂ ಫಂಡ್ ಆಫರ್ ಎಂದು ಕರೆಯಬಹುದು. ಮ್ಯೂಚುಯಲ್ ಫಂಡ್ ಹೌಸ್‌ಗಳು ನ್ಯೂ ಫಂಡ್ ಆಫರ್ ಆರಂಭಿಸುವಾಗ ಹಣ ತೊಡಗಿಸಲು ಹೂಡಿಕೆದಾರರಿಗೆ ಕೆಲವು ದಿನಗಳ (ಸಾಮಾನ್ಯವಾಗಿ 15 ದಿನಗಳು) ಕಾಲಾವಕಾಶ ನೀಡುತ್ತವೆ. ಈ ಕಾಲಾವಕಾಶ ಮುಗಿದ ಮೇಲೆ ಬಹುತೇಕ ಮ್ಯೂಚುವಲ್ ಫಂಡ್‌ಗಳು ಓಪನ್ ಎಂಡೆಡ್ ಫಂಡ್‌ಗಳಾಗುತ್ತವೆ. ಓಪನ್ ಎಂಡೆಡ್ ಫಂಡ್‌ಗಳಾದ ಮೇಲೆ ಮತ್ತೆ ಹೊಸ ಹೂಡಿಕೆಗಳನ್ನು ಆ ಫಂಡ್‌ಗೆ ಪಡೆಯಬಹುದು. ಅಂದರೆ ಮತ್ತೆ ಯಾರು ಬೇಕಾದರೂ ಅದರಲ್ಲಿ ಹೂಡಿಕೆ ಮಾಡುವ ಅವಕಾಶ ಸಿಗುತ್ತದೆ.

ಇಂಡೆಕ್ಸ್ ಫಂಡ್ : ಭಾರತದಲ್ಲಿ ಪ್ರಮುಖವಾಗಿ ಎರಡು ಸೂಚ್ಯಂಕಗಳು (ಇಂಡೆಕ್ಸ್) ಇವೆ. ಮುಂಬೈ ಷೇರುಪೇಟೆಯನ್ನು ಪ್ರತಿನಿಧಿಸುವ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆಯನ್ನು ಪ್ರತಿನಿಧಿಸುವ ನಿಫ್ಟಿ. ಈ ಸೂಚ್ಯಂಕಗಳನ್ನು ಯಥಾವತ್ತಾಗಿ ಅನುಕರಿಸಿ ಕೆಲ ಮ್ಯೂಚುಯಲ್ ಫಂಡ್‌ಗಳು ರೂಪುಗೊಂಡಿವೆ. ಷೇರು ಮಾರುಕಟ್ಟೆಯ ಭಾಷೆಯಲ್ಲಿ ಈ ರೀತಿಯ ಫಂಡ್‌ಗಳನ್ನು ಇಂಡೆಕ್ಸ್ ಮ್ಯೂಚುವಲ್ ಫಂಡ್ ಎಂದು ಕರೆಯುತ್ತಾರೆ. ಉದಾಹರಣೆಗೆ, ನಿಫ್ಟಿ ಸೂಚ್ಯಂಕದಲ್ಲಿ ರಿಲಯನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ಥಾನ್ ಯುನಿಲಿವರ್, ಐಸಿಐಸಿಐ ಬ್ಯಾಂಕ್ ಸೇರಿ ಪ್ರಮುಖ 50 ಕಂಪನಿಗಳಿವೆ.

ಈ ಸೂಚ್ಯಂಕದಲ್ಲಿರುವ ಎಲ್ಲಾ 50 ಕಂಪನಿಗಳನ್ನು ಯಥಾವತ್ತಾಗಿ ಒಳಗೊಂಡ ಒಂದು ಮ್ಯೂಚುಯಲ್ ಫಂಡ್ ರೂಪಿಸಿ ಹೂಡಿಕೆ ಮಾಡುವ ವ್ಯವಸ್ಥೆಯೇ ಇಂಡೆಕ್ಸ್ ಮ್ಯೂಚುಯಲ್ ಫಂಡ್. ಇಂಡೆಕ್ಸ್ ಫಂಡ್‌ನಲ್ಲಿ ಫಂಡ್ ಮ್ಯಾನೇಜರ್ ಇಲ್ಲದ ಕಾರಣ ವೆಚ್ಚ ಅನುಪಾತ ಅಂದರೆ, ನಿರ್ವಹಣಾ ಶುಲ್ಕ ಕಡಿಮೆ. ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಶೇ 1.5ರಷ್ಟಿದ್ದರೆ ಇಂಡೆಕ್ಸ್ ಫಂಡ್‌ಗಳಲ್ಲಿ ವೆಚ್ಚ ಅನುಪಾತ ಶೇ 0.2ರಷ್ಟು ಮಾತ್ರ. ವೆಚ್ಚ ಅನುಪಾತ ಶುಲ್ಕ ಕಡಿಮೆ ಇರುವುದರಿಂದ ಇಲ್ಲಿ ಹೂಡಿಕೆದಾರನಿಗೆ ಹೆಚ್ಚು ಉಳಿತಾಯ ಸಾಧ್ಯವಾಗುತ್ತದೆ. ಷೇರು ಮಾರುಕಟ್ಟೆ ಎಷ್ಟು ಪ್ರಮಾಣದಲ್ಲಿ ಏರಿಕೆ ಕಾಣುವುದೋ ಅಷ್ಟು ಲಾಭ ಸಿಕ್ಕರೆ ಸಾಕು, ಹೆಚ್ಚು ರಿಸ್ಕ್ ತೆಗೆದುಕೊಳ್ಳುವುದಿಲ್ಲ ಎನ್ನುವವರಿಗೆ ಇಂಡೆಕ್ಸ್ ಫಂಡ್ ಒಳ್ಳೆಯ ಆಯ್ಕೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಬಜೆಟ್ ವಾರದಲ್ಲಿ ಷೇರುಪೇಟೆ ಉತ್ತಮ ಗಳಿಕೆ

ಫೆಬ್ರುವರಿ 4ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 58,644 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.52ರಷ್ಟು ಗಳಿಕೆ ಕಂಡಿದೆ. 17,516 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.42ರಷ್ಟು ಗಳಿಸಿಕೊಂಡಿದೆ. ಬೆಳವಣಿಗೆ ಆಧಾರಿತ ಬಜೆಟ್ ಘೋಷಣೆಯಾದ ಕಾರಣ ಷೇರು ಸೂಚ್ಯಂಕಗಳು ವಾರದ ಆರಂಭದಲ್ಲಿ ಏರಿಕೆ ಕಂಡವು. ಆದರೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ಬಾಂಡ್ ಗಳಿಕೆಯಲ್ಲಿ ಹೆಚ್ಚಳ, ತೈಲ ಬೆಲೆ ಹೆಚ್ಚಳ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಓಟಕ್ಕೆ ತಡೆ ಒಡ್ಡಿದವು.

ನಿಫ್ಟಿ ಲೋಹ ಸೂಚ್ಯಂಕ ಶೇ 6.6ರಷ್ಟು ಗಳಿಸಿಕೊಂಡಿದೆ. ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 4.6ರಷ್ಟು ಜಿಗಿದಿದ್ದು ಎಫ್‌ಎಂಸಿಜಿ ಸೂಚ್ಯಂಕ ಶೇ 3.6ರಷ್ಟು ಹೆಚ್ಚಳವಾಗಿದೆ. ಇನ್ನು, ನಿಫ್ಟಿ ಮಿಡ್ ಕ್ಯಾಪ್ ಶೇ 2.2ರಷ್ಟು ಮತ್ತು ಸ್ಮಾಲ್ ಕ್ಯಾಪ್ ಶೇ 1ರಷ್ಟು ಸುಧಾರಿಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 7,695.27 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,923.71 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ಡಿವೀಸ್ ಲ್ಯಾಬ್ಸ್ ಶೇ 11ರಷ್ಟು, ಟಾಟಾ ಸ್ಟೀಲ್ ಶೇ 9ರಷ್ಟು, ಸನ್ ಫಾರ್ಮಾ ಶೇ 9ರಷ್ಟು, ಎಚ್‌ಸಿಎಲ್ ಟೆಕ್ ಶೇ 8ರಷ್ಟು ಮತ್ತು ಐಟಿಸಿ ಶೇ 8ರಷ್ಟು ಜಿಗಿದಿವೆ. ಎನ್‌ಟಿಪಿಸಿ ಶೇ 4ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 3ರಷ್ಟು, ಎಸ್‌ಬಿಐ ಲೈಫ್ ಶೇ 3ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಬಡ್ಡಿ ದರದ ವಿಚಾರವಾಗಿ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಫೆಬ್ರುವರಿ 9ರಂದು ಭಾರತೀಯ ರಿಸರ್ವ್ ಬ್ಯಾಂಕ್ ಯಾವ ನಿಲುವು ತಳೆಯಲಿದೆ ಎನ್ನುವುದರ ಮೇಲೆ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಬಡ್ಡಿ ದರದಲ್ಲಿ ಹೆಚ್ಚಳವಾದರೆ ಅದರ ನೇರ ಪರಿಣಾಮ ಷೇರುಪೇಟೆ ಸೂಚ್ಯಂಕಗಳ ಮೇಲೆ ಆಗಲಿದೆ. ಈ ವಾರ ಇಂಡಿಯನ್ ಬ್ಯಾಂಕ್, ಐಆರ್‌ಸಿಟಿಸಿ, ಎಚ್‌ಸಿಜಿ, ಹಿಂಡಾಲ್ಕೊ, ಎನ್‌ಎಂಡಿಸಿ, ಜಿಂದಾಲ್ ಸ್ಟೀಲ್, ಅಮೃತಾಂಜನ್, ಎಂಡೂರೆನ್ಸ್ ಟೆಕ್ನಾಲಜೀಸ್, ರೈಟ್ಸ್, ಸೇಲ್, ಟಾಟಾ ಪವರ್, ಬಿಇಎಂಎಲ್, ಡೆಲ್ಟಾ, ಬಜಾಜ್ ಎಲೆಕ್ಟ್ರಿಕಲ್ಸ್, ಬಾಟಾ ಇಂಡಿಯಾ, ಟಿವಿಎಸ್ ಮೋಟಾರ್, ಯೂನಿಯನ್ ಬ್ಯಾಂಕ್, ಪಾಲಿಸಿಬಜಾರ್, ಬಾಷ್, ಡಿಸಿಬಿ ಬ್ಯಾಂಕ್, ಎನ್‌ಡಿಟಿವಿ, ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

2023ರ ಆರಂಭದಲ್ಲಿ ಡಿಜಿಟಲ್ ರೂಪಾಯಿ ಚಲಾವಣೆಗೆ?

ನವದೆಹಲಿ (ಪಿಟಿಐ): ದೇಶದ ಅಧಿಕೃತ ಡಿಜಿಟಲ್ ಕರೆನ್ಸಿ 'ಡಿಜಿಟಲ್ ರೂಪಾಯಿ' 2023ರ ಆರಂಭದಲ್ಲಿ ಚಲಾವಣೆಗೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಡಿಜಿಟಲ್ ಕರೆನ್ಸಿಯು ಈಗ ಹಣಕಾಸು ಮಾರುಕಟ್ಟೆಯಲ್ಲಿ ಇರುವ, ಖಾಸಗಿ ಕಂಪನಿಗಳ ಎಲೆಕ್ಟ್ರಾನಿಕ್ ವಾಲೆಟ್ ರೂಪದಲ್ಲಿಯೇ ಇರಲಿದೆ. ಆದರೆ, ಡಿಜಿಟಲ್ ರೂಪಾಯಿಗೆ ಸರ್ಕಾರದ ಖಾತರಿ ಇರಲಿದೆ ಎಂಬುದು, ಇದಕ್ಕೂ ಇ-ವಾಲೆಟ್‌ಗೂ ಇರುವ ವ್ಯತ್ಯಾಸ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ಕಡೆಯಿಂದ ಡಿಜಿಟಲ್ ರೂಪಾಯಿಯನ್ನು ಶೀಘ್ರದಲ್ಲಿಯೇ ಆರಂಭಿಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಪ್ರಕಟಿಸಿದ್ದಾರೆ. 'ಈಗ ಚಲಾವಣೆಯಲ್ಲಿ ಇರುವ ರೂಪಾಯಿ ಕರೆನ್ಸಿಯ ಮೌಲ್ಯದ ಜೊತೆ ಡಿಜಿಟಲ್ ರೂಪಾಯಿಯ ಮೌಲ್ಯವನ್ನೂ ಸೇರಿಸಲಾಗುತ್ತದೆ. ಡಿಜಿಟಲ್ ರೂಪಾಯಿಯು, ಸರ್ಕಾರದ ಬೆಂಬಲದೊಂದಿಗೆ ಈಗಾಗಲೇ ಚಲಾವಣೆಯಲ್ಲಿ ಇರುವ ಕರೆನ್ಸಿಗಿಂತ ಹೆಚ್ಚು ಭಿನ್ನವಾಗಿ ಇರುವುದಿಲ್ಲ. ಡಿಜಿಟಲ್ ರೂಪಾಯಿಯು, ಈಗಾಗಲೇ ಚಲಾವಣೆಯಲ್ಲಿರುವ ಕರೆನ್ಸಿಯ ಡಿಜಿಟಲ್ ರೂಪವಾಗಿರುತ್ತದೆ. ಇದು ಒಂದು ಅರ್ಥದಲ್ಲಿ, ಸರ್ಕಾರದಿಂದ ಮಾನ್ಯತೆ ಪಡೆದಿರುವ ವಾಲೆಟ್ ರೀತಿಯಲ್ಲಿ ಇರುತ್ತದೆ' ಎಂದು ಸರ್ಕಾರದ ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು.

ಮುಂದಿನ ಹಣಕಾಸು ವರ್ಷದ (2022–23) ಅಂತ್ಯದೊಳಗೆ ಡಿಜಿಟಲ್ ರೂಪಾಯಿ ಸಿದ್ಧವಾಗಿರುತ್ತದೆ ಎಂದು ಆರ್‌ಬಿಐ ಹೇಳಿದೆ ಎಂದು ಈ ಅಧಿಕಾರಿ ತಿಳಿಸಿದರು. ಆರ್‌ಬಿಐ ಅಭಿವೃದ್ಧಿಪಡಿಸುತ್ತಿರುವ ಡಿಜಿಟಲ್ ರೂಪಾಯಿ ಬ್ಲಾಕ್‌ಚೈನ್ ತಂತ್ರಜ್ಞಾನವು ಎಲ್ಲ ವಹಿವಾಟುಗಳ ಮೇಲೆ ಕಣ್ಣಿಡಲು ಅವಕಾಶ ಕಲ್ಪಿಸುತ್ತದೆ.

ಖಾಸಗಿ ಕಂಪನಿಗಳು ಒದಗಿಸುತ್ತಿರುವ ವಾಲೆಟ್ ಸೇವೆಯನ್ನು ಬಳಸುವ ವ್ಯಕ್ತಿಗಳು, ತಮ್ಮ ಹಣವನ್ನು ಆ ಖಾಸಗಿ ಕಂಪನಿಗೆ ವರ್ಗಾಯಿಸುತ್ತಾರೆ. ಆ ಕಂಪನಿಯು ವ್ಯಕ್ತಿಯ ಪರವಾಗಿ ಹಣ ಇರಿಸಿಕೊಳ್ಳುತ್ತದೆ. ವ್ಯಕ್ತಿಯ ಪರವಾಗಿ ವರ್ತಕರಿಗೆ ಹಣ ವರ್ಗಾವಣೆ ಮಾಡುತ್ತದೆ. ಡಿಜಿಟಲ್ ರೂಪಾಯಿ ಬಳಸುವವರು ರೂಪಾಯಿಯನ್ನು ನೋಟುಗಳ ರೂಪದಲ್ಲಿ ಇರಿಸಿಕೊಳ್ಳುವ ಬದಲು, ಅದನ್ನು ಆರ್‌ಬಿಐ ಬಳಿ ಡಿಜಿಟಲ್ ರೂಪದಲ್ಲಿ ಇರಿಸಿಕೊಳ್ಳುತ್ತಾರೆ. ಆರ್‌ಬಿಐನಿಂದ ಅದು ವರ್ತಕರಿಗೆ ವರ್ಗಾವಣೆ ಆಗುತ್ತದೆ. ಈ ಕರೆನ್ಸಿಗೆ ಸರ್ಕಾರದ ಮಾನ್ಯತೆ ಇರುತ್ತದೆ ಎಂದು ಅವರು ವಿವರಿಸಿದರು.

ಚಿನ್ನದ ಇಟಿಎಫ್: ತಗ್ಗಿದ ಒಳಹರಿವು

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳು (ಇಟಿಎಫ್) 2020ಕ್ಕೆ ಹೋಲಿಸಿದರೆ 2021ರಲ್ಲಿ ಕಡಿಮೆ ಪ್ರಮಾಣದಲ್ಲಿ ಬಂಡವಾಳ ಆಕರ್ಷಿಸಿವೆ. 2021ರಲ್ಲಿ ₹ 4,814 ಕೋಟಿ ಬಂಡವಾಳ ಆಕರ್ಷಿಸಿವೆ. 2020ರಲ್ಲಿ ₹ 6,657 ಕೋಟಿ ಬಂಡವಾಳ ಹರಿದುಬಂದಿತ್ತು.

ಜಾಗತಿಕ ಮಾರುಕಟ್ಟೆಯ ಚೇತರಿಕೆ ಮತ್ತು ಹೂಡಿಕೆದಾರರ ಭಾವನೆಯಲ್ಲಿ ಕಂಡುಬಂದ ಚೇತರಿಕೆಯಿಂದಾಗಿ 2021ರಲ್ಲಿ ಬಂಡವಾಳ ಹರಿವು ಕಡಿಮೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ತಿಳಿಸಿದೆ.

ಚಿನ್ನದ ಇಟಿಎಫ್‌ನ ನಿರ್ವಹಣಾ ಸಂಪತ್ತು ಮೌಲ್ಯವು ಡಿಸೆಂಬರ್ ಅಂತ್ಯಕ್ಕೆ ₹ 18,405 ಕೋಟಿಗೆ ತಲುಪಿದೆ. 2020ರಲ್ಲಿ ಇದ್ದ ₹ 14,174 ಕೋಟಿಗೆ ಹೋಲಿಸಿದರೆ ಶೇ 30ರಷ್ಟು ಹೆಚ್ಚಳ ಕಂಡುಬಂದಿದೆ.

ಇತ್ತೀಚಿನ ದಿನಗಳಲ್ಲಿ, ಸವಾಲಿನ ಹೂಡಿಕೆಯ ವಾತಾವರಣದ ಸಂದರ್ಭದಲ್ಲಿ, ಚಿನ್ನವು ಉತ್ತಮವಾಗಿ ಕಾರ್ಯನಿರ್ವಹಿಸುವ ಆಸ್ತಿ ವರ್ಗಗಳಲ್ಲಿ ಒಂದಾಗಿ ಹೊರಹೊಮ್ಮಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹465

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ	₹400-675
ದ್ವಿತಳಿ	₹360-902

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಂಡವಾಳ ವೆಚ್ಚದಿಂದ ಖಾಸಗಿ ಹೂಡಿಕೆ ಹೆಚ್ಚಳ: ಸೋಮನಾಥನ್

ನವದೆಹಲಿ (ಪಿಟಿಐ): ಬಜೆಟ್‌ನಲ್ಲಿ ಘೋಷಿಸಿರುವ ಬೃಹತ್ ಪ್ರಮಾಣದ ಬಂಡವಾಳ ವೆಚ್ಚ ಕಾರ್ಯಕ್ರಮವು ಆರ್ಥಿಕ ಚಟುವಟಿಕೆಗಳನ್ನು ಪುನಶ್ಚೇತನಗೊಳಿಸುವ ಮೂಲಕ, ಬೇಡಿಕೆ ಸೃಷ್ಟಿಸುವ ಮೂಲಕ ಖಾಸಗಿ ಹೂಡಿಕೆಗೆ ಸಹಾಯ ಮಾಡಲಿದೆ ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾಗಿರುವ ಆರ್ಥಿಕತೆಗೆ ಚೇತರಿಕೆ ನೀಡಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2022–23ನೇ ಹಣಕಾಸು ವರ್ಷಕ್ಕೆ ಬಂಡವಾಳ ವೆಚ್ಚವನ್ನು ಶೇ 35.4ರಷ್ಟು ಹೆಚ್ಚಿಸಿದ್ದಾರೆ. ಬಂಡವಾಳ ವೆಚ್ಚದ ಮೊತ್ತವು ₹ 7.5 ಲಕ್ಷ ಕೋಟಿಗೆ ಏರಿಕೆ ಆಗಲಿದೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಬಂಡವಾಳ ವೆಚ್ಚವನ್ನು ₹ 5.5 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ.

ಲಾಜಿಸ್ಟಿಕ್ಸ್ ಪಾರ್ಕ್‌ಗಳು, ಮೆಟ್ರೊ, ಹೆದ್ದಾರಿ ಮತ್ತು ರೈಲುಗಳನ್ನು ನಿರ್ಮಿಸಲು ಖರ್ಚು ಮಾಡುವ ವೆಚ್ಚವು ಖಾಸಗಿ ವಲಯಕ್ಕೆ ಬೇಡಿಕೆಯನ್ನು ಸೃಷ್ಟಿಸುವ ನಿರೀಕ್ಷೆ ಮಾಡಲಾಗಿದೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಬೇಡಿಕೆ ತಗ್ಗುವ ಜೊತೆಗೆ ಖಾಸಗಿ ಹೂಡಿಕೆಯು ವಿಳಂಬಗೊಂಡಿತ್ತು ಎಂದು ಹೇಳಿದ್ದಾರೆ.

ಎಲ್‌ಐಸಿಗೆ ಆರು ಸ್ವತಂತ್ರ ನಿರ್ದೇಶಕರ ನೇಮಕ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಕಳೆದ ತಿಂಗಳು ಆರು ಮಂದಿ ಸ್ವತಂತ್ರ ನಿರ್ದೇಶಕರನ್ನು ನೇಮಿಸಿದೆ.

ಹಣಕಾಸು ಸೇವೆಗಳ ಮಾಜಿ ಕಾರ್ಯದರ್ಶಿ ಅಂಜಲಿ ಚಿಬ್ ದುಗ್ಗಲ್, ಸೆಬಿಯ ಮಾಜಿ ಸದಸ್ಯ ಜಿ. ಮಹಾಲಿಂಗಮ್, ಎಸ್‌ಬಿಐ ಲೈಫ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಸಂಜೀವ್ ನೌತಾಲಿಯಾ, ಲೆಕ್ಕಪತ್ರ ಪರಿಶೋಧಕ ಎಂ.ಪಿ. ವಿಜಯ್ ಕುಮಾರ್, ರಾಜ್ ಕಮಲ್ ಮತ್ತು ವಿ.ಎಸ್. ಪಾರ್ಥಸಾರಥಿ ಅವರು ಆಡಳಿತ ಮಂಡಳಿಗೆ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ನೇಮಕದಿಂದ ಸ್ವತಂತ್ರ ನಿರ್ದೇಶಕರ ಒಟ್ಟು ಸಂಖ್ಯೆಯು 9ಕ್ಕೆ ಏರಿಕೆ ಆಗಿದೆ. ಐಪಿಒಗಾಗಿ ಸೆಬಿಗೆ ಕರಡು ದಾಖಲೆ ಪತ್ರಗಳನ್ನು ಸಲ್ಲಿಸಲು ಕಾರ್ಪೊರೇಟ್ ಆಡಳಿತದ ನಿಯಂತ್ರಣ ಮಾನದಂಡಗಳನ್ನು ತಲುಪುವುದು ಬಹಳ ಮುಖ್ಯವಾಗಿದೆ.

ಭಾರತದಲ್ಲಿ ವಿದ್ಯುತ್ ಚಾಲಿತ ವಾಹನ ತಯಾರಿಕೆ: ಔಡಿ ಚಿಂತನೆ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ.) ಭಾರತದಲ್ಲಿಯೇ ತಯಾರಿಸುವ ಸಾಧ್ಯತೆಯ ಮೌಲ್ಯಮಾಪನ ಮಾಡಲಾಗುತ್ತಿದೆ ಎಂದು ಔಡಿ ಇಂಡಿಯಾ ಕಂಪನಿಯ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಹೇಳಿದ್ದಾರೆ.

ಕಂಪನಿಯು 2033ರಿಂದ ಜಾಗತಿಕವಾಗಿ ಸಂಪೂರ್ಣವಾಗಿ ವಿದ್ಯುತ್ ಚಾಲಿತ ವಾಹನಗಳನ್ನೇ ಮಾರುಕಟ್ಟೆಗೆ ಬಿಡುಗಡೆ ಮಾಡಲು ನಿರ್ಧರಿಸಿದ್ದು, ಸ್ಥಳೀಯ ತಯಾರಿಕೆಗೆ ಇದು ಸೂಕ್ತ ಸಮಯವಾಗಿದೆ.

ಕಳೆದ ಏಳು ತಿಂಗಳಿನಲ್ಲಿ ಕಂಪನಿಯು ಐದು ಇ.ವಿ. ಕಾರುಗಳನ್ನು ಭಾರತದಲ್ಲಿ ಬಿಡುಗಡೆ ಮಾಡಿದೆ.

ಸ್ಥಳೀಯವಾಗಿ ಬಿಡಿಭಾಗಗಳ ಜೋಡಣೆಗೆ ಸಂಬಂಧಿಸಿದಂತೆ ಮಾತನಾಡಿದ ಅವರು, 'ಸ್ಥಳೀಯವಾಗಿ ಕಾರುಗಳನ್ನು ತಯಾರಿಸಲು ಪ್ರಾರಂಭಿಸುವ ನಿರ್ಧಾರ ತೆಗೆದುಕೊಳ್ಳುವ ಮೊದಲು ಕೆಲವೊಂದು ಮೌಲ್ಯಮಾಪನ ಮಾಡುತ್ತಿದ್ದೇವೆ' ಎಂದು ಹೇಳಿದ್ದಾರೆ.

ರೋಹಿತ್ ಶರ್ಮಾ ಅರ್ಧಶತಕ: ಸ್ಪಿನ್ ಬೌಲರ್‌ಗಳ ಮೋಡಿಗೆ ಮಣಿದ ವೆಸ್ಟ್ ಇಂಡೀಸ್ ತಂಡ

1000ದ ಪಂದ್ಯಕ್ಕೆ ಗೆಲುವಿನ ಹಾರ

ಅಹಮದಾಬಾದ್ (ಪಿಟಿಐ): ಭಾರತ ತಂಡವು ಭಾನುವಾರ ಆಡಿದ 1000ದ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯಕ್ಕೆ ರೋಹಿತ್ ಶರ್ಮಾ ಬಳಗವು ಗೆಲುವಿನ ಮೆರುಗು ತುಂಬಿತು.

ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು ಆರು ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ವಿರುದ್ಧ ಜಯಿಸಿತು. ಯಜುವೇಂದ್ರ ಚಾಹಲ್ (49ಕ್ಕೆ4), ವಾಷಿಂಗ್ಟನ್ ಸುಂದರ್ (30ಕ್ಕೆ3) ಹಾಗೂ ರೋಹಿತ್ (60 ರನ್) ಗೆಲುವಿನ ರೂವಾರಿಗಳಾದರು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡು ವೆಸ್ಟ್ ಇಂಡೀಸ್ ಬ್ಯಾಟರ್‌ಗಳನ್ನು 176 ರನ್‌ಗಳಿಗೆ ನಿಯಂತ್ರಿಸಿತು. ಗುರಿ ಬೆನ್ನತ್ತಿದ ರೋಹಿತ್ ಬಳಗ 28 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 178 ರನ್ ಗಳಿಸಿತು. ಪ್ರವಾಸಿ ಬಳಗ ವಾಷಿಂಗ್ಟನ್ ಸುಂದರ್ ಮತ್ತು ಚಾಹಲ್ ದಾಳಿಯ ಮುಂದೆ 79 ರನ್‌ಗಳಿಗೆ ಏಳು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಜೇಸನ್ ಹೋಲ್ಡರ್ (57; 71ಎ, 4ಸಿಕ್ಸರ್) ದಿಟ್ಟತನದಿಂದ ಆಡಿದರು.

ಸ್ಪಿನ್ನರ್‌ಗಳು ಮತ್ತು ಮಧ್ಯಮವೇಗಿ ಸಿರಾಜ್ ಅವರ ಶಿಸ್ತಿನ ಬೌಲಿಂಗ್ ಅನ್ನು ಎದುರಿಸಿದ ಹೋಲ್ಡರ್ ಅರ್ಧಶತಕ ಗಳಿಸಿದರು. ಅವರಿಗೆ ಫ್ಯಾಬಿಯನ್ ಅಲೆನ್ (29 ರನ್) ಉತ್ತಮ ಜೊತೆ ನೀಡಿದರು. ಇಬ್ಬರ ಜೊತೆಯಾಟದಲ್ಲಿ 78 ರನ್‌ಗಳು ಸೇರಿದವು.

38ನೇ ಓವರ್‌ನಲ್ಲಿ ಅಲೆನ್ ವಿಕೆಟ್ ಗಳಿಸಿದ ವಾಷಿಂಗ್ಟನ್ ಜೊತೆಯಾಟ ಮುರಿದರು. ಹೋಲ್ಡರ್ ಆಟಕ್ಕೆ ಕನ್ನಡಿಗ ಪ್ರಸಿದ್ಧ ಕೃಷ್ಣ ತಡೆಯೊಡ್ಡಿದರು. ರಿಷಭ್ ಪಂತ್ ಪಡೆದ ಅಮೋಘ ಕ್ಯಾಚ್‌ಗೆ ಹೋಲ್ಡರ್ ಔಟಾದರು.

ಸಾಧಾರಣ ಮೊತ್ತದ ಬೆನ್ನತ್ತಿದ ಭಾರತ ತಂಡಕ್ಕೆ ರೋಹಿತ್ ಮತ್ತು ಇಶಾನ್ ಕಿಶನ್ ಜೋಡಿಯು ಉತ್ತಮ ಆರಂಭ ನೀಡಿತು. ಮೊದಲ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರು 84 ರನ್ ಸೇರಿಸಿದರು.

ವಿಂಡೀಸ್ ಬೌಲರ್ ಅಲ್ಜರಿ ಜೋಸೆಫ್ ಭಾರತ ತಂಡಕ್ಕೆ ಸುಲಭ ಜಯ ಸಿಗದಂತೆ ಮಾಡಲು ಪ್ರಯತ್ನಿಸಿದರು. ಅವರು 14ನೇ ಓವರ್‌ನಲ್ಲಿ ರೋಹಿತ್ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ಅದೇ ಓವರ್‌ನಲ್ಲಿ ವಿರಾಟ್ ಕೊಹ್ಲಿಯನ್ನೂ ಪೆವಿಲಿಯನ್‌ಗೆ ಮರಳುವಂತೆ ಮಾಡಿದರು. ಔಟಾಗುವ ಮುನ್ನ ಎರಡು ಬೌಂಡರಿ ಬಾರಿಸಿದ ವಿರಾಟ್, ತವರಿನಲ್ಲಿ ಐದು ಸಾವಿರ ರನ್ ಗಳಿಸಿದ ಸಾಧನೆ ಮಾಡಿದರು. ಸಚಿನ್ ತೆಂಡೂಲ್ಕರ್ ಅವರ ನಂತರ ಈ ಸಾಧನೆ ಮಾಡಿದ ಭಾರತದ ಎರಡನೇ ಬ್ಯಾಟರ್ ಎಂಬ ಹೆಗ್ಗಳಿಕೆ ವಿರಾಟ್ ಅವರದ್ದಾಯಿತು.

ಇಶಾನ್ ಕಿಶನ್ ಔಟಾದ ಕೆಲವೇ ಹೊತ್ತಿನಲ್ಲಿ ರಿಷಭ್ ಪಂತ್ ಕೂಡ ರನ್‌ಔಟ್ ಆದರು. ಈ ಹೊತ್ತಿನಲ್ಲಿ ತುಸು ಆತಂಕ ಮೂಡಿತ್ತು. ಆದರೆ ಸೂರ್ಯಕುಮಾರ್ ಯಾದವ್ ಮತ್ತು ದೀಪಕ್ ಹೂಡಾ ಅಜೇಯ ಜೊತೆಯಾಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಗಾಯಕಿ ಲತಾ ಮಂಗೇಶ್ಕರ್ ಅವರ ಗೌರವಾರ್ಥ ಭಾರತದ ಆಟಗಾರರು ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಆಡಿದರು.

ಯಜುವೇಂದ್ರ ಚಾಹಲ್ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 176 (43.5 ಓವರ್)

ಹೋಪ್ ಬಿ ಸಿರಾಜ್ 8 (10ಎ, 4X2), ಕಿಂಗ್ ಸಿ ಸೂರ್ಯ ಬಿ ವಾಷಿಂಗ್ಟನ್ 13 (26ಎ, 4X2), ಬ್ರಾವೊ ಎಲ್‌ಬಿಡಬ್ಲ್ಯು ವಾಷಿಂಗ್ಟನ್ 18 (34ಎ, 4X3), ಬ್ರೂಕ್ಸ್ ಸಿ ಪಂತ್, ಬಿ ಚಾಹಲ್ 12 (26ಎ), ಪೂರನ್ ಎಲ್‌ಬಿಡಬ್ಲ್ಯು ಬಿ ಚಾಹಲ್ 18(25ಎ, 4X3), ಪೊಲಾರ್ಡ್ ಬಿ ಚಾಹಲ್ 0 (1ಎ), ಹೋಲ್ಡರ್ ಸಿ ಪಂತ್ ಬಿ ಪ್ರಸಿದ್ಧ 57 (71ಎ, 6X4), ಹಸನ್ ಸಿ ಪಂತ್ ಬಿ ಪ್ರಸಿದ್ಧ 0 (3ಎ), ಅಲೆನ್ ಸಿ ಮತ್ತು ಬಿ ಪ್ರಸಿದ್ಧ 29 (43ಎ, 4X2), ಜೋಸೆಫ್ ಸಿ ಸೂರ್ಯಕುಮಾರ್ ಬಿ ಚಾಹಲ್ 13 (16ಎ, 4X1, 6X1), ರೋಚ್ ಔಟಾಗದೆ 0 (8ಎ)

ಇತರೆ (ಲೆಗ್‌ಬೈ 4, ವೈಡ್ 4) 8

ವಿಕೆಟ್ ಪತನ: 1–13 (ಶಾಯ್ ಹೋಪ್; 2.4), 2–44 (ಬ್ರೆಂಡನ್ ಕಿಂಗ್; 11.2), 3–45 (ಡಿಎಂ ಬ್ರಾವೊ;11.6), 4–71 (ಪೂರನ್; 19.3), 5–71 (ಕೀರನ್ ಪೊಲಾರ್ಡ್; 19.4), 6–78 (ಶಾಮ್ರಾ ಬ್ರೂಕ್ಸ್; 21.5), 7–79 (ಅಕೀಲ್ ಹುಸೇನ್; 22.5), 8–157 (ಫ್ಯಾಬಿಯನ್ ಅಲೆನ್; 37.6), 9–167 (ಜೇಸನ್ ಹೋಲ್ಡರ್40.4) 10–176 (ಅಲ್ಜರಿ ಜೋಸೆಫ್; 43.5)

ಬೌಲಿಂಗ್: ಮೊಹಮ್ಮದ್ ಸಿರಾಜ್ 8–2–26–1, ಪ್ರಸಿದ್ಧ ಕೃಷ್ಣ 10–0–29–2, ವಾಷಿಂಗ್ಟನ್ ಸುಂದರ್ 9–1–30–3, ಶಾರ್ದೂಲ್ ಠಾಕೂರ್ 7–0–38–0, ಯಜುವೇಂದ್ರ ಚಾಹಲ್ 9.5–0–49–4

ಭಾರತ 4ಕ್ಕೆ178 (28 ಓವರ್)

ರೋಹಿತ್ ಎಲ್‌ಬಿಡಬ್ಲ್ಯು ಬಿ ಜೋಸೆಫ್ 60 (51ಎ, 4X10, 6X1), ಇಶಾನ್ ಸಿ ಅಲೆನ್ ಬಿ ಹುಸೇನ್ 28 (36ಎ, 4X2, 6X1), ವಿರಾಟ್ ಸಿ ರೋಚ್ ಬಿ ಜೋಸೆಫ್ 8 (4ಎ, 4X2), ಪಂತ್ ರನ್‌ಔಟ್(ಜೋಸೆಫ್) 11 (9ಎ, 4X2), ಸೂರ್ಯಕುಮಾರ್ ಔಟಾಗದೆ 34 (36ಎ, 4X5), ಹೂಡಾ ಔಟಾಗದೆ 26 (32ಎ, 4X2)

ಇತರೆ 11 (ಬೈ1, ಲೆಗ್‌ಬೈ 2, ವೈಡ್ 8)

ವಿಕೆಟ್ ಪತನ: 1–84 (ರೋಹಿತ್ ಶರ್ಮಾ; 13.1), 2–93 (ವಿರಾಟ್ ಕೊಹ್ಲಿ; 13.5), 3–115 (ಇಶಾನ್ ಕಿಶನ್; 16.4), 4–116 (ರಿಷಭ್ ಪಂತ್; 17.3)

ಬೌಲಿಂಗ್: ಕೇಮರ್ ರೋಚ್ 5–0–41–0, ಜೇಸನ್ ಹೋಲ್ಡರ್ 5–0–29–0, ಅಲ್ಜರಿ ಜೋಸೆಫ್ 7–0–45–2, ಅಕೀಲ್ ಹುಸೇನ್ 9–0–46–1, ಫ್ಯಾಬಿಯನ್ ಅಲೆನ್ 2–0–14–0

ಫಲಿತಾಂಶ: ಭಾರತಕ್ಕೆ 6 ವಿಕೆಟ್ ಜಯ. 1–0 ಮುನ್ನಡೆ

ಬೆಂಗಳೂರು ಓಪನ್: ಆದಿಲ್ ವಿರುದ್ಧ ಮುಕುಂದ್‌ಗೆ ಜಯ

ಜೊಹಾನ್ ಸೋಲುಣಿಸಿದ ಅರ್ಜುನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಷ್ಠ ಎದುರಾಳಿ, ಆರನೇ ಶ್ರೇಯಾಂಕದ ಸ್ವಿಟ್ಜರ್ಲೆಂಡ್ ಆಟಗಾರ ಜೊಹಾನ್ ನಿಕಲ್ಸ್ ಎದುರು ಭಾರತದ ಅರ್ಜುನ್ ಖಾಡೆ ಅವರು ಅಮೋಘ ಆಟವಾಡಿದರು. ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಅವರು ಜಯ ಸಾಧಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಅರ್ಜುನ್ 6-4, 6-4ರಲ್ಲಿ ಗೆದ್ದು ಮುಖ್ಯ ಸುತ್ತು ಪ್ರವೇಶಿಸುವತ್ತ ಹೆಜ್ಜೆ ಹಾಕಿದರು. ಭಾರತದ ಆಟಗಾರರು ಸೆಣಸಾಡಿದ ಮತ್ತೊಂದು ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಮುಕುಂದ್ ಶಶಿಕುಮಾರ್ 6-2, 6-3ರಲ್ಲಿ ಆದಿಲ್ ಕಲ್ಯಾಣ್‌ಪುರ್ ಎದುರು ಜಯ ಗಳಿಸಿದರು. ಪುಣೆಯ ಅರ್ಜುನ್ ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದ್ದರು. ಎರಡನೇ ಸೆಟ್‌ನಲ್ಲಿ 5–3ರ ಮುನ್ನಡೆಯಲ್ಲಿದ್ದಾಗ ಸ್ವಯಂ ತಪ್ಪುಗಳಿಂದಾಗಿ ಸರ್ವ್ ಕಳೆದುಕೊಂಡರು. ಆದರೆ ಛಲಬಿಡದೆ ಕಾದಾಡಿ ಎದುರಾಳಿಯ ಸರ್ವ್ ಮುರಿದು ಸೆಟ್ ಮತ್ತು ಪಂದ್ಯ ಗೆದ್ದುಕೊಂಡರು.

ಅರ್ಜುನ್ ಖಾಡೆ

ರಿಯೊಗೆ ಮಣಿದ 18ರ ಪೋರ ಕರಣ್: 18 ವರ್ಷದೊಳಗಿನವರ ವಿಭಾಗದ ಹಾಲಿ ರಾಷ್ಟ್ರೀಯ ಚಾಂಪಿಯನ್ ಕರಣ್ ಸಿಂಗ್ ಅವರು ಉತ್ತಮ ಆಟ ಪ್ರದರ್ಶಿಸಿದರೂ ಜಪಾನ್‌ನ ರಿಯೊ ನೊಗುಚಿ ಎದುರು 6–4, 1–6, 3–6ರಲ್ಲಿ ಸೋತರು. ಉತ್ತಮ ಆರಂಭ ಕಂಡ 18ರ ಪೋರ ಕರಣ್ ಮೊದಲ ಸೆಟ್‌ನಲ್ಲಿ 4–4ರ ಸಮಬಲ ಸಾಧಿಸಿದ್ದರು. ನಂತರ 5–4ರ ಮುನ್ನಡೆ ಕಂಡರು. ಎದುರಾಳಿಯ ಸರ್ವ್ ಮುರಿದು ಸೆಟ್ ತಮ್ಮದಾಗಿಸಿಕೊಂಡರು. ಆದರೆ ಮುಂದಿನ ಎರಡು ಸೆಟ್‌ಗಳಲ್ಲಿ ರಿಯೊ ಭರ್ಜರಿ ಆಟವಾಡಿ ಜಯ ಸಾಧಿಸಿದರು.

ಇಂದಿನಿಂದ ಮುಖ್ಯ ಸುತ್ತಿನ ಹಣಾಹಣಿ

ಟೂರ್ನಿಯ ಮುಖ್ಯಸುತ್ತಿನ ಪಂದ್ಯಗಳು ಸೋಮವಾರ ಆರಂಭವಾಗಲಿವೆ. ಕೆಎಸ್‌ಎಲ್‌ಟಿಎ ಅಧ್ಯಕ್ಷ ಹಾಗೂ ಕಂದಾಯ ಸಚಿವ ಆರ್.ಅಶೋಕ್ ಬೆಳಿಗ್ಗೆ 9.30ಕ್ಕೆ ಟೂರ್ನಿಗೆ ಚಾಲನೆ ನೀಡುವರು.

ಮೊದಲ ದಿನ ಮುಖ್ಯ ಸುತ್ತಿನ ಐದು ಪಂದ್ಯಗಳು ಹಾಗೂ ಅರ್ಹತಾ ಹಂತದ ಎರಡನೇ ಸುತ್ತಿನ ಪಂದ್ಯಗಳು ಕೂಡ ನಡೆಯಲಿವೆ. 10 ಗಂಟೆಗೆ ಪಂದ್ಯಗಳು ಆರಂಭವಾಗಲಿವೆ.

ಅಗ್ರ ಶ್ರೇಯಾಂಕ ಗಳಿಸಿರುವ ಜೆಕ್ ಗಣರಾಜ್ಯದ ಜಿರಿ ವೆಸೆಲಿ ಭಾನುವಾರ ಇಲ್ಲಿಗೆ ತಲುಪಿದ್ದಾರೆ. ಪುಣೆಯಲ್ಲಿ ನಡೆಯುತ್ತಿರುವ ಮಹಾರಾಷ್ಟ್ರ ಓಪನ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಅವರು 'ಕಳೆದ ಬಾರಿ ಬೆಂಗಳೂರು ಓಪನ್‌ನಲ್ಲಿ ಆಡಲು ಸಾಧ್ಯವಾಗದೇ ಇದ್ದುದು ಬೇಸರ ತಂದಿತ್ತು.

ಈ ಸಲ ಭರವಸೆಯಿಂದ ಬಂದಿದ್ದೇನೆ' ಎಂದರು. ಈ ಬಾರಿ ಮಹಾರಾಷ್ಟ್ರ ಓಪನ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದಾರೆ. 2020ರ ಮಹಾರಾಷ್ಟ್ರ ಓಪನ್‌ನ ಪ್ರಶಸ್ತಿ ಗೆದ್ದಿದ್ದ ಅವರು ಅಲ್ಲಿಂದ ನೇರವಾಗಿ ತವರಿಗೆ ವಾಪಸಾಗಿದ್ದರು. 2015ರಲ್ಲಿ ವೃತ್ತಿಜೀವನದ ಶ್ರೇಷ್ಠ 35ನೇ ರ‍್ಯಾಂಕ್ ಗಳಿಸಿದ್ದ ಅವರು ಈಗ ವಿಶ್ವ ಕ್ರಮಾಂಕದ 80ನೇ ಸ್ಥಾನದಲ್ಲಿದ್ದಾರೆ. ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವವರ ಪೈಕಿ ಅತಿ ಹೆಚ್ಚು ರ‍್ಯಾಂಕಿಂಗ್ ಹೊಂದಿರುವ ಆಟಗಾರ ಅವರು.

ಉಚಿತ ಪ್ರವೇಶ; ನಿರ್ಬಂಧ

ಪಂದ್ಯ ವೀಕ್ಷಿಸಲು ಟೆನಿಸ್ ಪ್ರೇಮಿಗಳಿಗೆ ಪ್ರವೇಶ ಉಚಿತ. ಆದರೆ ಕ್ರೀಡಾಂಗಣದ ಒಟ್ಟು ಸಾಮರ್ಥ್ಯದ ಅರ್ಧದಷ್ಟು ಆಸನಗಳನ್ನು ಮಾತ್ರ ಭರ್ತಿ ಮಾಡಲು ಅವಕಾಶವಿದೆ. ಕ್ರೀಡಾಂಗಣ ಪ್ರವೇಶಿಸುವವರು ಎರಡು ಡೋಸ್ ಲಸಿಕೆ ಹಾಕಿಸಿಕೊಂಡಿರಬೇಕಾದುದು ಕಡ್ಡಾಯ.

ರೋಹನ್–ರಾಮ್‌ಕುಮಾರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪುಣೆ: ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಮಹಾರಾಷ್ಟ್ರ ಓಪನ್ ಎಟಿಪಿ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಬಾಳೇವಾಡಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರಬಲ ಹಣಾಹಣಿಯಲ್ಲಿ ಆಸ್ಟ್ರೇಲಿಯಾದ ಜೋಡಿ ಲೂಕ್ ಸವಿಲೆ ಮತ್ತು ಜಾನ್ ಪ್ಯಾಟ್ರಿಕ್ ಸ್ಮಿತ್ ಅವರನ್ನು ರೋಹನ್–ರಾಮ್‌ಕುಮಾರ್ 6-7 (10-12), 6-3, 10-6ರಲ್ಲಿ ಮಣಿಸಿದರು.

2019ರಲ್ಲೂ ರೋಹನ್ ಬೋಪಣ್ಣ ಇಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು. ಆ ವರ್ಷ ದಿವಿಜ್ ಶರಣ್ ಜೊತೆಗೂಡಿ ಕಣಕ್ಕೆ ಇಳಿದಿದ್ದರು. ಒಟ್ಟಾರೆ ಬೋಪಣ್ಣ ಅವರ 21ನೇ ಡಬಲ್ಸ್ ಪ್ರಶಸ್ತಿ ಇದು.

ಜನವರಿಯಲ್ಲಿ ನಡೆದ ಅಡಿಲೇಡ್ ಓಪನ್ ಟೂರ್ನಿಯಲ್ಲಿ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಪ್ರಶಸ್ತಿ ಗೆದ್ದು ಈ ಋತುವಿನಲ್ಲಿ ಶುಭಾರಂಭ ಮಾಡಿದ್ದರು. ಅಗ್ರ ಶ್ರೇಯಾಂಕದ ಆಸ್ಟ್ರೇಲಿಯಾ ಆಟಗಾರರ ವಿರುದ್ಧ ಭಾನುವಾರ ಅರಂಭದ ಸೆಟ್‌ನಲ್ಲಿ 5–4ರ ಮುನ್ನಡೆ ಸಾಧಿಸಿದರು. ಆಸ್ಟ್ರೇಲಿಯಾ ಜೋಡಿ ತಿರುಗೇಟು ನೀಡಿ ಸೆಟ್ಟನ್ನು ಟೈ ಬ್ರೇಕರ್‌ಗೆ ಕೊಂಡೊಯ್ದು ನಂತರ ಗೆದ್ದರು.

ಎರಡನೇ ಸೆಟ್‌ನ ಆರಂಭದಲ್ಲೂ ಭಾರತದ ಜೋಡಿ 4-2ರ ಮುನ್ನಡೆದರು. ಅದೇ ಲಯ ಮುಂದುವರಿಸಿ ಸೆಟ್ ಗೆದ್ದು ಪಂದ್ಯವನ್ನು ಸಮ ಮಾಡಿಕೊಂಡರು. ನಿರ್ಣಾಯಕ ಮೂರನೇ ಸೆಟ್ ಅತ್ಯಂತ ರೋಚಕವಾಗಿತ್ತು. ಎದುರಾಳಿಗಳ ಸವಾಲು ಮೆಟ್ಟಿನಿಲ್ಲಲು ಭಾರತದ ಆಟಗಾರರು ಸಮರ್ಥರಾದರು.

ಪ್ರಶಸ್ತಿಯೊಂದಿಗೆ ರೋಹನ್ ಬೋಪಣ್ಣ (ಎಡ) ಮತ್ತು ರಾಮ್‌ಕುಮಾರ್

ಚಳಿಗಾಲದ ಒಲಿಂಪಿಕ್ ಕೂಟ: ನ್ಯೂಜಿಲೆಂಡ್‌ಗೆ ಐತಿಹಾಸಿಕ ಚಿನ್ನ

ಬೀಜಿಂಗ್ (ಎಎಫ್‌ಪಿ): ಅಮೋಘ ಸಾಮರ್ಥ್ಯ ತೋರಿದ ಸ್ನೋಬೋರ್ಡ್ ಪಟು ಜೊಯಿ ಸ್ಯಾಡೊವ್‌ಸ್ಕಿ ಸೈನಟ್ ಅವರು ನ್ಯೂಜಿಲೆಂಡ್‌ಗೆ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಚಿನ್ನದ ಪದಕ ಗೆದ್ದುಕೊಟ್ಟರು.

ಕೂಟದ ಎರಡನೇ ದಿನವಾದ ಭಾನುವಾರ ನಡೆದ ಮಹಿಳೆಯರ ಸ್ಲೋಪ್‌ಸ್ಟೈಲ್ ವಿಭಾಗದಲ್ಲಿ 20 ವರ್ಷದ ಸ್ಯಾಡೊವ್‌ಸ್ಕಿ ಅಮೆರಿಕದ ಜೂಲಿಯಾ ಮರಿನೊ ಮತ್ತು ಆಸ್ಟ್ರೇಲಿಯಾದ ಟೆಸ್ ಕಾಡಿ ಅವರನ್ನು ಹಿಂದಿಕ್ಕಿ 92.88 ಸ್ಕೋರು ಗಳಿಸಿದರು. ಇದು, ಕೂಟದಲ್ಲಿ ನ್ಯೂಜಿಲೆಂಡ್ ಗೆದ್ದ ಮೊತ್ತಮೊದಲ ಚಿನ್ನದ ಪದಕವಾಗಿದೆ.

2018ರ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ನ್ಯೂಜಿಲೆಂಡ್ ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದುಕೊಂಡಿತ್ತು. ಆಗ ಸ್ಯಾಡೊವ್‌ಸ್ಕಿ ಬಿಗ್ ಏರ್ ವಿಭಾಗದಲ್ಲಿ ಮೂರನೇ ಸ್ಥಾನ ಗಳಿಸಿದ್ದರು.

ರಷ್ಯಾದ ಅಲೆಕ್ಸಾಂಡರ್ ಬೊಲ್ಶುನೊವ್ ಅವರು ಕ್ರಾಸ್ ಕಂಟ್ರಿ ಸ್ಕೀಯಿಂಗ್‌ನಲ್ಲಿ ಚಿನ್ನ ಗೆದ್ದರು. ಆದರೆ ಈ ಪದಕ ರಷ್ಯಾದ ಖಾತೆಗೆ ಸೇರಲಿಲ್ಲ. ಸಾಮೂಹಿಕವಾಗಿ ಉದ್ದೀಪನ ಮದ್ದು ಸೇವಿಸಿದ್ದರಿಂದಾಗಿ ರಷ್ಯಾವನ್ನು 2014ರ ಸೋಚಿ ಒಲಿಂಪಿಕ್ಸ್‌ನಿಂದ ನಿಷೇಧಿಸಲಾಗಿದೆ.

ಈ ಬಾರಿಯೂ ಅಲ್ಲಿನ ಕ್ರೀಡಾಪಟುಗಳು ರಷ್ಯಾ ಒಲಿಂಪಿಕ್ ಸಮಿತಿಯ ಧ್ವಜದಡಿ ಸ್ಪರ್ಧಿಸುತ್ತಿದ್ದಾರೆ. ರಾಷ್ಟ್ರವನ್ನು ಪ್ರತಿನಿಧಿಸಲು ಅವರಿಗೆ ಅವಕಾಶವಿಲ್ಲ.

ಪುರುಷರ ಲ್ಯೂಜ್ ಸ್ಪರ್ಧೆಯಲ್ಲಿ ಜರ್ಮನಿಯ ಜೊಹಾನ್ಸ್ ಲುಡ್ವಿಂಗ್ ತಾಸಿಗೆ 133 ಕಿಮೀ ವೇಗದಲ್ಲಿ ಸಾಗಿ ಚಿನ್ನದ ಪದಕ ಗಳಿಸಿದರು. ಜಪಾನ್‌ನ ರ‍್ಯೊಯು ಕೊಬಾಯಶಿ ಅವರು ಸ್ಕೀ ಜಂಪಿಂಗ್‌ನಲ್ಲಿ ಚಿನ್ನ ಗಳಿಸಿದರು. ಈ ವಿಭಾಗದಲ್ಲಿ ಜಪಾನ್‌ಗೆ ಇದು ಮೊದಲ ಚಿನ್ನವಾಗಿದೆ.

ಚಿನ್ನ ಗೆದ್ದ ಜೊಯಿ ಸ್ಯಾಡೊವ್‌ಸ್ಕಿ ಸೈನಟ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಅಥ್ಲೆಟಿಕ್ಸ್ ಋತುವಿಗೆ ಚಾಲನೆ: ಇಂಡಿಯಾ ಓಪನ್ ಥ್ರೋ 26ರಿಂದ

ನವದೆಹಲಿ (ಪಿಟಿಐ): ಥ್ರೋ ಸ್ಪರ್ಧೆಗಳೊಂದಿಗೆ ಈ ವರ್ಷದ ಅಥ್ಲೆಟಿಕ್ಸ್ ಋತುವನ್ನು ಇದೇ 26ರಿಂದ ಆರಂಭಿಸಲಾಗುತ್ತಿದೆ. ನವದೆಹಲಿಯಲ್ಲಿ ಇಂಡಿಯಾ ಓಪನ್ ಥ್ರೋ ಸ್ಪರ್ಧೆಗಳನ್ನು ನಡೆಸಲಾ ಗುವುದು.

ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾ ಚಿನ್ನದ ಪದಕ ಜಯಿಸಿದ್ದರು. ಇದರಿಂದಾಗಿ ಥ್ರೋ ಸ್ಪರ್ಧೆಗಳತ್ತ ಈ ಬಾರಿ ಆಕರ್ಷಣೆ ಹೆಚ್ಚಿದೆ. ಆದ್ದರಿಂದ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಥ್ರೋ ಸ್ಪರ್ಧೆಗಳೊಂದಿಗೆ ಋತುವನ್ನು ಆರಂಭಿಸುತ್ತಿದೆ.

ಏಪ್ರಿಲ್ 2 ರಿಂದ 6ರವರೆಗೆ ಕೊಯಿಕ್ಕೊಡ್‌ನಲ್ಲಿ ಸೀನಿಯರ್ ರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಷಿಪ್ ನಡೆಯಲಿದೆ. ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮತ್ತು ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಕ್ರಮವಾಗಿ ಚೆನ್ನೈ (ಜೂನ್ 10–14) ಮತ್ತು ಜೆಮ್ಶೆಡ್‌ಪುರ (ಅಕ್ಟೋಬರ್ 15–19) ದಲ್ಲಿ ನಡೆಯಲಿವೆ.

ಎಎಫ್‌ಐ ಶನಿವಾರ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ.

ಫುಟ್‌ಬಾಲ್: ಚೀನಾಗೆ ಏಷ್ಯಾ ಕಪ್

ನವೀ ಮುಂಬೈ (ಪಿಟಿಐ): ಚೀನಾ ಮಹಿಳೆಯರ ಫುಟ್‌ಬಾಲ್ ತಂಡವು ಒಂಬತ್ತನೇ ಬಾರಿ ಏಷ್ಯಾಕಪ್ ಗೆದ್ದುಕೊಂಡಿತು.

ಭಾನುವಾರ ನಡೆದ ಎಎಫ್‌ಸಿ ಮಹಿಳೆಯರ ಫೈನಲ್‌ನಲ್ಲಿ ಚೀನಾ ತಂಡವು 3–2ರಿಂದ ಕೊರಿಯಾ ವಿರುದ್ಧ ಗೆದ್ದಿತು. ಆತಿಥೇಯ ಭಾರತ ತಂಡದಲ್ಲಿ ಆಟಗಾರ್ತಿಯರಿಗೆ ಕೋವಿಡ್ ಸೋಂಕು ಹರಡಿದ್ದರಿಂದ ಟೂರ್ನಿಯ ಮಧ್ಯದಲ್ಲಿಯೇ ಹೊರಬಿದ್ದಿತ್ತು.

ಜಸ್ಟಿನ್ ಲ್ಯಾಂಗರ್ ರಾಜೀನಾಮೆ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಜಸ್ಟಿನ್ ಲ್ಯಾಂಗರ್ ರಾಜೀನಾಮೆ ನೀಡಿದ್ದಾರೆ.

ತಂಡದ ಅನುಭವಿ ಆಟಗಾ ರರು ಲ್ಯಾಂಗರ್ ಅವರ ತರಬೇತಿಯ ಕುರಿತು ಹಲವು ದೂರುಗಳನ್ನು ನೀಡಿದ್ದರು. ಅವರ ಕೋಚಿಂಗ್ ಶೈಲಿಯು ಹಳೆಯ ಮಾದರಿಯಾಗಿದೆ. ಕ್ರಿಕೆಟ್ ಮಂಡಳಿಯ ನಿರ್ದೇಶಕರ ಸಲಹೆ, ಸೂಚನೆ ನಿರ್ಲಕ್ಷಿಸಿದ್ದರೆಂಬ ಆರೋಪ ಅವರ ಮೇಲಿತ್ತು.

'ಈ ದಿನ ಬೆಳಿಗ್ಗೆ ಜಸ್ಟಿನ್ ಲ್ಯಾಂಗರ್ ಕೋಚ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ' ಎಂದು ಅವರ ಪರವಾಗಿ ಡಿಎಸ್‌ಇಜಿ ಮ್ಯಾನೇಜ್‌ಮೆಂಟ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಮಾಜಿ ಕ್ರಿಕೆಟಿಗ ರಿಕಿ ಪಾಂಟಿಂಗ್, 'ಆಸ್ಟ್ರೇಲಿಯಾ ಕ್ರಿಕೆಟ್‌ಗೆ ಇದು ವಿಷಾದದ ದಿನವಾಗಿದೆ' ಎಂದಿದ್ದಾರೆ.

ರೈನಾಗೆ ಪಿತೃವಿಯೋಗ

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅವರ ತಂದೆ ತ್ರಿಲೋಕಚಂದ್ ಸುರೇಶ್ ಭಾನುವಾರ ನಿಧನರಾದರು.

ಕೆಲಕಾಲದಿಂದ ಅವರು ಅನಾರೋಗ್ಯಕ್ಕೆ ಒಳಗಾಗಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ರಿಕೆಟಿಗ ಹರಭಜನ್ ಸಿಂಗ್ ಟ್ವೀಟ್ ಮಾಡಿ ಸಂತಾಪ ಸೂಚಿಸಿದ್ದಾರೆ.